# ಮನುಜ ಮತ ವಿಶ್ವಪಥ

# ದೀಕ್ಷಾಯಾತ್ರೆ*

ಪೂಜ್ಯ ಸ್ವಾಮಿ ಸಿದ್ಧೇಶ್ವರಾನಂದರು, ಶ್ರೀ ಮಹಾಪುರುಷಜಿಯವರ ಪದತಲದಲ್ಲಿ ಕುಳಿತು ಅವರ ದೀಕ್ಷಾನುಗ್ರಹಕ್ಕೆ ನಾನು ಪಾತ್ರನಾಗಬೇಕೆಂದು, ಸಲಹೆ ಇತ್ತಾಗ ನಾನು ಹಿಗ್ಗಿನಿಂದಲೆ ಸಮ್ಮತಿಸಿದ್ದೆ. ಆದರೆ ನಾನು ಒಪ್ಪಿದುದಕ್ಕೆ ಮುಖ್ಯ ಕಾರಣ ಅಥವಾ ಪ್ರೇರಣ ಎಷ್ಟರಮಟ್ಟಿಗೆ ಆಧ್ಯಾತ್ಮಿಕವಾಗಿತ್ತೊ ನಾನು ಹೇಳಲಾರೆ. ನಾನು ಒಪ್ಪಿದುದು, ಮುಖ್ಯವಾಗಿ, ಆ ಸಲಹೆ ಗೋಪಾಲ ಮಹಾರಾಜರಿಂದ ಬಂದುದರಿಂದಲೆ; ಎರಡನೆಯದಾಗಿ, ದೇಶ ಸಂಚಾರದ ಹೊಸ ಹೊಸ ಆನುಭವಗಳನ್ನು ಪಡೆಯುವ ಆಭಿಲಾಷೆಯಿಂದಲೂ ಇರಬಹುದು.

ಗೋಪಾಲ ಮಹಾರಾಜರು (ನಾವು ಸ್ವಾಮಿ ಸಿದ್ಧೇಶ್ವರಾನಂದರನ್ನು ಆ ಅಕ್ಕರೆಯ ಹೆಸರಿನಿಂದಲೆ ಕರೆಯುತ್ತಿದ್ದುದು ರೂಢಿ.) ನನ್ನನ್ನು ರಕ್ಷಿಸಿ, ನನ್ನ ಬದುಕನ್ನು ಕತ್ತಲೆಯಿಂದ ಬೆಳಕಿಗೆ ತಂದ ದಿವ್ಯವ್ಯಕ್ತಿಯಾಗಿದ್ದುದರಿಂದ ಅವರ ಯಾವ ಸಲಹೆಯನ್ನಾಗಲಿ ನಾನು ತಿರಸ್ಕರಿಸುತ್ತಿರಲಿಲ್ಲ. ಇನ್ನು ಶ್ರೀ ರಾಮಕೃಷ್ಣಪರಮಹಂಸರ ಅಂತರಂಗ ಶಿಷ್ಯರಲ್ಲೊಬ್ಬರಾಗಿ, ಸಾಕ್ಷಾತ್ಕಾರದ ಶಿಖರವೇರಿ, ಆಧ್ಯಾತ್ಮಿಕ ವಿಭೂತಿ ಪುರುಷರಾಗಿ, ಶ್ರೀ ರಾಮಕೃಷ್ಣ ಮಿಶನ್ನಿನ ಸರ್ವೋಚ್ಚ ಅಧ್ಯಕ್ಷರಾಗಿದ್ದ ಮಹಾಪುರುಷ ಸ್ವಾಮಿ ಶಿವಾನಂದರಿಂದ, ನನ್ನ ಜೀವನ ಸಮಾಸ್ತವನ್ನೂ ಅಲ್ಪತ್ವದಿಂದ ಮೇಲಕ್ಕೆತ್ತಿ, ನನ್ನಾತ್ಮವನ್ನು ಭೂಮತ್ವದಲ್ಲಿ ಸಂಸ್ಥಾಪಿಸುವ ಸಂಸ್ಕಾರವೊಂದಕ್ಕೆ ನನ್ನನ್ನು ಪಾತ್ರನಾಗುವಂತೆ ಮಾಡುತ್ತೇನೆ ಎಂದು ಅವರು ತಮ್ಮ ಅಹೈತುಕೀ ಪ್ರೀತಿಯಿಂದ ಆಶ್ವಾಸನವಿತ್ತರೆ, ಅದಕ್ಕೆ ಎಂದಾದರೂ ಒಲ್ಲೆ ಎನ್ನುವುದು ಸಾಧ್ಯವೆ?

ಆದರೆ ಆಗ ನನ್ನ ಚೇತನ ಆ ದಿವ್ಯಸಂಪತ್ತಿಗೆ ಸಿದ್ಧವಾಗಿತ್ತೇ? ಅದನ್ನು ಬುದ್ಧಿಪೂರ್ವಕವಾಗಿಯಾದರೂ ಅಪೇಕ್ಷಿಸಿತ್ತೇ? ಎಂದು ಯಾರದರೂ ಕೇಳಿದರೆ, ನಾನು ಧೈರ್ಯವಾಗಿ, ನಿರ್ನಿಷೇಧಾರ್ಥಕವಾಗಿ ಉತ್ತರಿಸಲಾರೆ. ನನ್ನ ಬದುಕಿನಲ್ಲಿ ನನಗೆ ಒದಗಿರುವ ಯಾವ ಪ್ರೇಯಸ್ಸಾಗಲಿ ಶ್ರೇಯಸ್ಸಾಗಲಿ ನನ್ನ ಪ್ರಯತ್ನದಿಂದ ಬಂದಂತೆ ನನಗೆ ಎಂದೂ ಭಾಸವಾಗಿಲ್ಲ. ಯಾವುದೋ ನನಗರಿಯದ ಮಹಾಕೃಪೆ ನನ್ನ ಅರ್ಹತೆಯನ್ನೂ ಅಭೀಪ್ಸೆಯನ್ನೂ ಗಮನಿಸದೆ, ಕೆಲವೊಮ್ಮೆ ನನ್ನ ಅಹಂಕಾರದ ಇಷ್ಟಕ್ಕೆ ಇದಿರಾಗಿಯೆ, ನನ್ನನ್ನು ಮಂಗಳದ ಕಡೆಗೆ ಎಳೆದೊಯ್ದಿದೆ; ಮತ್ತು ಇಂದಿಗೂ ಎಳೆದೊಯ್ಯುತ್ತಿದೆ. ಆ ಮಹಾಕೃಪೆಯೆ ಸ್ವಾಮಿ ಸಿದ್ಧೇಶ್ವರಾನಂದರ ರೂಪದಲ್ಲಿ ನನ್ನನ್ನು ಪರಮಪೂಜ್ಯ ಸ್ವಾಮಿ ಶಿವಾನಂದರ ಪಾದಾರವಿಂದದೆಡೆಗೆ ಕರೆದೊಯ್ದಿತು!

೧೯೨೯ನೆಯ ಅಕ್ಟೋಬರ್ ತಿಂಗಳು ಮೂರನೆಯ ತೇದಿ ಗುರುವಾರ ಅಪರಾಹ್ನ ಎರಡೂವರೆ ಘಂಟೆಗೆ ನಾನು ಮತ್ತು ನನ್ನ ಒಬ್ಬ ಮಿತ್ರರು ಸ್ವಾಮಿ ಸಿದ್ಧೇಶ್ವರಾನಂದ ರೊಡನೆ ಮೈಸೂರು ಶ್ರೀರಾಮಕೃಷ್ಣಾಶ್ರಮದಿಂದ ಹೊರಟು ರೈಲುನಿಲ್ದಾಣಕ್ಕೆ ಬಂದು ಬೆಂಗಳೂರಿಗೆ ಹೊರಟುನಿಂತಿದ್ದ ರೈಲುಬಂಡಿಗೆ ಹತ್ತಿದಾಗ, ನನ್ನ ಜೀವಮಾನವನ್ನೆ ಸಂಪೂರ್ಣವಾಗಿ ಪರಿವರ್ತಿಸಲಿರುವ ಎಂತಹ ಮಹದ್ ಘಟನೆಯ ಸಂಭವಕ್ಕಾಗಿ ನಾನು ಪ್ರಯಾಣಮಾಡುತ್ತಿದ್ದೇನೆ ಎಂಬುದರ ಅರುವು ನನಗಿರಲಿಲ್ಲ. ಸಹ್ಯಾದ್ರಿಯ ಅರಣ್ಯಮಧ್ಯೆಯ ಕುಗ್ರಾಮವೊಂದರಿಂದ ಮೈಸೂರು ನಗರಕ್ಕೆ

ವಿದ್ಯಾರ್ಥಿಯಾಗಿ ಬಂದ ನನಗೆ ಅಕಸ್ಮಾತ್ತಾಗಿ ಸಾರ್ವಜನಿಕ ಗ್ರಂಥಾಲಯದಲ್ಲಿ ದೊರೆತ ಶ್ರೀರಾಮಕೃಷ್ಣ - ವಿವೇಕಾನಂದ ಸಾಹಿತ್ಯಪರಿಚಯದಿಂದಾಗಿ ಆ ಮಹದ್ ವ್ಯಕ್ತಿಗಳ ವೈದ್ಯುತಿಕ ಪ್ರಭಾವಕ್ಕೆ ವಶನಾಗಿ ಅಧ್ಯಾತ್ಮ ಪರವಾದ ಮನೋಧರ್ಮವನ್ನು ಪಡೆದಿದ್ದೆನಾದರೂ ಯಾವನಾದರೊಬ್ಬ ಗುರುವಿನಿಂದ ಮಂತ್ರದೀಕ್ಷೆ ತೆಗೆದುಕೊಳ್ಳುವಂತಹ ಸಂಪ್ರದಾಯಮಾರ್ಗದ ವಿಚಾರದಲ್ಲಿ ನಾನು, ನಿರಾಸಕ್ತನಾಗಿದ್ದೆ ಮಾತ್ರವಲ್ಲ, ಸ್ವಲ್ಪಮಟ್ಟಿಗೆ ತಿರಸ್ಕಾರಿಯೂ ಆಗಿದ್ದೆ. ವಿಶೇಷವಾಗಿ ಅದ್ವೈತಪರವಾದ ಜ್ಞಾನಮಾರ್ಗವನ್ನೆ ಬೋಧಿಸುವಂತಿದ್ದ ಸ್ವಾಮಿ ವಿವೇಕಾನಂದರ ಉಪನ್ಯಾಸಗಳಿಂದ ಪ್ರಭಾವಿತವಾಗಿದ್ದ ನನ್ನ ಮನಸ್ಸು ಮಂತ್ರ ದೀಕ್ಷಾದಿ ಜಪಮಣಿಯ ಸಾಂಪ್ರದಾಯಕ ಆಚಾರಕ್ಕೆ ವಿಮುಖವಾಗಿತ್ತು. ಆದ್ದರಿಂದ ದೀಕ್ಷೆಯ ವಿಚಾರದಲ್ಲಿ ನನ್ನ ಹೃದಯದಲ್ಲಿ ಅಂತಹ ಹೇಳಿಕೊಳ್ಳುವ ಭಾವ ಸಂಚಾರವೇನೂ ಇರಲಿಲ್ಲ. ದೀಕ್ಷೆಕೊಡಲಿರುವ ಗುರುವಿನ ಹಿರಿಮೆಯೂ ಆಗ ನನಗೆ ದೂರ ದಿಗಂತ ವಿಷಯವಾಗಿಯೆ ಇತ್ತು. ಆ ದೂರದ ದಿವ್ಯ ಗುರುವಿನೆಡೆಗೆ ನನ್ನನ್ನೊಯ್ಯುತ್ತಿದ್ದ ಈ ಹತ್ತಿರದ ಗುರುವಿನ ಪ್ರೀತಿ ವಿಶ್ವಾಸಗಳೆ ನನಗೆ ಅಧಾರಭೂತ ಪ್ರಧಾನ ಭರವಸೆಯಾಗಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ನನ್ನ ಬದಿಕಿನ ಹಾದಿಯಲ್ಲಿ ನನಗೆ ಸಂಧಿಸದೆ ಇದ್ದಿದ್ದರೆ ಅದರ ದಿಕ್ಕ ಬೇರೆಯಾಗಿರುತ್ತಿತ್ತೇನೋ?

ನಾವು ನಿಲ್ದಾಣಕ್ಕೆ ಬಂದಾಗಲೆ ಮಳೆ ಹೊಯ್ಯುತೊಡಗಿತ್ತು. ಬರಬರುತ್ತಾ ಚಂಡಮಾರುತವೂ ಎದ್ದಿತು. ಬಿರುಮಳೆ ಮತ್ತೂ ಜೋರಾಗಿ ಬೀಳತೊಡಗಿ ಬಹಳ ಹೊತ್ತಿನ ಮೇಲೆ ನಿಂತಿತು. ನಮ್ಮ ಪಯಣಕ್ಕೆ ಶುಭಕೋರಿ ಆಕಾಶವೆ ಆಶಿರ್ವದಿಸಿದಂತಿತ್ತು, ಆ ಮಳೆ ಹೊಯ್ದುದ್ದು, ಆಶ್ವೀಜಮಾಸದ ಸಸ್ಯಶಾಲಿನಿ ಪುಥ್ವೀಮಾತೆ ನಮ್ಮನ್ನು, ನಾವು ಪಯಣ ಹೊರಟಿದ್ದ ಮಂಗಳಕಾರ್ಯಕ್ಕಾಗಿ ನಗೆಗೂಡಿ ನೋಡಿ ಹರಸುವಂತಿತ್ತು. ಅಷ್ಟಲ್ಲದೆ ಏನು? ಕಲ್ಕತ್ತಾಭಿಮುಖವಾಗಿ ಹೊರಟಿದ್ದ ನಾವು ವಿಶಾಲ ವಿಶ್ವದಲ್ಲಿ ನಗಣ್ಯರಾದ ಯಃಕಶ್ಚಿತ ವ್ಯಕ್ತಿಗಳಾಗಿದ್ದರೂ ದಕ್ಷಿಣೇಶ್ವರ ದೇವಮಾನವನ ಶಿಷ್ಯೋತ್ತಮನ ಸನ್ನಿಧಿಗೆ ದೀಕ್ಷಾರ್ಥಿಗಳಾಗಿಹೊರಟಿದ್ದ ನಮ್ಮ ಉದ್ದೇಶ್ಯವು ಭೂಮಿ ಸಂಬಂಧಿಯಾಗಿದ್ದುದರಿಂದ ವಿಶ್ವಮಾತೆಯ ಸುವಿಶೇಷ ಗಮನಕ್ಕೆ ಅದು ಬಂದಿದ್ದರೆ ಆಶ್ಚರ್ಯಪಡಬೇಕಾಗಿಲ್ಲವಲ್ಲವೇ!

ನಾವು ಬೆಂಗಳೂರಿನ ನಿಲ್ದಾಣವನ್ನು ತಲುಪಿದಗ ಚೆನ್ನಾಗಿ ಕತ್ತಲೆಯಾಗಿತ್ತು. ಮದರಾಸಿಗೆ ಹೊರಡುವ ರಾತ್ರಿಯ ರೈಲಿಗೆ ನಮ್ಮ ಸಾಮನುಗಳನ್ನೆಲ್ಲ ಬದಲಾಯಿಸಿದೆವು. ಅಷ್ಟರಲ್ಲಿ ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದಿಂದ ನಮ್ಮನ್ನು ಅಭಿನಂದಿಸಿ ಬೀಳುಕೊಳ್ಳಲು ಬಂದಿದ್ದರು, ಸ್ವಾಮಿ ಸಂವಿದಾನಂದರು, ಎಳೆಯತಂಬಿ, ಮತ್ತು ಇತರ ಆಶ್ರಮದ ಭಕ್ತರು. 'ಕವಿಗಾಗಿ ಈ ಹೂವು ತಂದಿದ್ದೇನೆ!' ಎಂದು ಕೊಟ್ಟು ಸ್ವಾಗತಾಶೀರ್ವಾದವಿತ್ತರು ಸ್ವಾಮಿ ಸಂವಿದಾನಂದರು. ಅವರೆಲ್ಲರ ಮಾತುಕತೆ, ಸಂತೋಷ ಭಂಗಿ, ಸ್ವಾಗತೋತ್ಸಾಹ, ಅಭಿನಂದನಾ ರೀವಿ ಇವು ಒಂದೊಂದು ನನ್ನ ಮನಸ್ಸಿಗೆ ನಾವು ಹೊಗುತ್ತಿದ್ದ ಕಾರ್ಯದ ಹಿರಿಮೆಯನ್ನೂ ಶ್ಲಾಘ್ಯತೆಯನ್ನೂ ತಂದುಕೊಟ್ಟು, ನನ್ನ ಪುಣ್ಯಶಾಲಿತ್ವವನ್ನೂ ನನಗೆ ಸಂಭವಿಸಲಿದ್ದ ಮಹಾಶ್ರೇಯಸ್ಸಿನ ಲೋಕೋತ್ತರತೆ ಯನ್ನೂ ಹೃದಯಕ್ಕೆ ಘೋಷಿಸಿ ತಿವಿದು ಹೇಳುವಂತಿತ್ತು.

ಮದರಾಸಿಗೆ ಹೊರಟಿದ್ದ ನನ್ನ ಪರಿಚಯದ ಹಿರಿಯ ಪ್ರಾಧ್ಯಾಪಕರೊಬ್ಬರು ನಾವು ಕೂತಿದ್ದ ಗಾಡಿಗೇ ಹತ್ತಿದರು ನಾನು ಬೇಲೂರು ಮಠಕ್ಕೆ ಹೋಗುತ್ತಿದ್ದೇನೆ. ಎಂಬುದನ್ನುಕೇಳಿ ಅಭಿನಂದಿಸುತ್ತಾ ಹೇಳಿದರು: "ಹೌದಪ್ಪಾ, ಈಗಲೇ ಹೋಗಬೇಕು. ಮುಂದೆ ಸಂಸಾರದ ತಾಪತ್ರಯಗಳು ಬಂದುಬಿಟ್ರೆ ತುಂಬಾ ತೊಂದರೆಯಾಗುತ್ತೆ. ನನಗೂ ಆಧ್ಯಾತ್ಮಿಕ

ಪಿಪಾಸೆ ಇತ್ತು. ಆದರೆ ನಿಮಗೆ ಈಗ ದೊರೆಯುತ್ತಿರುವಂತೆ ನನಗೆ ಆಗ ಅವಕಾಶ ಸಿಕ್ಕಲಿಲ್ಲ. ತಾರುಣ್ಯದಲ್ಲಿಯೆ ರಕ್ಷಿತವಾಗದಿದ್ದ ಆಧ್ಯಾತ್ಮಿಕತೆ ತರುವಾಯ ಲೌಕಿಕ ಜೀವನದ ಚಪ್ಪಡಿಯಡಿ ಸಿಲುಕಿ ವಿನಷ್ಟವಾಯಿತು. ಅದನ್ನು ನೆನೆದು ಈಗ ನನ್ನ ಮನಸ್ಸು ವಿಷಾದಿಸುತ್ತದೆ. ಆದರೇನು ಮಾಡುವುದು? ಸಿದ್ಧ ಗುರುವರ್ಯರ ಅನುಗ್ರಹಕ್ಕೆ ಪಾತ್ರವಾಗುವ ನೀವೇ ಧನ್ಯರು."

ರೈಲುಹೊರಡುವ ಸಿಳ್ಳು ಕೇಳಿಸಿದಾಗ ವಯಸ್ಸಿನಲ್ಲಿ ತುಂಬಾ ಮುಂದಿದ್ದು ಮುದುಕರಾಗಿದ್ದ ಎಳೆಯತಂಬಿ ಸ್ವಾಮಿ ಸಿದ್ಧೇಶ್ವರಾನಂದರಿಗೆ ಕಾಲುಮುಟ್ಟಿ ನಮಸ್ಕರಿಸಲು ಪ್ರಯತ್ನಿಸಿದರು. ಆದರೆ ಸ್ವಾಮಿಜಿ ಬಿಡಲಿಲ್ಲ. ಆಗ ಎಳೆಯತಂಬಿ "ಈ ನಮಸ್ಕಾರಗಳು ನಿಮಗಲ್ಲ, ಮಹಾಪುರುಷ ಮಹಾರಾಜರಿಗೆ ಮತ್ತು ಸ್ವಾಮಿ ಶರ್ವಾನಂದರಿಗೆ!" ಎಂದು ಕಾಲಿಗೆ ಅಡ್ಡಬಿದ್ದೇಬಿಟ್ಟರು. ನಾನು ಸ್ವಾಮಿ ಸಂವಿದಾನಂದರಿಗೆ ಕಾಲುಮುಟ್ಟಿ ನಮಸ್ಕರಿಸಿದೆ. ಅವರೆಂದರು "ಇದು ರೈಲಪ್ಪಾ, ಹೀಗೆಲ್ಲ ಮಾಡಿದರೆ ಜನರೇನು ಅಂದುಕೊಂಡಾರು?"

ಮರುದಿನ ಬೆಳ್ಳಿಗ್ಗೆ ಮದರಾಸಿನಲ್ಲಿ ರೈಲಿನಿಂದಿಳಿದು ಮೈಲಾಪುರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮಕ್ಕೆ ಹೋದೆವು. ಮೊದಲು ದೇವರ ಮನೆಗೆ ಹೋಗಿ ಶ್ರೀ ಗುರುಮಹಾರಾಜರಿಗೆ ಪ್ರಣಾಮ ಸಲ್ಲಿಸಿದೆವು. ಶುಚಿಯಾಗಿ, ನಿಶ್ಯಬ್ದವಾಗಿ, ಜನ ಸಂದಣಿಯ ಪಟ್ಟಣದಲ್ಲಿದ್ದರೂ ಶಾಂತಿದಾಯಕಾವಾಗಿ ಪವಿತ್ರವಾಗಿತ್ತು ಆಶ್ರಮದ ಸಾನ್ನಿಧ್ಯ. ನಾನು ಮದರಾಸಿಗೆ ಬರುತ್ತಿದ್ದುದು ಅದೇ ಮೊದಲ ಸಲವಾಗಿದ್ದರೂ ಎಷ್ಟೋ ಕಾಲದಿಂದ ಚಿರಪರಿಚಿತವಾಗಿದ್ದ ನನ್ನ ಸ್ವಂತ ನೆಲೆಗೇ ಬಂದಂತಿತ್ತು. ಮೈಸೂರಾದರೇನು? ಬೆಂಗಳೂರಾದರೇನು? ಮದರಾಸಾದರೇನ? ಶ್ರೀ ರಾಮಕೃಷ್ಣ ಆಶ್ರಮಕ್ಕೆ ಸೇರಿದ ಸನ್ಯಾಸಿಗಳ ಸಂಗದಿಂದ ಪೂತವಾಗಿದ್ದ ಎಲ್ಲಸ್ಥಾನಗಳೂ ನನ್ನ ಸ್ವಂತದ ತವರು ನೆಲೆ ಗಳೆಂಬುದು ದಿನ ದಿನಕ್ಕೂ ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುತ್ತಿತ್ತು.

ಎಂತಹ ಸ್ನೇಹ? ಎಷ್ಟು ವಾತ್ಸಲ್ಯ? ಏನು ಆದರ? ನಾನು ಅವರೆಲ್ಲರಿಗೂ ಸೇರಿದವನು ಎಂಬ ಅದೆಂತಹ ಅಭಿಮಾನ, ವಿಶ್ವಾಸ? ಸನ್ಯಾಸಿಗಳು, ಬ್ರಹ್ಮಚಾರಿಗಳು, ಈಶ್ವರಾನಂದರು, ಅಸಂಗನಂದರು, ಗಣೇಶ ಮಹಾರಾಜ್, ಇಂದು ಮಹಾರಾಜ್, ಪುರುಷೋತ್ತಮ ಮಹಾರಾಜ್, - ಒಬ್ಬರೆ? ಇಬ್ಬರೆ? ಎಲ್ಲರೂ ನನಗೆ ತೋರಿದ ಪ್ರೀತಿಯಿಂದ ನಾನು ಸೋತುಹೋದೆ. ಬಹುಕಾಲದ ಮೇಲೆ ಮನೆಗೆ ಮರಳಿದ ಮಗಳಿಗೆ ತಾಯಿ ತೋರಬಹುದಾದ ಅಕ್ಕರೆಗೂ ಮಿರಿತ್ತು ಅದು ಆ ಪ್ರೀತಿಯಲ್ಲಿ ನನ್ನ ಚೇತನ ಅದ್ದಿ ಆರ್ದ್ರವಾಗಿಹೋದಂತಿತ್ತು, ಮುಂದೆ ಮಹಾಪುರುಷಜಿಯ ಸಾನ್ನಿಧ್ಯದಲ್ಲಿ ನಾನು ಅನುಭವಿಸಲಿದ್ದ ಅಪಾರ ದೈವೀಪ್ರೇಮಕ್ಕೆ ಮುನ್‌ಸೂಚಕವಾದ ಒಂದು ತರಂಗಾಸ್ಫಾಲನೆಯೋ ಎಂಬಂತೆ!

ಮದರಾಸಿನಲ್ಲಿ ನಾವು ಎರಡು ಹಗಲು ಒಂದು ರಾತ್ರಿ ತಂಗಿದ್ದೆವು. ಪ್ರೇಕ್ಷಣೀಯವಾದ ಮನುಷ್ಯ ಕೃತ ಸ್ಥಾನಗಳನ್ನೂ ನಿಸರ್ಗ ಸ್ಥಾನಗಳನ್ನೂ ನೋಡಿದೆವು. ಅವುಗಳಲ್ಲೆಲ್ಲ ಚಿರಸ್ಮರಣೀಯಾಗಿರುವುದೆಂದರೆ - ಸಮುದ್ರದರ್ಶನ! - ಪ್ರಪ್ರಥದ ಸಮುದ್ರ ದರ್ಶನ! ಕವಿಯಾದ ನನಗೆ ಅದೊಂದು ಮಹನೀಯ ಭಗವದನುಭವವಾಗಿತ್ತು. ನಾನು ಯಾವ ಮಹಾಗುರುವಿನ ಬಳಿಗೆ ಮಂತ್ರದೀಕ್ಷಾರ್ಥಿಯಾಗಿ ಹೋಗುತ್ತಿದ್ದೆನೋ ಆ ದಿವ್ಯಗುರುವಿನ ಮತ್ತೊಂದು ನೈಸರ್ಗಿಕ ರೂಪವೇ ನನ್ನೆದುರು ಮೈದೋರಿ ನನ್ನನ್ನು ಅನಂತತೆಗೆತ್ತಿ ಅಪಾರಕ್ಕೆ ಬೀಸಿದಂತಾಗಿತ್ತು, ತೀರದಲಿ ನಿಂತು

ವೀಕ್ಷಿಸುತ್ತಿದ್ದ ನನ್ನ ಚೇತನಕ್ಕೆ: ಅಚಂಚಲ ಆಕಾಶದ ಅನಂತತೆ, ಸುಚಂಚಲ ಸಾಗರದ ಅಪಾರತೆ ಮತ್ತು ಸಿಸ್ಥಿರಾ ಭೂಗೋಲದ ಅಸೀಮ ಸುವಿಶಾಲತೆ: - ಅನೇಕ ಭವ್ಯತಾ ವಿಭೂತಿ ಸಂಗಮ ಸ್ಥಾನವಲ್ಲವೆ ಸಮುದ್ರವೇಲೆ?

ಹೊರಡುವ ದಿನ ಸಂಜೆ ಮಂದಿರದಲ್ಲಿ ಮಂಗಳಾರತಿಯಾದಮೇಲೆ, ಪ್ರಸಾದ ಸ್ವೀಕಾರಮಾಡಿ, ಆಶ್ರಮವಾಸಿಗಳಿಗೆ ನಮಸ್ಕರಿಸಿ ರೈಲು ನಿಲ್ದಾಣಕ್ಕೆ ಹೊರಟಾಗ, ಅಂದು ಮದರಾಸು ಆಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯಪಾದ ಶ್ರೀ ಯತೀಶ್ವರಾನಂದ ಸ್ವಾಮಿಗಳು ನಮ್ಮನ್ನು ಆಶೀರ್ವದಿಸಿ “ಗುರುಮಹಾರಾಜರು ನಿಮಗೆ ಕೃಪೆಮಾಡಲಿ! ಮಹಾಪುರುಷಜಿಯವರ ಅನುಗ್ರಹ ನಿಮಗೆ ದೊರೆಯಲಿ!” ಎಂದು ಹೃದಯತುಂಬಿ ಹಾರೈಸಿದರು.

ಮತ್ತೆ ಮುಂದಿನ ಎರಡು ದಿನಗಳು ಕಲ್ಕತ್ತಾಭಿಮುಖವಾಗಿ ಚಲಿಸುತ್ತಿದ್ದ ರೈಲುಬಂಡಿಯೆ ನಮ್ಮ ಪ್ರಪಂಚವಾಗಿತ್ತು.

ಮರುದಿನ ಪ್ರಾತಃಕಾಲದಲ್ಲಿ ರೈಲಿನ ಕಿಟಕಿಯಿಂದ ಹೊರಗೆ ನೋಡಿದಾಗ ಎಂತಹ ಸುಮನೋಹರ ದೃಶ್ಯ ಕಂಗೊಳಿಸುತ್ತಿತ್ತು. ಶಾಲಿವನ ರೂಪಿಣಿಯಾದ ಭಗವತಿಯ ನಿಸರ್ಗಲೀಲಾ ಶರೀರವು ಚೇತೋಹಾರಿಯಾಗಿ ಶೋಭಾಯಮಾನವಾಗಿತ್ತು! ರೈಲು ರಸ್ತೆಯ ಇಕ್ಕೆಲದಲ್ಲಿ ಹಸುರಿನ ನಿಸ್ತರಂಗಸಾಗರ ಸೀಮೆಯೆ ನಿರ್ದಿಗಂತವಾಗಿ ಹಸರಿಸಿತ್ತು. ಭರತಖಂಡದ ಪೂರ್ವ ತೀರಪ್ರದೇಶವು ಆಶ್ವೀಜಮಾಸದಲ್ಲಿ ನೂರಾರು ಮೈಲಿ ಹಬ್ಬಿದ ಹಸುರಿನ ಹಾಸಗೆಯಂತೆ ಅತ್ಯಂತ ಮನಮೋಹಕವಾಗಿರುತ್ತದೆ. ಸ್ವಾಮಿ ಸಿದ್ಧೇಶ್ವರಾ ನಂದರು ದಾರಿಯುದ್ದಕ್ಕೂ ನಮ್ಮನ್ನು ಸಂಧಿಸುತ್ತಿದ್ದ ಐತಿಹಾಸಿಕ ಸ್ಥಳಗಳನ್ನೂ ನದಿಗಳನ್ನೂ ನಗರಗಳನ್ನೂ ಪಟ್ಟಣಗಳನ್ನೂ ಪುಣ್ಯಕ್ಷೇತ್ರಗಳನ್ನೂ ಆಂಧ್ರ ಉತ್ಕಲಾದಿ ವಿಶಿಷ್ಟ ಪ್ರದೇಶಗಳ ಪರಿಚಯವನ್ನೂ ಮಾಡಿಕೊಡುತ್ತಿದ್ದರು. ಜೊತೆಗೆ ವಿವಿಧ ಭಾಷೆಯ, ವಿವಿಧವೇಷದ, ವಿವಿಧ ರರ್ಣದ ಜನರ ಚಿತ್ರವಿಚಿತ್ರ ಪರಿಚಯವೂ ನಮಗೆ ವಿನೋದಕರವಾಗಿತ್ತು!

ಹೌರಾ ರೈಲುನಿಲ್ದಾಣದಲ್ಲಿ ಗಾಡಿ ನಿಂತಿತು. ಗಂತವ್ಯ ಇನ್ನೇನು ದೊರೆತುಬಿಡುತ್ತದೆ. ಎಂಬ ಸಂಭ್ರಮೋಲ್ಲಾಸದಿಂದ ಮನಸ್ಸು ಉತ್ಸಾಹಿತವಾಯಿತು. ಇದುವರೆಗೆ ಗಂಗಾ, ದಕ್ಷಿಣೇಶ್ವರ, ಬೇಲೂರು ಎಲ್ಲವೂ ಪುಸ್ತಕಗಳಲ್ಲಿ ಓದಿದ ವಿಷಯಗಳಾಗಿದ್ದುವು; ಈಗ ಕಣ್ಣಿಗೇ ಗೋಚರವಾಗಿಬಿಡುತ್ತವೆ! ಆ ಒಂದೊಂದು ಹೆಸರಿನ ಹಿಂದೆಯೂ ಸುಪ್ತವಾಗಿದ್ದ ಭಾವಕೋಶ ಎಚ್ಚತ್ತು ನನ್ನ ಹೃದಯವೆಲ್ಲ ಉಲ್ಲೋಲ ಕಲ್ಲೋಲವಾದ ಭಾವ ಸಮುದ್ರದಂತಾಯಿತು. ಯಾರನ್ನು ಲೋಕವೆಲ್ಲ ಅವತಾರಪುರುಷನೆಂದು ಪೂಜಿಸುವುದೋ ಅಂಥ ಮಹಾವಿಭೂತಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸ ಗುರುದೇವನು ಬದುಕಿ ಬಾಳಿ ಪವಿತ್ರಗೈದ ನೆಲಕ್ಕೆ ನಾನು, - ಸಾವಿರಾರು ಮೈಲಿ ದೂರದ ಸಹ್ಯಾದ್ರಿಯ ಅರಣ್ಯದಲ್ಲಿ ಹುಟ್ಟಿ ಬೆಳೆದ ಯಃಕಶ್ಚಿತ ನಾನು, - ಆತನ ಅಡಿಯ ಪುಡಿಯಿಂದ ದಿವ್ಯೋದಿವ್ಯವಾದ ನೆಲದಮೇಲೆ ಇನ್ನೇನು ಕಾಲಿಡಲಿದ್ದೇನೆ! ನನಸೋ? ಬರಿಯ ಹೊಂಗನಸೋ? ಅಲ್ಲದೆ ಕಾವ್ಯದ ಮೇಲೆ ಕಾವ್ಯದಲ್ಲಿ, ಕವಿಯ ಮೇಲೆ ಕವಿ, ಸಾವಿರಾರು ವರ್ಷಗಳಿಂದ ಬಣ್ಣಿಸುತ್ತ ಬಂದಿರುವ ದೇವಗಂಗಾ ಮಾತೆಯ ಪ್ರಪ್ರಥಮ ದರ್ಶನ ಸ್ಪರ್ಶನಗಳಿಂದ ರಸಪ್ಲಾವಿತನಾಗುವುದರಲ್ಲಿದ್ದೇನೆ! ಜಾಹ್ನವಿ, ಗಂಗಾ, ಭಾಗೀರಥಿ, ಮಂದಾಕಿನಿ ಇತ್ಯಾದಿ ಎಷ್ಟೊಂದು ಹೆಸರುಗಳು ಆ ಪೂಜ್ಯ ವಾಹಿನಿಗೆ!

ನಿಲ್ದಾಣಕ್ಕೆ ಬೇಲೂರು ಮಠದಿಂದ ಶ್ರೀ ರಾಮನಾಥ ಮಹಾರಾಜನ್ ಬಂದಿದ್ದರು, ನಮ್ಮನ್ನು ಕರೆದೊಯ್ಯಲು. ಒಂದು ಟ್ಯಾಕ್ಸಿಯಲ್ಲಿ ಕುಳಿತು ಹೊರಟೆವು. ಹೆದ್ದಾರಿ ಕಿರುದಾರಿಗಳಲ್ಲಿ ಕಾರು ಸಂಚರಿಸುತ್ತಿದ್ದಂತೆ, 'ಅರಮನೆಗಳ ಪಟ್ಟಣ' ಎಂದು ನಾವು ಹುಡುಗರಾಗಿದ್ದಾಗ ಭೂವಿವರಣೆಯ ಪಾಠಗಳಲ್ಲಿ ಓದಿದ್ದ ಕಲ್ಕತ್ತಾ ಮಹಾನಗರವೂ ಇತರ ಅಂತಹ ನಗರಗಳಂತೆಯೆ ಕೊಳಕು ಬೆಳಕು ಎರಡರಿಂದಲೂ ಕೂಡಿರುವುದನ್ನು ಮನಸ್ಸಿಗೆ ತರುವಂತಿತ್ತು: ಕೆಲವೆಡೆ ಮಳೆಬಿದ್ದು ಕೊರಕಲು ಬೀದಿಗಳಿಂದ ಹಾರುತ್ತಿದ್ದ ಕೆಸರು ನೀರು! ಮತ್ತು ಹಲವು ಅಂತಸ್ತುಗಳ ಸೌಧಗಳ ನಡುನಡುವೆ ಮುದುಗಿ ನಿಂತಿದ್ದ ಮುರುಕು ಮನೆ ಮತ್ತು ಗುಡಿಸಲುಗಳು!ಇದ್ದಕ್ಕಿದ್ದಂತೆ ಉದ್ಘೋಷಿಸಿದರು, ಉಚ್ಚ ಭಾವಮಯ ಕಂಠದಿಂದ, ಹರ್ಷೋನ್ಮಾದವಾದಂತೆ, ಸ್ವಾಮಿಸಿದ್ಧೇಶರಾನಂದಜಿ!

"ಜಯ್ ಗುರುಮಹಾರಾಜ್ ಕೀ ಜಯ್! ನೋಡದೇ ಬೇಲೂರು ಮಠ! ನೋಡದೋ ಸ್ವಾಮಿಜಿಯ (ವಿವೇಕಾನಂದರ) ಸಮಾಧಿ ಮಂದಿರ! ನೋಡಲ್ಲಿ ದಕ್ಷಿಣೇಶ್ವರ ದೇವಾಲಯ ! ಜಯ್, ಗುರು ಮಹಾರಾಜ್ ಕೀ ಜಯ್!"

ಮತ್ತೆ ಅದೇ ವಾತ್ಸಲ್ಯದ ಸುಸ್ವಾಗತ, ನಮ್ಮನ್ನು ಎದುರುಗೊಂಡಿತು, ಮನೆಯ ಮಗಳು ತವರಿಗೆ ಮರಳಿ ಬಂದಳೆಂಬಂತೆ!

ಅತಿಥಿಗೃಹಕ್ಕೆ ಹೊಗಿ ನಮ್ಮ ಗಂಟುಮೂಟೆ ಇಟ್ಟು, ಅಲ್ಲಿ ಸ್ವಾಮಿ ಶರ್ವಾನಂದರಿಗೂ ಸ್ವಾಮಿ ಅನಂತಾನಂದರಿಗೂ ನಮಸ್ಕಾರ ಮಾಡಿದೆವು. ತರುವಾಯ ಸ್ನಾಮಾಡಿ ಪ್ರಯಾಣದ ಧೂಳೀ ಧೂಸರತೆಯಿಂದ ಪಾರಾಗಿ ಮಡಿಯಾದೆವು. ಅಲ್ಲಿಂದ ಗೋಪಾಲ ಮಹಾರಾಜರ ನೇತೃತ್ವ ಮತ್ತು ಮಾರ್ಗದರ್ಶನಗಳಲ್ಲಿ ಶ್ರೀ ಮಹಾಮಾತೆಯ, ಸ್ವಾಮಿ ಬ್ರಹ್ಮಾನಂದರ ಮತ್ತು ವಿವೇಕಾನಂದರ ಸಮಾಧಿ ಮಂದಿರಗಳಿಗೆ ನಡೆದು ದರ್ಶನ ತೆಗೆದುಕೊಂಡೆವು. ಅಲ್ಲಿಂದ ಪರಮ ಪವಿತ್ರ ಸ್ಥಾನವಾದ ಶ್ರೀ ಶ್ರೀ ಗುರುಮಂದಿರಕ್ಕೆ ಹೋಗಿ ಭಕಿಭಾರದಿಂದ ಮಣಿದು ಅಡ್ಡಬಿದ್ದೆವು. ಇಲ್ಲಿಯೆ ಇದೆ ಅಲ್ಲವೆ, ಸ್ವಾಮಿ ವಿವೇಕಾನಂದರು ತಮ್ಮ ತಲೆಯಮೇಲೆ ಹೊತ್ತು ತಂದಿಟ್ಟ ಶ್ರೀ ಗುರುಮಹಾರಾಜರ ಲೌಕಿಕಾವಶೇಷದ ಭಸ್ಮಾಸ್ಥಿ ಮಂಜೂಷೆ 'ಆತ್ಮಾರಾಮ'? - ಓ ಆ ಭಾವಾನುಭವವನ್ನೆಂತು ಬಣ್ಣಿಸುವುದೀ ತಣ್ಣನೆಯ ನಿರ್ಜಿವ ಲೇಖನಿ? ಕೈಮುಗಿದು ಮತ್ತೆ ಮತ್ತೆ ಅಡ್ಡಬಿದ್ದು ಧನ್ಯಜೀವರಾದೆವು, ಜನ್ಮಸಾರ್ಥಕವಾಯಿತೆಂದು! ಮಹಾಪುರುಷಜಿ ಆಗ ಇಳಿವಯಸ್ಸಿನ ಕಾರಾಣ ಅಸ್ವಸ್ಥರಾಗಿದ್ದುದರಿಂದ ಅವರ ಮಧ್ಯಾಹ್ನ ವಿಶ್ರಾಂತಿಗೆ ಭಂಗತರಬಾರದೆಂದು ಅವರ ಸಾನ್ನಿಧ್ಯಕೆ ಹೋಗಲಿಲ್ಲ. ಊಟಮಾಡಿ ವಿಶ್ರಾಂತಿ ತೆಗೆದುಕೊಂಡ ತರುವಾಯ ಅಪರಾಹ್ನ ಅವರ ಅನುಕೂಲ ಸಮಯ ತಿಳಿದು, ದರ್ಶನಕ್ಕೆ ಹೋಗುವುದೆಂದು ನಿಶ್ಚಯಿಸಿಕೊಂಡೆವು.

ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರ ವಿಚಾರವಾಗಿ ನಾನು ಅವರ ಜೀವನಚರಿತ್ರೆಯಲಿ ತುಸುಮಟ್ಟಿಗೆ ಓದಿಕೊಂಡಿದ್ದೆ. ಅದರೆ ತರುಣರಾಗಿದ್ದ ನನ್ನಂತಹರ ಮನಸ್ಸು ಹೃದಯಗಳನ್ನೆಲ್ಲ ಆ ಕಾಲದಲ್ಲಿ ಸಂಪೂರ್ಣವಾಗಿ ಆಕ್ರಮಿಸಿದ್ದವರು ಸ್ವಾಮಿ ವಿವೇಕಾನಂದರೊಬ್ಬರೇ! ಸ್ವಯಂ ಭಗವಾನ್ ಶ್ರೀರಾಮಕೃಷ್ಣರು ಕೂಡ ನಮಗೆ ಸ್ವಾಮಿ ವಿವೇಕಾನಂದರ ಗುರುಗಳಾಗಿಯೆ ಪೂಜ್ಯರಾಗಿದ್ದರು ಎಂದಮೇಲೆ ಇನ್ನು ಇತರ ಅವರ ಶಿಷ್ಯರು ನಮಗೆ ಅಷ್ಟೇನೂ ಮನಸ್ಸನ್ನು ಸೂರೆಗೊಳ್ಳುವಷ್ಟು ಮುಖ್ಯರಾಗಿರಲಿಲ್ಲ. ಏಕೆಂದರೆ, ತಾರುಣ್ಯವು ಯಾವುದು ಬೆರಗುಗೊಳಿಸುವುದೊ

ಅದಕ್ಕೆ ಮಾತ್ರ ಬಹುಬೇಗನೆ ಮಾರುವೋಗುತ್ತದೆ: ಪ್ರಸಿದ್ಧಿಯನ್ನೆ ಅದು ಸಿದ್ಧಿಗೆ ಲಕ್ಷಣವನ್ನಾಗಿ ಭಾವಿಸುತ್ತದೆ; ಬೆಳ್ಳಗಿರುವುದೆ ಅದಕ್ಕೆ ಹಾಲು; ಹೊಳೆಯುವುದೆ ಅದಕ್ಕೆ ಹೊನ್ನು: ಬಹುಜನರ ಸ್ತುತಿಗೂ ಗೌರವಕ್ಕೂ ಪಾತ್ರನಾಗಿರುವಾತನೆ ಅದಕ್ಕೆ ಆದರ್ಶಪುರುಷ. ಪತ್ರಿಕಾ ಪ್ರಕಟಣೆಯ ಕೀರ್ತಿಯನ್ನೆ ಅಂತಸ್ಸತ್ತ್ವವೆಂದು ಅದು ನಂಬಿಬಿಡುತ್ತದೆ. ಅದಕ್ಕೆ ಆಧ್ಯಾತ್ಮಿಕ ಮೌಲ್ಯದ ಸ್ವರೂಪವನ್ನರಿಯುವ ಶಕ್ತಿ ಇನ್ನೂ ಕಣ್ದೆರೆದಿರುವುದಿಲ್ಲ. ಬಾಹ್ಯ ವೈಭವವನ್ನೆ ಅಂತರೈಶ್ವರ್ಯಕ್ಕೆ ಸಂಕೇತ ಎಂದು ಅದು ಭ್ರಮಿಸುತ್ತದೆ. ಅದಕ್ಕೆ ಪ್ರಶಾಂತತೆ, ನೀರವತೆ, ವಿವಿಕ್ತತೆ, ನಿರಾಡಂಬರತೆ ಇವುಗಳ ಹಿಂದೆ ಮರೆಯಲ್ಲಿರುವ ನೈಜ ಆಧ್ಮಾತ್ಮಿಕ ವಿಭೂತಿಯನ್ನು ಗುರುತಿಸುವ ಸಾಮರ್ಥ್ಯವೂ ಇರುವುದಿಲ್ಲ, ತಾಳ್ಮೆಯೂ ಇರುವುದಿಲ್ಲ.

ಅಂದಿನ ಲೋಕನಯನಕ್ಕೆ ಸ್ವಾಮಿವಿವೇಕಾನಂದರು ಸಮೀಪದ ಸೂರ್ಯ ಸ್ವಾಮಿ ಶಿವಾನಂದರು ದೂರದ, ಬಹುದೂರದ ನಕ್ಷತ್ರ. ಆದರೆ ಸುಕೃತವಶಾತ್ ನನ್ನ ಭಾಗಕ್ಕೆ, ಸ್ವಾಮಿ ಸಿದ್ಧೇಶ್ವರಾನಂದ ರೂಪದ ದೂರದರ್ಶಕಯಂತ್ರದಿಂದ ಆ ನಕ್ಷತ್ರವನ್ನು ನನ್ನ ದೃಷ್ಟಿಸಾಮಾರ್ಥ್ಯಾವಧಿಯಾಗಿ ವೀಕ್ಷಿಸಿದ್ದ ನನ್ನ ಭಾಗಕ್ಕೆ, ಮತ್ತು ನನ್ನ ಭಾಗ್ಯಕ್ಕೆ, ಸ್ವಾಮಿ ಶಿವಾನಂದರು ಸೂರ್ಯನಂತಲ್ಲದಿದ್ದರೂ ಚಂದ್ರನಷ್ಟಾದರೂ ಗೋಚರವಾಗಿದ್ದರು. ಬಹುಶಃ ಅವರು ಸೂರ್ಯನಂತಗಿದ್ದರೆ ನನ್ನಂತಹರು ಹತ್ತಿರಕ್ಕೆ ಹೋಗಲೂ ಸಾಧ್ಯವಾಗುತ್ತಿರಲಿಲ್ಲವೇನೊ? ಆಲಂಕಾರಿಕವಾಗಿ ಮಾತ್ರವಲ್ಲದೆ ನಿಜವಾಗಿಯೂ ಅವರು ಚಂದ್ರನಂತೆಯೆ ಸೌಮ್ಯರಾಗಿ, ಪ್ರಶಾಂತರಾಗಿ, ಸುಖಶೀತಲರಾಗಿದ್ದುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ.

ಅಪರಾಹ್ನ ಮೂರು ಘಂಟೆಯಾದ ಮೇಲೆ ಪೂಜ್ಯಪಾದ ಶ್ರೀಮತ್ ಸ್ವಾಮಿ ಶಿವಾನಂದ ಮಹಾರಾಜರ ದರ್ಶನಕ್ಕಾಗಿ ನಾವು ಮೂವರೂ ಹೊರಟೆವು - ಸ್ವಾಮಿ ಸಿದ್ಧೇಶ್ವರಾನಂದರು, ಮಾನಪ್ಪ ಮತ್ತು ನಾನು.

ಸಂತೋಷ ಮತ್ತು ಭಯಭಕ್ತಿ ಸಂಮಿಶ್ರವಾದ ಏನೋ ಒಂದು ಅನಿರ್ವಚನೀಯ ಭಾವಕ್ಷೋಭೆ ನನ್ನ ಹೃದಯದಲಿ ಸಂಚಾರಿಯಾಗಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ನಾವು ಹೇಗೆ ಹೇಗೆ ವರ್ತಿಸಬೇಕೆಂಬ ವಿಚಾರವಾಗಿ ನಮಗೆ ಸಲಹೆ ಕೊಡುತ್ತಿದ್ದರು. ಮೆಟ್ಟಲು ಹತ್ತಿ ಮಹಡಿಗೆ ಹೋದವು. ಗಂಭೀರ ಧ್ಯಾನಮಯ ನಿಶ್ಯಬ್ದತೆಯ ವಲಯವನ್ನು ನಾವು ಪ್ರವೇಶಿಸಿದ್ದೆವು. ಇನ್ನೇನು ಗೋಚರವಾಗಲಿರುವ ರಹಸ್ಯಪೂರ್ಣ ದೃಶ್ಯವೊಂದಕ್ಕಾಗಿ ನನ್ನ ಸಮಸ್ತ ಚೇತನವೂ ಕಾತರ ಕುತೂಹಲಿಯಾಯಿತು. ಸ್ವಾಮಿ ಸಿದ್ಧೇಶ್ವರಾನಂದರ ಹಿಂದೆಹಿಂದೆಯೆ ಮಹಾಪುರುಷಜಿಯ ಕೊಠಡಿಯನ್ನು ಪ್ರವೇಶಿಸಿದೆ.

ನಿರೀಕ್ಷಿಸಿದಂತೆ ಅಲ್ಲಿ ಯಾವ ಅದ್ಭುತವೂ ನಮ್ಮನ್ನು ಚಕಿತಗೊಳಿಸಲು ಕಾದಿರಲಿಲ್ಲ ; ದಂಗುಬಡಿಸುವ ಯಾವ ರಾಜಕೀಯತೆಯೂ ಅಲ್ಲಿ ಕಾಣಲಿಲ್ಲ. ಬಾಹ್ಯವೈಭವದ ಚಿಹ್ನೆ ಯಾವುದೂ ಅಲ್ಲಿ ಲವಲೇಶವೂ ಇರಲಿಲ್ಲ. ಮೂರ್ತಿವೆತ್ತ ಕರುಣೆಯಂತೆ, ಮೈಗೊಂಡ ಅಕ್ಕರೆಯಂತೆ, ಮನುಷ್ಯಾಕಾರವಾಂತ ಭಗವಂತನ ವಾತ್ಸಲ್ಯವೆಂಬಂತೆ ಪೂಜ್ಯವಾಗಿ ಕಾಣುತ್ತಿದ್ದ ವೃದ್ಧಮೂರ್ತಿಯೊಂದು ಅತ್ಯಂತ ನಿರಾಡಂಬರ ಭಂಗಿಯಲ್ಲಿ ಒಂದು ಆರಾಮ ಕುರ್ಚಿಯ ಮೇಲೆ ಒರಗಿ ಕುಳಿತು ವಿಶ್ರಮಿಸಿ ಕೊಳ್ಳುತ್ತಿದ್ದುದು ಕಣ್ಣಿಗೆ ಬಿತ್ತು. ನಮ್ಮ ಕೈಗಳು, ಅವು ಕಾಣಿಕೆಕೊಡಲು ತಂದಿದ್ದ ವಸ್ತುಗಳನ್ನು ಹಿಡಿದಿದ್ದರೂ, ತಮಗೆ ತಾವೆ ಮುಗಿದಿದ್ದುವು, ಅಂಜಲಿಬದ್ಧವಾಗಿ!

ಸ್ವಲ್ಪಮಟ್ಟಿಗೆ ಸ್ಥೂಲಕಾಯರಾಗಿ ವೃದ್ಧಾಪ್ಯದ ಮತ್ತು ಅಸ್ವಸ್ಥತೆಯ ದೆಸೆಯಿಂದ ದಣಿದಂತೆ ತೋರುತ್ತಿದ್ದ ಅವರ ದೇಹ, ಅವರ ಆಂತರಿಕ ಸ್ವಭಾವದ ಮೃದುಲತೆಯನ್ನು ಪ್ರತಿಕೃತಿಸುವಂತೆ, ಎಳಬಿಸಿಲಿನಲ್ಲಿಯೂ ನಸು ಬಸವಳಿದ ತಳಿರಿನಂತೆ ಸ್ನಿಗ್ಧಕೋಮಲವಾಗಿ, ನೋಡಿದವರಲ್ಲಿ ಮಾತೃತ್ವದರ್ಶನ ಭಾವವನ್ನು ಪ್ರಚೋದಿಸುತ್ತಿತ್ತು. ಒಂದು ಅಪಾರ್ಥಿವ ಪ್ರಶಾಂತಿಯ ಪರಿವೇಷ ಅವರನ್ನು ಸುತ್ತುವರಿದು, ಅವರ ಮಡಿಲಿಗೆ ಬಿದ್ದ ನನ್ನ ಚೇತನವನ್ನೆಲ್ಲ ಶಿಶುಗೈದು ತೊಟ್ಟಿಲಿಗೆ ಹಾಕಿ ತೂಗಿದಂತಾಯ್ತು. ಅವರ ಸಂಪೂರ್ಣ ನಿರಹಂಕಾರದ ಮಹಾ ಪ್ರಪಾತದ ಅಂಚಿನಲ್ಲಿ ಹೆದರಿ ನಿಂತು ತತ್ತರಿಸಿತ್ತು, ನನ್ನ ಅಲ್ಪ ಆಹಂಕಾರ!

ಮಾತಿಲ್ಲದೆ ನಿಂತಿದ್ದ ಒಂದೆರಡು ಕ್ಷಣಕಾಲದಲ್ಲಿ ನನ್ನ ದೃಷ್ಟಿ ಅತ್ತಿತ್ತ ಹರಿದು ಆ ಕೊಠಡಿಯ ದಿವ್ಯ ಸರಳತೆಯನ್ನು ಗ್ರಾಮಿಣವಾಗಿ ಅವಲೋಕಿಸಿತ್ತು. ಅವರ ಮುಂದುಗಡೆ ಒಂದು ಹುಕ್ಕಾ ಇತ್ತು. ಗೋಡೆಗಳ ಮೇಲೆ ನಾಲ್ಕೈದು ಪಟಗಳಿದ್ದುವು; ಅವರ ಮಲಗುವ ಮಂಚ ಒಂದು ಪಕ್ಕಕ್ಕಿತ್ತು; ಮತ್ತೊಂದು ಕಡೆಕಲವು ಪುಸ್ತಕ ; ಇನ್ನೊಂದೆಡೆ ಒಂದು ಸಣ್ಣ ಮೇಜು. ಆದರೆ ಅವುಗಳನ್ನೆಲ್ಲ ಕಣ್ಣು ನೋಡುತ್ತಿತ್ತೆ ಹೊರತು ಮನಸ್ಸಲ್ಲ.

ಸ್ವಾಮಿ ಸಿದ್ಧೇಶ್ವರಾನಂದರು ಮೊದಲು ಸಾಷ್ಟಾಂಗ ಪ್ರಣಾಮ ಮಾಡಿದರು. ತರುವಾಯ ಮಾನಪ್ಪನು ನಾವು ಮೈಸೂರಿನಿಂದ ತಂದಿದ್ದ ಶ್ರೀ ಚಾಮುಂಡಿ ಮಾತೆಯ ಬೆಳ್ಳಿಯ ವಿಗ್ರಹವನ್ನು ಅರ್ಪಿಸಿ ಅಡ್ಡಬಿದ್ದನು. ನಾನು ಊದಿನ ಕಡ್ಡಿಗಳ ಕಟ್ಟುಗಳನ್ನು ಪದತಲಕ್ಕೆ ನಿವೇದಿಸಿ ನೆಲಕ್ಕೆ ಹಣೆಮುಟ್ಟಿ ನಮಸ್ಕಾರ ಮಾಡಿದೆ.

ಪೂಜ್ಯ ಮಹಾಪುರುಷಜಿ ಹರ್ಷವದನರಾಗಿ ಅನುಗ್ರಹ ಪೂರ್ವಕವಾದ ದೃಷ್ಟಿಯಿಂದ ಆಶೀರ್ವದಿಸುತ್ತಾ ಕುಳಿತಿದ್ದರು.

ಗೋಪಾಲ ಮಹಾರಾಜರು ನಮ್ಮ ಪರಿಚಯ ಹೇಳಿ " ಇವರು ನಿಮ್ಮನ್ನೆ ನೆಮ್ಮಿದ್ದಾರೆ. ಇವರು ನಿಮ್ಮ ಮಾನಸಪುತ್ರರು. ಇವರನ್ನು ಅನುಗ್ರಹಿಸಿ ಕಾಪಾಡಬೇಕು" ಎಂದು ಭಕ್ತಿನಮ್ರರಾಗಿ ನಿವೇದಿಸಿದರು.

ಅಹಂಶೂನ್ಯವಾದ ಅಕೃತಕ ಸ್ವರದಿಂದ ಮಹಾಪುರುಷನ ಮೃದುವಾಣಿ ಹೊಮ್ಮಿತು: "ನಾನು ಯಾರು? ನಾನು ಯರು? ನಾನು ಯಾರು ?" ಎಂದು ಮೂರು ಸಾರಿ ಗಂಭೀರವಾಗಿ ಉಚ್ಚರಿಸಿ "ಎಲ್ಲ ಗುರುಮಹಾರಾಜ್! ಎಲ್ಲ ಗುರುಮಹಾರಾಜ್! ನಾನು ಯಾರು? ಎಲ್ಲ ಅವರೇ! ಅವರ ಇಚ್ಛೆ ಇದ್ದಂತಾಗಲಿ!" ಎಂದು ಅರ್ಧ ನಿಮಾಲಿತ ನಯನರಾದರು. ಮತ್ತೆ ತುಸುಹೊತ್ತಿನಲ್ಲಿಯೆ ಕಣ್ಣು ತೆರೆದು ನಮ್ಮತ್ತ ಕೃಪಾಕಟಾಕ್ಷ ಬೀರಿ ನಮ್ಮನ್ನೆ ಪ್ರಶ್ನಿಸುವಂತೆ ಹೇಳಿದರು: "ನನಗೇನು ಗೊತ್ತು? ನನಗೇನು ಗೊತ್ತು? ನಾನು ಆತನ ಆಜ್ಞಾಪಾಲಕ!"

ಅವರ ಆ ಉಕ್ತಿಯ ತಾತ್ಪರ್ಯವಾಗಲಿ, ಅದರ ಹಿಂದಣ ದರ್ಶನಧ್ವನಿಯಾಗಲಿ ನನಗೆ ಅಂದು ಸಂಪೂರ್ಣವಾಗಿ ಗ್ರಾಹ್ಯವಾಗಿರಲಿಲ್ಲ. ದೊಡ್ಡವರು ವಿನಯಕ್ಕಾಗಿ ಹೇಳುವ ಮರ್ಯದೆಯ ಮಾತುಗಳು ಎಂದು ಮಾತ್ರ ಗ್ರಹಿಸಿದ್ದೆ. ಅವುಗಳ ನಿಜವಾದ ಅರ್ಥ ನನ್ನ ಪ್ರಜ್ಞೆಗೆ ಗೋಚರವಾಗಿ, ಬುದ್ಧಿಗೆ ಗ್ರಾಹ್ಯವಾದದ್ದು ಬಹುಕಾಲದ ಮೇಲೆ: ಸ್ವಾಮಿ ಅಪೂರ್ವಾನಂದರು ಬಂಗಾಳಿಯಲ್ಲಿ ಬರೆದಿದ್ದ " ಶಿವಾನಂದ ವಾಣಿ" ಎಂಬ ಹೆಸರಿನ ಮಹಾಪುರುಷ ಮಹಾರಾಜರ ಮಾತುಕತೆಗಳನ್ನು "For Seekers of God" ಎಂಬ ಅದರ ಇಂಗ್ಲಿಷ್ ಭಾಷಾಂತರದಲ್ಲಿ ಓದಿ, ಅದನ್ನು "ಗುರುವಿನೊಡನೆ

ದೇವರಡಿಗೆ" ಎಂಬ ಹಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡುವ ಸುಯೋಗಕ್ಕೆ ನಾನು ಪಾತ್ರನಾದಂದು! ಶ್ರೀ ಮಹಾಪುರುಷಜಿ ತಮ್ಮತನವನ್ನೆಲ್ಲ ಒಂದಿನಿತೂ ಉಳಿಯದಂತೆ ಶ್ರೀ ಗುರು ಮಹಾರಾಜರಲ್ಲಿ ಸಂಪೂರ್ಣವಾಗಿ ಸಮರ್ಪಿಸಿ ಅವರಲ್ಲಿ ಐಕ್ಯರಾಗಿದ್ದರು ಎಂಬ ಸತ್ಯವನ್ನು ನಾವು ಅವರ ಆ ಮಾತುಕತೆಗಳಲ್ಲಿ ಸಂದೇಹಕ್ಕೆ ಅವಕಾಶವಿಲ್ಲದಂತೆ ಕಾಣುತ್ತೇವೆ. ಶ್ರೀ ಮಹಾಪುರುಷಜಿಯ ಮಹೋನ್ನತ ಆಧ್ಯಾತ್ಮಿಕ ಅವಸ್ಥೆ ಮತ್ತು ಸಿದ್ಧಿ ಆ ಮಾತುಕತೆಗಳಲ್ಲಿ ನಮಗೆ ಪ್ರಕಾಶಿತವಾಗುವಂತೆ ಮತ್ತೆಲ್ಲಿಯೂ ಆಗುವುದಿಲ್ಲ.

ಮತ್ತೆ ಮಹಾಪುರುಷಜಿ ನಮ್ಮ ಹೆಸರು ಕೇಳಿದರು.

ನಾವು ಹೇಳಿದುದನ್ನು ನೆನಪಿನಲ್ಲಿಟ್ಟುಕೊಳ್ಳಲು ಗಟ್ಟಿಪಾಠಮಾಡುವವರಂತೆ ನಮ್ಮಿಬ್ಬರ ಹೆಸರುಗಳನ್ನೂ ಅವರೇ ಉಚ್ಚರಿಸಿದರು, ಎರಡೆರಡೆ ಸಾರಿ: "ಪುಟ್ಟಪ್ಪ - ಮಾನಪ್ಪ, ಪುಟ್ಟಪ್ಪ - ಮಾನಪ್ಪ!"

ಅವರು ಹಾಗೆ ಮಾಡಿದುದು ಅಂದು ನನಗೆ ಸ್ವಲ್ಪ ವಿನೋದಕರವಾಗಿಯೆ ತೋರಿತ್ತು. ಇಂದು ಅದನ್ನು ಕುರಿತು ಬರೆಯುತ್ತಿರುವ ನನಗೆ ರೋಮಾಂಚನವಾಗುತ್ತಿದೆ! ಯಃಕಶ್ಚಿತ ಮನುಷ್ಯನಾದ ನನ್ನ ಹೆಸರು ಅಂತಹ ಭಗವದ್ ಪುರುಷನ ದಿವ್ಯಜಿಹ್ವೆಯಲ್ಲಿ! ತಾಯಿ, ನೆಲದ ಮೇಲೆ ಅಂಬೆಗಾಲಿಕ್ಕಿ ಹುಡಿಯಲ್ಲಿ ಹೊರಳುತ್ತಿರುವ, ತನ್ನ ಕಂದನನ್ನು ಬಾಗಿ ತೋಳುಚಾಚಿ ಎತ್ತಿಕೊಳ್ಳುವಂತೆ ನಮ್ಮನ್ನವರು ತಮ್ಮ ವಾತ್ಸಲ್ಯದ ಮಡಿಲಿಗೆ ಎತ್ತಿಕೊಂಡಿದ್ದರು, ನಮ್ಮ ಹೆಸರನ್ನು ಉಚ್ಚರಿಸುವ ನೆವದಲ್ಲಿ!

ಅಂದಿನ ನನ್ನ ದಿನಚರಿಯಲ್ಲಿ ಈ ಭಾವ ಧ್ವನಿಸುವಂತೆ ಬರೆದಿದ್ದೇನೆ: "ಶ್ರೀ ಗುರುಮಹಾರಾಜರು ಹೇಗಿದ್ದರು ಎಂಬುದು ಸ್ವಲ್ಪವಾದರೂ ಗೊತ್ತಾಗುತ್ತದೆ, ಮಹಾಪುರುಷಜಿಯವರನ್ನು ನೋಡಿದರೆ. ಅವರು ಭಗವಾನ್ ಶ್ರೀ ರಾಮಕೃಷ್ಣರ ಆಧ್ಯಾತ್ಮಿಕ ಪ್ರತಿಮೂರ್ತಿ. ಅವರ ಸಾನ್ನಿಧ್ಯದಲ್ಲಿ ನಿಂತಾಗ ಮಹಾವಿಭೂತಿಯೊಬ್ಬನ ಮುಂದೆ ನಿಂತಿದ್ದೇವೆ ಎಂಬುದು ಸ್ವಸಂವೇದ್ಯವಾಗುತ್ತದೆ. ಅಹಂತಾವೇಲೆಯನ್ನೆಲ್ಲ ನಿರ್ದಿಗಂತಗೊಳಿಸಿರುವ ಅವರ ಭೂಮವ್ಯಕ್ತಿತ್ವ ಅಕ್ಷುಬ್ಧ ಅಸೀಮ ಸಾಗರದಂತೆ ಪ್ರಶಾಂತ ಭವ್ಯವಾಗಿದೆ."

ಮರುದಿನ ಪೂರ್ವಾಹ್ನದಲ್ಲಿ ನಮಗೆ ದೀಕ್ಷೆಯ ಅನುಗ್ರಹವಾಗುತ್ತದೆ ಎಂಬುದನ್ನು ಮಹಾಪುರುಷಜಿಯವರ ಸೇವಾಶುಶ್ರೂಷೆಯಲ್ಲಿ ನಿರತರಾಗಿದ್ದ ಅನುಚರ ಸಾಧುಗಳಿಂದ ಗೊತ್ತು ಮಾಡಿಕೊಂಡ ಮೇಲೆ ಗೋಪಾಲ್ ಮಹಾರಾಜರು ನಮ್ಮನ್ನು ಸ್ವಾಮಿ ವಿವೇಕಾನಂದರ ಕೊಠಡಿಗೆ ಕರೆದೊಯ್ದರು. ಪೂಜ್ಯವೂ ಇತಿಹಾಸಪ್ರಸಿದ್ಧವಾಗಿ ಲೋಕ ವಿಖ್ಯಾತವೂ ಆಗಿರುವ ಆ ಕೊಠಡಿಯನ್ನು ನಾವು ಒಂದು ಪುಣ್ಯಕ್ಷೇತ್ರಕ್ಕೆಂತೊ ಅಂತೆ ಪ್ರವೇಶಿಸಿದೆವು. ಸ್ವಾಮಿಜಿ ಇಹಲೋಕವನ್ನು ಬಿಡುವಾಗ ಆ ಕೋಣೆ ಹೇಗೆ ಇದ್ದಿತೊ ಹಾಗೆಯೆ ಅದನ್ನಿಟ್ಟಿದ್ದರು. ನೋಡುವವರಿಗೆ 'ಸ್ವಾಮಿಗಳು ಈಗತಾನೆ ಎಲ್ಲಿಗೊ ಕ್ಷಣಕಾಲ ಹೊರಗೆ ಹೋಗಿದ್ದಾರೆ; ಇನ್ನೇನು ಬಂದುಬಿಡುತ್ತಾರೆ. ದರ್ಶನಕ್ಕಾಗಿ ಕಾದಿಕೊಂಡಿರೋಣ!' ಎನ್ನುವಹಾಗಿತ್ತು. ಅಲ್ಲಿಯೆ ಇಟ್ಟಿದ್ದ ಅವರ ಪಾದುಕೆಗಾಳಿಗೆ ನಮಿಸಿ, ನಿಂತು ಸುತ್ತಲೂ ಕಣ್ಣು ಹಾಯಿಸಿದೆ.

ಕೊಠಡಿಯ ಒಂದು ಭಾಗದಲ್ಲಿ ಅವರು ಮಲಗುತ್ತಿದ್ದ ವಿಶಾಲ ಮಂಚವಿತ್ತು. ಒಂದು ಮೇಜು ಕುರ್ಚಿಯೂ ಅವರು ಉಪಯೋಗಿಸುತ್ತಿದ್ದಲ್ಲಿಯೆ ಹಾಗೆಯೆ ಇದ್ದುವು. ಇತ್ತೀಚೆಗೆ ಇಟ್ಟಿದ್ದಂತೆ, ಬುದ್ಧದೇವನ ಒಂದು ಧ್ಯಾನಸ್ತಿಮಿತಭಂಗಿಯ ವಿಗ್ರಹವೂ ಆ ಕ್ಷೇತ್ರದ ಪ್ರಶಾಂತ ಗಂಭೀರತೆಗೆ ಪ್ರತಿ ಸ್ವರೂಪವಾಗಿತ್ತು. ಅವರು ಉಪಯೋಗಿಸುತ್ತಿದ್ದ ತಂಬೂರಿ, ಕೊಡೆ, ಊರುಗೋಲು, ಬಟ್ಟೆಬರಿ ಪುಸ್ತಕ ಎಲ್ಲವೂ ಅಲ್ಲಿಯೆ ವಿನೀತ ಸಾಕ್ಷಿಗಳಂತಿದ್ದುವು. ಪರಮಹಂಸರ ಮತ್ತು ಸ್ವಾಮಿಜಿಯ ತೈಲಚಿತ್ರಗಳೂ ಬಂದ ಯಾತ್ರಿಕರನ್ನು ಆಶೀರ್ವದಿಸುವಂತಿದ್ದುವು. ಮಂಚದ ಮೇಲೆ ಬಿಚ್ಚಿದ ಹಾಸಗೆಯ ಮೇಲೆ ಸ್ವಾಮಿಜಿಯ ಪಟ ರಾರಾಜಿಸಿತ್ತು. ಸ್ವಾಮಿ ಸಿದ್ಧೇಶ್ವರಾನಂದರು ಅಲ್ಲಿಯ ಪವಿತ್ರ ನಿಶ್ಶಬ್ಧತೆಗೆ ಭಂಗಬಾರದಂತೆ ನನ್ನ ಕಿವಿಯಲ್ಲಿ ಉಸುರಿದರು: “ಸ್ವಾಮಿಜಿ ಇಲ್ಲಿ ಮಲಗುತ್ತಲೆ ಇರಲಿಲ್ಲ. ಅಲ್ಲಿ ಹೊರಗಡೆ ವರಾಂದದಲ್ಲಿ ಒಂದು ಬರಿಯ ಚಾಪೆಯ ಮೇಲೆ ಮಲಗುತ್ತಿದ್ದರು!”

ಮಹಡಿಯ ಮೇಲಣ ಆ ವರಾಂಡಕ್ಕೆ ಹೋಗಿ ನಿಂತಾಗ, ಎಂತಹ ದೃಶ್ಯ ನಮ್ಮನ್ನು ಎದುರುಗೊಂದಿತು! ತುಂಬಿ ಹರಿಯುತ್ತಿದ್ದ ಬಿತ್ತರದೆಯ ಗಂಗಾಮಾತೆ ಕೆಂಗಾವಿಯುಟ್ಟಂತೆ ಕೆಂಪಗೆ ಹರಿಯುತ್ತಿದ್ದಳು; ಅಲ್ಲಲ್ಲಿ ದೋಣಿಗಳು, ಜಹಜುಗಳು; ಇಕ್ಕೆಲಗಳಲ್ಲಿಯ ನದಿಯ ತೀರದಲ್ಲಿ ಮಹಾಸೌಧಗಳ ಸಾಲು; ಅಲ್ಲಲ್ಲಿ ದಟ್ಟವಾಗಿ ತಳಿರಿಡಿದು ಹಸುರುಕ್ಕುವ ಮರಗಳ ತೋಪುಗಳು; ಆಗಲೇ ಕವಿಯುತ್ತಿದ್ದ ಮುಂಗಪ್ಪಿನಲ್ಲಿ ದೂರ ದಿಗಂತಸ್ಥವೆಂಬಂತೆ ದಕ್ಷಿಣೇಶ್ವರದ ದೇವಾಲಯಗಳ ಗೋಪುರ ಪಂಕ್ತಿ: ಬೇಲೂರುಮಠ ಸ್ಥಾಪನೆಗೆ ಸ್ಥಳವನ್ನಾಯ್ದ ದಿವ್ಯ ಸನ್ಯಾಸಿಯ ಸೌಂದರ್ಯಪ್ರಜ್ಞೆಗೆ ಸಾಕ್ಷಿಯಾಗಿತ್ತು ಆ ಕಂಗೊಳಿಸುವ ನೋಟ!

ಅಷ್ಟರಲ್ಲಿ ಸಂಧ್ಯಾ ಮಂಗಳಾರತಿಗೆ ಸಮಯ ಸನ್ನಿಹಿತವಾದ್ದರಿಂದ ನಾವೆಲ್ಲ ದೇವರಮನೆಗೆ, ಎಂದರೆ ಶ್ರೀಗುರು ಮಂದಿರಕ್ಕೆ, ಹೋಗಿ ಪೂಜೆಯಲ್ಲಿ ಭಾಗಿಗಳಾದೆವು. ದೇವರ ಗುಡಿಯನ್ನು ಎದೆತುಂಬಿ ಕಣ್ಣುತುಂಬ ನೋಡಿ ತಣಿದೆವು: ಹಾಲುಗಲ್ಲಿನ ನುಣುಪಾದ ನೆಲದ ತಣ್ಪು; ಒಳಗೆ ಪೀಠದಲ್ಲಿ ಶ್ರೀ ಗುರುಮಹಾರಾಜರ ಒಂದು ಸಣ್ಣ ಶಿಲಾವಿಗ್ರಹ; ನಿರಾಡಂಬರ ಮತ್ತು ನಿರಾಭರಣವಾಗಿದ್ದ ಅಲ್ಲಿಯ ಆ ಸರಳತೆಯಲ್ಲಿ ಅದೆಂತಹ ಭವ್ಯತೆಯ ಅನುಭವವಾಗುತ್ತದೆ ಭಕ್ತರಿಗೆ!

ಮಠದ ಹೊರ ಅಂಗಳದಲಿ ಗೋವುಗಳಿಗಾಗಿ ತಮ್ಮ ಸ್ವಹಸ್ತದಿಂದಲೆ ಹುಲ್ಲು ಕೊಯ್ಯುತ್ತಿದ್ದ ಸಾಧುಗಳು ಕತ್ತಲಾದ ಮೇಲೆ ಒಳಗೆ ಹೋದರು.

ನವರಾತ್ರಿಯ ಪೂಜೆಗಾಗಿ ದುರ್ಗಾದೇವಿಯ ವಿಗ್ರಹವನ್ನು ಸಿಂಗರಿಸುವುದರಲ್ಲಿ ಕೆಲವರು ಉದ್ಯುಕ್ತರಾಗಿದ್ದರು. ಆಹ! ಎಂತಹ ಸುಂದರ ವಿಗ್ರಹ ಅದು! ಶೃಂಗಾರದಲ್ಲಿಯೂ ಏನು ಅಸದೃಶ ಚಮತ್ಕಾರ! ಒಂದು ಕಡೆ ಲಕ್ಷ್ಮಿ; ಒಂದು ಕಡೆ ಸರಸ್ವತಿ; ಒಂದೆಡೆ ಗಣೇಶ; ಒಂದೆಡೆ ಸುಬ್ರಹ್ಮಣ್ಯ; ಮಲಗಿ ಮಲೆತಿರುವ ಮಹಿಷಾಸುರನ ಕಣ್ಣುಗಳೊ ಅದೆಷ್ಟು ಉಜ್ವಲ! ಆ ಹಾವೋ, ಆ ಸಿಂಹವೋ ; ಆದರೂ ಅಲಂಕೃತಳಾದ ತಾಯಿ ಭಯಂಕರೆಯಾಗಿ ತೋರಲಿಲ್ಲ ; ಮಕ್ಕಳನ್ನು ಕಂಡು ಮುಗುಳುನಗೆದೋರಿ ಹರಸುವಂತಿದ್ದಳು, ರಾಮಣೀಯಕವಾಗಿ!

ನಕ್ಷತ್ರ ಕಾಂತಿಯ ಆಂಧಕಾರದಲ್ಲಿ ನಾನೊಬ್ಬನೆ ಮಠದ ಮುಂದೆ ಗಂಗೆಗೆ ಚಾಚಿಕೊಂಡಿರುವ ಸೋಪಾನ ಪಂಕ್ತಿಯ ವೇದಿಕೆಯ ಮೇಲೆ ತಿರುಗಾಡುತ್ತಾ ಆ ದಿನದ ವಿವಿಧ ರೂಪದ ಅನಿಭವಗಳನ್ನು ಕುರಿತು ಧ್ಯಾನಿಸಿದೆ. ಅನುಭವಗಳ ರೂಪ ವಿವಿಧವಾಗಿದ್ದರೂ ಅವುಗಳಲ್ಲಿ ಏಕಸೂತ್ರದ ಒಂದು ಐಕ್ಯಸ್ವರೂಪವಿತ್ತು. ನಾಳೆ ನನಗೊದಗಲಿರುವ ಮಹಾಗುರುವಿನ ಅನುಗ್ರಹಕ್ಕೆ ಆ ಅನುಭವಗಳೆಲ್ಲವೂ ಸೇರಿ ಒಂದು ಆಧ್ಯಾತ್ಮಿಕವಾದ ಸಂಸ್ಕಾರಭಿತ್ತಿಯನ್ನು ಸಿದ್ಧಗೊಳಿಸಿದಂತಿತ್ತು, ನನ್ನ ಹೃದಯದಲ್ಲಿ.

ಮರುದಿನ ೮-೧೦-೧೯೨೯, ಆಶ್ವಿಜ ಶುದ್ಧಷಷ್ಠಿ, ಸ್ವಾಮಿ ಸಿದ್ಧೇಶ್ವರಾನಂದರು ಹೇಳಿದರು: “ಈವೊತ್ತು ನಿಜವಾಗಿಯೂ ಪ್ರಶಸ್ತವಾದ ದಿನ; ಸರಸ್ವತೀ ಆವಾಹನೆಯ ಶುಭದಿನ. ಕವಿಯಾಗಿರುವ ನಿನಗೆ ಈ ದಿನ ದೀಕ್ಷೆ ದೊರೆಯುವುದರಲ್ಲಿ ತುಂಬ ಅರ್ಥವಿದೆ, ಧ್ವನಿಯಿದೆ!”

ಅಂದು ಔಪಚಾರಿಕ ಪ್ರಶಂಸೆ ಎಂಬಂತೆ ತೋರಿತ್ತು, ಅವರ ಆ ಉಕ್ತಿ; ಇಂದು ಮೂವತ್ತೆಂಟು ವರ್ಷಗಳ ಅನಂತರ, ಅದನ್ನು ಕುರಿತು ಬರೆಯುತ್ತಿರುವಾಗ, ಅವರ ಸರಳ ಸಾಧಾರಣವಾಗಿದ್ದ ಆ ವಾಕ್ಕು ಎಂತಹ ಪ್ರವಾದಶಕ್ತಿಯಿಂದ ಕೂಡಿ ಎಷ್ಟು ಸತ್ಯಗರ್ಭಿತವಾಗಿತ್ತು ಎಂಬುದು ಸುಸ್ಪಷ್ಟವಾಗಿದೆ. ಅಂದು ನನಗೊದಗಿದ ಆಶೀರ್ವಾದದ ತಪೋಬಲವೆ ನನ್ನನ್ನು ಬದುಕಿನ ಕುಟಿಲ ಜಟಿಲವಾದ ಹಾದಿಯುದ್ದಕ್ಕೂ ಕೈಹಿಡಿದು ನಡೆಸಿ, ನನ್ನಿಂದ ಸಾಹಿತ್ಯಕ ಮಹಾಕೃತಿಗಳನ್ನು ಸೃಷ್ಟಿಸಿ, ನನ್ನ ಜೀವನವನ್ನು ಧನ್ಯವನ್ನಾಗಿ ಮಾಡಿದೆ!

ಇನ್ನು ದೀಕ್ಷೆಯ ವಿಷಯ? ಏನನ್ನು ಹೇಳುವುದು? ಏನನ್ನು ಹೇಳಿದರೆ ತಾನೆ ಅವರ ದಿವ್ಯ ಮಹೋನ್ನತಿಗೆ ತಗುವ ಗೌರವಸಗಿದಂತಾಗುತ್ತದೆ? ಅದನ್ನು ನೇರವಾಗಿ ಕುರಿತಾಡುವ ನುಡಿಗಳೆಲ್ಲ ಅದರ ಗುರುತ್ವಕ್ಕೆ ಭಂಗ ತರುತ್ತವೆ; ಅದನ್ನು ಲಘುಗೊಳಿಸುತ್ತವೆ! ಅನಧಿಕಾರಿಗಳ ಮುಂದೆ ಅದನ್ನು ಹಿಯಾಳಿಸಿದಂತೆಯೂ ಆಗುತ್ತದೇನೊ? ಆ ಅಪಚಾರಕ್ಕೆ ನಾನು ಕೈಹಾಕುವುದಿಲ್ಲ. ಅದಕ್ಕೆ ಬದಲಾಗಿ 'ಅನುಕ್ತ' ಎನಿಸುವ ಅನ್ಯರೀತಿಯಿಂದ ಅದರ ಅಮರ ಮಹಿಮೆಯನ್ನು ಇನಿತೆ ಸೂಚಿಸಲು ಪ್ರಯತ್ನಿಸುತ್ತೇನೆ. ಅಂದು ಬರೆದಿರುವ ನನ್ನ ದಿನಚರಿಯೂ ನನಗೆ ಯಾವ ನೆರವನ್ನೂ ನೀಡಲ್ಲೊಲ್ಲದೆ ತುಟಿಬಿಗಿದು ಮೌನವಾಗಿದೆ: “ಇಂದು ನನ್ನ ಜೀವಮಾನದಲ್ಲಿ ಅತ್ಯಂತ ಶ್ರೇಷ್ಠವಾದ ದಿನಗಳಲ್ಲಿ ಒಂದು ದಿನ. ಏಕೆಂದರೆ ಇಂದು ಶ್ರೀಮತ್ ಸ್ವಾಮಿ ಶಿವಾನಂದ ಸ್ವಾಮಿಗಳಿಂದ ನನಗೆ ದೀಕ್ಷೆ ಲಭಿಸಿತು. ಇದರ ವಿಷಯ ರಹಸ್ಯವಾಗಿರಬೇಕಾದ್ದರಿಂದ ನಾನ ಇಲ್ಲಿ ಬರೆಯುವುದಿಲ್ಲ” ಎಂದಿದೆ ಅಲ್ಲಿಯ ಲಿಖಿತ!

ತಮ್ಮ ಮಂತ್ರದೀಕ್ಷಾ ವಿಧಾನದ ವಿಚಾರವಾಗಿ ಸ್ವಯಂ ಮಹಾಪುರುಷಜಿಯೆ,

[ಸ್ವಾಮಿ ಪೂರ್ವಾನಂದರಿಂದ ಸಂಗ್ರಹಗೊಂಡಿರುವ 'ಶಿವಾನಂದ ವಾಣಿ',] ಹೀಗೆ ಹೇಳಿದ್ದಾರೆ: “ನಮ್ಮದೀಕ್ಷಾ ಪ್ರದಾನದಲ್ಲಿ ಯಾವ ಭಟ್ಟಾಚಾರ್ಜಿಗಿರಿಯೂ ಇರುವುದಿಲ್ಲ. ಅಲ್ಲದೆ ಅಂಥಾ ಅಂತ್ರ ಮಂತ್ರ ಯಾವುದೂ ವಿಶೇಷವಾಗಿ ನನಗೆ ಗೊತ್ತೂ ಇಲ್ಲ; ಅವನ್ನು ತಿಳಿದುಕೊಳ್ಳುವುದರಿಂದ ಪ್ರಯೋಜನವೂ ಇದೆ ಎಂದು ನಾನು ಭಾವಿಸಿಯೂ ಇಲ್ಲ. ನನಗೆ ಗೊತ್ತಿರುವುದು, ಠಾಕೂರರು, - ಅವರೇ ಸರ್ವಸ್ವ. ಅವರದೆ ನಾಮ, ಅವರದೆ ಶಕ್ತಿ. ಅವರ ಇಚ್ಛೆಯ ಮೇರೆಗೆ

ಅವರದೆ ಹೆಸರನ್ನು ಎಲ್ಲರಿಗೂ ಕೊಡುತ್ತೇನೆ. ಮತ್ತೆ ಪ್ರಾರ್ಥನೆ ಮಾಡುತ್ತೇನೆ, - 'ಠಾಕೂರ್, ಇವರನ್ನು ಕೃಪೆಯಿಟ್ಟು ಸ್ವೀಕರಿಸಿ; ಇವರಿಗೆ ಭಕ್ತಿ ವಿಶ್ವಾಸಗಳನ್ನು ದಯಾಪಾಲಿಸಿ; ದಯೆ ತೋರಿ; ಎಂದು."

ಇನ್ನೊಮ್ಮೆ ಅವರು ಮಂತ್ರದ ವಿಚಾರವಾಗಿ ಮಾತನಾಡುತ್ತಾ ಹೀಗೆ ಹೇಳಿದ್ದಾರೆ: "ಮಂತ್ರಕ್ಕೆ ಮತ್ತೇನು ಅರ್ಥ? ಮಂತ್ರ ಭಗವಂತನ ಹೆಸರು. ಅದರ ಜೊತೆಗಿರುವ ಬೀಜವಿದೆಯಲ್ಲಾ ಅದು ಬೇರೆ ಬೇರೆ ದೇವಿದೇವಿಯರನ್ನು ಕುರಿತ ಭಾವ ಪ್ರಕಾಶಕ ಶಬ್ದ. ಬೀಜ ಮತ್ತು ನಾಮ ಒಟ್ಟಾದರೆ ಮಂತ್ರ. ಒಟ್ಟಿನಲಿ ಮಂತ್ರ ಭಗವಂತನನ್ನು ನೆನೆಯಿಸುವ ವಿಧಾನ. ಮಂತ್ರಜಪ ಮಾಡುವುದೆಂದರೆ ದೇವರನ್ನು ಕರೆದಂತೆಯೆ."

ದೀಕ್ಷಾಗುರುವಾಗಿ ಮಂತ್ರದೀಕ್ಷೆ ಕೊಡುವ ತಮ್ಮ ನಿಲವೇನು ಎಂಬುದರ ವಿಚಾರವಾಗಿಯೂ ಅವರ ಮಾತುಕತೆಗಳಲ್ಲಿ ಒಂದು ಅದ್ಭುತ ಪ್ರಸಂಗ ಬರುತ್ತದೆ, ಕಾಶಿಯಲ್ಲಿ ಮಹಾಪುರುಷಜಿ ಆನೇಕರಿಗೆ ದೀಕ್ಷೆಕೊಟ್ಟ ಸಂದರ್ಭದಲ್ಲಿ: ಕಾಶಿ ಶಿವಕ್ಷೇತ್ರವಾದ್ದರಿಂದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಾರದಾನಂದರು ಮೊದಲಾದ ಶ್ರೀ ರಾಮಕೃಷ್ಣ ದೇವರ ಪ್ರಮುಖ ಅಂತರಂಗ ಶಿಷ್ಯರಲ್ಲಿ ಯಾರೂ ಅಲ್ಲಿ ಮಂತ್ರದೀಕ್ಷೆ ಕೊಡಲು ಸಮ್ಮತಿಸಿರಲಿಲ್ಲ. ಸ್ವಾಮಿ ಶಿವಾನಂದರು ಆ ನಿಯಮಕ್ಕೆ ವ್ಯತಿಕ್ರಮವಾಗಿ ದೀಕ್ಷೆ ಕೊಟ್ಟದ್ದು ಅನೇಕ ಸಾಧು ಸೇವಾನುಚರರ ಮನಸ್ಸಿನಲ್ಲಿ ಏನೊ ತುಸು ಕಳವಳದ ಸಂದೇಹಕ್ಕೆ ಕಾರಣವಾಗಿತ್ತು. ಆ ವಿಚಾರವಾಗಿ ಪ್ರಶ್ನಿಸಿದಾಗ ಮಹಾಪುರುಷಜಿ ಹೇಳಿದರು: "ನೋಡಯ್ಯ, ನಾನು ಯಾರಿಗಾದರೂ ದೀಕ್ಷೆ ಕೊಡುತ್ತೇನೆ ಎಂಬ ಬುದ್ಧಿ ನನ್ನ ಮನಸ್ಸಿನಲ್ಲಿ ಇರುವುದೇ ಇಲ್ಲ. ಶ್ರೀ ಠಾಕೂರರ ಕೃಪೆಯಿಂದ ನನ್ನಲ್ಲಿ ಗರುಬುದ್ಧಿ ಯಾವತ್ತೂ ತಲೆಹಾಕಿಲ್ಲ. ಜಗದ್ಗುರುವಾಗಿದ್ದಾನೆ ಆ ಶಂಕರ ಮಹಾದೇವ; - ಈ ಯುಗದಲಿ ಶ್ರೀ ರಾಮಕೃಷ್ಣದೇವ. ಆತನೆ ಭಕ್ತರ ಹೃದಯದಲ್ಲಿ ಪ್ರೇರಣೆಯಾಗಿ ಇಲ್ಲಿಗೆ ಅವರನ್ನು ಕಳುಹಿಸುತ್ತಾನೆ. ಇತ್ತ ಆತನೆ ನನ್ನಲ್ಲಿ ಕುಳಿತು ಏನು ಹೇಳಿಸುತ್ತಾನೊ ಅದನ್ನು ನಾನು ಮಾಡುತ್ತೇನೆ. ಶ್ರೀ ಠಾಕೂರರೆ ನನ್ನ ಅಂತರಾತ್ಮವಾಗಿದ್ದಾರೆ."

ಯಾರನ್ನು ಜಗತ್ತು ಸನಾತನ ಪೂರ್ಣಬ್ರಹ್ಮದ ವರಿಷ್ಠಾವತಾರ ಎಂದು ಆರಾಧಿಸುತ್ತಿದೆಯೊ ಅಂತಹ ಭಗವಂತನ ನಿತ್ಯಸಂಗಿ ಪಾರ್ಷದರಲ್ಲಿ ಅಗ್ರ ಪಂಕ್ತಿಗೆ ಸೇರಿದವನಾಗಿ, ಅವತಾರಪುಷೋತ್ತಮನ ಲೋಕಸಂಗ್ರಹ ಕಾರ್ಯದಲ್ಲಿ ಸಹಯೋಗಿಗಳಾಗಿ ಮತ್ತು ಸೇವಾ ಸಹಾಯಕರಾಗಿ ಆತನೊಡನೆ ಅವತೀರ್ಣರಾಗಿದ್ದ ಅಂತರಂಗ ಶಿಷ್ಯರಲ್ಲಿ ಈಶ್ವರಕೋಟಿಯೆಂದೂ ನಿತ್ಯಸಿದ್ಧನೆಂದೂ ಪರಿಗಣಿತನಾಗಿರುವ ಮಹಾಪುರುಷನಿಂದ ದೀಕ್ಷೆ ಪಡೆಯುವುದೆಂದರೆ ಭವಭವಾಂತರ ಸುಕೃತ ಕೃಪೆಯಲ್ಲದೆ ಮತ್ತೇನು? ಅದರ ಧನ್ಯತೆ ಎಂತಹ ಧ್ಯಾನಕ್ಕೂ ಅಗಮ್ಯವಾಗಿಯೆ ಉಳಿಯುತ್ತದೆ; ಪರಿಭಾವಿಸಿದಷ್ಟೂ ಭವ್ಯತರವಾಗಿ ತೋರುತ್ತದೆ ಅದರ ಮಹತ್ತು!

ದೀಕ್ಷಾನಂತರ ದುರ್ಗಾಪೂಜೆಯ ಕೊನೆಯ ದಿನದವರೆಗೂ ನಾವು ಬೇಲೂರು ಮಠದಲ್ಲಿದ್ದೆವು, ಭೌಗೋಳಿಕವಾಗಿ; ಆಧ್ಯಾತ್ಮಿಕವಾಗಿ,ಮಹಾಪುರುಷಜಿಯ ಸಾನ್ನಿಧ್ಯದ ಕೃಪಾವಕ್ಷನೀಡದಲ್ಲಿ ಪಕ್ಷಿಶಿಶುಗಳಾಗಿದ್ದೆವು! ನನ್ನನ್ನು ಮಹಾಗುರುವಿನೆಡೆಗೆ ಕರೆದೊಯ್ದ ಗುರು ಸ್ವಾಮಿ ಸಿದ್ಧೇಶ್ವರಾನಂದರ ಸಂತೋಷಕ್ಕಂತೂ ಮೇರೆ ಇರಲಿಲ್ಲ. ಗರಿಬಲಿತ ಮೇಲೆ ಗೂಡಿನಿಂದ ಮೊತ್ತಮೊದಲನೆಯ ಬಾರಿಗೆ ಹೊರಗೆ ಹಾರಿದ ತನ್ನ ಮರಿಗಳನ್ನು ತಾಯಿಹಕ್ಕಿ ಯಾವ ಹಿಗ್ಗಿನಿಂದ ಈ ಗಿಡದಿಂದ ಆ ಗಿಡಕ್ಕೆ, ಈ ಮರದಿಂದ ಆ ಮರಕ್ಕೆ, ಈ ಹೂವಿನಿಂದ ಆ ಹೂವಿಗೆ, ಈ ಹಣ್ಣಿನಿಂದ ಆ ಹಣ್ಣಿಗೆ ತಳಿವಿಲ್ಲದ ಹೆಮ್ಮೆಯಿಂದ ಹಾರಿಸಿಕೊಂಡು ಹೋಗಿ ಭೂಮ್ಯಾಕಾಶಗಳ ಪರಿಚಯಮಾಡಿಕೊಡುವುದೋ ಹಾಗೆಯೆ

ಅವರು ನಮ್ಮನ್ನು ದರ್ಶನೀಯ ಸ್ಥಾನಗಳಿಗೂ ಸಂದರ್ಶನೀಯ ವ್ಯಕ್ತಿಗಳ ಬಳಿಗೂ ಕರೆದೊಯ್ದು ನಮ್ಮ ಅನುಭವಕೋಶವನ್ನು ಶ್ರೀಮಂತಗೊಳಿಸಿದರು: ಮುಖ್ಯವಾಗಿ ದಕ್ಷಿಣೇಶ್ವರಕ್ಕೆ; ಮಾಸ್ಟರ್ ಮಹಾಶಯರ ಪೂಜ್ಯ ಸನ್ನಿಧಿಗೆ; ಮತ್ತು ಸ್ವಾಮಿ ಅಭೇದಾನಂದರೆಡೆಗೆ! ಜೋತೆಗೆ, ಬಂಗಾಳಿ ಸಾಹಿತ್ಯದ ಶ್ರೇಷ್ಠಕವಿಗಳ ಕೆಲವು ಕೃತಿಗಳ ಪರಿಚಯವೂ ಮೂಲದಲ್ಲಿಯೆ ದೊರೆಯುವಂತೆ ಮಾಡಿದರು.ಸ್ವಾಮಿ ಶಾಶ್ವತಾನಂದರೂ ಸ್ವಾಮಿ ವಿಜಯಾನಂದರೂ ರವೀಂದ್ರನಾಥಠಾಕೂರ, ಮೈಕೇಲ್ ಮಧುಸೂದನ ದತ್ತ , ನಸ್ರೂಲ್ ಇಸ್ಲಾಂ ಮುಂತಾದವರ ಭಾವಗೀತಾ ಕೃತಿಗಳನ್ನೂ, ಬ್ಲಾಂಕ್‌ವರ್ಸನಲ್ಲಿ ಬರೆದ 'ಮೇಘನಾದ ವಧ' ಕಾವ್ಯವನ್ನೂ ಛಂದೋಬದ್ಧವಾಗಿ ಹಾಡಿಯೂ ಓದಿಯೂ ಕನ್ನಡ  ಸರಸ್ವತಿಗೆ ಮಹತ್ ಸೇವೆ ಸಲ್ಲಿಸಿದರು.

ಅಲ್ಲಿಂದ ಹೊರಡುವ ಮುನ್ನ ಮಹಾಪುರುಷಜಿಯವರನ್ನು ಸಂದರ್ಶಿಸಿ, ಪ್ರಣಾಮ ಸಲ್ಲಿಸುವ ಭಾಗ್ಯ ನಾಲ್ಕು ಐದುಸಾರಿ ನಮಗೆ ದೊರೆಕೊಂಡಿತ್ತು. ಅವರು ದೇಹದಲ್ಲಿ ತುಂಬ ಅಸ್ವಸ್ಥರಾಗಿದ್ದುದರಿಂದ ದೀರ್ಘ ಸಂಭಾಷಣೆಗೆ ಅವಕಾಶವಿರಲಿಲ್ಲ. ಪ್ರತಿಸಲವೂ ಅವರು ನಮ್ಮ ಊಟ, ವಸತಿ, ಆರೋಗ್ಯ ಇವುಗಳ ವಿಷಯದಲ್ಲಿ ಮಾತೃಸದೃಶವಾದ ಆಸಕ್ತಿಯಿಂದ ವಿಚಾರಿಸುತ್ತಿದ್ದರು. ನಾವು ದಕ್ಷಿಣ ದೇಶದವರಾದುದರಿಂದ ನಮಗೆ ಬಂಗಾಳಿಯ ಭಕ್ಷ್ಯಭೋಜ್ಯ ಭೋಜನಾದಿಗಳು ಸೇರುತ್ತವೆಯೊ ಇಲ್ಲವೊ ಎಂಬ ಕಾತರ ಅವರಿಗೆ!

ಕೊನೆಯ ಸಾರಿ ಬೀಳ್ಕೊಳ್ಳುವ ಮುದಲು ಅವರಿಗೆ ಪ್ರಣಾಮ ಸಲ್ಲಿಸಲು ಹೋದಾಗ ಅವರು ಆಶೀರ್ವದಿಸಿದ ಕೊನೆಯ ಮಾತುಗಳಿವು: "ಶ್ರೀ ಗುರು ಮಹಾರಾಜರು ನಿಮ್ಮ ಬಳಿಯೆ ಸದಾ ಇರುವರು!"

ದೀಪ್ತ ಚೇತಸನಾಗಿ, ದಿವ್ಯ ಸಾನ್ನಿಧ್ಯವನ್ನು ಹೃದಯದಲ್ಲಿ ಹೊತ್ತು, ಊರಿಗೆ ಹಿಂತಿರುಗಿದ ಮೇಲೆ, ಇತರರಿಗಿಂತಲೂ ನಾನು ತುಸು ಎತ್ತರವಾಗಿ ಬಿಟ್ಟಂತೆ ನನಗೆ ಅನುಭವವಾಗತೊಡಗಿತು: ಮಾನಸಿಕವಾಗಿ ಮಾತ್ರವೆ ಅಲ್ಲ, ದೈಹಿಕವಾಗಿಯೂ ಅದು ಪ್ರತಿಫಲಿತವಾದಂತೆ ತೋರುತ್ತಿತ್ತು! ಅದನ್ನು ಕುರಿತು ಹಿರಿಯರೊಬ್ಬರೊಡನೆ ಪ್ರಸ್ತಾಪಿಸಿದಾಗ ಅವರು ಹೇಳಿದರು: "ಹೌದು, ದೀಕ್ಷಾನಂತರ ಹಾಗೆ ಆಗುತ್ತದೆ: ಚೇತನ ತನ್ನ ಊರ್ಧ್ವಮುಖ ಉದ್ಧಾರವನ್ನು ಆ ಪ್ರತಿಮೆಯೊಡ್ಡಿ ಅನುಭವಿಸುತ್ತದೆ."

ಶ್ರೀ ಮಹಾಪುರುಷಜಿ ನನ್ನ ಚೇತನವನ್ನು ತಮ್ಮ ಕೃಪಾಶಕ್ತಿಯಿಂದ ಉನ್ನತಗೊಳಿಸಿದ್ದರು ಎಂಬುದರಲ್ಲಿ ಸಂದೇಹವೆಲ್ಲಿ ಬಂತು?

ತಮ್ಮ ಮಾತುತತೆಗಳಲ್ಲಿ ಅವರೆ ಹೇಳಿದ್ದಾರೆ:

"ಯಾರು ಠಾಕೂರರನ್ನು ನೋಡಲಾಗಲಿಲ್ಲವೋ ಆದರೆ ನಮ್ಮನ್ನು ನೋಡುತ್ತಿದ್ದಾರೆಯೋ ಅವರಿಗೂ ಕಲ್ಯಾಣವಾಗುತ್ತದೆ. ನಾವೂನೂ ಠಾಕೂರರದೇ ಅಂಶ."

ದಿವ್ಯಗುರು ಅನುಗ್ರಹಿಸಿದ ಆ ಮಂತ್ರರಥವನ್ನೇರಿ ತರುವಾಯದ ನನ್ನ ಬಾಳು ಪುಣ್ಯಪಥದಲ್ಲಿ ನೇರವಾಗಿ ಏಳುಬೀಳುಗಳಿಲ್ಲದೆ ಸಾಗಿತು ಎಂದು ಯಾರೂ ಊಹಿಸದಿರಲಿ. ಸಮಾನ್ಯ ಬದ್ಧಜೀವವೊಂದು ಮುಗ್ಗರಿಸಬಹುದಾದ ಎಡೆಗಳಲ್ಲೆಲ್ಲ ನನ್ನ ಜೀವವೂ  ಮುಗ್ಗರಿಸಿದೆ: ಮೃತ್ಯುವಿನ ಇದಿರು ತತ್ತರಿಸಿದೆ; ಪಾಪದ ಪಂಕದಲ್ಲಿ ಬಿದ್ದು ಲಿವಿಲಿವಿ ಒದ್ದಾಡಿದೆ; ಅರಿಷಡ್ವರ್ಗದ ಉರಿಯಲ್ಲಿ ಬೆಂದಿದೆ; ಅಹಂಕಾರ, ಅನ್ಯಾಯ , ಅವಹೇಳನಾದಿಗಳ ನಿಷ್ಠುರ ಮುಷ್ಟಿಯಲ್ಲಿ ಸಿಕ್ಕಿ ನೊಂದಿದೆ. ಸೋತು ಕುಗ್ಗಿದೆ; ಗೆದ್ದು ಹಿಗ್ಗಿದೆ. ಆದರೆ ಆಟದಲ್ಲಿ ಗಿರ್ರನೆ ತಿರುಗುವ ಬಾಲಕನು ಭೇಟಿಕಂಭವನ್ನು ಬಲವಾಗಿ ಹಿಡಿಯುವಂತೆ, ನನ್ನ ಚೇತನ ಶ್ರೀ ಗುರುಪಾದರೂಪದ ನಾಮ ಮಂತ್ರವನ್ನು ದೃಢವಾಗಿ ಆಶ್ರಯಿಸಿ, ಒಮ್ಮೊಮ್ಮೆ ದಾರಿತಪ್ಪಿದರೂ ದಿಕ್ಕುತಪ್ಪದಂತೆ, ಗುರಿಯತ್ತ ಸಾಗುತ್ತಿದೆ.

ಶ್ರೀ ಮಹಾಪುರುಷಜಿಯವರಿಂದ ದೀಕ್ಷೆ ಪಡೆದ ಒಬ್ಬ ಶಿಷ್ಯ ತನ್ನ ಪೂರ್ವಜೀವನದಲ್ಲಿ ಕೊಳಕು ಬಾಳು ನಡೆಸಿದ್ದನು ಎಂಬ ವಿಷಯವನ್ನು ಅವರ ಗಮನಕ್ಕೆ ತಂದಾಗ, ಅವರಾಡಿದ ಈ ಮಾತುಗಳು ಸರ್ವರಿಗೂ ಸರ್ವಕಾಲಕ್ಕೂ ಧೈರ್ಯವಿತ್ತು ಮೇಲೆತ್ತುವ ಆಶೀರ್ವಚನವಾಗಿದೆ:

"ನೀನೇನೊ ಹೇಳಿದೆಯಲ್ಲವೆ, ಅವನಲ್ಲಿ ಕೆಲವು ಕೆಟ್ಟಚಾಳಿಗಳಿವೆ ಎಂದು? ಅದೆಲ್ಲ ನನಗೆ ಬೇಕಿಲ್ಲ ; ನಡೆದುಹೋದ ಜೀವನದಲ್ಲಿ ಯಾರು ಏನು ಮಾಡಿದರು, ಏನು ಮಾಡಲಿಲ್ಲ, ಅದೆಲ್ಲ ನನಗೆ ತಿಳಿಯಬೇಕಾಗಿಲ್ಲ. ಆಗಿಹೋದದ್ದು ಆಗಿಯೆಹೋಯಿತು. ಈಗ ಅವನು ಇಲ್ಲಿಗೆ ಬಂದು ಬಿದ್ದಿದ್ದಾನೆ; ಠಾಕೂರರಿಗೆ ಶರಣಾಗತನಾಗಿದ್ದಾನೆ; ಎಲ್ಲ ತೊಳೆದು ಹೋಗುತ್ತದೆ; ಅವನು ಬದುಕುತ್ತಾನೆ. ಠಾಕೂರರು ಕಪಾಲ ಮೋಚನರು; ಏನನ್ನೂ ತೊಡೆದುಹಾಕುವ ಶಕ್ತಿ ಅವರಿಗಿದೆ. ಯುಗಾವತಾರದಲ್ಲಿ ಶರಣಾಗತನಾಗಿದ್ದಾನೆ - ಅದೇನು ಕಡಮೆ ಸಂಗತಿಯೆ? ಬಹುಸುಕೃತಿ ಇರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಗುರುಮಹಾರಾಜನ್ ಅತನನ್ನು ಉದ್ಧಾರ ಮಾಡಿಯೆ  ಮಾಡಿತ್ತಾರೆ……….ಅವರ ಹತ್ತಿರ ಎಂತಹ ಪಾಪವೂ ಅಂತಹ ದೊಡ್ಡದೇನೂ ಅಲ್ಲ. ಅವರು ಅಂತರ್ಯಾಮಿ, ನಿನ್ನ ಭೂತ ಭವಿಷ್ಯತ್ತು ವರ್ತಮಾನ ಎಲ್ಲವನ್ನೂ ತಿಳಿದೇ ಅವರು ನಿನಗೆ ಕೃಪೆದೋರಿದ್ದಾರೆ………ಅಲ್ಲದೆ, ಯಾವಾಗ ನೀನು ನನ್ನ ಬಳಿ ನಿನ್ನೆಲ್ಲ ದುಷ್ಕೃತಿ ನಿವೇದನ ಮಾಡಿದೆಯೊ ಆವಾಗಲೆ ನಿನ್ನೆಲ್ಲ ಪಾಪಕ್ಷಯವೂ ಆಗಿಹೋಯಿತೆಂದು ತಿಳಿ!………"

ನಿಜ, ಅವರು ಆಶ್ವಾಸನೆ ನೀಡಿರುವಂತೆ, ಬಹುಸುಕೃತಿ ಇರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ: ಕೇರಳದ ಎಲ್ಲಿಯೊ ಹುಟ್ಟಿದ ಒಬ್ಬ ಶ್ರೀವ್ಯಕ್ತಿ ಕರ್ನಾಟಕದ ಎಲ್ಲಿಯೊ ಹುಟ್ಟಿದ ಇನ್ನೊಬ್ಬ ವ್ಯಕ್ತಿಗೆ ಬಂಗಾಳದ ಎಲ್ಲಿಯೊ ಅವತರಿಸಿದ ಮತ್ತೊಬ್ಬ ದಿವ್ಯವ್ಯಕ್ತಿಯಿಂದ ಮಂತ್ರದೀಕ್ಷೆ ಅನುಗ್ರಹಿಸುವ ಪವಾಡ!

---

* "ಸ್ವಾಮಿ ಶಿವಾನಂದ ಸ್ಮೃತಿಸಂಗ್ರಹ" ಬಂಗಾಳಿ ಗ್ರಂಥಕ್ಕಾಗಿ ಬರೆದುದು. ಸ್ವಾಮಿ ಅಪೂರ್ವಾ ನಂದರು ಬಾಷಾಂತರಿಸಿ ಅದರಲ್ಲಿ ಅಚ್ಚುಮಾಡಿದ್ದಾರೆ. ಮೈಸೂರು. ಜೂನ್ ೭, ೧೯೬೭.

# ಕನ್ನಡಕ್ಕಾಗಿ ಕೈಯೆತ್ತು*

ಇದೋ ವಾಗ್ದೇವಿಯ ಹರಕೆಯ ಶಿಶುವಾಗಿ ನಿನಗೆ ಕೈಮುಗಿದು ನಮಸ್ಕರಿಸಿ ಬಿನ್ನವಿಸುತ್ತೇನೆ: ನನ್ನ ನಮಸ್ಕರಕ್ಕಾದರೂ ನಿನ್ನ 'ಅಲ್ಪತೆ' ತೊಲಗಲಿ; ನಿನ್ನ ಹೃದಯದಲ್ಲಿ 'ಭೂಮ' ಚೇತನ ಉದ್ದೀಪನವಾಗಿ ತೊಳಗಲಿ; ಕನ್ನಡ ನುಡಿದೀವಿಗೆಯಿಂದ ನಾಡ ಬಾಳು ಬೆಳಗಲಿ! ನನ್ನ ನಮಸ್ಕಾರದಿಂದ ನಿನ್ನ ಆಹಂಕಾರವಳಿದು ಅಲ್ಲಿ ದೇವತ್ವ ಸಂಚಾರವಾಗುತ್ತದೆಂದು ನಂಬಿ ಭಗವತಿ ಶ್ರೀ ಸರಸ್ವತಿಯ ಈ ಹರಕೆಯನ್ನು ನಿನ್ನಲ್ಲಿ ಬಿನ್ನವಿಸುತ್ತಿದ್ದೇನೆ.

ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲ ಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು.

ನಾಳೆ ಎಂದರಾಗದು; ಮುಂದೆ ಎಂದಾರಗದು; ಇಂದೆ ನೀನು ನಿರ್ಣಯಿಸಬೇಕು. ಇಂದೆ ಎತ್ತಿ ಪೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ದೊರೆಯುವುದೇನು? ಬೂದಿಯಲ್ಲವೆ! ನೀರಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ಲಭಿಸುವುದೇನು? ಹೆಣವಲ್ಲವೆ!

ಇದು ನಿನ್ನ ಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯಭಾಷೆ; ಇದು ಮಹಾಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸಋಷಿದಾರ್ಶನಿಕರನ್ನೂ ಹಡೆದಿರುವ ಭಾಷೆ! ಏನೊ ನಡುವೆ ನಾಲ್ಕು ದಿನ ವಿಧಿ ಮುನಿಯೆ ಸಿರಿಯಳಿದು, ಮನೆ ಮುರಿಯೆ ಬೀದಿ ಸೇರಿದ ಮಾತ್ರದಿಂದ ನಿನ್ನತಾಯಿ ರಾಣಿಯಾಗಿದ್ದಳೆಂಬುದನ್ನು ಮರೆತುಬಿಡುವೆಯ? ಸ್ವತಂತ್ರನಾದಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?

ಅನ್ಯಮೋಹಕ್ಕೆ ಇಂದು ಅಕಾಶವಿಲ್ಲ. ಮೀನಮೇಷಕೆ ಇದು ಸಮಯವಲ್ಲ. ಧೈರ್ಯವಿರಲಿ; ಶ್ರದ್ಧೆಯಿರಲಿ; ಮನಸ್ಸು ಚಂಚಲವಾಗದಿರಲಿ!

ಕನ್ನಡಕ್ಕಾಗಿ ಕೈಯೆತ್ತು; ನಿನ್ನಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು ಇಂದು ಅದೆ ಗೋವರ್ಧನಗಿರಿಧಾರಿಯಾಗಿತ್ತದೆ.

ಇಂದು; ನಾಳೆಯಲ್ಲ. ತಿಳಿ, ತಿಳಿ! ತಿಳಿದು ಉಳಿ, ಇಲ್ಲ ಅಳಿ! ಏಳ್! ಗೆಲ್ ! ಬಾಳ್ ! ಓಂ ಶಾಂತಿಃ ಶಾಂತಿಃ ಶಾಂತಿಃ

---

* ದೇಜಗೌ ಅವರ "ಕನ್ನಡಿಗರೆ, ಎಚ್ಚರಗೊಳ್ಳಿ!" ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿ. ಮೈಸೂರು: ಮಾರ್ಚಿ ೧೦, ೧೯೫೧.

# ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ*

ಕರ್ಣಾಟಕ ಭಾಷಾ ಸಾಹಿತ್ಯಗಳಿಗೂ ತನ್ಮೂಲಕ ಮಹಾಮಾತೃ ಸದೃಶಳಾಗಿರುವ ಭಾರತಮಾತೆಗೂ ನಾನು ಸಲ್ಲಿಸಿರುವ ಸೇವೆಗಾಗಿ ನನಗೆ 'ರಾಷ್ಟ್ರ ಕವಿ' ಪ್ರಶಸ್ತಿಯನ್ನು ನೀಡಲು ನಿರ್ಧರಿಸಿರುವ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಸಾಹಿತ್ಯ, ಸಂಸ್ಕೃತಿ, ನಾಡು, ನುಡಿಗಳಿಗೆ ತಾವು ತೋರಿಸುತ್ತಿರುವ ಗೌರವಾದರಗಳ ಸಂಕೇತವಾಗಿ ಈ ತೀರ್ಮಾನವನ್ನು ಕೈಗೊಂಡಿದ್ದೀರೆಂದು ಭಾವಿಸಿ, ತಾವು ನೀಡುವ ಪ್ರಶಸ್ತಿಯನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ.

ರಾಜ್ಯದ ಸುಭದ್ರತೆಗೆ ಆವಶ್ಯಕವಾದ ಮನೋಧರ್ಮವನ್ನು ಶಿಥಿಲಗೊಳಿಸಿ, ಭಾವಲಾಲಿತ್ಯ ಮತ್ತು ಭಾವಾತಿರೇಕಗಳನ್ನು ಉದ್ರೇಕಿಸಿ, ಸುಖಲೋಲುಪತ್ವ ಮತ್ತು ಹೃದಯಮೃದುತ್ವಗಳನ್ನು ಉಲ್ಬಣ ಮಾಡಿ, ರಾಷ್ಟ್ರ ರಕ್ಷಣೆಗೆ ಬೇಕಾಗುವ ಪೌರುಷತೆ ಕಠೋರತೆಗಳಿಗೆ ಬದಲಾಗಿ ಸ್ತ್ರೈಣಮಾಧುರ್ಯಭಿರುಚಿಗಳು ವರ್ಧಿಸುವಂತೆ ಮಾಡುತ್ತಾರೆಂದು ಒಬ್ಬ ಗ್ರೀಕ್ ತತ್ತ್ವ ಜ್ಞಾನಿ ಕವಿಗಳನ್ನೆಲ್ಲ ಗಡಿಪಾರು ಮಾಡಲು ಸಲಹೆ ಕೊಟ್ಟಿದ್ದನಂತೆ! ಅದಕ್ಕೆ ಉತ್ತರವಾಗಿ ಅವನ ಶಿಷ್ಯನಾಗಿದ್ದ ಮತ್ತೊಬ್ಬ ಗ್ರೀಕ್ ತತ್ತ್ವಜ್ಞಾನಿ ತನ್ನ ಗುರುವಿನ ಮತವನ್ನು ಖಂಡಿಸಿ, ಅದಕ್ಕೆ ವಿರುದ್ಧವಾಗಿ, ಕವಿಗಳನ್ನು ಉತ್ಸಾಹದ ಮತ್ತು ಉಲ್ಲಾಸದ ನಿಧಿಗಳೆಂದೂ ಅವರಿಂದೊದಗುವ ಭಾವಪುಷ್ಟಿ ಮತ್ತು ಭಾವಸಂಸ್ಕಾರಗಳಿಂದ ನಾಡಿನ ಜನತೆಯ ಚೇತನ ಉದ್ದೀಪಿತವಾಗಿ ಕವಿಹೃದಯದ ಆಶಾವಾದದ ಧೀರಧ್ವನಿಯಿಂದ ಸ್ಫೂರ್ತಿಗೊಂಡ ರಾಷ್ಟ್ರದಲ್ಲಿ ಸುಖ ಕ್ಷೇಮ ಶಾಂತಿಗಳು ಸ್ಥಾಪಿತವಾಗುತ್ತವೆಂದೂ ಪ್ರತಿವಾದಘೋಷ ಮಾಡಿದ್ದನಂತೆ!

ಕ್ರಾಂತದರ್ಶಿಯಾದ ಇನ್ನೊಬ್ಬ ಇಂಗ್ಲಿಷ್ ಕವಿ, ಕವಿಗಳನ್ನು ಅನಧಿಕೃತ ಶಾಸನಕರ್ತರೆಂದೂ, ಕವಿಗಳು ಭವಿಷತ್ತು ವರ್ತಮಾನದ ಮೇಲೆ ಹಾಯಿಸುವ ಬೃಹಚ್ಛಾಯೆಗಳಂತೆ ಇದ್ದಾರೆಂದೂ ಶ್ಲಾಘಿಸಿದ್ದಾನೆ.

ಪ್ಲೇಟೊ, ಅರಿಸ್ಟಾಟಲ್, ಶೆಲ್ಲಿ ಇವರೆಲ್ಲರ ಅನುಭವಗಳನ್ನೂ ಒಟ್ಟಿಗೆ ಪಡೆದು, ತನ್ನ ಕಾಲದ ಮತ್ತು ದೇಶದ ಕಾವ್ಯ ಮತ್ತು ರಾಜಕೀಯ ಪ್ರಪಂಚಗಳೆರಡಲ್ಲಿಯೂ ಶಿಖರ ವ್ಯಕ್ತಿಯಾಗಿ, ಕವಿಯೂ ಕಲಿಯೂ ಆಗಿದ್ದ ಕನ್ನಡದ ಆದಿಯ ಮಹಾಕವಿ ಪಂಪ 'ಸೇವಿಪುದೆ ಕಷ್ಟಮಿಳಾಧಿನಾಥರಂ!' ಎಂದೂ ಉದ್ಗಾರ ತೆಗೆದಿದ್ದಾನೆ.

ಭಾರತೀಯ ಕಾವ್ಯನಿಮಾಂಸೆ 'ಋಷಿಯಲ್ಲದವನು ಕವಿಯಾಗಲಾರ' ಎಂಬರ್ಥದ ಮಾತನ್ನೂ ಆಡಿದೆ.

ಈ ಶ್ಲಾಘನೆ ಖಂಡನೆ ನಿಂದೆ ಸ್ತುತಿ ಪರಾಕು ಹತಾಶೆ ಇವುಗಳನ್ನು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ: ಕವಿತೆ ಅಥವಾ ಸಾಹಿತ್ಯ ಸ್ವರೂಪತಃ ಕೆಟ್ಟದ್ದೂ ಅಲ್ಲ, ಒಳ್ಳೆಯದೂ ಅಲ್ಲ: ಅದೊಂದು ಶಕ್ತಿ, ಪ್ರಯೋಗಿಸುವವರ ಮತ್ತು ಉಪಯೋಗಿಸುವವರ ಪ್ರಜ್ಞಾನುಗುಣವಾಗಿ ಪರಸ್ಪರ ವಿರುದ್ಧವಾದ ಫಲಿತಾಂಶಗಳನ್ನು ಉಂಟುಮಾಡಬಲ್ಲದು. ಕಾಲದಿಂದ ಕಾಲಕ್ಕೆ ಅದನ್ನು ಪರಿಶೀಲಿಸಿ ಆ ಶಕ್ತಿ ನಮ್ಮನ್ನು ತಪ್ಪುದಾರಿಗೆ ಕರೆದೊಯ್ಯದಂತೆ ನೋಡಿಕೊಳ್ಳಬೇಕಾಗುತ್ತದೆ, ಲೋಕಹೃದಯದ ಆಚಾರ್ಯಪ್ರಜ್ಞೆ. ಆ ಪ್ರಜ್ಞೆ ವ್ಯಕ್ತಿ ವ್ಯಕ್ತಿ ಗಳಲ್ಲಿ ಪ್ರಕಟಗೊಂಡರೂ ಅದು

ವ್ಯಷ್ಟಿನಿಷ್ಠವಾಗಿರದೆ ಸಮಷ್ಟಿರೂಪದಲಿ ಅಭಿವ್ಯಾಕ್ತವಾಗುತ್ತದೆ. ರಾಜ್ಯ ರಾಜ್ಯಗಳಲ್ಲಿ ಪ್ರಾತಿನಿಧಿಕವಾಗಿರುವ ಇಂತಹ ಮಹಾ ಸಭಾ ಸಂಸ್ಥೆಗಳು ಆ ಆಚಾರ್ಯಪ್ರಜ್ಞೆಯ ಮುಖಪಾತ್ರಗಳಾಗಿತ್ತವೆ.

ಅಂತಹ ಮುಖಪಾತ್ರವಾಗಿರುವ ಈ ಮಹಾಸದಸ್ಸು ತನ್ನ ನಾಡಿನ ಕವಿಯೊಬ್ಬನಿಗೆ, ಗ್ರೀಕ್ ತತ್ತ್ವಜ್ಞಾನಿಯ ಸೂಚನೆಯಂತೆ ಅವನನ್ನು ಗಡಿಪಾರು ಮಾಡುವುದಕ್ಕೆ ಬದಲಾಗಿ, 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಲು ಈ ಮಹಾ ಸಮಾರಂಭದಲ್ಲಿ ನೆರೆದಿರುವ ಸಂಗತಿ ಸಾಮಾನ್ಯವಾದುದೇನಲ್ಲ. ಸ್ವಲ್ಪ ಪರಿ ಭಾವಿಸಿದರೆ ಅದು ಎಷ್ಟು ಮಹತ್ವಪೂರ್ಣವಾದುದು ಎಂಬುದು ಹೃದಯಕ್ಕೆ ಗೋಚರವಾಗುತ್ತದೆ.

ನೆಮ್ಮದಿ, ಸಂಸ್ಕೃತಿ, ಶಾಂತಿ – ಇವುಗಳ ಲೌಕಿಕ ಜೀವನದ ಗಂತವ್ಯ. ಅದನ್ನು ಸಾಧಿಸಲೂ ಸಾಧಿಸಿದ್ದನ್ನು ಹೃದಯ ಹೃದಯಕ್ಕೆ ನಿವೇದಿಸಲೂ ಕವಿತೆ ಸಾಹಿತ್ಯ ಕಲೆಗಳೆ ಅಗ್ರಗಣ್ಯ ಸಾಧನಗಳಾಗಿವೆ. ಆದ್ದರಿಂದ ಯಾವ ಜನತೆ ತನ್ನ ಪ್ರಾತಿನಿಧಿಕ ಸಂಸ್ಥೆಯ ಮೂಲಕ ಸುಖ ಸಂಸ್ಕೃತಿ ಶಾಂತಿದೂತನಾದ ತನ್ನ ಕವಿಯನ್ನು ಸನ್ಮಾನಿಸುತ್ತದೆಯೋ ಅದು ತನ್ನ ಪೂರ್ಣತ್ವ ಸಾಧನೆಯ ಉದ್ಧಾರ ಮಾರ್ಗದಲ್ಲಿ ಬಹುದೂರ ಮುಂದುವರಿದಿದೆ ಎಂದೇ ಅರ್ಥವಾಗುತ್ತದೆ. ತಮ್ಮಂತಹ ಪ್ರತಿನಿಧಿಗಳನ್ನು ಪಡೆದಿರುವ ಜನತೆ ಧನ್ಯ! ಅಂತಹ ಜನತೆ ಇರುವ ನಾಡೂ ಧನ್ಯ! ಅಂತಹ ನಾಡಿನಲ್ಲಿ ಜನ್ಮವೆತ್ತುವ ಸುಕೃತಕ್ಕೆ ಭಾಜನನಾಗಿರುವ ಕವಿಯೂ ಧನ್ಯ!

ಸಂಸ್ಕೃತಿ ಕರ್ಣಾಟಕದ ನಿತ್ಯಚಕ್ರವರ್ತಿ ನೃಪತುಂಗದೇವನು ಸಾವಿರ ವರ್ಷಗಳ ಹಿಂದೆ (ಕ್ರಿ. ಶ. ೮೧೪)

ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ
ಕನ್ನಡದೊಳ್ ಭಾವಿಸಿದ ಜನಪದಂ……….ಪದನರಿದು
ನುಡಿಯಲುಂ, ನುಡಿದುದನ್ ಅರಿದು ಆರಯಲುಂ ಆರ್ಪರ್, ಆ
ನಾಡವರ್ಗಳ್ ಚದುರರ್ ನಿಜದಿ: ಕುರಿತೋದದೆಯುಂ
ಕಾವ್ಯಪ್ರಯೋಗಪರಿಣತಮತಿಗಳ್!

ಎಂದು ಹಾಡಿದುದು ಇಂದಿಗೂ ಅಸಾರ್ಥಕವಾಗಿಲ್ಲವೆಂದೆ ತೋರುತ್ತದೆ!

ಇಂದಿನ ಈ ಗುರುಸಮಾರಂಭದಲ್ಲಿ, ಅನಾಹೂತನಾಗಿದ್ದರು ಲೆಕ್ಕಿಸದೆ ಅಕ್ಕರೆಯುಕ್ಕಿಬಂದು ತನ್ನ ಸೂಕ್ಷ್ಮ ಕಾಯದಲಿ ನಿಂತು, ಅವಲೋಕಿಸಿ, ಆಶೀರ್ವದಿಸುತ್ತಿರುವ ಸಂಸ್ಕೃತಿ ಕರ್ಣಾಟಕದ ನಿತ್ಯ ಮುಖ್ಯಮಂತ್ರಿಯಾಗಿರುವ ಆ ಪಂಪ ಮಹಾಕವಿ ಮತ್ತೊಮ್ಮೆ ಕನ್ನಾಡನಾಡಿನಲ್ಲಿ ಹುಟ್ಟುವ ತನ್ನ ಬಯಕೆಯನ್ನು, ತಾನು ಹಿಂದೆ ಬನವಾಸಿಯನ್ನು ನೆನೆದು ಹಾಡಿದುದನ್ನೆ ತುಸು ಬದಲಿಸಿ, (ಕ್ರಿ. ಶ. ೯೪೧)

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಿಸರೆ ಮಾನಿಸರ್. ಅಂತವರಾಗಿ ಪುಟ್ಟಲೇ

ನಾಗಿಯುಮೇನೊ ತೀರ್ದಪುದೆ? ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವದು ನಂದನದೊಳ್ 'ಕರುನಾಡ' ದೇಶದೊಳ್

ಎಂದು ಹಿಗ್ಗಿ ಹಾಡಿಕೊಳ್ಳುತ್ತಿರುವನೆಂದು ಭಾವಿಸಿ ನಾನು ಪುಲಕಿತನಾಗುತ್ತಿದ್ದೇನೆ. ತಾವುಗಳೂ ಆಗುತ್ತಿದ್ದೀರಿ, ಅಲ್ಲವೆ?

ಭಾರತಾಂತರ್ಗತವಾಗಿರುವ ಕರ್ಣಾಟಕವನ್ನು ಹಿಂದಿನ ಆ ಕವಿಗಳೂ ಚಕ್ರವರ್ತಿಗಳೂ ಕಂಡ ಕನಸು ನನಸಾಗುವಂತೆ, ಸರ್ವಾಂಗ ಸುಂದರವನ್ನಾಗಿ ಮಾಡಲು ಶಾಸಕರಾಗಿ ತಾವೆಲ್ಲ ಕಂಕಣಬದ್ಧರಾಗಿದ್ದೀರಿ. ಆಂಗ್ಲೇಯ ಕವಿ ಶೆಲ್ಲಿ ಹೇಳಿರುವಂತೆ 'ಅನಧಿಕೃತ ಶಾಸನಕರ್ತ'ರಲ್ಲಿ ಒಬ್ಬನಾಗಿ ನಾನೂ ಆ ಸ್ವಪ್ನವು ಲೋಕವಾಸ್ತವವಾಗಿ ಮೂಡಲು ನಿಮ್ಮೊಡನೆ ಸೇವೆ ಸಲ್ಲಿಸುತ್ತೇನೆಂದೂ, ನನ್ನ ಕ್ಷೇತ್ರದಲ್ಲಿ ಮತ್ತು ನನ್ನ ರೀತಿಯಲ್ಲಿ ಕೈಲಾದಮಟ್ಟಿಗೆ ಕೊನೆಯುಸಿರು ಇರುವವರೆಗೂ ದುಡಿಯುತ್ತೇನಂದೂ ಭರವಸೆ ಕೊಡುತ್ತೇನೆ.

ಸಾಧಿತವಾಗಬೇಕಾಗಿರುವ ಕಲ್ಯಾಣವೂ ಅಪಾರವಾಗಿದೆ. ನೂರಾರು ಮಂಗಲದ ಮುಖಗಳು ನಮ್ಮ ನಿರಂತರ ವ್ಯವಸಾಯವನ್ನು ಹಾರೈಸುತ್ತಿವೆ. ಪರಿಹರಿಸಿಕೊಳ್ಳ ಬೇಕಾಗಿರುವ ಅನಿಷ್ಟಗಳೂ ಅನೇಕವಿದ್ದು ಸಾಕಷ್ಟು ಕಾಡುತ್ತಿವೆ. ಸಣ್ಣ ಪುಟ್ಟ ವಿವರಗಳಲ್ಲಿ ನಮ್ಮೆಲ್ಲರಿಗೂ ಒಮ್ಮನ ಒಕ್ಕೊರಲು ಇರದಿದ್ದರೂ ರಾಷ್ಟ್ರಕ್ಷೇಮಸಾಧನೆಯ ವಿಷಯದಲ್ಲಿ ನಾವೆಲ್ಲ ಏಕಹೃದಯರೆ! ಸರ್ವಾಧಿಕಾರ ಮಾರ್ಗದಲ್ಲಿ ಸತ್ ಫಲವಾಗಲಿ ದುಷ್ಫಲವಾಗಲಿ ಶೀಘ್ರಸಿದ್ಧವಾಗುವಂತೆ ಪ್ರಜಾಸತ್ತೆಯ ವಿಧಾನಮಾರ್ಗದಲ್ಲಿ ಆಗಲು ಸಾಧ್ಯವಿಲ್ಲವೆಂದು ಅರಿತಿರುವ ನಾವೆಲ್ಲರೂ, ಕ್ಷೇಮಕಾತರತೆಯಲ್ಲಾಗಲಿ ಅದನ್ನು ಬೇಗ ಸಾಧಿಸಬೇಕೆಂಬ ತೀವ್ರಾತುರದಲ್ಲಾಗಲಿ ಮಂದಜಡರಾಗದೆ, ನಿರ್ವೈರವಾದ ಮೈತ್ರಿಯ ಮೂಲಾಧಾರದ ಮೇಲೆ ಮುಂದುವರಿಯುತ್ತಿದ್ದೇವೆ ಎಂಬುದರಲ್ಲಿ ಸಂದೇಹವಿಲ್ಲ.

ನಿಮ್ಮಲ್ಲಿ ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಲಾಳುಗಳಾಗಿ ದಳಪತಿಗಳಾಗಿ ಹೋರಾಡಿದ್ದೀರಿ; ಕೆಲವರಂತೂ ಆತಿರಥ ಮಹಾರಥರಾಗಿ ಹೋರಾಡಿ ಹೆಸರುಗಳಿಸಿದ್ದೀರಿ. ಕೆಲವರು ದೇಶಸೇವೆಗಾಗಿ ಮನೆಮಾರು ಜೀವನವೃತ್ತಿಗಳನ್ನು ತ್ಯಾಗಮಾಡಿದ್ದೀರಿ; ಕೆಲವರು ಲಾಠಿಯೇಟು ತಿಂದಿದ್ದೀರಿ; ಕೆಲವರು ಸೆರೆಮನೆಗಳಲ್ಲಿ ತಪಸ್ಸುಮಾಡಿದ್ದೀರಿ; ಮತ್ತೆ ಕೆಲವರು ನೇರವಾಗಿ ಸಂಗ್ರಾಮದಲ್ಲಿ ಭಾಗವಹಿಸದಿದ್ದರೂ ಮನ ಧನ ಸುತ ಬಂಧು ಮಿತ್ರರನ್ನು ಸ್ವಾತಂತ್ರ್ಯಕಾಳಿಗೆ ಬಲಿದೆತ್ತು ದುಃಖಗ್ನಿಯಲ್ಲಿ ಬೆಂದಿದ್ದೀರಿ. ಅವರಿವರಿರಲಿ, ಯಃಕಶ್ಚಿತರು ಕೂಡ, ಆಯಸ್ಕಾಂತದ ಪ್ರಭಾವಕ್ಕೆ ಸಿಲುಕಿದ ಸಾಮಾನ್ಯ ಲೋಹವೂ ಕಾಂತತ್ವ ಪಡೆಯುವಂತೆ, ಮಹಾತ್ಮಾ ಗಾಂಧೀಜಿಯ ತಪೋಮಯ ಸಾನ್ನಿಧ್ಯದ ಪ್ರಭಾವಕ್ಕೆ ಒಳಗಾಗಿ ಪೌರಾಣಿಕಸದೃಶವಾದ ಮಹಾ ವೀರತ್ವದಿಂದ ಅದ್ಭುತ ಸಾಹಸಗಳನ್ನೆಸಗಿ ಹೋಗಿದ್ದಾರೆ. ಅವರೆಲ್ಲರ ಬಲಿದಾನದ ಮುಂದೆ ನನ್ನಂತಹ ಸೇವೆ, ಹಾಲಿನ ಮುಂದೆ ನೀರಿನಂತೆ, ನಗಣ್ಯ ಎಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು, ನಾನು ಮುಂದೆ ಆಡಲಿರುವ ನಾಲ್ಕು ಮಾತುಗಳಿಗೆ ಅಪಾರ್ಥವನ್ನಾಗಲಿ ಅಹಂಕಾರವನ್ನಾಗಲಿ ಆರೋಪಿಸದಿರಲಿ ಎಂಬುವ ಉದ್ದೇಶದಿಂದ ಆತ್ಮಕಥಾರೂಪವಾದ ಒಂದೆರಡು ಮಾತು ಹೇಳುತ್ತೇನೆ, ಕ್ಷಮಿಸಬೇಕು.

ನಾನು ಲಾಠಿಯೇಟು ತಿಂದಿಲ್ಲ; ಸೆರೆಮನೆಗೆ ಹೋಗಿಲ್ಲ; ಬ್ರಿಟಿಷರ ವಿರುದ್ಧವಾಗಿ ತಿಲಕರ ಮತ್ತು ಗಾಂಧೀಜಿಯ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರದಹನ ಯಜ್ಞಗಳಲ್ಲಿ ಭಾಗವಹಿಸಿ, ಪ್ರೇಕ್ಷಕನಾಗಿನಿಂತಿದ್ದು, ಪಕ್ಕದಲ್ಲಿ ನಿಂತಿದ್ದ ಮಿತ್ರರು ಹುರಿದುಂಬಿಸಿದ್ದಕ್ಕಾಗಿ ತಾತ್ಕಾಲಿಕ ಭಾವಾವೇಶಕ್ಕೆ ಒಳಗಾಗಿ ಇದ್ದದ್ದೊಂದು ಅಂಗಿಯನ್ನು ಟೋಪಿಯನ್ನೂ ಬೆಂಕಿಗೆ ಎಸೆದದ್ದೂ ಉಂಟು!

ಆದರೆ ದೇಶದಲ್ಲಿ ನಡೆಯುತ್ತಿದ್ದದ್ದು ಏನು ಎಂಬುದರ ಅರ್ಥದ ಅರಿವು ಮಲೆನಾಡಿನ ಕಾಡಿನ ಮೂಲೆಯ ಹಳ್ಳಿಯಿಂದ ಬಂದಿದ್ದ ಬಾಲಕನ ಗ್ರಾಮಿಣ ಪ್ರಜ್ಞೆಗೆ ಗೋಚರವಾದ ಮೇಲೆ, ಸುಮಾರು ೧೯೨೫ - ೨೬ ರಿಂದ ೧೯೪೭ - ೪೮ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ಸಾಗರದ ಸಂಮಥನ ಕ್ಷೋಭೆಯಿಂದ ಉಲ್ಲೋಲಕಲ್ಲೋಲವಾದ ಮಹಾತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲಿತವಾಗಿ ಸಾವಿರಾರು ಕವನರಾಶಿ ಪುಂಜೀಭೂತವಾದುವು, ಸಾಹಿತ್ಯವೇಲೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ. ವಿಭೂತಿ ಪ್ರಮಾಣದ ಯಾವ ಮಹದ್ ವ್ಯಕ್ತಿಯಾಗಲಿ ಯವ ಮಹತ್ ಸಂಗತಿಯಾಗಲಿ ಈ ಕವಿಚೇತನದಲ್ಲಿ ಪ್ರತಿಸ್ಪಂದಿತವಾಗದೆ ಹೋಗಿಲ್ಲ. 'ಪಾಂಚಜನ್ಯ', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ', 'ಕೃತ್ತಿಕೆ', ಮತ್ತು 'ಇಕ್ಷುಗಂಗೋತ್ರಿ' ಈ ಕವನ ಸಂಗ್ರಹಗಳಲ್ಲಿ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಚಿರಸ್ಮರಣೀಯವಾದ ಸನ್ನಿವೇಶಗಳೂ ಘಟನೆಗಳೂ ವ್ಯಕ್ತಿಗಳೂ ವ್ಯಕ್ತಿಜೀವನದ ಭವ್ಯವ್ಯಾಪಾರಗಳೂ ಕಂಡರಣೆಗೊಂಡು, ಆ ಸಂಗ್ರಾಮದ ಇತಿಹಾಸವನ್ನು ಶಾಶ್ವತಗೈಯ್ಯುವ ಸ್ತಂಭದೀಪಿಕೆಗಳಂತೆ ಪಂಕ್ತಿಗೊಂಡು ನಿಂತಿವೆ. ಅರುವತ್ತು ದಿವಸದ ಉಪವಾಸಾನಂತರ ಜೈಲಿನಲ್ಲಿಯೆ ಹುತಾತ್ಮನಾದ ಜತೀಂದ್ರನಾಥದಾಸನಿಂದ ೨೦ - ೧೯ - ೧೯೨೯ರಲ್ಲಿ ಪ್ರೇರಿತವಾದ 'ಪಾಂಚಜನ್ಯ' ಎಂಬ ವೀರಕವನದಿಂದ ಹಿಡಿದು ಸಾವಿರದ ಒಂಭೈನೂರ ನಾಲ್ವತ್ತೇಳನೆಯ ಆಗಸ್ಟ್ ಹದಿನೈದರ ಮಧ್ಯರಾತ್ರಿಯ ಜಗದ್ ಭವ್ಯ ಮಹಾಸಮಾರಂಭದಿಂದ ಪ್ರಚೋದಿತವಾದ 'ಸ್ವಾತಂತ್ರ್ಯೋತ್ಸವ ಮಹಾಪ್ರಗಾಥ'ದ ವರೆಗೂ ವ್ಯಾಪಿಸಿದೆ. ಆ ಜ್ಯೋತಿಃಪಂಕ್ತಿ.

ಅಖಿಲ ಬಾರತಿಯ ಮಟ್ಟದಲಿ ಮಾತ್ರವಲ್ಲ, ಪ್ರಾದೇಶಿಕ ಮಟ್ಟಕ್ಕೂ ಅದು ವ್ಯಾಪಿಸುತ್ತದೆ. ಇನ್ನೂ ಎಲ್ಲಿಯೂ ಪ್ರಕಟವಾಗದಿರುವ ಒಂದು ಕವನದ ಮೊದಲನೆಯ ಎರಡು ಪಂಕ್ತಿಗಳು ನನ್ನ ನೆನಪಿಗೆ ಬರುತ್ತಿವೆ. ಮೈಸೂರು ಕಾಂಗ್ರೆಸ್ಸಿನ ಹೋರಾಟಕ್ಕೆ ಸೇರಿದ್ದವು ಅವು:

ಈ ಧ್ವಜಗೌರವವನು ಕಾಯಿ;
ಶಿವನೆದೆ ತಲ್ಲಣಿಪುದು, ತಾಯಿ!

ಬಹುಶಃ ಆ ಕವನ ಶಿವಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸಂಬಂಧಪಟ್ಟಿದ್ದೆಂದು ತೋರುತ್ತದೆ. ಪತ್ರಿಕೆಗಳಲ್ಲಿ ಓದಿದ್ದ ಜ್ಞಾಪಕ ನನಗೆ. ಮಹಿಳೆಯೊಬ್ಬರು ಧ್ವಜಧಾರಿಯಾಗಿ ಆರೋಹಿಸಲು ಮುನ್ನುಗ್ಗುತ್ತಿದ್ದಾಗ ಗುಂಡು ಹಾರಿಸಲು ಸಿದ್ಧರಾಗಿ ಕೋವಿಯ ಬಿಲ್ಲೆತ್ತಿ ನಿಂತಿದ್ದ ಪೋಲೀಸರು ತಡೆದ ಸಂರ್ಭವಿರಬೇಕು.

ಬಹುಶಃ ಮಿರ್ಜಾ ಸಾಹೇಬರ ವಿವೇಕಪೂರ್ಣವಾದ ಸದ್ಭಾವದಿಂದ ಗುಂಡು ಹಾರುವುದು ತಪ್ಪಿ ಆ ಮಾನ್ಯ ಮಹಿಳೆ ಇಂದು ಉಚ್ಚ ಸ್ಥಾನದಲ್ಲಿ ಅಧಿಕಾರಾಧರಾಗಿರಲು ಸಾಧ್ಯವಾಯಿತೆಂದು ತೋರುತ್ತದೆ.

ಸದ್ಯಕ್ಕೆ ಅದಿರಲಿ.ಎಂತೋ ಅಂತು ಆ ದಾರುಣ ದಿವ್ಯ ಕಥೆ ಮುಗಿದು ನಾವೀಗ ಭವ್ಯ ಸ್ವತಂತ್ರ ಭಾರತದ ಪುಣ್ಯವಂತ ಪ್ರಜೆಗಳಾಗಿದ್ದೇವೆ. ಸಮಾಜವಾದ ಸ್ವರೂಪದ ಸ್ವತಂತ್ರ ಪ್ರಜಾಸತ್ತೆಯ ಸರ್ವಧರ್ಮ ಸಮನ್ವಯದ ಮತ್ತು ಸರ್ವೋದಯದ ಲೌಕಿಕ ಕ್ಷೇಮ ರಾಷ್ಟ್ರವನ್ನು ನಿರ್ಮಿಸಲು ವ್ರತತೊಟ್ಟು ಕಾರ್ಯೋನ್ಮುಖರಾಗಿದ್ದೇವೆ. ಎಡರು ತೊಡರುಗಳೇನೆ ಇರಲಿ, ಕ್ಷೇಮ ಕಷ್ಟಗಳೇನೆ ಬರಲಿ, ಅದು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಕವಿ ಸರ್ವನಾಶದ ಇದಿರಿನಲ್ಲಿಯೂ ಅಶಾವಾದಿಯೆ! ಆಟಂ ಬಾಂಬಿನ ಮೃತ್ಯುಗರ್ಭದಲ್ಲಿಯೂ ಅಮೃತೋದ್ಭವವಾಗುವ ಹಾರೈಕೆಯನ್ನು ಕೈಬಿಡುವುದಿಲ್ಲ.

ಕನ್ನಡನಾಡು ಒಟ್ಟಾಗಿದೆ. ಕನ್ನಡವನ್ನು ಅಧಿಕೃತ ಭಾಷೆ ಎಂದು ಘೋಷಿಸಿದ್ದೀರಿ. ಇತರ ರಾಜ್ಯಗಳಂತೆ ಕರ್ಣಾಟಕವೂ ರಾಜ್ಯಾಂಗದ ಪ್ರಕಾರ ತನ್ನ ರಾಜ್ಯಪಾಲರನ್ನು ಪಡೆದು, ಪ್ರಜಾಸತ್ತೆಯಲ್ಲಿ ಉಳಿದ ರಾಜ್ಯಾಗಳಿಗೆ ಹಿಂದೆ ಬೀಳದೆ ಸಮಾನತೆಯನ್ನು ಸಾಧಿಸಿದೆ. ಇನ್ನು 'ಕರ್ಣಾಟಕ' ಎಂದು ಹೆಸರಿಡುವ ವಿಚಾರದಲ್ಲಿ ಏನೋ ಒಂದು ತರಹದ ಒಲಿದು ಒಂದಾದವರ ಮುನಿಸಿನ ಕಚ್ಚಾಟ ನಡೆಯ್ಯುತ್ತಿರುವಂತೆ ತೋರುತ್ತಿದೆ. ಆರ್ಷೇಯ ಕಾಲದಿಂದಲೂ, ಭೌಗೋಲಿಕವಾಗಿ ಬೇರೆ ಬೇರೆ ಹೆಸರಿದ್ದ ಬಹು ರಾಜ್ಯಗಳಲ್ಲಿ ಹಂಚಿ ಹೋಗಿದ್ದಾಗಲೂ, ಯಾವ ಪ್ರದೇಶವನ್ನು ಕವಿಗಳೂ ಸಾಹಿತಿಗಳೂ ಮತಪ್ರಚಾರಕರೂ ಜಗದ್ಗುರುಗಳೂ ಮಹಾಜನರೂ ಇತಿಹಾಸಕಾರರೂ ವಿದೇಶಿಯ ಪವಾಸಿಗಳೂ 'ಕರ್ಣಾಟಕ' ಎಂದು ಕರೆದೂ ಕರೆದೂ ಅದನ್ನೊಂದು 'ಮಂತ್ರ'ವನ್ನಾಗಿ ಮಾಡಿ, ಅದಕ್ಕೆ 'ಶಕ್ತಿ' ನೀಡಿದ್ದಾರೆಯೊ ಆ ಪ್ರದೇಶಕ್ಕೆ ಕರ್ಣಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯದ ಸ್ಪರ್ಧಾಭಾವದಿಂದಲ್ಲದೆ, ಸಾಂಸ್ಕೃತಿಕವಾದ ಮೈತ್ರಿಯಿಂದಲೆಯೆ ಸರ್ವಸಂತೋಷದಿಂದ ಸರ್ವಸಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ.

ಈ ನಮ್ಮ ಕರ್ಣಾಟಕತ್ವ ಎಂದೆಂದಿಗೂ ಭಾರತೀಯತ್ವಕ್ಕೆ ಅವಿರುದ್ಧವಾಗಿ ನಿಲ್ಲುತ್ತದೆ. ಕರ್ಣಾಟಕ ಮಾತೆಗೆ ಜಯಘೋಷ ಮಾಡುವಾಗಲೆಲ್ಲ ಭಾರತಮಾತೆಯ ಪುತ್ರಿಯೆಂದು ಮೊದಲೆ ಘೋಷಿತಳಾಗುತ್ತಾಳೆ.

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ! –

ನಾವು ಮಕ್ಕಳಾಗಿದ್ದಾಗ ಕೆಲವರು ಕಿತಾಪತಿಯ ದೊಡ್ಡವರು ತಮಾಷೆ ನೋಡುವುದಕ್ಕಾಗಿ ನಮಗೊಂದು ಪ್ರಶ್ನೆ ಹಾಕುತ್ತಿದ್ದರು: "ನೀನು ಅವ್ವನ ಮಗನೋ? ಅಪ್ಪಯ್ಯನ ಮಗನೋ?" ಎಂದು. ನಾವು ಕಕ್ಕಾಬಿಕ್ಕಿಯಾಗುತ್ತಿದ್ದೆವು. ಪ್ರಶ್ನೆ ಕೇಳುವವರಿಗೆ ಬೇಕಾಗಿದ್ದುದೂ ಅದೇಯೆ. ನಾವು ನಮ್ಮ ಪುಟ್ಟ ಮಿದುಳಿನಿಂದಲೆ ಸ್ವಲ್ಪ ಯೋಚನೆ ಮಾಡಿ – ಹುಟ್ಟಿದಂದಿನಿಂದಲೂ ಹಾಲುಕೊಟ್ಟು ಹತ್ತಿರ ಮಲಗಿಸಿಕೊಳ್ಳುವವಳು ಅವ್ವ ತಾನೆ? – 'ನಾನು ಅವ್ವನ ಮಗ!' ಎಂದರೆ,

ಕೇಕೆಹಾಕಿ ಕೈ ಚಪ್ಪಾಳೆ ಹೊಡೆದು ನಗುತ್ತಿದ್ದರು. ಅರೆ! ಅರೆ! ಏನೋ ತಪ್ಪು ಹೇಳಿಬಿಟ್ಟೆನಲ್ಲಾ ಎಂದು, ಅದನ್ನು ಬೇಗನೆ ತಿದ್ದಿಕೊಳ್ಳಲೆಂದು 'ಅಲ್ಲ, ಅಲ್ಲ; ನಾನು ಅಪ್ಪಯ್ಯನ ಮಗ!' ಎಂದರೆ ಇನ್ನೂ ಗಟ್ಟಿಯಾಗಿ ಕೇಕೆ ಹಾಕಿ ಕೈ ಚಪ್ಪಾಳೆ ಕುಟ್ಟಿ, ನಕ್ಕು, ನಮ್ಮನ್ನು ಕಂಗಾಲು ಮಾಡುತ್ತಿದ್ದರು. ಹಾಗೆಯೆ ಈ ತಂದುಹಾಕುತನದ ಕಿತಾಪತಿಯ ಜನ ನಮ್ಮ ಕರ್ಣಾತಕತ್ವ ಮಹಾರಾಷ್ಟ್ರತ್ವ ಆಂಧ್ರತ್ವಗಳಿಗೂ ನಮ್ಮ ಭಾರತೀಯತ್ವಕ್ಕೂ ವಿರೋಧ ಭಾವದ ಆರೋಪಣೆ ಮಾಡುತ್ತಾರೆ, ತಮ್ಮ ಸ್ವಾರ್ಥಸಾಧನೆಗಾಗಿ ಅಂತಹ ಕುಹಕದ ಕೂಣಿಗೆ ಬೀಳದಂತೆ ನಮ್ಮ ರಾಷ್ಟ್ರನಿಷ್ಠೆಯನ್ನು ರಕ್ಷಿಸಿಕೊಂಡು ನಾವು ವಿವೇಕಶಾಲಿಗಳಾಗಿ ಮುಂಬರಿಯಬೇಕು.

ಮಹನೀಯರೆ, ಕೊನೆಯದಾಗಿ ಅಧಿಕೃತ ಶಾಸನಕರ್ತರಾದ ನಿಮ್ಮಲ್ಲಿ ಅನಧಿಕೃತ ಶಾಸನಕರ್ತನಾದ ನನ್ನ ಒಂದು ಅಹವಾಲು: ಅದು ಇಂಗ್ಲಿಷ್ ಭಾಷೆಗೂ ಶಿಕ್ಷಣ ಮಾಧ್ಯಮಕ್ಕೂ ಸಂಬಂಧಪಟ್ಟಿದ್ದು. ವಿವರಕ್ಕಾಗಲಿ ವಾದಕ್ಕಾಗಲಿ ಜಿಜ್ಞಾಸೆಗಾಗಲಿ ನಾನೀಗ ಕೈ ಹಾಕುವುದಿಲ್ಲ. ಅದು ತತ್ಸಮಯ ಸಾಧ್ಯವೂ ಅಲ್ಲ; ಅದಕ್ಕಿಲ್ಲಿ ಕಾಲಾವಕಾಶವೂ ಇಲ್ಲ. ತಮ್ಮ ಗಮನವನ್ನು ಅತ್ತಕಡೆ ಎಳೆದು, ಅದು ತಮ್ಮ ಶೀಘ್ರ ಪರಿಶೀಲನೆಗೂ ಇತ್ಯರ್ಥಕ್ಕೂ ಒಳಗಾಗುವಂತೆ ಮಾಡುವುದೆ ನನ್ನ ಸದ್ಯಃಪ್ರಯತ್ನದ ಮುಖ್ಯ ಉದ್ದೇಶ. ಆ ವಿಚಾರವಾಗಿ ನಮ್ಮ ರಾಷ್ಟ್ರ ಪಿತನಾದಿಯಾಗಿ ಸಾವಿರಾರು ದೇಶಭಕ್ತರೂ ನೂರಾರು ಸ್ವದೇಶೀಯ ಮತ್ತು ವಿದೇಶಿಯ ವಿದ್ಯಾತಜ್ಞರೂ ಹೇಳಿದ್ದಾರೆ, ಮಾತನಾಡಿದ್ದಾರೆ, ಬರೆದಿದ್ದಾರೆ. ಹೊತ್ತಗೆ ಹೊತ್ತಗೆಗಳನ್ನೆ ಪ್ರಕಟಿಸಿಯೂ ಇದ್ದಾರೆ. ಆದರೆ ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವಳನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಬಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೇಯ ಜಿಲೊಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಮಾಣವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ, ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಾಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಅಗಬಹುದೇನೋ!

ಇಂಗ್ಲಿಷ್ ಭಾಷೆ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣ ಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಾಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸುವುದಕ್ಕಾಗಿಯೆ ವೆಚ್ಚಮಾಡಿದರೂ, ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿಹೊಂದುವುದರಲ್ಲಿ ಸಂದೇಹವಿಲ್ಲ.

ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಚಾರವನ್ನು ನಷ್ಟದಲ್ಲಾಗಲಿ ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ

ಅದು ಪ್ರಚ್ಛನ್ನವಾದ್ದರಿಂದಲೂ, ಅದರ ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿನೆಮ್ಮದಿಯ ಭಾವದಲ್ಲಿ ಈಗಲೆ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.

ನಿಮ್ಮ ಕಣ್ಣು ಮುಂದೆಯೆ ನಡೆಯುತ್ತಿರುವ ಒಂದು ಖಚಿತವೂ ಮುಷ್ಟಿ ಗ್ರಾಹ್ಯವೂ ಆದ ನಿದರ್ಶನ ತೆಗೆದುಕೊಂಡರೆ ವಿಷಯ ಸ್ಪಷ್ಟತರವಾಗುತ್ತದೆ. ಈ ವರ್ಷದಿಂದ ಅನೇಕ ಹೈಸ್ಕೂಲುಗಳಲ್ಲಿ ಹನ್ನೊಂದನೆಯ ತರಗತಿಯನ್ನು ತೆರೆದಿದ್ದಾರೆ. ಹನ್ನೊಂದನೆಯ ತರಗತಿ ವಿಶ್ವವಿದ್ಯಾನಿಲಯದ ಪ್ರೀಯೂನಿವರ್ಸಿಟಿ ಕೋರ್ಸಿಗೆ ಸಮವಾದುದ್ದು. ಪಿ.ಯು.ಸಿ.ಯಲ್ಲಿಯೆ ೧೯೫೮ ರಿಂದ ಕನ್ನಡ ಶಿಕ್ಷಣ ಮಾಧ್ಯಮದ ಸೆಕ್ಷನ್‌ಗಳನ್ನು ತೆರೆಯಲಾಯಿತು. ಅದಕ್ಕೆ ಬೇಕಾದ ಎಲ್ಲ ಪಠ್ಯಪುಸ್ತಕಗಳೂ ಸಿದ್ಧವಾದವು. ಫಲಿತಾಂಶಗಳೂ ಆಶ್ಚರ್ಯವಾಗುವಮಟ್ಟಿಗೆ ಉತ್ತಮಗೊಳ್ಳುತ್ತಾ ಬಂದಿವೆ. ಹೀಗಿರುವಲ್ಲಿ, ಗಾಳಿಯಲ್ಲಿಯೂ ಇಂಗ್ಲಷಿನ ಗಂಧವಿಲ್ಲದ ಹಳ್ಳಿಗಾಡಿನ ಹೈಸ್ಕೂಲುಗಳಲ್ಲಿ, ಪಿ.ಯು.ಸಿ.ಗೆ ಸಮನಾದ ಹನ್ನೊಂದನೆಯ ತರಗತಿಗಳನ್ನು ತೆರೆದು, ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಮಾಧ್ಯಮದಲ್ಲಿಯೆ ಓದಿದ್ದ ಹುಡುಗರಿಗೆ, ಇಂಗ್ಲಿಷಿನಲ್ಲಿ ಒಂದು ಸ್ವತಂತ್ರ ವಾಕ್ಯವನ್ನೂ ರಚಿಸಲು ಸಾಮರ್ಥ್ಯವಿಲ್ಲದ ವಿದ್ಯಾರ್ಥಿಗಳಿಗೆ, ಇಂಗ್ಲಿಷ್ ಮಾಧ್ಯಮವನ್ನು ಬಲತ್ತಾರವಾಗಿ ಹೇರಿ – (ಬಲತ್ತಾರವಾಗಿ ಎಂಬುದನ್ನು ತಾವು ಗಮನಿಸಬೇಕು, ಕನ್ನಡ ಮಾಧ್ಯಮವನ್ನು ಸಂಪೂರ್ಣವಾಗಿ ಬಹಿಷ್ಕರಿಸಿರುವುದು ಮಾತ್ರವಲ್ಲದೆ ಆ ತರಗತಿಗಳಲ್ಲಿ ಕನ್ನಡದಲ್ಲಿ ಮಾತನಾಡಲೆ ಕೂಡದು ಎಂಬ ಸುಗ್ರೀವಾಜ್ಞೆಯೂ ಹೊರಟಿದೆಯಂತೆ) – ಹಾಗೆ ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿದುದರ ಉದ್ದೇಶವೇನೊ ಗೊತ್ತಾಗುವುದಿಲ್ಲ. ಮುಂದಿನ ವರ್ಷದ ಪರೀಕ್ಷೆಗಳಲ್ಲಿ ನೀವೆ ನೋಡುತ್ತೀರಿ – ಆ ಹಿಂದುಳಿದ ಗ್ರಾಮ ಪ್ರದೇಶದ ವಿದ್ಯಾರ್ಥಿಗಳು ನೂರಕ್ಕೆ ನೂರೂ ಉದುರಿಹೋಗುತ್ತಾರೆ! ಇದಕ್ಕೆ ಯಾರು ಕಾರಣರು: ಎಸ್.ಎಸ್.ಎಲ್.ಸಿ. ಕನ್ನಡ ಮಾಧ್ಯಮದಲ್ಲಿ ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿ ನಾಲ್ಕನೆಯ ಅಥವಾ ಐದನೆಯ ರ್‍ಯಂಕ್ ಗಳಿಸಿದ ವಿದ್ಯಾರ್ಥಿ ಪಿ.ಯು.ಸಿ.ಯ ಇಂಗ್ಲಿಷ್ ಮಾಧ್ಯಮದಲ್ಲಿ ಎರಡೋ ಮೂರೋ ವರ್ಷ ಫೈಲ್ ಆದರೆ ಅದಕ್ಕೆ ಯಾರು ಕಾರಣ! ವಿದ್ಯಾರ್ಥಿಯೊ? ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿದ ಅದೂರದೃಷ್ಟಿಯ ಅಧಿಕಾರ ವರ್ಗವೋ? ರಾಜ್ಯದ ಆಡಳಿತ ವಹಿಸಿಕೊಂಡಿರುವ ಸಚಿವ ಮಂಡಲಿಯೊ? ಆ ಸಚಿವ ಮಂಡಲಿಗೆ ಕಾರಣರಾಗ ಜನತಾ ಪ್ರತಿನಿಧಿಗಳೊ? ಆ ಪ್ರತಿನಿಧಿಗಳನ್ನು ಆರಿಸಿರುವ – ವಿದ್ಯಾರ್ಥಿವರ್ಗದ ತಂದೆ ತಾಯಿಯರೆ ಆಗಿರುವ – ಜನತೆಯೊ? ಯಾರು? ಎಂತಾದರಿರಲಿ:

ನಾಡ ಬದುಕಿನ ಬೇರನ್ನೆ ಹಿಡಿದಿರುವ ಈ ಕೇಡಿನ ಕಡೆಗೆ ತಮ್ಮ ಗಮನವನ್ನು ಸೆಳೆದಿದ್ದೇನೆ, ಅಷ್ಟೆ. ಶಾಸನಕರ್ತರಾದ ತಮಗೆ ಬಿಟ್ಟಿದ್ದು ಮುಂದಿನ ಕ್ಷೇಮಂಕರ ಕರ್ತವ್ಯ.

ಮಹನೀಯರೆ, ಔತಣದ ತುದಿಯಲ್ಲಿ ಹಾಗಲಕಾಯಿ ತಿನ್ನಿಸುವಂತೆ, ಕೃತಜ್ಞತಾ ಸೂಚನಾರ್ಥವಾಗಯೆ ಮಾಡಿರುವ ನನ್ನ ಭಾಷಣವನ್ನು ಈ ಸಮಸ್ಯಾಕಟುತ್ವದಿಂದ ಕೊನೆಗಾಣಿಸುವುದು ಅಕ್ಷಮ್ಯ ಅಪರಾಧವಾದೀತು. ಬಿಡಿಸುವ ಸಮಸ್ಯೆಗಳೇನೋ ಯಾವಾಗಲೂ ಇದ್ದೇ ಇರುತ್ತವೆ. ಎಲ್ಲ ಮುಗಿಯಿತು ಎಂಬ ಕಾಲ ಎಂದಿಗೂ ಬರುವುದಿಲ್ಲ, ನಿರಂತರ ಹೋರಾಟವೆ ಸಜೀವತ್ವದ ಲಕ್ಷಣವಲ್ಲವೆ?

ಆದರೆ ಈ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಎಂತೆಂತಹ ಸಮಸ್ಯೆಗಳು ಪರಿಹಾರವಾಗಿವೆ? ಎಂತೆಂತಹ ಹೋರಾಟಗಳಲ್ಲಿ ಜಯಗಳಿಸಿದ್ದೇವೆ? ಎಂತೆಂತಹ ಮಹತ್ ಸಾಧನೆಗಳನ್ನು ಕೈಗೊಂಡು ಸಿದ್ಧಿ ಪಡೆದಿದ್ದೇವೆ. ಯಾವ ಯಾವ ವಲಯಗಳಲ್ಲಿ ಎಂತೆಂತಹ ನವೋದಯಗಳನ್ನು ಉತ್ಥಾನಗೊಳಿಸಿದ್ದೇವೆ. ನೆನೆದರೆ, ರೋಮಾಂಚಿತರಾಗದೆ ಇರಲು ಸಾಧ್ಯವಿಲ್ಲ. ಭಾರತದಂತಹ ಮಹಾ ರಾಷ್ಟ್ರದ ಸ್ವಾತಂತ್ರ ಸಾಧನೆಯೊಂದೇ ಸಾಲದೆ ಒಂದು ಶತಮಾನದ ಹಿಗ್ಗಿಗೆ?

ಈ ಸಮಾರಂಭಕ್ಕೆ ಪ್ರಕೃತವಾದ ಸಾಹಿತ್ಯ ಕ್ಷೇತ್ರದಲ್ಲಂತೂ ಪೂರ್ವೋಕ್ತ ಅವಧಿಯಲ್ಲಿ, ಕನ್ನಡಿಗರು ಅದ್ಭುತ ಕಾರ್ಯಸಾಧನೆ ಮಾಡಿದ್ದಾರೆ. ಇತರ ಯಾವ ದೇಶದ ಯಾವ ಸಾಹಿತ್ಯಕ್ಕೂ ಬಿಟ್ಟುಕೊಡದ ಪ್ರಮಾಣದಲ್ಲಿ ಮಹೋನ್ನತ ಶಿಖರಗಳನ್ನೇರಿ ನಿಂತಿದ್ದಾರೆ. ಧಾರವಾಡದಲ್ಲಿ ಶ್ರೀ ನಿಜಲಿಂಗಪ್ಪನವರಿಂದ ಉದ್ಘಾಟಿತವಾಗಿ ನಡೆದ ಸಾಹಿತ್ಯ ಸಮ್ಮೇಲನದ ನನ್ನ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತನ್ನು ಇಲ್ಲಿ ಮತ್ತೊಮ್ಮೆ ಧೈರ್ಯವಾಗಿ ಘೋಷಿಸಬಯಸುತ್ತೇನೆಃ “ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದುಃ ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.”

ಕನ್ನಡಿಗರ ಆ ಅಭ್ಯುದಯದ ಮತ್ತು ಶ್ರೇಯಸ್ಸಿನ ಮಹಾ ವಿಜಯಕ್ಕೆ ಕಿರೀಟಪ್ರಾಯವಾದ ಸಂಕೇತ ಸಾಕ್ಷಿಯಾಗಿದೆ, ನಾಡಿನ ಕವಿಯೊಬ್ಬನಿಗೆ ನಾಡಿನ ಮಹಾಜನರ ಪ್ರತಿನಿಧಿಗಳಾದ ತಾವು, ಇಂದು, ಈ ಸಮಾರಂಭದಲ್ಲಿ, ಆಶೀರ್ವಾದಪೂರ್ವಕವಾಗಿ ನೀಡುತ್ತಿರುವ ಈ ‘ರಾಷ್ಟ್ರಕವಿ’ ಪ್ರಶಸ್ತಿ. ಆ ಗೌರವ ಪ್ರದಾನಕ್ಕಾಗಿ ನಾನು ಮತ್ತೊಮ್ಮೆ ತಮ್ಮೆಲರಿಗೂ ನನ್ನ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಅನಂತಾನಂತ ನಮಸ್ಕಾರಗಳನ್ನೂ ನಿವೇದಿಸುತ್ತೇನೆ.

ಜಯ್ ಕರ್ಣಾಟಕ!
ಜಯ್ ಹಿಂದ್!

---

* ‘ರಾಷ್ಟ್ರಕವಿ’ ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಬೆಂಗಳೂರುಃ ಜನವರಿ ೨೭, ೧೯೬೪.

# ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ*

ತಮ್ಮ ವಿಶ್ವಾಸ ಔದಾರ್ಯಗಳು ನನಗೆ ದಯಾಪಾಲಿಸಿರುವ ಈ ಗೌರವ ಡಾಕ್ಟರೇಟ್ ಪದವಿಯ ಮಹತ್ ಕೃಪೆಗಾಗಿ ನಾನು ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಯನ್ನು ನಿವೇದಿಸುತ್ತೇನೆ. ಉತ್ತರಕರ್ಣಾಟಕದ ವಿದ್ಯಾ ಸಂಸ್ಕೃತಿ ಕೇಂದ್ರವಾದ ಈ ನಗರಕ್ಕೆ ಸುಮಾರು ಎರಡು ವರ್ಷಗಳ ಹಿಂದೆಯೆ ನಾನು ಆಗಮಿಸಿ ಕರ್ಣಾಟಕ ವಿಶ್ವವಿದ್ಯಾನಿಲಯದ ಈ ಗೌರವ ಪದವಿಯನ್ನು ಸ್ವೀಕರಿಸಬೇಕಾಗಿತ್ತು. ಆದರೆ ನಾನೇ ಕಾರಾಣವಾಗಿ ತಂದೊಡ್ಡಿದ ಕೆಲವು ಅಡೆತಡೆಗಳಿಂದ ಅದು ಮುಂದಕ್ಕೆ ಹೋಗಬೇಕಾಗಿ ಬಂತು.

ಅದರ ಏನು ಏತಕ್ಕೆ ಎಂಬುದನ್ನು ಕುರಿತು ಎರಡು ಮಾತು ಆಡಿದರೆ ಅಪ್ರಕೃತವಾಗಲಾರದು. ಅಪ್ರಕೃತವಾಗುವುದಿರಲಿ, ಅದನ್ನು ಈ ಸಂದರ್ಭದಲ್ಲಿ ಜನತೆಗೆ ತಿಳಿಸಬೇಕಾದ್ದೂ ತುಂಬ ಪ್ರಕೃತವೂ ಅಗಿದೆ ಎಂದು ನನ್ನ ಅಭಿಪ್ರಾಯ ಆದ್ದರಿಂದ ನನಗೂ ವೈಸ್ ಛಾನ್ಸಲರ್ ಡಾ. ಪಾವಟೆಯವರಿಗೂ ನಡೆದ ಪತ್ರವ್ಯವಹಾರದ ಸಾರಾಂಶವನ್ನು ಇಲ್ಲಿ ಹೊರಗೆಡಹಲು ತಮ್ಮ ಅನುಮತಿ ಬೇಡುತ್ತೇನೆ.

ನಾನು ಪತ್ರ ಬರೆದೆ:

ಕರ್ಣಾಟಕ ವಿಶ್ವವಿದ್ಯಾನಿಲಯವು ನನ್ನನ್ನು ಗೌರವಿಸುತ್ತಿರುವುದಕ್ಕಾಗಿ ಕೃತಜ್ಞನಾಗಿದ್ದೇನೆ. ಅದರೆ ಈ ಗೌರವ ನನಗೆ ಯಾವ ಕಾರಣಕ್ಕಾಗಿ ಸಲ್ಲುತ್ತಿದೆಯೋ ಆ ಕಾರಣ ಅಥವಾ ಕಾರಣಗಳು ಇನ್ನೂ ತಮ್ಮ ಪರಿಪೂರ್ಣತೆಯನ್ನು ಸಾಧಿಸಿಲ್ಲ. ಆ ಪರಿಪೂರ್ಣತೆ ಸಾಧಿತವಾದ ಮೇಲೆ ಸಂತೋಷದಿಂದ ತಮ್ಮಲ್ಲಿಗೆ ಬಂದು ಗೌರವ ಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸಿತ್ತೇನೆ. ಅಲ್ಲಿಯವರೆಗೆ ದಯವಿಟ್ಟು ತಡೆಯಿರಿ, ನಾನೆ ವೈಯಕ್ತಿಕವಾಗಿ ಹಾಜರಾಗಬೇಕು ಎಂಬ ಆಶಯವಿದ್ದ ಪಕ್ಷದಲ್ಲಿ. ಹಾಗಿಲ್ಲದ ಪಕ್ಷದಲ್ಲಿ ನನ್ನ ಗೈರುಹಾಜರಿಯಲ್ಲಿಯೆ ತಾವು ಗೌರವ ಪದವಿಯನ್ನು ದಯಪಾಲಿಸ ಬಹುದು.

ಡಾ. ಪಾವಟೆಯವರು ಹಾಗೆಲ್ಲ ಸುಲಭದಲ್ಲಿ ಸೋಲೊಪ್ಪಿಕೊಳ್ಳುವವರಲ್ಲ ಎಂಬುದು ನಿಮಗೆಲ್ಲ ಅನುಭವತಃ ಗೊತ್ತಿರಬೇಕಲ್ಲವೆ? ಈ ವಿಶ್ವವಿದ್ಯಾನಿಲಯದ ಬೃಹದಾಕಾರದ ಮಹದ್ ಭವ್ಯ ಸೌಧಸ್ವರೂಪವೆ ಅದಕ್ಕೆ ಶೈಲಸಾಕ್ಷಿಯಾಗಿ ನಿಂತಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ.

ಅವರು ಉತ್ತರ ಬರೆದರು, ವಿಶೇಷ ಘಟಿಕೋತ್ಸವವನ್ನಾದರೂ ಏರ್ಪಡಿಸುತ್ತೇವೆ; ನೀವು ಅನುಕೂಲಮಾಡಿಕೊಂಡು ಬರಲೇಬೇಕು ಎಂದು.

ನನ್ನ ಆಗಮನಕ್ಕೆ ನಾಲ್ಕು ಗುರುತರ ಉಪಾಧಿಗಳನ್ನೆ ಒಡ್ಡಿದ್ದೆ. ಒಟ್ಟುಗೂಡಿದ ನಾಡಿನ ಹೆಸರು ಅಧಿಕೃತವಾಗಿ ಕರ್ನಾಟಕ ಎಂದಾಗಬೇಕೆಂದೂ, ಸರ್ಕಾರ ಕನ್ನಡವನ್ನು ಅಧಿಕೃತಭಾಷೆಯೆಂದು ಘೋಷಿಸಬೇಕೆಂದೂ, ರಾಜ್ಯಾಂಗದ

ಪ್ರಕಾರ ರಾಜ್ಯಪಾಲರ ನೇಮಕವಾಗಬೇಕೆಂದೂ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ, ಸದ್ಯಕ್ಕೆ ಇಂಗ್ಲೀಷಿನ ಜೊತೆಗೆ, ಪ್ರಾದೇಶಿಕ ಭಾಷೆಯೂ ಶಿಕ್ಷಣ ಮಾಧ್ಯಮವಾಗಬೇಕೆಂದು.

ಆ ಆಶೆಗಳು ಕೈಗೂಡುವ ನಿರೀಕ್ಷೆಯಲ್ಲಿ ಒಂದು ವರುಷವೇ ಕಳೆಯಿತು.

ಮರುವರ್ಷ ಮತ್ತೆ ಬಂದಿತು ಉಪಕುಲಪತಿಗಳ ಪತ್ರಃ ಸದ್ಯದ ರಾಜಕೀಯ ಪರಿಸ್ಥಿಯನ್ನೂ, ರಾಜಕಾರಣಿಗಳ ಗೊಂದಲಮಯ ಮನೋಧರ್ಮವನ್ನೂ ಗಮನಿಸಿದರೆ ನಿಮ್ಮ ಆಶೆಗಳ ನೆರವೇರಿಕೆ ಇನ್ನೆಷ್ಟುಕಾಲ ಕಾಯಬೇಕಾಗುತ್ತದೆಯೋ? ಆದ್ದರಿಂದ ನಿಮ್ಮ ಗೈರುಹಾಜರಿಯಲ್ಲಿಯೆ ನಮ್ಮ ವಿಶ್ವವಿದ್ಯಾನಿಲಯವು ನಿಮಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಲು ನಿಶ್ಚಯಿಸಿದೆ ಎಂದು.

ಆದರೆ ಈ ಸಾರಿ ನಾನು ಅದಕ್ಕೆ ಸಿದ್ಧನಿರಲಿಲ್ಲ.

ಅಷ್ಟು ಹೊತ್ತಿಗಾಗಲೆ ನನ್ನ ನಾಲ್ಕು ಆಶೆಗಳಲ್ಲಿ ಎರಡು ಈಡೇರಿದ್ದುವು. ಕರ್ಣಾಟಕದ ಏಕೀಕರಣಕ್ಕೆ ರಾಜಕೀಯ ಭೂಮಿಕೆಯಲ್ಲಿ ದುಡಿದ ಹಿರಿಯ ವ್ಯಕ್ತಿಗಳಲ್ಲಿ ಅಗ್ರಮಾನ್ಯರಾಗಿರುವ ಶ್ರೀ ನಿಜಲಿಂಗಪ್ಪನವರು ಮುಖ್ಯ ಕರ್ಣಧಾರರಾಗಿ ಸರಕಾರದ ಸೂತ್ರಗಳನ್ನು ಕೈಗೆ ತೆಗೆದುಕೊಂಡ ತರುವಾಯ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಿ ಕನ್ನಡ ಅಧಿಕೃತ ಭಾಷೆ ಎಂದು ಘೋಷಿಸಿತವಾಗಿತ್ತು. ಪ್ರಾದೇಶಿಕ ಭಾಷೆಯ ಶಿಕ್ಷಣ ಮಾಧ್ಯಮವೂ ಅರ್ಧಂಬರ್ಧವಾಗಿ ತೇಪೆ ತೇಪೆಯಾಗಿ ಕೈಗೂಡುವ ಹಾದಿ ಹಿಡಿದಂತೆ ತೋರುತ್ತಿತ್ತು. ರಾಜ್ಯದ ಹೆಸರಿನ ವಿಷಯ ಮಾತ್ರ ವಿಧಾನ ಸಭೆಯ ಟಕ್ಕಾಟಿಕ್ಕಿಯಲ್ಲಿ ಅಧಿವೇಶನದಿಂದ ಅಧಿವೇಶನಕ್ಕೆ ಜೋಲಿ ಹೊಡೆಯುತ್ತಿತ್ತು, ಪಕ್ಷ ವಿಪಕ್ಷಗಳ ಕ್ರೀಡಾ ಸ್ಪರ್ಧೆಯೆಂಬಂತೆ.

ನಾನು ಡಾ.ಪಾವಟೆಯವರಿಗೆ ಬರೆದ ಮರು ಉತ್ತರದಲ್ಲಿ ಅವರು ಅಷ್ಟೊಂದು ನಿರಾಶರಾಗಬಾರದೆಂದೂ, ನಮ್ಮ ಆಶೆಗಳಲ್ಲಿ ಎರಡು ತಕ್ಕ ಮಟ್ಟಿಗೆ ಪೂರ್ಣವಾಗಿವೆಯೆಂದೂ, ಒಂದು ಕೈಗೂಡುವ ದಾರಿಯಲ್ಲಿ ಅರೆಬರೆಯಾದರೂ ಸಾಗಿದೆಯೆಂದೂ, ಇನ್ನೊಂದೂ ಇಂದೊ ನಾಳೆಯೊ ಕೈಗೂಡುವುದರಲ್ಲಿ ಸಂದೇಹವಿಲ್ಲವೆಂದೂ, ಸ್ವಲ್ಪ ಸಾವಧಾನವಾದರೂ ಚಿಂತೆಯಿಲ್ಲ, ಇನ್ನೊಂದು ವರ್ಷವಾದರೂ ಕಾದು ನೋಡುವ ಅವಕಾಶ ಕೊಡಬೇಕಂದೂ ಕ್ಷಮಾಯಾಚನೆ ಮಾಡಿದೆ.

ಅಷ್ಟರಲ್ಲಿ ದುರದೃಷ್ಟವಶಾತ್ ಭಾರತ ರಾಷ್ಟ್ರದ ಅಸ್ತಿಸ್ವವನ್ನೆ ಅಲುಗಾಡಿಸುವಂತಹ ಪೀಡಾಕರ ಕ್ಷೋಭೆಗಳು ತಮ್ಮ ಕರಾಳ ಛಾಯೆಗಳಿಂದ ಸಮಗ್ರ ದೇಶಜೀವನವನ್ನೆ ಮುಸುಗಿ ಉತ್ತರ ಪಶ್ಚಿಮ ದಿಗಂತಗಳಲ್ಲಿ ಭಯಂಕರವಾಗಿ ಕಾಣಿಸಿಕೊಂಡು ಮೇಲ್ವಾಯ ತೋಡಗಿದುವು. ಜೋತೆಗೆ ರಾಷ್ಟ್ರದ ಜೀವಸ್ವರೂಪದಂತಿದ್ದ ನಾಯಕತ್ವವನ್ನೂ ವಿಧಿ ಕಸಿದುಕೊಂಡು ನಮ್ಮನ್ನು ದುಃಖ ಸಾಗರದಲ್ಲಿ ಮುಳುಗಿಸಿಬಿಟ್ಟಿತು. ರಕ್ಷಣೆ ಮತ್ತು ಆಹಾರದಂತಹ ಅತ್ಯಂತ ಪ್ರಮುಖ ಸಮಸ್ಯೆಗಳಿಂದಲೂ ರಾಷ್ಟ್ರ ಜೀವನ ತಾಡಿತವಾಗಿ ತತ್ತರಿಸಿತು. ಸಮಗ್ರ ರಾಷ್ಟ್ರಜೀವನದ ಸಾವು ಬದಿಕಿನ ಪ್ರಶ್ನೆಯ ಮುಂದೆ ನಮ್ಮ ಈ ಸಣ್ಣಪುಟ್ಟ ಆಶಾ ಸಮಸ್ಯೆಗಳೆಲ್ಲ ಬಾಲ ಮುದುರಿಕೊಂಡು ಮೂಲೆ ಸೇರಲಬಾಕಾಯಿತು.

ನಾನು ಒಳಗೊಳಗೆ ತುಸು ಹರ್ಷದಿಂದಲೆ ಭಾವಿಸಿದ್ದೆ, ಸದ್ಯಕ್ಕೆ ಡಾ.ಪಾವಟೆಯವರು ಗೌರವ ಪದವೀಪ್ರದಾನ ಸಮಾರಂಭವನ್ನು ಕೈಬಿಟ್ಟಿರಬೇಕು ಎಂದು. ಆದರೆ ಒಂದುದಿನ ಕರ್ಣಾಟಕ ವಿಶ್ವವಿದ್ಯಾನಿಲಯದ ದೃಢಮನಸ್ಸಿನ ಉಪಕುಲಪತಿಗಳ ಸುದೃಢ ವಿಗ್ರಹ ಮೈಸೂರಿನ ನಮ್ಮಮನೆ 'ಉದಯರವಿ' ಯಲ್ಲಿಯೆ ಪ್ರತ್ಯಕ್ಷವಾಯಿತು. ಒಂದೆರಡು ಘಂಟೆಯ ಕಾಲದ ಮಾತುತತೆಯಲ್ಲಿ ಅವರ ಸರಳತೆ, ಅವರ ವಿಶ್ವಾಸ, ಅವರ ಹೃತ್ಪೂರ್ವಕ ಪ್ರೇಮ, ಅವರ ಅದಮ್ಯ ಶ್ರದ್ಧೆ ಇವುಗಳು ನನ್ನ ಸಂಕಲ್ಪದ ನಿಷ್ಠುರತೆಯನ್ನು ಪಳಗಿಸಿದುವು. ಆ ಅಹೇತುಕವಾದ ಅಕ್ಕರೆಗೆ ನಾನು ಸೋಲದಿರಲು ಸಾಧ್ಯವಾಗಲಿಲ್ಲ. ಯಾರ ಅವಿರಾಮ ಶ್ರಮದಿಂದ, ಯಾರ ಅಚಂಚಲ ನಿಷ್ಠೇಯಿಂದ, ಯಾರ ಬಹುವರ್ಷಗಳ ಶ್ರದ್ಧಾಮಯ ತಪಸ್ಯೆ ಮತ್ತು ವ್ಯವಹಾರ ಚಾತುರ್ಯಗಳಿಂದ ಕರ್ಣಾಟಕ ವಿಶ್ವವಿದ್ಯಾನಿಲಯದಂತಹ ಸಹ್ಯಾಚಲಸ್ಪರ್ಧಿಯಾದ ಮಹಾಸಂಸ್ಥೆ ಕಟ್ಟಲ್ಪಟ್ಟು ಅಭಿವೃದ್ಧವಾಗಿ ಕೀರ್ತಿ ಶಿಖರಸ್ಥಾಯಿಯಾಗಿದೆಯೋ ಅಂತಹ ಮಹಾನುಭಾವರು ಉಪಕುಲಪತಿ ಸ್ಥಾನದಲ್ಲಿರುವಾಗ ಅವರ ಕೈಯಿಂದ ಗೌರವ ಪದವಿಯನ್ನು ಗೈರುಹಾಜರಿಯಲ್ಲಿ ಪಡೆಯುವ ದೌರ್ಭಾಗ್ಯಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಧಾರವಾಡಕ್ಕೆ ಬಂದು ವಿಶೇಷ ಘಟಿಕೋತ್ಸವದಲ್ಲಿ ಗೌರವಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತೇನೆ ಎಂದು ಮಾತು ಕೊಟ್ಟಮೇಲೆಯೆ ಅವರು 'ಉದಯರವಿ'ಯ ಮೆಟ್ಟಿಲಿಳಿದರು.

ಅದರ ಪರಿಣಾಮವಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ತಾವು ಉತ್ಸಾಹಪೂರ್ವಕವಾಗಿ ನೀಡಿದ ಗೌರವವಾದರಗಳ ಶ್ರೀಭಾರಕ್ಕೆ ನನ್ನ ಶಿರಸ್ಸು ಧನ್ಯತೆಯನ್ನು ಅನುಭವಿಸುತ್ತಿದ್ದರೂ ದೈನ್ಯದಿಂದ ಬಾಗುತ್ತಿದೆ; ವಿಶ್ವವಿದ್ಯಾನಿಲಯ ಭಗವತಿ ಶ್ರೀ ಸರಸ್ವತಿಯ ಅಡಿದಾವರೆಯ ಕೃಪೆಗೆ ಹಣೆಯಿಟ್ಟು ನಮಿಸುತ್ತಿದೆ.

ವಿಶ್ವವಿದ್ಯಾನಿಲಯಗಳು ಅಣೆಕಟ್ಟುಗಳಂತಲ್ಲ; ಕಾಗದದ, ಉಕ್ಕಿನ ಅಥವಾ ಹೆಂಚಿನ ಕಾರ್ಖಾನೆಗಳಂತಲ್ಲ. ಅವುಗಳಿಂದ ಸಿದ್ದವಾಗುವ ತಯಾರಿಕೆಗಳನ್ನು ಕಾರ್ಖಾನೆಯ ಸಿದ್ಧ ಪದಾರ್ಥಗಳನ್ನು ಪರೀಕ್ಷಿಸುವಂತೆ ಪರಿಶೀಲಿಸಿ ಬೆಲೆಕಟ್ಟುಂವಂತಿಲ್ಲ. ಅವುಗಳಿಂದ ಹೊರಬೀಳುವ ವಸ್ತುಗಳ ಸಜೀವವಾದುವು; ಸಚೇತನವಾದುವು. ಒಂದೊಂದೂ ತನ್ನ ವಿಶಿಷ್ಟತೆಯಿಂದ ನಿರುಪಮವಾದುದು. ಸರ್ವಕ್ಕೂ ಸರ್ವ ಸಾಧಾರಣವಾದ ಕೆಲವು ಅಂಶಗಳು ಅನಿವಾರ್ಯವಾಗಿ ಇರುತ್ತವೆಯಾದರೂ, ಸಮಷ್ಟಿಯ ಐಕ್ಯತೆಯ ದೃಷ್ಟಿಯಿಂದ ಅವು ಇರಬೇಕಾದುದ್ದು ಅತ್ಯಂತ ಅವಶ್ಯಕವೆ ಆದರೂ, ಅವು ಹೇಂಚುಗಳಂತಾಗಲಿ ಉಕ್ಕಿನ ಉಪಕರಣಗಳಂತಾಗಲಿ ಕಾಗದದಂತಾಗಲಿ ಸರ್ವಸಮವಾಗಿರಲು ಸಾಧ್ಯವಿಲ್ಲ. ಜಡದಿಂದ ಭಿನ್ನವಾದ ಚೈತನ್ಯದ ಲಕ್ಷಣಗಳನ್ನು ಪರಿಭಾವಿಸುವ ಪಕ್ಷದಲ್ಲಿ, ಸರ್ವ ಸಮತ್ವ ಎಂಬುದು ಅವುಗಳಿಗೆ ಸಾವಿಗಿಂತಲೂ ಹೀನತರವಾಗದ ನೀರಸ ಸ್ಥಿತಿಯಾಗುತ್ತದೆ. ಅದರಲ್ಲಿಯೂ ವ್ಯಕ್ತಿಯ ವ್ಯಕ್ತಿತ್ವವನ್ನು ಪರಮ ಮೌಲ್ಯಗಳಲ್ಲಿ ಒಂದನ್ನಾಗಿ ಪರಿಗಣಿಸುವ ಪ್ರಜಾಸತ್ತೆಯಲ್ಲಂತೂ ವೃಷ್ಟಿಯ ವಿಶಿಷ್ಟತೆಗೆ ಸಮಷ್ಟಿಯ ಸಾಧಾರಣತೆಗೆ ಇರುವಷ್ಟೆ ಗೌರವ ಸಲ್ಲುತ್ತದೆ. ಆದ್ದರಿಂದ ಸಮಷ್ಟಿಯ ಕ್ಷೇಮವನ್ನು ಕಾಪಾಡುವ ಆತುರದಲ್ಲಿ ವ್ಯಷ್ಟಿಯನ್ನು ಬಲಿಗೊಟ್ಟು ವ್ಯಕ್ತಿಯ ವಿಶಿಷ್ಟತೆಯನ್ನು ನಿರ್ಲಕ್ಷಿಸಿದರೆ ಪ್ರಜಾಸತ್ತೆಯ ಬುಡಕ್ಕೆ ಕೊಡಲಿಯಿಟ್ಟಂತಾಗುತ್ತದೆ. ಹಸುರಾಗಿ, ವರ್ಣಮಯವಾಗಿ ವೈವಿಧ್ಯ ಸೌಂದರ್ಯಗಳಿಂದ ಕೂಡಿ ಕಂಗೊಳಿಸುವ ರಮಣೀಯ ಕಾನನಕ್ಕೆ ಬದಲಾಗಿ ನಿರ್ವಿಶಿಷ್ಟವೂ ಸರ್ವಸಮವೂ ನಿರ್ಜೀವವೂ ನೀರಸವೂ ಆಗಿರುವ ಕಟ್ಟಿಗೆಯ ರಾಶಿ ಸಿದ್ಧವಾಗುತ್ತದೆ.

ಸರ್ವಸಮರೂಪದ ವಸ್ತುಗಳನ್ನು ತಯಾರಿಸುವ ಮಹಾಕಾರ್ಖಾನ ಗಳನ್ನೂ ಯಂತ್ರೋಪಕರಣ ನಿರ್ಮಾಣದ ಬೃಹದ್ ಯಂತ್ರಸ್ಥಾವರಗಳನ್ನೂ ಮತ್ತು ಯಾವ ವಿಶಿಷ್ಟತೆಯನ್ನೂ ಅಪೇಕ್ಷಿಸದ ಶುದ್ಧ ವೈಜ್ಞಾನಿಕ ಸಂಸ್ಥೆಗಳನ್ನೂ ಸ್ಥಾಪಿಸುವಾಗ ನಾವು ಅಖಿಲ ಬಾರತಕ್ಕೂ ಸರ್ವಸಾಧಾರಣವಾದ ರೀತಿ, ನೀತಿ ಮತ್ತು ಧ್ಯೇಯಗಳನ್ನು ಅನುಸರಿಸುವಂತೆ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಲ್ಲಾಗಲಿ ಸಂಚಾಲನೆಯಲ್ಲಾಗಲಿ ಅನುಸರಿಸಿದರೆ ತಪ್ಪಾಗುತ್ತದೆ. ವ್ಯಷ್ಟಿಯ ವಿಶಿಷ್ಟತೆಯ ವಿಧ್ವಂಸನದಿಂದಲೆ ಸ್ಥಾಪಿತವಾಗುವ ಆ ಐಕ್ಯತೆ ಮರುಭೂಮಿಯ ಅಚೇತನ ಏಕರೂಪವಾಗುತ್ತದೆಯೆ ಹೊರತು ಅನೇಕ ವಿಧವಾದ ರಾಗಗಳಿಂದ ಸುಮಧುರವಾಗುವ ಸಂಗೀತದಂತೆ ಸಚೇತನ ಸುಸ್ವರಮೇಲವಾಗುವುದಿಲ್ಲ.

ಅಖಿಲ ಭಾರತದ ಸಮಗ್ರತೆಯ ಮತ್ತು ಭಾವೈಕ್ಯದ ಸಾಧನೆಗಾಗಿ ಬೇರೆ ಬೇರೆಯ ಭಾಷಾ ಪ್ರದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಇರುವ ಮತ್ತು ಮುಂದೆ ಬರುವ ಎಲ್ಲ ವಿಶ್ವವಿದ್ಯಾನಿಲಯಗಳೂ, ಒಂದರಂತೆ ಒಂದು, ಅಚ್ಚೊತ್ತಿದಂತೆ ಇರಬೇಕು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಕಾರ್ಖಾನೆಯ ರೂಪದ ಮತ್ತು ತಾಂತ್ರಿಕ ಲಕ್ಷಣದ ಶುದ್ಧ ವೈಜ್ಞಾನಿಕ ಸಂಸ್ಥೆಗಳಿಗೆ ಆ ತತ್ವ ಅನ್ವಯವಾಗುವುದರಲ್ಲಿ ಅರ್ಥವಿದೆ. ವಿಶ್ವವಿದ್ಯಾನಿಲಯಗಳಲ್ಲಿಯೂ ಶುದ್ಧ ವಿಜ್ಞಾನ ವಿಷಯಕವಾದ ವಿಭಾಗಗಳಿಗೂ ಅದು ಬಹುಮಟ್ಟಿಗೆ ಅನ್ವಯವಾಗುತ್ತದೆ. ಆದರೆ ಭಾಷಾ ಸಾಹಿತ್ಯ ಸಂಸ್ಕೃತಿ ದರ್ಶನ ಇತಿಹಾಸಾದಿ ಹೃದಯ ಸಂಸ್ಕಾರ ಮತ್ತು ಬುದ್ಧಿ ವಿಚಾರಗಳಿಗೆ ಸಂಬಂದಪಟ್ಟ ಮಾನವೀಯ ಶಾಸ್ತ್ರ ಭಾಗಗಳಿಗೆ ಆ ಯಾಂತ್ರಿಕತ್ವ ಒಂದಿನಿತೂ ಅನ್ವಯವಾಗುವುದಿಲ್ಲ. ವ್ಯಕ್ತಿರೂಪದ ವ್ಯಷ್ಟಿಯ ವ್ಯಕ್ತಿತ್ವಕ್ಕೂ ಮತ್ತು ಹೃದಯ ಬುದ್ಧಿ ಸಂಸ್ಕಾರಗಳಿಗೂ ವೈಜ್ಞಾನಿಕ ವಿಷಯಗಳಿಗೆ ಇಲ್ಲದ ಒಂದು ವಿಶಿಷ್ಟತೆ ಇರುತ್ತದೆ. ಆ ವೈಶಿಷ್ಟ್ಯದ ಪಾಲನೆ, ರಕ್ಷಣೆ, ಪೊಷಣೆ, ಸಂಶೋಧನೆ ಮತ್ತು ಪ್ರಸಾರ ಇವು ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳ ಆದ್ಯಕರ್ತವ್ಯವಾಗಿರಬೇಕು. ಆ ವಿಚಾರದಲ್ಲಿ ಔದಾಸಿನ್ಯ ಸಲ್ಲದು. ತಿರಸ್ಕಾರವಂತೂ ಅಕ್ಷಮ್ಯ ಜನತಾದ್ರೋಹವಾಗುತ್ತದೆ.

ಭಾಷಾನುಗಣವಾಗಿ ರಾಜ್ಯಗಳನ್ನು ವಿಂಗಡಿಸಿದಾಗಲೇ ನಮ್ಮ ಪ್ರಜಾಸತ್ತಾತ್ಮಕವಾದ ರಾಜ್ಯಾಂಗ ಈ ಪ್ರಾದೇಶಿಕ ವೈಶಿಷ್ಟ್ಯವನ್ನು ಕಾನೂನುಬದ್ಧವಾಗಿಯೆ ಗುರುತಿಸಿದಂತಾಗಿದೆ. ಆದ್ದರಿಂದ ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಆಯಾ ಪ್ರದೇಶದ ಭಾಷಾ ಸಾಹಿತ್ಯ ಕಲಾ ಸಂಸ್ಕೃತಿಗಳಿಗೆ ವಿಶೇಷ ಪ್ರೋತ್ಸಾಹವಿಯುವುದು ಅತ್ಯಗತ್ಯ. ಏಕೆಂದರೆ ಆಯಾ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಆ ಕೆಲಸವನ್ನು ಕೈಕೊಳ್ಳದಿದ್ದರೆ ಪ್ರಪಂಚದ ಇನ್ನಾವ ವಿದ್ಯಾಸಂಸ್ಥೆಗಳೂ ಅದನ್ನು ಕೈಕೊಳ್ಳುವುದಿಲ್ಲ. ಕರ್ಣಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳು ಕನ್ನಡ ನುಡಿಯ, ಸಾಹಿತ್ಯದ, ಇತಿಹಾಸದ, ಕಲೆಯ ಮತ್ತು ಸಂಸ್ಕೃತಿಯ ರಕ್ಷಣೆ ಪೋಷಣೆಗಳನ್ನು ನಿರ್ಲಕ್ಷಿಸಿದರೆ ಅದು ಕಡಲ ಪಾಲಾದಂತೆಯೆ. ಇಂಗ್ಲಿಷ್ ಭಾಷೆ ತನ್ನ ಅಭಿವೃದ್ಧಿಗೆ ಕರ್ಣಾಟಕ ಅಥವಾ ಮೈಸೂರು ವಿಶ್ವವಿದ್ಯಾನಿಲಯಗಳ ಕೈ ಹಾರೈಸುವುದಿಲ್ಲ. ಜಗತ್ತಿನ ಇತರ ಸಾವಿರಾರು ಸಂಸ್ಥೆಗಳಲ್ಲಿ ಅದು ಸುಪುಷ್ಟವಾಗಿ ಮುಂದುವರಿದೇವರಿಯುತ್ತದೆ; ಭೌತ ರಸಾಯನಾದಿ ವಿಜ್ಞಾನ ವಿಷಯಗಳ ಸಂಶೋಧನೆ ಇಲ್ಲಿ ನಡೆಯದಿದ್ದರೆ ಜಗತ್ತಿನ ಇತರ ಲಕ್ಷಾಂತರ ಸಂಸ್ಥೆಗಳಲ್ಲಿ ಅದು ನಡೆಯುತ್ತಲೆ ಇರುತ್ತದೆ. ಹಿಂದಿಗೆ ಅದರ ಏಳಿಗೆಗಾಗಿ ಇಲ್ಲಿ ನಾವು ಪ್ರೋತ್ಸಾಹವೀಯಬೇಕಾಗಿಲ್ಲ; ಭಾರತದ ಸಾವಿರಾರು ಇತರ ಕಡೆಗಳಲ್ಲಿ ಅದು ರಕ್ಷಿತ ಪೋಷಿತವಾಗುತ್ತಿದೆ. ಕಡೆಗೆ ಉರ್ದುವಿನಂತಹ ಭಾಷೆಗಿರುವ ಆ ರಕ್ಷೆ ನಮ್ಮ ಕನ್ನಡಕ್ಕಾಗಲಿ, ಮರಾಠಿ, ತಮಿಳು, ಮಲೆಯಾಳಗಳಿಗಾಗಲಿ ಇಲ್ಲ. ಪಾಕಿಸ್ಥಾನದ ಮಾತಿರಲಿ, ಭಾರತದಲ್ಲಿಯೆ ಇರುವ

ನಾಲ್ವತ್ತೈವತ್ತು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ವಿಶ್ವವಿದ್ಯಾನಿಲಯದಲ್ಲಿಯೂ ಅದಕ್ಕೆ ಅಯಾ ಪ್ರಾದೇಶಿಕ ಭಾಷೆಗಳಿಗಿರುವಂತೆಯೆ ಸಮಾನಸ್ಥಾನ ಒದಗಿ, ಒಟ್ಟು ಮೊತ್ತದಲ್ಲಿ ನೋಡಿದರೆ ಅದಕ್ಕೆ ಪ್ರಾದೇಶಿಕ ಭಾಷೆಗಳಿಗೆ ಲಭಿಸುವ ಪ್ರೋತ್ಸಾಹಕ್ಕೆ ನಾಲ್ವತ್ತೈವತ್ತರಷ್ಟು ಹೆಚ್ಚಿನ ಪ್ರೋತ್ಸಾಹ ಒದಗುತ್ತದೆ. ಕನ್ನಡಕ್ಕೆ ಕನ್ನಡ ನಾಡಿನಲ್ಲಿ ಹೆಚ್ಚು ಎಂದರೆ ಮೂರು ನಾಲ್ಕು ವಿಶ್ವವಿದ್ಯಾನಿಲಯ ಮಟ್ಟದ ಪ್ರಾಧ್ಯಪಕ ಸ್ಥಾನಗಳಿದ್ದರೆ ಉರ್ದು ಹಿಂದಿಯಂತಹ ಭಾಷೆಗಳಿಗೆ ಭಾರತದಲ್ಲಿಯೆ ನಾಲ್ವತ್ತೊ ಐವತ್ತೊ ಪ್ರಾಧ್ಯಾಪಕ ಸ್ಥಾನಗಳು ಮೀಸಲಾಗಿರುತ್ತವೆ. ಇನ್ನು ಇಂಗ್ಲಷಿನಂತಹ ಭಾಷೆಗಳಂತೂ ಕೇಳುವುದೇ ಬೇಡ. ಪ್ರಪಂಚದಲ್ಲಿ ಅದಕ್ಕೆ ಲಕ್ಷಾಂತರ ಪ್ರಾಧ್ಯಾಪಕ ಸ್ಥಾನಗಳಿವೆ. ಇರಲಿ, ನಮಗೇನೂ ಹೊಟ್ಟೆಕಿಚ್ಚಿಲ್ಲ. ಒಂದು ನಿದರ್ಶನಕ್ಕಾಗಿ ಅಂಕೆ ಅಂಶಗಳ ರೂಪದಲ್ಲಿ ನಾನು ಅದನ್ನು ಉಲ್ಲೇಖಿಸುತ್ತಿರುವುದರ ಉದ್ದೇಶ ಅಸೂಯೆಯಿಂದ ಸಂಭವಿಸಿದ್ದು ಎಂದು ಯಾರೂ ಭಾವಿಸಬಾರದು; ನಮ್ಮ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ತಮ್ಮ ಪ್ರಾದೇಶಿಕ ಭಾಷೆ ಸಾಹಿತ್ಯ ಇತಿಹಾಸ ಕಲಾ. ಸಂಸ್ಕೃತಿಗಳನ್ನು ನಿರ್ಲಕ್ಷಿಸಿದರೆ, ಅವುಗಳಿಗೆ ವಿಶೇಷ ಗಮನ ನೀಡಿ ಪ್ರೋತ್ಸಾಹಿಸದಿದ್ದರೆ ಅವಕ್ಕೆ ಉಳಿಗತಿಯಿಲ್ಲ; ಬೇರೆ ಯಾರೂ ಅವನ್ನು ಮೂಸಿಯೂ ನೋಡುವುದಿಲ್ಲ. ಅವು ದುರ್ಗತಿಗಿಳಿದು, ಅವಮಾನಿತವಾಗಿ ಇತರ ಸಶಕ್ತ ಮತ್ತು ಪ್ರಗತಿರರ ಭಾಷೆಗಳಿಟ್ಟ ಧಾಳಿಗೆ ಸಿಕ್ಕಿ, ಹೇಳ ಹೆಸರಿಲ್ಲದಂತೆ ವಿಲುಪ್ತವಾಗುತ್ತದೆ ಎಂಬ ಕಠೋರ ಸತ್ಯವನ್ನು ತಮ್ಮ ಗಮನಕ್ಕೆ ತರುವ ಆಶಯದಿಂದಲೆ ಈ ಕೆಲಸ ಮಾಡಿದ್ದೇನೆ: "ಏಳಿ! ಎಚ್ಚರಗೊಳ್ಳಿ! ಇಲ್ಲದಿದ್ದರೆ ಅನಂತಕಾಲವೂ ಪತಿತರಾಗಿ ಸರ್ವನಾಶವಾಗಿ ಹೋಗುತ್ತೇವೆ!"

ಈ ಪ್ರಾದೇಶಿಕತೆಯ ವೈಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತದ ಸಮಗ್ರತೆಗೂ ಐಕ್ಯತೆಗೂ ಹಾನಿ ಉಂಟಾಗುತ್ತದೆ ಎಂದು ಗೊಂದಲವೆಬ್ಬಿಸುವವರ ಹೃದಯದಲ್ಲಿರುವ ಗುಟ್ಟು ಏನು ಎಂಬುದನ್ನು ನಾವು ಹೊಕ್ಕು ನೋಡಿದರೆ ಆದರ ಹೊಳ್ಳು ಹೊರದೋರುತ್ತದೆ. ಅದರ ದುರುದ್ದೇಶ ಬಯಲಾಗುತ್ತದೆ. ಹಾಗೆ ಕೂಗಾಡುವರ ಒಲವೆಲ್ಲ ಸಾಮಾನ್ಯಗಾಗಿ ವಿದೇಶೀ ಭಾಷಿಯೊಂದರ ಪರವಾಗಿರುತ್ತದೆ. ಅವರೂ ಆ ವರ್ಗಕ್ಕೆ ಸೇರಿದವರೂ ಪರಕೀಯ ಆಳರಸರ ಕಾಲದಲ್ಲಿ ಆ ಭಾಷೆಯನ್ನು ಕಲಿತು ಅದರಿಂದ ಸ್ಥಾನಮಾನ ಲಾಭಗಳನ್ನು ಪಡೆದು ಕೃತಕೃತ್ಯರಾಗಿದ್ದಾರೆ. ಆ ಸ್ಥಾನ ಮಾನ ಲಾಭಗಳನ್ನು ಇನ್ನು ಮುಂದೆಯೂ ಉಳಿಸಿಕೊಂಡು ಹೋಗಲೂ, ಈಗಾಗಲೆ ಕಷ್ಟಪಟ್ಟು ಕಲಿತಿರುವ ಆ ಭಾಷೆಯನ್ನು ಮುಂದಯೂ ಮೊದಲಿನಂತೆಯೆ ಉಪಯೋಗಿಸುವಂತೆ ಮಾಡಿ, ಇತರರಿಗಿಂತ ಮುನ್ನವೆ ಸುಭಧ್ರವಾಗಿ ನೆಲಸಿ, ಅದರ ಲಾಭ ಪ್ರಯೋಜನ ಪಡೆಯಬೇಕೆಂದೂ ಅವರ ಅಂತರರಾಷ್ಟ್ರೀಯತಾ ವಾದದ ಹಿಂದಿರುವ ಹೃದಯರಹಸ್ಯವಾಗಿರುತ್ತದೆ. ಸಂಖ್ಯೆಯಲ್ಲಿ ನೋರಕ್ಕೆ ಒಂದರಷ್ಟೂ ಇಲ್ಲದ ಆ ವರ್ಗದ ಜನರಿಗೆ ಉಳಿದ ತೊಂಬತ್ತೊಂಬತ್ತರಷ್ಟು ಸಾಮಾನ್ಯ ಜನರ ಕ್ಷೇಮ ಚಿಂತನೆ ಬೇಡವಾಗಿದೆ.

ಆದರೆ ನಿಜವಾಗಿ ಆಲೋಚಿಸಿ ನೋಡಿದರೆ, ಈ ಪ್ರಾದೇಶಿಕ ವ್ಯಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತೀಯ ಐಕ್ಯತೆಗೆ ಒಂದಿನಿಂತೂ ವ್ಯಾಘಾತ ಒದಗುವುದಿಲ್ಲ ಎಂಬುದು ವಿದಿತವಾಗುತ್ತದೆ. ಏಕೆಂದರೆ ಭಾಷೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಬೇರೆ ಬೇರೆಯ ಪ್ರದೇಶ ಮತ್ತು ರಾಜ್ಯಗಳ ಕಲಾ ಮತ್ತು ಸಾಹಿತ್ಯಾದಿಗಳ ವಸ್ತು ಮತ್ತು ದೃಷ್ಟಿಗಳಲ್ಲಿ ಅಖಿಲ ಭಾರತೀಯವಾದ ಏಕೈಕ ಮೂಲ ಸಂಸ್ಕೃತಿಯ ಶೇಕಡ ತೊಂಬತ್ತೈದಕಿಂತಲೂ ಹೆಚ್ಚಾಗಿ ಸರ್ವಸಾಧಾರಣವಾಗಿದೆ. ಆ ಮೂಲಸಂಸ್ಕೃತಿಯ ವಜ್ರಬೆಸುಗೆ ನಮ್ಮ ಒಗ್ಗಟ್ಟನ್ನು ಎಂದೆಂದಿಗೂ ಒಡೆಯಲು ಬಿಡುವುದಿಲ್ಲ. ಅಷ್ಟೇ ಅಲ್ಲ. ನಮಗೀಗ ಒದಗಿರುವ ರಾಜಕೀಯ ಅಖಂಡತೆಗೂ ಐಕ್ಯತೆಗೂ ಮೂಲಕಾರಣವೂ ಆ ಅಖಿಲ

ಭಾರತೀಯವಾಗಿರುವ ಸಂಸ್ಕೃತಿಯ ಮೂಲದಲ್ಲಿಯೆ ಇದೆ ಎಂಬುದನ್ನು ನಮ್ಮ ಇತಿಹಾಸ ಎಂತಹ ಮಂದಮತಿಗೂ ಸುಗೋಚರವಾಗುವಂತೆ ಪ್ರದರ್ಶಿಸುತ್ತದೆ.

ಆ ವೈಶಿಷ್ಟ್ಯ ರಕ್ಷಣೆಯ ಕರ್ತವ್ಯನಿರ್ವಹಣೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಇತರ ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಮಾರ್ಗದರ್ಶನ ಮಾಡಲೂ ಅರ್ಹವಾಗುವಷ್ಟರ ಮಟ್ಟಿಗೆ ಸ್ನಾತಕೊತ್ತರ ವಿಭಾಗದಲ್ಲಿ ಕಾರ್ಯ ಪ್ರಾರಂಭಮಾಡಿ ಮುಂದುವರಿಯುತ್ತಿದೆ ಎಂಬುದನ್ನು ಕೇಳಿ ನನಗೆ ಮಹದಾನಂದವಾಗಿದೆ. ಬಹುಶಃ ನನಗೆ ಇಂದು ಅದು ತೋರುತ್ತಿರುವ ಗೌರವವೂ ನೀಡಿರುವ ಪ್ರಶಸ್ತಿಯೂ ಆ ವೈಶಿಷ್ಟ್ಯ ರಕ್ಷಣೆಯ ಕರ್ತವ್ಯದ ಒಂದು ಉಪಾಂಗವೆ ಆಗಿದೆ ಎಂದು ಭಾವಿಸಿದರೆ ತಪ್ಪಾಗುವುದಿಲ್ಲ. ಏಕೆಂದರೆ ಕನ್ನಡ ನಾಡುನುಡಿಗಳಿಗೆ ಸೇವೆ ಸಲ್ಲಿಸಿದವರಿಗೆ ಕನ್ನಡನಾಡಿನ ವಿಶ್ವವಿದ್ಯಾನಿಲಯಗಳಲ್ಲದೆ ಅನ್ಯರು ಏಕೆ ಗೌರವ ತೋರಿಸುತ್ತಾರೆ? ಅನ್ಯ ಭಾಷೆಯವರಿಗೆ ಆ ಸೇವೆಗೊತ್ತಾಗುವುದದರೂ ಹೇಗೆ? ಆದ್ದರಿಂದಲೆ ಕನ್ನಡ ನಾಡಿನ ಸಾಹಿತಿ ಸಂಶೋಧಕ ಕಲಾವಿದರುಗಳಿಗೆ ಅವರ ರಚನಾತ್ಮಕ ಕಾರ್ಯದಲ್ಲಿ ಧನರೂಪದ ನೆರವಿತ್ತು ಪ್ರೋತ್ಸಾಹಿಸುವುದರ ಜೋತೆಗೆ ಅವರ ಅತ್ಯುತ್ತಮ ಕೃತಿಗಳಿಗೆ ಮಾನರೂಪದ ಗೌರವವನ್ನು ತೋರುವುದೂ ಪೂರ್ವೋಕ್ತ ವೈಶಿಷ್ಟ್ಯ ರಕ್ಷಣೆಯ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಕಲ್ಲಾಗುತ್ತದೆ.

ಸ್ನಾತಕೋತ್ತರವಾದ ತನ್ನ ಸಂಶೋಧನಾಂಗದಲ್ಲಿ ಸರಿಯಾದ ದಿಕ್ಕಿಗೆ ಮುಖ ಮಾಡಿ ಅಡಿಯಿಟ್ಟಿರುವ ಕರ್ಣಾಟಕ ವಿಶ್ವವಿದ್ಯಾನಿಲಯವು ಸ್ನಾತಕಪೂರ್ವದ ತನ್ನ ಬೋಧನಾಂಗಲ್ಲಿಯೂ ಮತ್ತು ಕೆಲವೆ ವರ್ಷಗಳ ಹಿಂದೆ ಅದು ಪ್ರಾರಂಭಿಸಿರುವ ತನ್ನ ಪ್ರಸಾರಾಂಗದಲ್ಲಿಯೂ ಡಾ.ಪಾವಟೆಯವರಂಥ ಶಿಕ್ಷಣತಜ್ಞರ ಸಮರ್ಥ ಮಾರ್ಗದರ್ಶಿತ್ವದಲ್ಲಿ ಯಶಸ್ವಿಯಾಗಿ ಮುನ್ನಡೆಯುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆ ಯಶಸ್ಸಿನ ಕೈಗೂಡಿಕೆಗೆ ಬಹುಮಟ್ಟಿಗೆ ಕಾರಾಣವಾಗುತ್ತದೆ ಭಾಷಾ ಮಾಧ್ಯಮ ನೀತಿ. ಈ ವಿಚಾರವಾಗಿ ನಾನು ಅನೇಕ ಸಾರಿ ಮಾತನಾಡಿಯೂ ಬರೆದೂ ಇದ್ದೇನೆ. ಅವುಗಳಲ್ಲಿ ಕೆಲವಾದರೂ ಭಾಷಣಗಳೂ ಬರೆಹಗಳೂ ಅಚ್ಚಾಗಿ ಪುಸ್ತಕರೂಪದಲ್ಲಿ ದೊರೆಯುತ್ತವೆ; ನಾಡಿನ ಬಾಂಧವರಿಗೆ ಆ ವಿಚಾರವಾಗಿರುವ ನನ್ನ ಭಾವನೆಗಳೆಲ್ಲ ಸುಪರಿಚಿತವಾಗಿಯೆ ಇವೆ; ಆದ್ದರಿಂದ ಇಲ್ಲಿ ಆ ನಿರ್ವಿವಾದವಾಗಿರುವ ದೇಶಭಾಷಾ ಶಿಕ್ಷಣಮಾಧ್ಯಮದ ಶ್ರೇಯಸ್ಸನ್ನು ಕರಿತು ವಾದಕ್ಕಾಗಲಿ ವಿವರಕ್ಕಾಗಲಿ ನಾನು ಹೋಗುವಿದಿಲ್ಲ. ಅದು ಚರ್ವಿತ ಚರ್ವಣವಾದೀತು.

ಅದೂ ಅಲ್ಲದೆ ಸದ್ಯಕ್ಕೆ ಇಲ್ಲಿಗೆ ಅದು ಅಪ್ರಕೃತ. ಏಕೆಂದರೆ ಈ ವಿಶ್ವವಿದ್ಯಾನಿಲಯದ ವಿಧಾಯಕ ಸೂತ್ರಗಳನ್ನು ತನ್ನ ಭದ್ರಮುಷ್ಟಿಯಲ್ಲಿ ಹಿಡಿದಿರುವ ಅದರ ಅಧಿನೇತೃ ವೈಸ್ ಛಾನ್ಸಲರ್ ಡಾ.ಪಾವಟೆಯವರಿಗೂ ನನಗೂ ಆಯಾ ಪ್ರದೇಶಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ, ಮೂಲತತ್ವದಲ್ಲಾಗಲಿ ಅಥವಾ ಅಂತಿಮ ಧ್ಯೇಯದಲ್ಲಾಗಲಿ. ಕೆಲವು ವರ್ಷಗಳ ಹಿಂದೆಯೆ ನಾನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕನ್ನಡ ಮಾಧ್ಯಮವನ್ನು ಪ್ರಿಯೂನಿವರ್ಸಿಟಿ ಮತ್ತು ಡಿಗ್ರಿ ತರಗತಿಗಳಲ್ಲಿ ಪ್ರಾರಂಭಿಸಿ ಅದಕ್ಕೆ ಬೇಕಾದ ಪಠ್ಯಪುಸ್ತಕಗಳನ್ನು ಪ್ರಸಾರಾಂಗದ ಮೂಲಕ ಸಿದ್ಧಗೊಳಿಸಿದ ಕಾಲದ ತರುಣದಲ್ಲಿಯೆ ಅಖಿಲ ಭರತೀಯ ವೈಸ್‌ಛಾನ್ಸಲರುಗಳ ಸಭೆಯೊಂದರಲ್ಲಿ ಅದರ ಅಧ್ಯಕ್ಷಸ್ಥಾನದಿಂದ ಅವರು - ಪ್ರಾದೇಶಿಕ ಭಾಷೆಯೆ

ಶಿಕ್ಷಣಮಾಧ್ಯಮವಾಗಬೇಕು. ಅರ್ಥವಾಗದ ವಿದೇಶಿ ಭಾಷಾ ಮಾಧ್ಯಮವೇ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಾಗುವುದಕ್ಕೂ ಮತ್ತು ಇನ್ನಾವ ದೇಶದಲ್ಲಿಯೂ ಕಂಡುಬರದ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದಕ್ಕೂ ಮುಖ್ಯಕಾರಣವಾಗಿದೆ - ಎಂದೆಲ್ಲ ತಮ್ಮ ಭಾಷಣದಲ್ಲಿ ತುಸು ದೀರ್ಘವಾಗಿಯೇ ಪ್ರತಿಪಾದಿಸಿದ್ದರು. ಕನ್ನಡ ಶಿಕ್ಷಣಮಾಧ್ಯಮ ಇಲ್ಲಿ ಯಶಸ್ವಿಯಾಗದಿರುವುದಕ್ಕೆ ವಿದ್ಯಾರ್ಥಿಗಳೂ ಸಾರ್ವಜನಿಕರೂ ಸರಕಾರವೂ ಸಾಕಷ್ಟು ಪ್ರಮಾಣದಲ್ಲಿ ಸಹಕರಿಸದಿರುವುದೇ ಮುಖ್ಯ ಕಾರಣವಾಗಿದೆ ಎಂಬುದು ಅವರು ದೂರು. ಕರ್ಣಾಟಕ ವಿಶ್ವವಿದ್ಯಾನಿಲಯ ತನ್ನ ಕಡೆಯಿಂದ ಅದಕ್ಕೆ ಪೂರ್ಣ ಅನುಮತಿ ನೀಡಿದೆ ಎಂದು ಅವರು ಹೇಳುತ್ತಾರೆ. ಮುಂದಿನ ಮುಂದಾಳುತನ ವಹಿಸಲಿರುವ ಇಂದಿನ ವಿದ್ಯಾರ್ಥಿವರ್ಗ ದೃಢಮನಸ್ಸು ಮಾಡಿದರೆ ಸರಕಾರ ಮತ್ತು ಸಾರ್ವಜನಿಕರು ಹಿಂಬಾಲಿಸದೆ ಇರುವುದು ಸಾಧ್ಯವಿಲ್ಲ.

ವಿಶ್ವವಿದ್ಯಾನಿಲಯದ ಸಂಶೋಧನಾಂಗ ಮತ್ತು ಬೋಧನಾಂಗಗಳಿಗೆ ಯಾವ ವಿಧದಲ್ಲಿಯೂ ದ್ವಿತೀಯವಲ್ಲದ ಸ್ಥಾನ ಅದರ ಪ್ರಸಾರಾಂಗಕ್ಕೆ ಸಲ್ಲುತ್ತದೆ. ಅಷ್ಟೇ ಅಲ್ಲ. ಪ್ರಜಾಸತ್ತೆಯನ್ನೆ ತನ್ನ ರಾಜಕೀಯಕ್ಕೆ ತತ್ವದ ಅಡಿಗಲ್ಲನ್ನಾಗಿ ಮಾಡಿಕೊಂಡಿರುವ ನಮ್ಮ ಗಣರಾಜ್ಯದ ಅಭ್ಯುದಯವನ್ನು ಗಮನಿಸುವುದಾದರೆ ಪ್ರಸಾರಾಂಗಕ್ಕೆ ಬಹು ಮುಖ್ಯಸ್ಥಾನವನ್ನೆ ನೀಡಬೇಕಾದುದು ಅನಿವಾರ್ಯವಾಗುತ್ತದೆ. ಹಾಗಲ್ಲದೆ ನಮ್ಮ ಜನತಾ ಪ್ರಜಾಸತ್ತೆ ಯಶಸ್ವಿಯಾಗುವುದಿಲ್ಲ; ಸರ್ವೋದಯಕ್ಕೆ ಎಂದಿಗೂ ಜಯ ಲಭಿಸುವುದಿಲ್ಲ. ಮುಗಿಲಿನಿಂದ ಮಳೆಯನ್ನು ಪಡೆದು ನೀರನ್ನು ಸಂಗ್ರಹಿಸಿದ ಗಿರಿನೆತ್ತಿ, ಆ ನೀರನ್ನು ಹೊಳೆಗಳ ಮುಖಾಂತರ ಕೆಳನಾಡಿನ ಮೂಲೆಮೂಲೆಗೂ ಒಯ್ದು ಹಂಚಿ ಹುಲುಸಾದ ಬೆಳೆಗೆ ಕಾರಣವಾಗುವಂತೆ, ವಿಶ್ವವಿದ್ಯಾ ಉನ್ನತ ಕ್ಷೇತ್ರದಲ್ಲಿ ಸಂಗ್ರಹಗೊಂಡ ಜ್ಞಾನ ವಿಜ್ಞಾನಗಳು ಪ್ರಸಾರ ರೂಪದ ವಾಹಿನಿಗಳಲ್ಲಿ ಕೆಳಗಿಳಿದು ಸಂಚರಿಸಿ ಜನಸಾಮಾನ್ಯರ ಜೀವನಪ್ರವೇಶಮಾಡಿ, ಅಲ್ಲಿಯ ಮತಮೌಢ್ಯಾದಿ ಅಜ್ಞಾನವನ್ನು ಅಪಹರಿಸಿ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿಗಳನ್ನು ಸ್ಥಾಪಿಸದಿದ್ದರೆ, ರಾಜಕೀಯ ಮಾತ್ರವಾಗಿರುವ ನಮ್ಮ ಸ್ವಾತಂತ್ರ್ಯವು ಸಾಸ್ಕೃತಿಕವಾಗಿಯೂ ಸಫಲವಾಗುವುದು ಬರಿಯ ದಿಗಂತಾದರ್ಶವಾಗಿಯೆ ಉಳಿಯಬೇಕಾಗುತ್ತದೆ. ಬಹುಭಾಷೆ, ಬಹುಮತ, ಅನೇಕಾಚಾರ ಮೊದಲಾದ ಅಸಂಖ್ಯ ಭೇದಗಳಿಂದ ಕೂಡಿರುವ ನಮ್ಮ ರಾಷ್ಟ್ರಜೀವನ, ತನ್ನ ಏಕತ್ವವನ್ನು ರಕ್ಷಿಸಿಕೊಂಡು ಹೋಗಬೇಕಾದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರಬುದ್ಧಿಯ ಆಧಾರದ ಮೇಲೆ ನಿಲ್ಲುವ ಮನುಜಮತಕ್ಕೂ ಮತ್ತ ವಿಶ್ವ ಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅತ್ಯಂತ ಅವಶ್ಯಕ. ಸುಮಾರು ಮೂವತ್ತು ವರ್ಷಗಳ ಹಿಂದೆ ನನ್ನ ಲೇಖನಿಯಿಂದ ಹೊಮ್ಮಿದ ಒಂದು ಕವನ ನನ್ನ ಹೃದಯದ ಆ ಆಕಾಂಕ್ಷೆಯನ್ನು ಸಮರ್ಥವಾಗಿ ಘೋಷಿಸುತ್ತದೆ. ನಿಮ್ಮ ಕ್ಷಮೆ ಬೇಡಿ, ಅನುಮತಿ ಪಡೆದು ಅದನ್ನು ಓದುತ್ತೇನೆ: ಕಿವಿಗೊಟ್ಟು ಮಾತ್ರವಲ್ಲ, ಎದೆಗೊಟ್ಟು ಆಲೈಸುವಿರೆಂದು ಆಶಿಸುತ್ತೇನೆ;

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನ ಬುಡಮುಟ್ಟ ಕೀಳ ಬನ್ನಿ;
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ:
ಓ ಬನ್ನಿ, ಸೋದರರೆ, ಬೇಗ ಬನ್ನಿ!

ಅದೊ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ
ಪೊರೆಗಳಚಿ ಹೊರಟಿಹವು ಹೊಸ ಪಯಣಕೆ;
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆ ಕೊಳಕು ಬಣಗು ತೃಣಕೆ:
ಓ ಬನ್ನಿ, ಸೋದರರೆ, ರಾಷ್ಟ್ರರಣಕೆ!

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;
ಮತಿಯಿಂದ ದುಡಿಯರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತವ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ:
ಓ ಬನ್ನಿ, ಸೋದರರೆ, ವಿಶ್ವ ಪಥಕೆ!

ಮನುಜ ಮತ, ವಿಶ್ವ ಪಥ, ವಿಜ್ಞಾನ ದೃಷ್ಟಿ, ವಿಚಾರ ಬುದ್ಧಿ - ಇವು ನಮ್ಮ ಜನಹೃದಯದ ನಿತ್ಯಮಂತ್ರಗಳಾಗುವಂತೆಯೂ ನಮ್ಮ ಜನಮನದ ಧ್ಯೇಯೋಕ್ತಿಗಳಾಗುವಂತೆಯೂ ಮಾಡುವ ಕರ್ತವ್ಯ ವಿಶ್ವವಿದ್ಯಾನಿಲಯದ ಪ್ರಸಾರಂಗದ ಪಾಲಿಗೆ ಸೇರಿದ್ದು. ವಿಜ್ಞಾನ, ಸಾಹಿತ್ಯ, ಇತಿಹಾಸ, ರಾಜ್ಯಶಾಸ್ತ್ರ, ಮನಶ್ಶಾಸ್ತ್ರ, ತತ್ವಶಾಸ್ತ್ರ ಸಮಾಜಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರ ವಿಷಯದ ಅಧ್ಯಾಪಕರೂ ಈ ನಿಟ್ಟಿನಲ್ಲಿ ದುಡಿಯಬೇಕಾಗಿದೆ. ದೂರ, ಎತ್ತರದಲ್ಲಿ, ಸಾಮಾನ್ಯರಿಗೆ ಎಟುಕದ ಎತ್ತರದಲ್ಲಿ, ಸಾಮಾನ್ಯರಿಗೆ ನಿಲುಕದ ದೂರದಲ್ಲಿ, ಸಂಸ್ಕೃತದ ದುರ್ಗಮ ಶಿಖರಗಳಲ್ಲಿ, ಇಂಗ್ಲೀಷಿನ ಕಂಟಕಮಯ ಔನ್ನತ್ಯಗಳಲ್ಲಿ, ಅನ್ಯಭಾಷೆಗಳ ದುರ್ಜ್ಞೇಯ ಗುಹಾಂಗಣಗಳಲ್ಲಿ, ಶಿಲಾಪೀಠಸ್ಥವೋ ಸಿಂಹಾಸನಸ್ಥವೋ ತಪೋಮಗ್ನವೋ ಆಗಿರುವ ವಿಶ್ವವಿದ್ಯೆಯನ್ನು ನಾಡಿನ ಮೂಲೆಮೂಲೆಯ ಗುಡಿಸಲುಗಳಿಗೂ ಕೊಂಡೊಯ್ಯುವ ಅವಶ್ಯಕಾರ್ಯದಲ್ಲಿ ವಿಶ್ವವಿದ್ಯಾನಿಲಯಗಳು ತಮ್ಮ ಗರ್ವೋನ್ನತ ಉದಾಸೀನತೆಯನ್ನು ಕಿತ್ತೊಗೆದು, ಕಿರೀಟಶಿರ ತಾಟಸ್ಥ್ಯ ದೋರಣೆಯಿಂದ ಪಾರಾಗಿ, ಅಜ್ಞಾನ ಮೌಢ್ಯ ಅವಿವೇಕಗಳ ವಿರುದ್ಧ ನಾವು ಹೂಡುವ ಯುದ್ಧದಲ್ಲಿ ಇದು ತುರ್ತುಪರಿಸ್ಥಿತಿಯೆಂದು ಭಾವಿಸಿ, ಅಚಲ ನಿಷ್ಠೆಯಿಂದ ಅವಿಲಂಬವಾಗಿ ಮುಂದುವರಿಯಲಿ ಎಂದು ನಾನು ಈ ಸಂದರ್ಭದಲ್ಲಿ ಕವಿಹೃದಯ ಕಾತರತೆಯಿಂದ ವಿಜ್ಞಾಪಿಸುತ್ತೇನೆ.

ಮೇಲೆ ಹೇಳಿದ ಆ ಎಲ್ಲ ಕಾರ್ಯಸಾಧನೆಯ ಸಾಫಲ್ಯಕ್ಕಾಗಿ ಆಯಾ ಪ್ರದೇಶದ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಪ್ರಥಮ ಸ್ಥಾನಕ್ಕೆ ಎತ್ತಬೇಕು. ಇಂಗ್ಲೀಷನ್ನು ಈಗಿರುವ ಬಲಾತ್ತಾರದ ಸ್ಥಾನದಿಂದ ತೆಗೆದು ಹಾಕಿ ಐಚ್ಛಿಕಸ್ಥಾನದಲ್ಲಿಡಬೇಕು. ಪ್ರಾದೇಶಿಕ ಭಾಷೆಯೇ ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಬೇಕು. ತಾನು ಕೈಕೊಳ್ಳಲಿರುವ ಪ್ರಚಂಡ ಕಾರ್ಯಕ್ಕೆ ಸಮರ್ಪಕವಾಗಿ ಅರ್ಹವಾಗುವಂತೆ ಪ್ರಾದೇಶಿಕಭಾಷೆಯನ್ನು ನಿಶಿತ ಗೊಳಿಸಬೇಕು; ನಿಷ್ಕೃಷ್ಟಗೊಳಿಸಬೇಕು; ಸುಲಭಗೊಳಿಸಬೇಕು; ಸಾಮಾನ್ಯಗೊಳಿಸಬೇಕು: ಜಗತ್ತಿನ ಯಾವ ಜ್ಞಾನವಾಗಲಿ ವಿಜ್ಞಾನವಾಗಲಿ ಪ್ರಾದೇಶಿಕ ಭಾಷೆಯಲ್ಲಿ ಲಭಿಸುವಂತೆ ವಿಶ್ವವಿದ್ಯಾನಿಲಯಗಳು ತಮ್ಮ ಪ್ರವೀಣ ಅಧ್ಯಾಪಕ ವರ್ಗದವರಿಂದ ಗ್ರಂಥರಚನೆ ಮಾಡಿಸುವ ಸಕ್ರಮ

ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು; ಅಧ್ಯಾಪಕವರ್ಗದ ಸ್ವಭಾಷಾ ಪ್ರೇಮ ಒಂದರ ಮೇಲೆಯೇ ಭಾರಹಾಕದೆ ಸ್ಥಾನ ಮಾನ ಧನಾದಿ ಲೌಕಿಕ ಆಕರ್ಷಣೆಗಳಿಂದಲೂ ಅವರು ಪ್ರೋತ್ಸಾಹಿತರಾಗುವಂತೆ ಮಾಡಬೇಕು. ಆಗ ಮಾತ್ರವೇ ನಮ್ಮ ಪ್ರಜಾಸತ್ತೆ, ಜಗತ್ತಿನಲ್ಲೆಲ್ಲ ಅತ್ಯಂತ ಹಿರಿಯದೆಂದು ಪರಿಗಣಿತವಾಗಿರುವ ಭಾರತದ ಪ್ರಜಾಸತ್ತೆ, ತನ್ನ ಸರ್ವತೋಮುಖವಾದ ಅಭ್ಯುದಯವನ್ನು ಶೀಘ್ರದಲ್ಲಿಯೆ ಸಾಧಿಸಲು ಸಮರ್ಥವಾಗುತ್ತದೆ; ಸರ್ವೋದಯ ಸಿದ್ಧಾಂತವು ಸಾಮಾನ್ಯ ಜನಜೀವನದಲ್ಲಿ ನಿತ್ಯಧರ್ಮವಾಗಿ ಪರಿಣಮಿಸಿ ಲೋಕ ಕಲ್ಯಾಣವೂ ಸಾಧಿತವಾಗುತ್ತದೆ.

ಮಹಾಶಯರೆ, ತಿಳಿದವರಾದ ತಮ್ಮ ಮುಂದೆ ಇದನ್ನೆಲ್ಲ ಹೇಳಿ, ಬೆಟ್ಟಕ್ಕೆ ಕಲ್ಲು ಹೊತ್ತೆನೋ ಏನೋ? ಏಲಾದರಾಗಲಿ ನನ್ನ ಹೃದಯವನ್ನು ಸಮಹೃದಯರ ಮುಂದೆ ತೋಡಿಕೊಂಡಿದ್ದೇನೆ ಎಂಬ ತೃಪ್ತಿ ನನ್ನದಾಗಿದೆ. ಪ್ರಶಾಂತರಾಗಿ ಕುಳಿತು, ಆಲಿಸಿ, ನನಗೆ ಆ ತೃಪ್ತಿಯನ್ನೊದಗಿಸಿದುದಕ್ಕಾಗಿ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈ ಘನ ಗೌರವ ಪದವಿಯನ್ನಿತ್ತು ನನ್ನನ್ನು ಸತ್ಕರಿಸುದುದಕ್ಕಾಗಿ ಕರ್ಣಾಟಕ ವಿಶ್ವವಿದ್ಯಾನಿಲಯವನ್ನೂ, ವಿಶೇಷತಃ ಅದರ ಉಪಕುಲಪತಿಗಳಾಗಿರುವ ನನ್ನ ಸನ್ಮಿತ್ರ ಡಾ. ಪಾವಟೆಯವರನ್ನೂ ವಂದಿಸಿ ಬೇಳ್ಕೊಳ್ಳುತ್ತೇನೆ; ನಮಸ್ಕಾರ.

ಸಿರಗನ್ನಡಂಗಲ್ಗೆ! ಜಯಾಹಿಂದ್! ಜಯ್‌ಜಗತ್!

---

* ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಧಾರವಾಡ: ಫೆಬ್ರವರಿ ೧೭. ೧೯೬೬.

## ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ*

ತಮ್ಮ ವಿಶ್ವಾಸ ಔದಾರ್ಯಗಳು ನನಗೆ ದಯಾಪಾಲಿಸಿರುವ ಈ ಗೌರವ ಡಾಕ್ಟರೇಟ್ ಪದವಿಯ ಮಹತ್ ಕೃಪೆಗಾಗಿ ನಾನು ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಯನ್ನು ನಿವೇದಿಸುತ್ತೇನೆ. ಉತ್ತರಕರ್ಣಾಟಕದ ವಿದ್ಯಾ ಸಂಸ್ಕೃತಿ ಕೇಂದ್ರವಾದ ಈ ನಗರಕ್ಕೆ ಸುಮಾರು ಎರಡು ವರ್ಷಗಳ ಹಿಂದೆಯೆ ನಾನು ಆಗಮಿಸಿ ಕರ್ಣಾಟಕ ವಿಶ್ವವಿದ್ಯಾನಿಲಯದ ಈ ಗೌರವ ಪದವಿಯನ್ನು ಸ್ವೀಕರಿಸಬೇಕಾಗಿತ್ತು. ಆದರೆ ನಾನೇ ಕಾರಾಣವಾಗಿ ತಂದೊಡ್ಡಿದ ಕೆಲವು ಅಡೆತಡೆಗಳಿಂದ ಅದು ಮುಂದಕ್ಕೆ ಹೋಗಬೇಕಾಗಿ ಬಂತು.

ಅದರ ಏನು ಏತಕ್ಕೆ ಎಂಬುದನ್ನು ಕುರಿತು ಎರಡು ಮಾತು ಆಡಿದರೆ ಅಪ್ರಕೃತವಾಗಲಾರದು. ಅಪ್ರಕೃತವಾಗುವುದಿರಲಿ, ಅದನ್ನು ಈ ಸಂದರ್ಭದಲ್ಲಿ ಜನತೆಗೆ ತಿಳಿಸಬೇಕಾದ್ದೂ ತುಂಬ ಪ್ರಕೃತವೂ ಅಗಿದೆ ಎಂದು

ನನ್ನ ಅಭಿಪ್ರಾಯ ಆದ್ದರಿಂದ ನನಗೂ ವೈಸ್ ಛಾನ್ಸಲರ್ ಡಾ.ಪಾವಟೆಯವರಿಗೂ ನಡೆದ ಪತ್ರವ್ಯವಹಾರದ ಸಾರಾಂಶವನ್ನು ಇಲ್ಲಿ ಹೊರಗೆಡಹಲು ತಮ್ಮ ಅನುಮತಿ ಬೇಡುತ್ತೇನೆ.

ನಾನು ಪತ್ರ ಬರೆದೆ:

ಕರ್ಣಾಟಕ ವಿಶ್ವವಿದ್ಯಾನಿಲಯವು ನನ್ನನ್ನು ಗೌರವಿಸುತ್ತಿರುವುದಕ್ಕಾಗಿ ಕೃತಜ್ಞನಾಗಿದ್ದೇನೆ. ಅದರೆ ಈ ಗೌರವ ನನಗೆ ಯಾವ ಕಾರಣಕ್ಕಾಗಿ ಸಲ್ಲುತ್ತಿದೆಯೋ ಆ ಕಾರಣ ಅಥವಾ ಕಾರಣಗಳು ಇನ್ನೂ ತಮ್ಮ ಪರಿಪೂರ್ಣತೆಯನ್ನು ಸಾಧಿಸಿಲ್ಲ. ಆ ಪರಿಪೂರ್ಣತೆ ಸಾಧಿತವಾದ ಮೇಲೆ ಸಂತೋಷದಿಂದ ತಮ್ಮಲ್ಲಿಗೆ ಬಂದು ಗೌರವ ಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸಿತ್ತೇನೆ. ಅಲ್ಲಿಯವರೆಗೆ ದಯವಿಟ್ಟು ತಡೆಯಿರಿ, ನಾನೆ ವೈಯಕ್ತಿಕವಾಗಿ ಹಾಜರಾಗಬೇಕು ಎಂಬ ಆಶಯವಿದ್ದ ಪಕ್ಷದಲ್ಲಿ. ಹಾಗಿಲ್ಲದ ಪಕ್ಷದಲ್ಲಿ ನನ್ನ ಗೈರುಹಾಜರಿಯಲ್ಲಿಯೆ ತಾವು ಗೌರವ ಪದವಿಯನ್ನು ದಯಪಾಲಿಸ ಬಹುದು.

ಡಾ. ಪಾವಟೆಯವರು ಹಾಗೆಲ್ಲ ಸುಲಭದಲ್ಲಿ ಸೋಲೊಪ್ಪಿಕೊಳ್ಳುವವರಲ್ಲ ಎಂಬುದು ನಿಮಗೆಲ್ಲ ಅನುಭವತಃ ಗೊತ್ತಿರಬೇಕಲ್ಲವೆ? ಈ ವಿಶ್ವವಿದ್ಯಾನಿಲಯದ ಬೃಹದಾಕಾರದ ಮಹದ್ ಭವ್ಯ ಸೌಧಸ್ವರೂಪವೆ ಅದಕ್ಕೆ ಶೈಲಸಾಕ್ಷಿಯಾಗಿ ನಿಂತಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ.

ಅವರು ಉತ್ತರ ಬರೆದರು, ವಿಶೇಷ ಘಟಿಕೋತ್ಸವವನ್ನಾದರೂ ಏರ್ಪಡಿಸುತ್ತೇವೆ; ನೀವು ಅನುಕೂಲಮಾಡಿಕೊಂಡು ಬರಲೇಬೇಕು ಎಂದು.

ನನ್ನ ಆಗಮನಕ್ಕೆ ನಾಲ್ಕು ಗುರುತರ ಉಪಾಧಿಗಳನ್ನೆ ಒಡ್ಡಿದ್ದೆ. ಒಟ್ಟುಗೂಡಿದ ನಾಡಿನ ಹೆಸರು ಅಧಿಕೃತವಾಗಿ ಕರ್ನಾಟಕ ಎಂದಾಗಬೇಕೆಂದೂ, ಸರ್ಕಾರ ಕನ್ನಡವನ್ನು ಅಧಿಕೃತಭಾಷೆಯೆಂದು ಘೋಷಿಸಬೇಕೆಂದೂ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಬೇಕೆಂದೂ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ, ಸದ್ಯಕ್ಕೆ ಇಂಗ್ಲೀಷಿನ ಜೊತೆಗೆ, ಪ್ರಾದೇಶಿಕ ಭಾಷೆಯೂ ಶಿಕ್ಷಣ ಮಾಧ್ಯಮವಾಗಬೇಕೆಂದು.

ಆ ಆಶೆಗಳು ಕೈಗೂಡುವ ನಿರೀಕ್ಷೆಯಲ್ಲಿ ಒಂದು ವರುಷವೇ ಕಳೆಯಿತು.

ಮರುವರ್ಷ ಮತ್ತೆ ಬಂದಿತು ಉಪಕುಲಪತಿಗಳ ಪತ್ರಃ ಸದ್ಯದ ರಾಜಕೀಯ ಪರಿಸ್ಥಿಯನ್ನೂ, ರಾಜಕಾರಣಿಗಳ ಗೊಂದಲಮಯ ಮನೋಧರ್ಮವನ್ನೂ ಗಮನಿಸಿದರೆ ನಿಮ್ಮ ಆಶೆಗಳ ನೆರವೇರಿಕೆ ಇನ್ನೆಷ್ಟುಕಾಲ ಕಾಯಬೇಕಾಗುತ್ತದೆಯೋ? ಆದ್ದರಿಂದ ನಿಮ್ಮ ಗೈರುಹಾಜರಿಯಲ್ಲಿಯೆ ನಮ್ಮ ವಿಶ್ವವಿದ್ಯಾನಿಲಯವು ನಿಮಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಲು ನಿಶ್ಚಯಿಸಿದೆ ಎಂದು.

ಆದರೆ ಈ ಸಾರಿ ನಾನು ಅದಕ್ಕೆ ಸಿದ್ಧನಿರಲಿಲ್ಲ.

ಅಷ್ಟು ಹೊತ್ತಿಗಾಗಲೆ ನನ್ನ ನಾಲ್ಕು ಆಶೆಗಳಲ್ಲಿ ಎರಡು ಈಡೇರಿದ್ದುವು. ಕರ್ಣಾಟಕದ ಏಕೀಕರಣಕ್ಕೆ ರಾಜಕೀಯ ಭೂಮಿಕೆಯಲ್ಲಿ ದುಡಿದ ಹಿರಿಯ ವ್ಯಕ್ತಿಗಳಲ್ಲಿ ಅಗ್ರಮಾನ್ಯರಾಗಿರುವ ಶ್ರೀ ನಿಜಲಿಂಗಪ್ಪನವರು ಮುಖ್ಯ ಕರ್ಣಧಾರರಾಗಿ ಸರಕಾರದ ಸೂತ್ರಗಳನ್ನು ಕೈಗೆ ತೆಗೆದುಕೊಂಡ ತರುವಾಯ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಿ ಕನ್ನಡ ಅಧಿಕೃತ ಭಾಷೆ ಎಂದು ಘೋಷಿಸಿತವಾಗಿತ್ತು. ಪ್ರಾದೇಶಿಕ ಭಾಷೆಯ ಶಿಕ್ಷಣ ಮಾಧ್ಯಮವೂ ಅರ್ಧಂಬರ್ಧವಾಗಿ ತೇಪೆ ತೇಪೆಯಾಗಿ ಕೈಗೂಡುವ ಹಾದಿ ಹಿಡಿದಂತೆ ತೋರುತ್ತಿತ್ತು. ರಾಜ್ಯದ ಹೆಸರಿನ ವಿಷಯ ಮಾತ್ರ ವಿಧಾನ ಸಭೆಯ ಟಕ್ಕಾಟಿಕ್ಕಿಯಲ್ಲಿ ಅಧಿವೇಶನದಿಂದ ಅಧಿವೇಶನಕ್ಕೆ ಜೋಲಿ ಹೊಡೆಯುತ್ತಿತ್ತು, ಪಕ್ಷ ವಿಪಕ್ಷಗಳ ಕ್ರೀಡಾ ಸ್ಪರ್ಧೆಯೆಂಬಂತೆ.

ನಾನು ಡಾ.ಪಾವಟೆಯವರಿಗೆ ಬರೆದ ಮರು ಉತ್ತರದಲ್ಲಿ ಅವರು ಅಷ್ಟೊಂದು ನಿರಾಶರಾಗಬಾರದೆಂದೂ, ನಮ್ಮ ಆಶೆಗಳಲ್ಲಿ ಎರಡು ತಕ್ಕ ಮಟ್ಟಿಗೆ ಪೂರ್ಣವಾಗಿವೆಯೆಂದೂ, ಒಂದು ಕೈಗೂಡುವ ದಾರಿಯಲ್ಲಿ ಅರೆಬರೆಯಾದರೂ ಸಾಗಿದೆಯೆಂದೂ, ಇನ್ನೊಂದೂ ಇಂದೊ ನಾಳೆಯೊ ಕೈಗೂಡುವುದರಲ್ಲಿ ಸಂದೇಹವಿಲ್ಲವೆಂದೂ, ಸ್ವಲ್ಪ ಸಾವಧಾನವಾದರೂ ಚಿಂತೆಯಿಲ್ಲ, ಇನ್ನೊಂದು ವರ್ಷವಾದರೂ ಕಾದು ನೋಡುವ ಅವಕಾಶ ಕೊಡಬೇಕಂದೂ ಕ್ಷಮಾಯಾಚನೆ ಮಾಡಿದೆ.

ಅಷ್ಟರಲ್ಲಿ ದುರದೃಷ್ಟವಶಾತ್ ಭಾರತ ರಾಷ್ಟ್ರದ ಅಸ್ತಿತ್ವವನ್ನೆ ಅಲುಗಾಡಿಸುವಂತಹ ಪೀಡಾಕರ ಕ್ಷೋಭೆಗಳು ತಮ್ಮ ಕರಾಳ ಛಾಯೆಗಳಿಂದ ಸಮಗ್ರ ದೇಶಜೀವನವನ್ನೆ ಮುಸುಗಿ ಉತ್ತರ ಪಶ್ಚಿಮ ದಿಗಂತಗಳಲ್ಲಿ ಭಯಂಕರವಾಗಿ ಕಾಣಿಸಿಕೊಂಡು ಮೇಲ್ವಾಯ ತೋಡಗಿದುವು. ಜೋತೆಗೆ ರಾಷ್ಟ್ರದ ಜೀವಸ್ವರೂಪದಂತಿದ್ದ ನಾಯಕತ್ವವನ್ನೂ ವಿಧಿ ಕಸಿದುಕೊಂಡು ನಮ್ಮನ್ನು ದುಃಖ ಸಾಗರದಲ್ಲಿ ಮುಳುಗಿಸಿಬಿಟ್ಟಿತು. ರಕ್ಷಣೆ ಮತ್ತು ಆಹಾರದಂತಹ ಅತ್ಯಂತ ಪ್ರಮುಖ ಸಮಸ್ಯೆಗಳಿಂದಲೂ ರಾಷ್ಟ್ರ ಜೀವನ ತಾಡಿತವಾಗಿ ತತ್ತರಿಸಿತು. ಸಮಗ್ರ ರಾಷ್ಟ್ರಜೀವನದ ಸಾವು ಬದಿಕಿನ ಪ್ರಶ್ನೆಯ ಮುಂದೆ ನಮ್ಮ ಈ ಸಣ್ಣಪುಟ್ಟ ಆಶಾ ಸಮಸ್ಯೆಗಳೆಲ್ಲ ಬಾಲ ಮುದುರಿಕೊಂಡು ಮೂಲೆ ಸೇರಲೆಬಾಕಾಯಿತು.

ನಾನು ಒಳಗೊಳಗೆ ತುಸು ಹರ್ಷದಿಂದಲೆ ಭಾವಿಸಿದ್ದೆ, ಸದ್ಯಕ್ಕೆ ಡಾ.ಪಾವಟೆಯವರು ಗೌರವ ಪದವೀಪ್ರದಾನ ಸಮಾರಂಭವನ್ನು ಕೈಬಿಟ್ಟಿರಬೇಕು ಎಂದು. ಆದರೆ ಒಂದುದಿನ ಕರ್ಣಾಟಕ ವಿಶ್ವವಿದ್ಯಾನಿಲಯದ ದೃಢಮನಸ್ಸಿನ ಉಪಕುಲಪತಿಗಳ ಸುದೃಢ ವಿಗ್ರಹ ಮೈಸೂರಿನ ನಮ್ಮಮನೆ 'ಉದಯರವಿ' ಯಲ್ಲಿಯೆ ಪ್ರತ್ಯಕ್ಷವಾಯಿತು. ಒಂದೆರಡು ಘಂಟೆಯ ಕಾಲದ ಮಾತುತತೆಯಲ್ಲಿ ಅವರ ಸರಳತೆ, ಅವರ ವಿಶ್ವಾಸ, ಅವರ ಹೃತ್ಪೂರ್ವಕ ಪ್ರೇಮ, ಅವರ ಅದಮ್ಯ ಶ್ರದ್ಧೆ ಇವುಗಳು ನನ್ನ ಸಂಕಲ್ಪದ ನಿಷ್ಠುರತೆಯನ್ನು ಪಳಗಿಸಿದುವು. ಆ ಅಹೇತುಕವಾದ ಅಕ್ಕರೆಗೆ ನಾನು ಸೋಲದಿರಲು ಸಾಧ್ಯವಾಗಲಿಲ್ಲ. ಯಾರ ಅವಿರಾಮ ಶ್ರಮದಿಂದ, ಯಾರ ಅಚಂಚಲ ನಿಷ್ಠೇಯಿಂದ, ಯಾರ ಬಹುವರ್ಷಗಳ ಶ್ರದ್ಧಾಮಯ ತಪಸ್ಯೆ ಮತ್ತು ವ್ಯವಹಾರ ಚಾತುರ್ಯಗಳಿಂದ ಕರ್ಣಾಟಕ ವಿಶ್ವವಿದ್ಯಾನಿಲಯದಂತಹ ಸಹ್ಯಾಚಲಸ್ಪರ್ಧಿಯಾದ ಮಹಾಸಂಸ್ಥೆ ಕಟ್ಟಲ್ಪಟ್ಟು ಅಭಿವೃದ್ಧವಾಗಿ ಕೀರ್ತಿ ಶಿಖರಸ್ಥಾಯಿಯಾಗಿದೆಯೋ ಅಂತಹ ಮಹಾನುಭಾವರು ಉಪಕುಲಪತಿ ಸ್ಥಾನದಲ್ಲಿರುವಾಗ ಅವರ ಕೈಯಿಂದ ಗೌರವ ಪದವಿಯನ್ನು ಗೈರುಹಾಜರಿಯಲ್ಲಿ ಪಡೆಯುವ ದೌರ್ಭಾಗ್ಯಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಧಾರವಾಡಕ್ಕೆ ಬಂದು ವಿಶೇಷ ಘಟಿಕೋತ್ಸವದಲ್ಲಿ

ಗೌರವಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತೇನೆ ಎಂದು ಮಾತು ಕೊಟ್ಟಮೇಲೆಯೆ ಅವರು 'ಉದಯರವಿ'ಯ ಮೆಟ್ಟಿಲಿಳಿದರು.

ಅದರ ಪರಿಣಾಮವಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ತಾವು ಉತ್ಸಾಹಪೂರ್ವಕವಾಗಿ ನೀಡಿದ ಗೌರವಾದರಗಳ ಶ್ರೀಭಾರಕ್ಕೆ ನನ್ನ ಶಿರಸ್ಸು ಧನ್ಯತೆಯನ್ನು ಅನುಭವಿಸುತ್ತಿದ್ದರೂ ದೈನ್ಯದಿಂದ ಬಾಗುತ್ತಿದೆ; ವಿಶ್ವವಿದ್ಯಾನಿಲಯ ಭಗವತಿ ಶ್ರೀ ಸರಸ್ವತಿಯ ಅಡಿದಾವರೆಯ ಕೃಪೆಗೆ ಹಣೆಯಿಟ್ಟು ನಮಿಸುತ್ತಿದೆ.

ವಿಶ್ವವಿದ್ಯಾನಿಲಯಗಳು ಅಣೆಕಟ್ಟುಗಳಂತಲ್ಲ; ಕಾಗದದ, ಉಕ್ಕಿನ ಅಥವಾ ಹೆಂಚಿನ ಕಾರ್ಖಾನೆಗಳಂತಲ್ಲ. ಅವುಗಳಿಂದ ಸಿದ್ಧವಾಗುವ ತಯಾರಿಕೆಗಳನ್ನು ಕಾರ್ಖಾನೆಯ ಸಿದ್ಧ ಪದಾರ್ಥಗಳನ್ನು ಪರೀಕ್ಷಿಸುವಂತೆ ಪರಿಶೀಲಿಸಿ ಬೆಲೆಕಟ್ಟುವಂತಿಲ್ಲ. ಅವುಗಳಿಂದ ಹೊರಬೀಳುವ ವಸ್ತುಗಳ ಸಜೀವವಾದುವು; ಸಚೇತನವಾದುವು. ಒಂದೊಂದೂ ತನ್ನ ವಿಶಿಷ್ಟತೆಯಿಂದ ನಿರುಪಮವಾದುದು. ಸರ್ವಕ್ಕೂ ಸರ್ವ ಸಾಧಾರಣವಾದ ಕೆಲವು ಅಂಶಗಳು ಅನಿವಾರ್ಯವಾಗಿ ಇರುತ್ತವೆಯಾದರೂ, ಸಮಷ್ಟಿಯ ಐಕ್ಯತೆಯ ದೃಷ್ಟಿಯಿಂದ ಅವು ಇರಬೇಕಾದುದ್ದು ಅತ್ಯಂತ ಅವಶ್ಯಕವೆ ಆದರೂ, ಅವು ಹೇಂಚುಗಳಂತಾಗಲಿ ಉಕ್ಕಿನ ಉಪಕರಣಗಳಂತಾಗಲಿ ಕಾಗದದಂತಾಗಲಿ ಸರ್ವಸಮವಾಗಿರಲು ಸಾಧ್ಯವಿಲ್ಲ. ಜಡದಿಂದ ಭಿನ್ನವಾದ ಚೈತನ್ಯದ ಲಕ್ಷಣಗಳನ್ನು ಪರಿಭಾವಿಸುವ ಪಕ್ಷದಲ್ಲಿ, ಸರ್ವ ಸಮತ್ವ ಎಂಬುದು ಅವುಗಳಿಗೆ ಸಾವಿಗಿಂತಲೂ ಹೀನತರವಾಗದ ನೀರಸ ಸ್ಥಿತಿಯಾಗುತ್ತದೆ. ಅದರಲ್ಲಿಯೂ ವ್ಯಕ್ತಿಯ ವ್ಯಕ್ತಿತ್ವವನ್ನು ಪರಮ ಮೌಲ್ಯಗಳಲ್ಲಿ ಒಂದನ್ನಾಗಿ ಪರಿಗಣಿಸುವ ಪ್ರಜಾಸತ್ತೆಯಲ್ಲಂತೂ ವೃಷ್ಟಿಯ ವಿಶಿಷ್ಟತೆಗೆ ಸಮಷ್ಟಿಯ ಸಾಧಾರಣತೆಗೆ ಇರುವಷ್ಟೆ ಗೌರವ ಸಲ್ಲುತ್ತದೆ. ಆದ್ದರಿಂದ ಸಮಷ್ಟಿಯ ಕ್ಷೇಮವನ್ನು ಕಾಪಾಡುವ ಆತುರದಲ್ಲಿ ವ್ಯಷ್ಟಿಯನ್ನು ಬಲಿಗೊಟ್ಟು ವ್ಯಕ್ತಿಯ ವಿಶಿಷ್ಟತೆಯನ್ನು ನಿರ್ಲಕ್ಷಿಸಿದರೆ ಪ್ರಜಾಸತ್ತೆಯ ಬುಡಕ್ಕೆ ಕೊಡಲಿಯಿಟ್ಟಂತಾಗುತ್ತದೆ. ಹಸುರಾಗಿ, ವರ್ಣಮಯವಾಗಿ ವೈವಿಧ್ಯ ಸೌಂದರ್ಯಗಳಿಂದ ಕೂಡಿ ಕಂಗೊಳಿಸುವ ರಮಣೀಯ ಕಾನನಕ್ಕೆ ಬದಲಾಗಿ ನಿರ್ವಿಶಿಷ್ಟವೂ ಸರ್ವಸಮವೂ ನಿರ್ಜೀವವೂ ನೀರಸವೂ ಆಗಿರುವ ಕಟ್ಟಿಗೆಯ ರಾಶಿ ಸಿದ್ಧವಾಗುತ್ತದೆ.

ಸರ್ವಸಮರೂಪದ ವಸ್ತುಗಳನ್ನು ತಯಾರಿಸುವ ಮಹಾಕಾರ್ಖಾನ ಗಳನ್ನೂ ಯಂತ್ರೋಪಕರಣ ನಿರ್ಮಾಣದ ಬೃಹದ್ ಯಂತ್ರಸ್ಥಾವರಗಳನ್ನೂ ಮತ್ತು ಯಾವ ವಿಶಿಷ್ಟತೆಯನ್ನೂ ಅಪೇಕ್ಷಿಸದ ಶುದ್ಧ ವೈಜ್ಞಾನಿಕ ಸಂಸ್ಥೆಗಳನ್ನೂ ಸ್ಥಾಪಿಸುವಾಗ ನಾವು ಅಖಿಲ ಬಾರತಕ್ಕೂ ಸರ್ವಸಾಧಾರಣವಾದ ರೀತಿ, ನೀತಿ ಮತ್ತು ಧ್ಯೇಯಗಳನ್ನು ಅನುಸರಿಸುವಂತೆ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಲ್ಲಾಗಲಿ ಸಂಚಾಲನೆಯಲ್ಲಾಗಲಿ ಅನುಸರಿಸಿದರೆ ತಪ್ಪಾಗುತ್ತದೆ. ವ್ಯಷ್ಟಿಯ ವಿಶಿಷ್ಟತೆಯ ವಿಧ್ವಂಸನದಿಂದಲೆ ಸ್ಥಾಪಿತವಾಗುವ ಆ ಐಕ್ಯತೆ ಮರುಭೂಮಿಯ ಅಚೇತನ ಏಕರೂಪವಾಗುತ್ತದೆಯೆ ಹೊರತು ಅನೇಕ ವಿಧವಾದ ರಾಗಗಳಿಂದ ಸುಮಧುರವಾಗುವ ಸಂಗೀತದಂತೆ ಸಚೇತನ ಸುಸ್ವರಮೇಲವಾಗುವುದಿಲ್ಲ.

ಅಖಿಲ ಭಾರತದ ಸಮಗ್ರತೆಯ ಮತ್ತು ಭಾವೈಕ್ಯದ ಸಾಧನೆಗಾಗಿ ಬೇರೆ ಬೇರೆಯ ಭಾಷಾ ಪ್ರದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಇರುವ ಮತ್ತು ಮುಂದೆ ಬರುವ ಎಲ್ಲ ವಿಶ್ವವಿದ್ಯಾನಿಲಯಗಳೂ, ಒಂದರಂತೆ ಒಂದು, ಅಚ್ಚೊತ್ತಿದಂತೆ ಇರಬೇಕು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಕಾರ್ಖಾನೆಯ ರೂಪದ ಮತ್ತು ತಾಂತ್ರಿಕ ಲಕ್ಷಣದ ಶುದ್ಧ

ವೈಜ್ಞಾನಿಕ ಸಂಸ್ಥೆಗಳಿಗೆ ಆ ತತ್ವ ಅನ್ವಯವಾಗುವುದರಲ್ಲಿ ಅರ್ಥವಿದೆ. ವಿಶ್ವವಿದ್ಯಾನಿಲಯಗಳಲ್ಲಿಯೂ ಶುದ್ಧ ವಿಜ್ಞಾನ ವಿಷಯಕವಾದ ವಿಭಾಗಗಳಿಗೂ ಅದು ಬಹುಮಟ್ಟಿಗೆ ಅನ್ವಯವಾಗುತ್ತದೆ. ಆದರೆ ಭಾಷಾ ಸಾಹಿತ್ಯ ಸಂಸ್ಕೃತಿ ದರ್ಶನ ಇತಿಹಾಸಾದಿ ಹೃದಯ ಸಂಸ್ಕಾರ ಮತ್ತು ಬುದ್ಧಿ ವಿಚಾರಗಳಿಗೆ ಸಂಬಂದಪಟ್ಟ ಮಾನವೀಯ ಶಾಸ್ತ್ರ ಭಾಗಗಳಿಗೆ ಆ ಯಾಂತ್ರಿಕತ್ವ ಒಂದಿನಿತೂ ಅನ್ವಯವಾಗುವುದಿಲ್ಲ. ವ್ಯಕ್ತಿರೂಪದ ವ್ಯಷ್ಟಿಯ ವ್ಯಕ್ತಿತ್ವಕ್ಕೂ ಮತ್ತು ಹೃದಯ ಬುದ್ಧಿ ಸಂಸ್ಕಾರಗಳಿಗೂ ವೈಜ್ಞಾನಿಕ ವಿಷಯಗಳಿಗೆ ಇಲ್ಲದ ಒಂದು ವಿಶಿಷ್ಟತೆ ಇರುತ್ತದೆ. ಆ ವೈಶಿಷ್ಟ್ಯದ ಪಾಲನೆ, ರಕ್ಷಣೆ, ಪೊಷಣೆ, ಸಂಶೋಧನೆ ಮತ್ತು ಪ್ರಸಾರ ಇವು ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳ ಆದ್ಯಕರ್ತವ್ಯವಾಗಿರಬೇಕು. ಆ ವಿಚಾರದಲ್ಲಿ ಔದಾಸಿನ್ಯ ಸಲ್ಲದು. ತಿರಸ್ಕಾರವಂತೂ ಅಕ್ಷಮ್ಯ ಜನತಾದ್ರೋಹವಾಗುತ್ತದೆ.

ಭಾಷಾನುಗಣವಾಗಿ ರಾಜ್ಯಗಳನ್ನು ವಿಂಗಡಿಸಿದಾಗಲೇ ನಮ್ಮ ಪ್ರಜಾಸತ್ತಾತ್ಮಕವಾದ ರಾಜ್ಯಾಂಗ ಈ ಪ್ರಾದೇಶಿಕ ವ್ಯಶಿಷ್ಟ್ಯವನ್ನು ಕಾನೂನುಬದ್ಧವಾಗಿಯೆ ಗುರುತಿಸಿದಂತಾಗಿದೆ. ಆದ್ದರಿಂದ ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಆಯಾ ಪ್ರದೇಶದ ಭಾಷಾ ಸಾಹಿತ್ಯ ಕಲಾ ಸಂಸ್ಕೃತಿಗಳಿಗೆ ವಿಶೇಷ ಪ್ರೋತ್ಸಾಹವಿಯುವುದು ಅತ್ಯಗತ್ಯ. ಏಕೆಂದರೆ ಆಯಾ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಆ ಕೆಲಸವನ್ನು ಕೈಕೊಳ್ಳದಿದ್ದರೆ ಪ್ರಪಂಚದ ಇನ್ನಾವ ವಿದ್ಯಾಸಂಸ್ಥೆಗಳೂ ಅದನ್ನು ಕೈಕೊಳ್ಳುವುದಿಲ್ಲ. ಕರ್ಣಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳು ಕನ್ನಡ ನುಡಿಯ, ಸಾಹಿತ್ಯದ, ಇತಿಹಾಸದ, ಕಲೆಯ ಮತ್ತು ಸಂಸ್ಕೃತಿಯ ರಕ್ಷಣೆ ಪೋಷಣೆಗಳನ್ನು ನಿರ್ಲಕ್ಷಿಸಿದರೆ ಅದು ಕಡಲ ಪಾಲಾದಂತೆಯೆ. ಇಂಗ್ಲಿಷ್ ಭಾಷೆ ತನ್ನ ಅಭಿವೃದ್ಧಿಗೆ ಕರ್ಣಾಟಕ ಅಥವಾ ಮೈಸೂರು ವಿಶ್ವವಿದ್ಯಾನಿಲಯಗಳ ಕೈ ಹಾರೈಸುವುದಿಲ್ಲ. ಜಗತ್ತಿನ ಇತರ ಸಾವಿರಾರು ಸಂಸ್ಥೆಗಳಲ್ಲಿ ಅದು ಸುಪುಷ್ಟವಾಗಿ ಮುಂದುವರಿದೇವರಿಯುತ್ತದೆ; ಭೌತ ರಸಾಯನಾದಿ ವಿಜ್ಞಾನ ವಿಷಯಗಳ ಸಂಶೋಧನೆ ಇಲ್ಲಿ ನಡೆಯದಿದ್ದರೆ ಜಗತ್ತಿನ ಇತರ ಲಕ್ಷಾಂತರ ಸಂಸ್ಥೆಗಳಲ್ಲಿ ಅದು ನಡೆಯುತ್ತಲೆ ಇರುತ್ತದೆ. ಹಿಂದಿಗೆ ಅದರ ಏಳಿಗೆಗಾಗಿ ಇಲ್ಲಿ ನಾವು ಪ್ರೋತ್ಸಾಹವೀಯಬೇಕಾಗಿಲ್ಲ; ಭಾರತದ ಸಾವಿರಾರು ಇತರ ಕಡೆಗಳಲ್ಲಿ ಅದು ರಕ್ಷಿತ ಪೋಷಿತವಾಗುತ್ತಿದೆ. ಕಡೆಗೆ ಉರ್ದುವಿನಂತಹ ಭಾಷೆಗಿರುವ ಆ ರಕ್ಷೆ ನಮ್ಮ ಕನ್ನಡಕ್ಕಾಗಲಿ, ಮರಾಠಿ, ತಮಿಳು, ಮಲೆಯಾಳಗಳಿಗಾಗಲಿ ಇಲ್ಲ. ಪಾಕಿಸ್ಥಾನದ ಮಾತಿರಲಿ, ಭಾರತದಲ್ಲಿಯೆ ಇರುವ ನಾಲ್ವತ್ತೈವತ್ತು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ವಿಶ್ವವಿದ್ಯಾನಿಲಯದಲ್ಲಿಯೂ ಅದಕ್ಕೆ ಅಯಾ ಪ್ರಾದೇಶಿಕ ಭಾಷೆಗಳಿಗಿರುವಂತೆಯೆ ಸಮಾನಸ್ಥಾನ ಒದಗಿ, ಒಟ್ಟು ಮೊತ್ತದಲ್ಲಿ ನೋಡಿದರೆ ಅದಕ್ಕೆ ಪ್ರಾದೇಶಿಕ ಭಾಷೆಗಳಿಗೆ ಲಭಿಸುವ ಪ್ರೋತ್ಸಾಹಕ್ಕೆ ನಾಲ್ವತ್ತೈವತ್ತರಷ್ಟು ಹೆಚ್ಚಿನ ಪ್ರೋತ್ಸಾಹ ಒದಗುತ್ತದೆ. ಕನ್ನಡಕ್ಕೆ ಕನ್ನಡ ನಾಡಿನಲ್ಲಿ ಹೆಚ್ಚು ಎಂದರೆ ಮೂರು ನಾಲ್ಕು ವಿಶ್ವವಿದ್ಯಾನಿಲಯ ಮಟ್ಟದ ಪ್ರಾಧ್ಯಪಕ ಸ್ಥಾನಗಳಿದ್ದರೆ ಉರ್ದು ಹಿಂದಿಯಂತಹ ಭಾಷೆಗಳಿಗೆ ಭಾರತದಲ್ಲಿಯೆ ನಾಲ್ವತ್ತೊ ಐವತ್ತೊ ಪ್ರಾಧ್ಯಾಪಕ ಸ್ಥಾನಗಳು ಮೀಸಲಾಗಿರುತ್ತವೆ. ಇನ್ನು ಇಂಗ್ಲಷಿನಂತಹ ಭಾಷೆಗಳಂತೂ ಕೇಳುವುದೇ ಬೇಡ. ಪ್ರಪಂಚದಲ್ಲಿ ಅದಕ್ಕೆ ಲಕ್ಷಾಂತರ ಪ್ರಾಧ್ಯಾಪಕ ಸ್ಥಾನಗಳಿವೆ. ಇರಲಿ, ನಮಗೇನೂ ಹೊಟ್ಟೆಕಿಚ್ಚಿಲ್ಲ. ಒಂದು ನಿದರ್ಶನಕ್ಕಾಗಿ ಅಂಕೆ ಅಂಶಗಳ ರೂಪದಲ್ಲಿ ನಾನು ಅದನ್ನು ಉಲ್ಲೇಖಿಸುತ್ತಿರುವುದರ ಉದ್ದೇಶ ಅಸೂಯೆಯಿಂದ ಸಂಭವಿಸಿದ್ದು ಎಂದು ಯಾರೂ ಭಾವಿಸಬಾರದು; ನಮ್ಮ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ತಮ್ಮ ಪ್ರಾದೇಶಿಕ ಭಾಷೆ ಸಾಹಿತ್ಯ ಇತಿಹಾಸ ಕಲಾ. ಸಂಸ್ಕೃತಿಗಳನ್ನು ನಿರ್ಲಕ್ಷಿಸಿದರೆ, ಅವುಗಳಿಗೆ ವಿಶೇಷ ಗಮನ ನೀಡಿ

ಪ್ರೋತ್ಸಾಹಿಸದಿದ್ದರೆ ಅವಕ್ಕೆ ಉಳಿಗತಿಯಿಲ್ಲ; ಬೇರೆ ಯಾರೂ ಅವನ್ನು ಮೂಸಿಯೂ ನೋಡುವುದಿಲ್ಲ. ಅವು ದುರ್ಗತಿಗಿಳಿದು, ಅವಮಾನಿತವಾಗಿ ಇತರ ಸಶಕ್ತ ಮತ್ತು ಪ್ರಗತಿರರ ಭಾಷೆಗಳಿಟ್ಟ ಧಾಳಿಗೆ ಸಿಕ್ಕಿ, ಹೇಳ ಹೆಸರಿಲ್ಲದಂತೆ ವಿಲುಪ್ತವಾಗುತ್ತದೆ ಎಂಬ ಕಠೋರ ಸತ್ಯವನ್ನು ತಮ್ಮ ಗಮನಕ್ಕೆ ತರುವ ಆಶಯದಿಂದಲೆ ಈ ಕೆಲಸ ಮಾಡಿದ್ದೇನೆ: "ಏಳಿ! ಎಚ್ಚರಗೊಳ್ಳಿ! ಇಲ್ಲದಿದ್ದರೆ ಅನಂತಕಾಲವೂ ಪತಿತರಾಗಿ ಸರ್ವನಾಶವಾಗಿ ಹೋಗುತ್ತೇವೆ!"

ಈ ಪ್ರಾದೇಶಿಕತೆಯ ವೈಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತದ ಸಮಗ್ರತೆಗೂ ಐಕ್ಯತೆಗೂ ಹಾನಿ ಉಂಟಾಗುತ್ತದೆ ಎಂದು ಗೊಂದಲವೆಬ್ಬಿಸುವವರ ಹೃದಯದಲ್ಲಿರುವ ಗುಟ್ಟು ಏನು ಎಂಬುದನ್ನು ನಾವು ಹೊಕ್ಕು ನೋಡಿದರೆ ಆದರ ಹೊಳ್ಳು ಹೊರದೋರುತ್ತದೆ. ಅದರ ದುರುದ್ದೇಶ ಬಯಲಾಗುತ್ತದೆ. ಹಾಗೆ ಕೂಗಾಡುವರ ಒಲವೆಲ್ಲ ಸಾಮಾನ್ಯಗಾಗಿ ವಿದೇಶೀ ಭಾಷಿಯೊಂದರ ಪರವಾಗಿರುತ್ತದೆ. ಅವರೂ ಆ ವರ್ಗಕ್ಕೆ ಸೇರಿದವರೂ ಪರಕೀಯ ಆಳರಸರ ಕಾಲದಲ್ಲಿ ಆ ಭಾಷೆಯನ್ನು ಕಲಿತು ಅದರಿಂದ ಸ್ಥಾನಮಾನ ಲಾಭಗಳನ್ನು ಪಡೆದು ಕೃತಕೃತ್ಯರಾಗಿದ್ದಾರೆ. ಆ ಸ್ಥಾನ ಮಾನ ಲಾಭಗಳನ್ನು ಇನ್ನು ಮುಂದೆಯೂ ಉಳಿಸಿಕೊಂಡು ಹೋಗಲೂ, ಈಗಾಗಲೆ ಕಷ್ಟಪಟ್ಟು ಕಲಿತಿರುವ ಆ ಭಾಷೆಯನ್ನು ಮುಂದಯೂ ಮೊದಲಿನಂತೆಯೆ ಉಪಯೋಗಿಸುವಂತೆ ಮಾಡಿ, ಇತರರಿಗಿಂತ ಮುನ್ನವೆ ಸುಭದ್ರವಾಗಿ ನೆಲಸಿ, ಅದರ ಲಾಭ ಪ್ರಯೋಜನ ಪಡೆಯಬೇಕೆಂದೂ ಅವರ ಅಂತರರಾಷ್ಟ್ರೀಯತಾ ವಾದದ ಹಿಂದಿರುವ ಹೃದಯರಹಸ್ಯವಾಗಿರುತ್ತದೆ. ಸಂಖ್ಯೆಯಲ್ಲಿ ನೋರಕ್ಕೆ ಒಂದರಷ್ಟೂ ಇಲ್ಲದ ಆ ವರ್ಗದ ಜನರಿಗೆ ಉಳಿದ ತೊಂಬತ್ತೊಂಬತ್ತರಷ್ಟು ಸಾಮಾನ್ಯ ಜನರ ಕ್ಷೇಮ ಚಿಂತನೆ ಬೇಡವಾಗಿದೆ.

ಆದರೆ ನಿಜವಾಗಿ ಆಲೋಚಿಸಿ ನೋಡಿದರೆ, ಈ ಪ್ರಾದೇಶಿಕ ವ್ಯಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತೀಯ ಐಕ್ಯತೆಗೆ ಒಂದಿನಿಂತೂ ವ್ಯಾಘಾತ ಒದಗುವುದಿಲ್ಲ ಎಂಬುದು ವಿದಿತವಾಗುತ್ತದೆ. ಏಕೆಂದರೆ ಭಾಷೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಬೇರೆ ಬೇರೆಯ ಪ್ರದೇಶ ಮತ್ತು ರಾಜ್ಯಗಳ ಕಲಾ ಮತ್ತು ಸಾಹಿತ್ಯಾದಿಗಳ ವಸ್ತು ಮತ್ತು ದೃಷ್ಟಿಗಳಲ್ಲಿ ಅಖಿಲ ಭಾರತೀಯವಾದ ಏಕೈಕ ಮೂಲ ಸಂಸ್ಕೃತಿಯ ಶೇಕಡ ತೊಂಬತ್ತೈದಕಿಂತಲೂ ಹೆಚ್ಚಾಗಿ ಸರ್ವಸಾಧಾರಣವಾಗಿದೆ. ಆ ಮೂಲಸಂಸ್ಕೃತಿಯ ವಜ್ರಬೆಸುಗೆ ನಮ್ಮ ಒಗ್ಗಟ್ಟನ್ನು ಎಂದೆಂದಿಗೂ ಒಡೆಯಲು ಬಿಡುವುದಿಲ್ಲ. ಅಷ್ಟೇ ಅಲ್ಲ. ನಮಗೀಗ ಒದಗಿರುವ ರಾಜಕೀಯ ಅಖಂಡತೆಗೂ ಐಕ್ಯತೆಗೂ ಮೂಲಕಾರಣವೂ ಆ ಅಖಿಲ ಭಾರತೀಯವಾಗಿರುವ ಸಂಸ್ಕೃತಿಯ ಮೂಲದಲ್ಲಿಯೆ ಇದೆ ಎಂಬುದನ್ನು ನಮ್ಮ ಇತಿಹಾಸ ಎಂತಹ ಮಂದಮತಿಗೂ ಸುಗೋಚರವಾಗುವಂತೆ ಪ್ರದರ್ಶಿಸುತ್ತದೆ.

ಆ ವೃಶಿಷ್ಟ್ಯ ರಕ್ಷಣೆಯ ಕರ್ತವ್ಯನಿರ್ವಹಣೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಇತರ ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಮಾರ್ಗದರ್ಶನ ಮಾಡಲೂ ಅರ್ಹವಾಗುವಷ್ಟರ ಮಟ್ಟಿಗೆ ಸ್ನಾತಕೊತ್ತರ ವಿಭಾಗದಲ್ಲಿ ಕಾರ್ಯ ಪ್ರಾರಂಭಮಾಡಿ ಮುಂದುವರಿಯುತ್ತಿದೆ ಎಂಬುದನ್ನು ಕೇಳಿ ನನಗೆ ಮಹದಾನಂದವಾಗಿದೆ. ಬಹುಶಃ ನನಗೆ ಇಂದು ಅದು ತೋರುತ್ತಿರುವ ಗೌರವವೂ ನೀಡಿರುವ ಪ್ರಶಸ್ತಿಯೂ ಆ ವೈಶಿಷ್ಟ್ಯ ರಕ್ಷಣೆಯ ಕರ್ತವ್ಯದ ಒಂದು ಉಪಾಂಗವೆ ಆಗಿದೆ ಎಂದು ಭಾವಿಸಿದರೆ ತಪ್ಪಾಗುವುದಿಲ್ಲ. ಏಕೆಂದರೆ ಕನ್ನಡ ನಾಡುನುಡಿಗಳಿಗೆ ಸೇವೆ ಸಲ್ಲಿಸಿದವರಿಗೆ ಕನ್ನಡನಾಡಿನ ವಿಶ್ವವಿದ್ಯಾನಿಲಯಗಳಲ್ಲದೆ ಅನ್ಯರು ಏಕೆ ಗೌರವ ತೋರಿಸುತ್ತಾರೆ? ಅನ್ಯ ಭಾಷೆಯವರಿಗೆ ಆ

ಸೇವೆಗೊತ್ತಾಗುವುದದರೂ ಹೇಗೆ? ಆದ್ದರಿಂದಲೆ ಕನ್ನಡ ನಾಡಿನ ಸಾಹಿತಿ ಸಂಶೋಧಕ ಕಲಾವಿದರುಗಳಿಗೆ ಅವರ ರಚನಾತ್ಮಕ ಕಾರ್ಯದಲ್ಲಿ ಧನರೂಪದ ನೆರವಿತ್ತು ಪ್ರೋತ್ಸಾಹಿಸುವುದರ ಜೋತೆಗೆ ಅವರ ಅತ್ಯುತ್ತಮ ಕೃತಿಗಳಿಗೆ ಮಾನರೂಪದ ಗೌರವವನ್ನು ತೋರುವುದೂ ಪೂರ್ವೋಕ್ತ ವೈಶಿಷ್ಟ್ಯ ರಕ್ಷಣೆಯ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಕಲ್ಲಾಗುತ್ತದೆ.

ಸ್ನಾತಕೋತ್ತರವಾದ ತನ್ನ ಸಂಶೋಧನಾಂಗದಲ್ಲಿ ಸರಿಯಾದ ದಿಕ್ಕಿಗೆ ಮುಖ ಮಾಡಿ ಅಡಿಯಿಟ್ಟಿರುವ ಕರ್ಣಾಟಕ ವಿಶ್ವವಿದ್ಯಾನಿಲಯವು ಸ್ನಾತಕಪೂರ್ವದ ತನ್ನ ಬೋಧನಾಂಗಲ್ಲಿಯೂ ಮತ್ತು ಕೆಲವೆ ವರ್ಷಗಳ ಹಿಂದೆ ಅದು ಪ್ರಾರಂಭಿಸಿರುವ ತನ್ನ ಪ್ರಸಾರಾಂಗದಲ್ಲಿಯೂ ಡಾ.ಪಾವಟೆಯವರಂಥ ಶಿಕ್ಷಣತಜ್ಞರ ಸಮರ್ಥ ಮಾರ್ಗದರ್ಶಿತ್ವದಲ್ಲಿ ಯಶಸ್ವಿಯಾಗಿ ಮುನ್ನಡೆಯುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆ ಯಶಸ್ಸಿನ ಕೈಗೂಡಿಕೆಗೆ ಬಹುಮಟ್ಟಿಗೆ ಕಾರಾಣವಾಗುತ್ತದೆ ಭಾಷಾ ಮಾಧ್ಯಮ ನೀತಿ. ಈ ವಿಚಾರವಾಗಿ ನಾನು ಅನೇಕ ಸಾರಿ ಮಾತನಾಡಿಯೂ ಬರೆದೂ ಇದ್ದೇನೆ. ಅವುಗಳಲ್ಲಿ ಕೆಲವಾದರೂ ಭಾಷಣಗಳೂ ಬರೆಹಗಳೂ ಅಚ್ಚಾಗಿ ಪುಸ್ತಕರೂಪದಲ್ಲಿ ದೊರೆಯುತ್ತವೆ; ನಾಡಿನ ಬಾಂಧವರಿಗೆ ಆ ವಿಚಾರವಾಗಿರುವ ನನ್ನ ಭಾವನೆಗಳೆಲ್ಲ ಸುಪರಿಚಿತವಾಗಿಯೆ ಇವೆ; ಆದ್ದರಿಂದ ಇಲ್ಲಿ ಆ ನಿರ್ವಿವಾದವಾಗಿರುವ ದೇಶಭಾಷಾ ಶಿಕ್ಷಣಮಾಧ್ಯಮದ ಶ್ರೇಯಸ್ಸನ್ನು ಕರಿತು ವಾದಕ್ಕಾಗಲಿ ವಿವರಕ್ಕಾಗಲಿ ನಾನು ಹೋಗುವಿದಿಲ್ಲ. ಅದು ಚರ್ವಿತ ಚರ್ವಣವಾದೀತು.

ಅದೂ ಅಲ್ಲದೆ ಸದ್ಯಕ್ಕೆ ಇಲ್ಲಿಗೆ ಅದು ಅಪ್ರಕೃತ. ಏಕೆಂದರೆ ಈ ವಿಶ್ವವಿದ್ಯಾನಿಲಯದ ವಿಧಾಯಕ ಸೂತ್ರಗಳನ್ನು ತನ್ನ ಭದ್ರಮುಷ್ಟಿಯಲ್ಲಿ ಹಿಡಿದಿರುವ ಅದರ ಅಧಿನೇತ್ರ ವೈಸ್ ಛಾನ್ಸಲರ್ ಡಾ.ಪಾವಟೆಯವರಿಗೂ ನನಗೂ ಆಯಾ ಪ್ರದೇಶಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ, ಮೂಲತತ್ವದಲ್ಲಾಗಲಿ ಅಥವಾ ಅಂತಿಮ ಧ್ಯೇಯದಲ್ಲಾಗಲಿ. ಕೆಲವು ವರ್ಷಗಳ ಹಿಂದೆಯೆ ನಾನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕನ್ನಡ ಮಾಧ್ಯಮವನ್ನು ಪ್ರಿಯೂನಿವರ್ಸಿಟಿ ಮತ್ತು ಡಿಗ್ರಿ ತರಗತಿಗಳಲ್ಲಿ ಪ್ರಾರಂಭಿಸಿ ಅದಕ್ಕೆ ಬೇಕಾದ ಪಠ್ಯಪುಸ್ತಕಗಳನ್ನು ಪ್ರಸಾರಾಂಗದ ಮೂಲಕ ಸಿದ್ಧಗೊಳಿಸಿದ ಕಾಲದ ತರುಣದಲ್ಲಿಯೆ ಅಖಿಲ ಭರತೀಯ ವೈಸ್‌ಛಾನ್ಸಲರುಗಳ ಸಭೆಯೊಂದರಲ್ಲಿ ಅದರ ಅಧ್ಯಕ್ಷಸ್ಥಾನದಿಂದ ಅವರು - ಪ್ರಾದೇಶಿಕ ಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು. ಅರ್ಥವಾಗದ ವಿದೇಶಿ ಭಾಷಾ ಮಾಧ್ಯಮವೇ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಾಗುವುದಕ್ಕೂ ಮತ್ತು ಇನ್ನಾವ ದೇಶದಲ್ಲಿಯೂ ಕಂಡುಬರದ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದಕ್ಕೂ ಮುಖ್ಯಕಾರಣವಾಗಿದೆ - ಎಂದೆಲ್ಲ ತಮ್ಮ ಭಾಷಣದಲ್ಲಿ ತುಸು ದೀರ್ಘವಾಗಿಯೇ ಪ್ರತಿಪಾದಿಸಿದ್ದರು. ಕನ್ನಡ ಶಿಕ್ಷಣಮಾಧ್ಯಮ ಇಲ್ಲಿ ಯಶಸ್ವಿಯಾಗದಿರುವುದಕ್ಕೆ ವಿದ್ಯಾರ್ಥಿಗಳೂ ಸಾರ್ವಜನಿಕರೂ ಸರಕಾರವೂ ಸಾಕಷ್ಟು ಪ್ರಮಾಣದಲ್ಲಿ ಸಹಕರಿಸದಿರುವುದೇ ಮುಖ್ಯ ಕಾರಣವಾಗಿದೆ ಎಂಬುದು ಅವರು ದೂರು. ಕರ್ಣಾಟಕ ವಿಶ್ವವಿದ್ಯಾನಿಲಯ ತನ್ನ ಕಡೆಯಿಂದ ಅದಕ್ಕೆ ಪೂರ್ಣ ಅನುಮತಿ ನೀಡಿದೆ ಎಂದು ಅವರು ಹೇಳುತ್ತಾರೆ. ಮುಂದಿನ ಮುಂದಾಳುತನ ವಹಿಸಲಿರುವ ಇಂದಿನ ವಿದ್ಯಾರ್ಥಿವರ್ಗ ದೃಢಮನಸ್ಸು ಮಾಡಿದರೆ ಸರಕಾರ ಮತ್ತು ಸಾರ್ವಜನಿಕರು ಹಿಂಬಾಲಿಸದೆ ಇರುವುದು ಸಾಧ್ಯವಿಲ್ಲ.

ವಿಶ್ವವಿದ್ಯಾನಿಲಯದ ಸಂಶೋಧನಾಂಗ ಮತ್ತು ಬೋಧನಾಂಗಗಳಿಗೆ ಯಾವ ವಿಧದಲ್ಲಿಯೂ ದ್ವಿತೀಯವಲ್ಲದ ಸ್ಥಾನ ಅದರ ಪ್ರಸಾರಾಂಗಕ್ಕೆ ಸಲ್ಲುತ್ತದೆ. ಅಷ್ಟೇ ಅಲ್ಲ. ಪ್ರಜಾಸತ್ತೆಯನ್ನೆ ತನ್ನ ರಾಜಕೀಯಕ್ಕೆ ತತ್ವದ ಅಡಿಗಲ್ಲನ್ನಾಗಿ ಮಾಡಿಕೊಂಡಿರುವ ನಮ್ಮ ಗಣರಾಜ್ಯದ ಅಭ್ಯುದಯವನ್ನು ಗಮನಿಸುವುದಾದರೆ ಪ್ರಸಾರಾಂಗಕ್ಕೆ ಬಹು ಮುಖ್ಯಸ್ಥಾನವನ್ನೆ ನೀಡಬೇಕಾದುದು ಅನಿವಾರ್ಯವಾಗುತ್ತದೆ. ಹಾಗಲ್ಲದೆ ನಮ್ಮ ಜನತಾ ಪ್ರಜಾಸತ್ತೆ ಯಶಸ್ವಿಯಾಗುವುದಿಲ್ಲ; ಸರ್ವೋದಯಕ್ಕೆ ಎಂದಿಗೂ ಜಯ ಲಭಿಸುವುದಿಲ್ಲ. ಮುಗಿಲಿನಿಂದ ಮಳೆಯನ್ನು ಪಡೆದು ನೀರನ್ನು ಸಂಗ್ರಹಿಸಿದ ಗಿರಿನೆತ್ತಿ, ಆ ನೀರನ್ನು ಹೊಳೆಗಳ ಮುಖಾಂತರ ಕೆಳನಾಡಿನ ಮೂಲೆಮೂಲೆಗೂ ಒಯ್ದು ಹಂಚಿ ಹುಲುಸಾದ ಬೆಳೆಗೆ ಕಾರಣವಾಗುವಂತೆ, ವಿಶ್ವವಿದ್ಯಾ ಉನ್ನತ ಕ್ಷೇತ್ರದಲ್ಲಿ ಸಂಗ್ರಹಗೊಂಡ ಜ್ಞಾನ ವಿಜ್ಞಾನಗಳು ಪ್ರಸಾರ ರೂಪದ ವಾಹಿನಿಗಳಲ್ಲಿ ಕೆಳಗಿಳಿದು ಸಂಚರಿಸಿ ಜನಸಾಮಾನ್ಯರ ಜೀವನಪ್ರವೇಶಮಾಡಿ, ಅಲ್ಲಿಯ ಮತಮೌಢ್ಯಾದಿ ಅಜ್ಞಾನವನ್ನು ಅಪಹರಿಸಿ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿಗಳನ್ನು ಸ್ಥಾಪಿಸದಿದ್ದರೆ, ರಾಜಕೀಯ ಮಾತ್ರವಾಗಿರುವ ನಮ್ಮ ಸ್ವಾತಂತ್ರ್ಯವು ಸಾಸ್ಕೃತಿಕವಾಗಿಯೂ ಸಫಲವಾಗುವುದು ಬರಿಯ ದಿಗಂತಾದರ್ಶವಾಗಿಯೆ ಉಳಿಯಬೇಕಾಗುತ್ತದೆ. ಬಹುಭಾಷೆ, ಬಹುಮತ, ಅನೇಕಾಚಾರ ಮೊದಲಾದ ಅಸಂಖ್ಯ ಭೇದಗಳಿಂದ ಕೂಡಿರುವ ನಮ್ಮ ರಾಷ್ಟ್ರಜೀವನ, ತನ್ನ ಏಕತ್ವವನ್ನು ರಕ್ಷಿಸಿಕೊಂಡು ಹೋಗಬೇಕಾದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರಬುದ್ಧಿಯ ಆಧಾರದ ಮೇಲೆ ನಿಲ್ಲುವ ಮನುಜಮತಕ್ಕೂ ಮತ್ತ ವಿಶ್ವ ಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅತ್ಯಂತ ಅವಶ್ಯಕ. ಸುಮಾರು ಮೂವತ್ತು ವರ್ಷಗಳ ಹಿಂದೆ ನನ್ನ ಲೇಖನಿಯಿಂದ ಹೊಮ್ಮಿದ ಒಂದು ಕವನ ನನ್ನ ಹೃದಯದ ಆ ಆಕಾಂಕ್ಷೆಯನ್ನು ಸಮರ್ಥವಾಗಿ ಘೋಷಿಸುತ್ತದೆ. ನಿಮ್ಮ ಕ್ಷಮೆ ಬೇಡಿ, ಅನುಮತಿ ಪಡೆದು ಅದನ್ನು ಓದುತ್ತೇನೆ: ಕಿವಿಗೊಟ್ಟು ಮಾತ್ರವಲ್ಲ, ಎದೆಗೊಟ್ಟು ಆಲೈಸುವಿರೆಂದು ಆಶಿಸುತ್ತೇನೆ;

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನ ಬುಡಮುಟ್ಟ ಕೀಳ ಬನ್ನಿ;
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ:
ಓ ಬನ್ನಿ, ಸೋದರರೆ, ಬೇಗ ಬನ್ನಿ!

ಅದೊ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ
ಪೊರೆಗಳಚಿ ಹೊರಟಿಹವು ಹೊಸ ಪಯಣಕೆ;
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆ ಕೊಳಕು ಬಣಗು ತೃಣಕೆ:
ಓ ಬನ್ನಿ, ಸೋದರರೆ, ರಾಷ್ಟ್ರರಣಕೆ!

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;
ಮತಿಯಿಂದ ದುಡಿಯರೈ ಲೋಕಹಿತಕೆ.

ಆ ಮತದ ಈ ಮತದ ಹಳೆಮತವ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ:
ಓ ಬನ್ನಿ, ಸೋದರರೆ, ವಿಶ್ವ ಪಥಕೆ!

ಮನುಜ ಮತ, ವಿಶ್ವ ಪಥ, ವಿಜ್ಞಾನ ದೃಷ್ಟಿ, ವಿಚಾರ ಬುದ್ಧಿ - ಇವು ನಮ್ಮ ಜನಹೃದಯದ ನಿತ್ಯಮಂತ್ರಗಳಾಗುವಂತೆಯೂ ನಮ್ಮ ಜನಮನದ ಧ್ಯೇಯೋಕ್ತಿಗಳಾಗುವಂತೆಯೂ ಮಾಡುವ ಕರ್ತವ್ಯ ವಿಶ್ವವಿದ್ಯಾನಿಲಯದ ಪ್ರಸಾರಂಗದ ಪಾಲಿಗೆ ಸೇರಿದ್ದು. ವಿಜ್ಞಾನ, ಸಾಹಿತ್ಯ, ಇತಿಹಾಸ, ರಾಜ್ಯಶಾಸ್ತ್ರ, ಮನಶ್ಶಾಸ್ತ್ರ, ತತ್ವಶಾಸ್ತ್ರ ಸಮಾಜಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರ ವಿಷಯದ ಅಧ್ಯಾಪಕರೂ ಈ ನಿಟ್ಟಿನಲ್ಲಿ ದುಡಿಯಬೇಕಾಗಿದೆ. ದೂರ, ಎತ್ತರದಲ್ಲಿ, ಸಾಮಾನ್ಯರಿಗೆ ಎಟುಕದ ಎತ್ತರದಲ್ಲಿ, ಸಾಮಾನ್ಯರಿಗೆ ನಿಲುಕದ ದೂರದಲ್ಲಿ, ಸಂಸ್ಕೃತದ ದುರ್ಗಮ ಶಿಖರಗಳಲ್ಲಿ, ಇಂಗ್ಲೀಷಿನ ಕಂಟಕಮಯ ಔನ್ನತ್ಯಗಳಲ್ಲಿ, ಅನ್ಯಭಾಷೆಗಳ ದುರ್ಜ್ಞೇಯ ಗುಹಾಂಗಣಗಳಲ್ಲಿ, ಶಿಲಾಪೀಠಸ್ಥವೋ ಸಿಂಹಾಸನಸ್ಥವೋ ತಪೋಮಗ್ನವೋ ಆಗಿರುವ ವಿಶ್ವವಿದ್ಯೆಯನ್ನು ನಾಡಿನ ಮೂಲೆಮೂಲೆಯ ಗುಡಿಸಲುಗಳಿಗೂ ಕೊಂಡೊಯ್ಯುವ ಅವಶ್ಯಕಾರ್ಯದಲ್ಲಿ ವಿಶ್ವವಿದ್ಯಾನಿಲಯಗಳು ತಮ್ಮ ಗರ್ವೋನ್ನತ ಉದಾಸೀನತೆಯನ್ನು ಕಿತ್ತೊಗೆದು, ಕಿರೀಟಶಿರ ತಾಟಸ್ಥ್ಯ ದೋರಣೆಯಿಂದ ಪಾರಾಗಿ, ಅಜ್ಞಾನ ಮೌಢ್ಯ ಅವಿವೇಕಗಳ ವಿರುದ್ಧ ನಾವು ಹೂಡುವ ಯುದ್ಧದಲ್ಲಿ ಇದು ತುರ್ತುಪರಿಸ್ಥಿತಿಯೆಂದು ಭಾವಿಸಿ, ಅಚಲ ನಿಷ್ಠೆಯಿಂದ ಅವಿಲಂಬವಾಗಿ ಮುಂದುವರಿಯಲಿ ಎಂದು ನಾನು ಈ ಸಂದರ್ಭದಲ್ಲಿ ಕವಿಹೃದಯ ಕಾತರತೆಯಿಂದ ವಿಜ್ಞಾಪಿಸುತ್ತೇನೆ.

ಮೇಲೆ ಹೇಳಿದ ಆ ಎಲ್ಲ ಕಾರ್ಯಸಾಧನೆಯ ಸಾಫಲ್ಯಕ್ಕಾಗಿ ಆಯಾ ಪ್ರದೇಶದ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಪ್ರಥಮ ಸ್ಥಾನಕ್ಕೆ ಎತ್ತಬೇಕು. ಇಂಗ್ಲೀಷನ್ನು ಈಗಿರುವ ಬಲಾತ್ತಾರದ ಸ್ಥಾನದಿಂದ ತೆಗೆದು ಹಾಕಿ ಐಚ್ಛಿಕಸ್ಥಾನದಲ್ಲಿಡಬೇಕು. ಪ್ರಾದೇಶಿಕ ಭಾಷೆಯೇ ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಬೇಕು. ತಾನು ಕೈಕೊಳ್ಳಲಿರುವ ಪ್ರಚಂಡ ಕಾರ್ಯಕ್ಕೆ ಸಮರ್ಪಕವಾಗಿ ಅರ್ಹವಾಗುವಂತೆ ಪ್ರಾದೇಶಿಕಭಾಷೆಯನ್ನು ನಿಶಿತ ಗೊಳಿಸಬೇಕು; ನಿಷ್ಕೃಷ್ಟಗೊಳಿಸಬೇಕು; ಸುಲಭಗೊಳಿಸಬೇಕು; ಸಾಮಾನ್ಯಗೊಳಿಸಬೇಕು: ಜಗತ್ತಿನ ಯಾವ ಜ್ಞಾನವಾಗಲಿ ವಿಜ್ಞಾನವಾಗಲಿ ಪ್ರಾದೇಶಿಕ ಭಾಷೆಯಲ್ಲಿ ಲಭಿಸುವಂತೆ ವಿಶ್ವವಿದ್ಯಾನಿಲಯಗಳು ತಮ್ಮ ಪ್ರವೀಣ ಅಧ್ಯಾಪಕ ವರ್ಗದವರಿಂದ ಗ್ರಂಥರಚನೆ ಮಾಡಿಸುವ ಸಕ್ರಮ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು; ಅಧ್ಯಾಪಕವರ್ಗದ ಸ್ವಭಾಷಾ ಪ್ರೇಮ ಒಂದರ ಮೇಲೆಯೇ ಭಾರಹಾಕದೆ ಸ್ಥಾನ ಮಾನ ಧನಾದಿ ಲೌಕಿಕ ಆಕರ್ಷಣೆಗಳಿಂದಲೂ ಅವರು ಪ್ರೋತ್ಸಾಹಿತರಾಗುವಂತೆ ಮಾಡಬೇಕು. ಆಗ ಮಾತ್ರವೇ ನಮ್ಮ ಪ್ರಜಾಸತ್ತೆ, ಜಗತ್ತಿನಲ್ಲೆಲ್ಲ ಅತ್ಯಂತ ಹಿರಿಯದೆಂದು ಪರಿಗಣಿತವಾಗಿರುವ ಭಾರತದ ಪ್ರಜಾಸತ್ತೆ, ತನ್ನ ಸರ್ವತೋಮುಖವಾದ ಅಭ್ಯುದಯವನ್ನು ಶೀಘ್ರದಲ್ಲಿಯೆ ಸಾಧಿಸಲು ಸಮರ್ಥವಾಗುತ್ತದೆ; ಸರ್ವೋದಯ ಸಿದ್ಧಾಂತವು ಸಾಮಾನ್ಯ ಜನಜೀವನದಲ್ಲಿ ನಿತ್ಯಧರ್ಮವಾಗಿ ಪರಿಣಮಿಸಿ ಲೋಕ ಕಲ್ಯಾಣವೂ ಸಾಧಿತವಾಗುತ್ತದೆ.

ಮಹಾಶಯರೆ, ತಿಳಿದವರಾದ ತಮ್ಮ ಮುಂದೆ ಇದನ್ನೆಲ್ಲ ಹೇಳಿ, ಬೆಟ್ಟಕ್ಕೆ ಕಲ್ಲು ಹೊತ್ತೆನೋ ಏನೋ? ಏಲಾದರಾಗಲಿ ನನ್ನ ಹೃದಯವನ್ನು ಸಮಹೃದಯರ ಮುಂದೆ ತೋಡಿಕೊಂಡಿದ್ದೇನೆ ಎಂಬ ತೃಪ್ತಿ ನನ್ನದಾಗಿದೆ. ಪ್ರಶಾಂತರಾಗಿ ಕುಳಿತು,

ಆಲಿಸಿ, ನನಗೆ ಆ ತೃಪ್ತಿಯನ್ನೊದಗಿಸಿದುದಕ್ಕಾಗಿ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈ ಘನ ಗೌರವ ಪದವಿಯನ್ನಿತ್ತು ನನ್ನನ್ನು ಸತ್ಕರಿಸುದುದಕ್ಕಾಗಿ ಕರ್ಣಾಟಕ ವಿಶ್ವವಿದ್ಯಾನಿಲಯವನ್ನೂ, ವಿಶೇಷತಃ ಅದರ ಉಪಕುಲಪತಿಗಳಾಗಿರುವ ನನ್ನ ಸನ್ಮಿತ್ರ ಡಾ. ಪಾವಟೆಯವರನ್ನೂ ವಂದಿಸಿ ಬೇಳ್ಕೊಳ್ಳುತ್ತೇನೆ; ನಮಸ್ಕಾರ.

ಸಿರಗನ್ನಡಂಗಲ್ಗೆ! ಜಯಾಹಿಂದ್! ಜಯ್‌ಜಗತ್!

---

* ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಧಾರವಾಡ: ಫೆಬ್ರವರಿ ೨೭. ೧೯೬೬.

## ತ್ರಿಕಾಲಸಾಹಿತ್ಯ - ಸಕಾಲಸಾಹಿತ್ಯ*

ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಟ್ಟಿರುವ ಈ ಕನ್ನಡ ಲೇಖಕರ ಸಮ್ಮೇಳನಕ್ಕೆ ತಾವೆಲ್ಲ ಬಂದಿರುವುದಕ್ಕೆ ನನಗೆ ತುಂಬ ಸಂತೋಷವಾಗುತ್ತಿದೆ. ನಾಡಿನ ಲೇಖಕರನ್ನು ಒಂದು ವಿಶ್ವವಿದ್ಯಾನಿಲಯ ಆಹ್ವಾನಿಸಿ ಈ ಪ್ರಮಾಣದಲ್ಲಿ ಸಮಾರಂಭ ಏರ್ಪಡಿಸಿರುವುದು ಇದೇ ಮೊದಲೆಂದು ಕಾಣುತ್ತದೆ. ವಿಶ್ವವಿದ್ಯಾನಿಲಯ ಬೆಳೆಯಬೇಕಾದರೆ ಅದಕ್ಕೆ ಪ್ರಧಾನವಾಗಿ ಮೂರು ಅಂಗಗಳಿರಬೇಕೆಂದು ನಾನು ಹೇಳುತ್ತಲೆ ಇರುವುದುಂಟು: ಬೋಧನಾಂಗ, ಸಂಶೋಧನಾಂಗ, ಪ್ರಸಾರಾಂಗ.

ವಿಶ್ವವಿದ್ಯಾನಿಲಯಕ್ಕೆ ಬರುವ ವಿದ್ಯಾರ್ಥಿಗಳಿಗೆ ಸಮರ್ಥವಾದ ಸುಪುಷ್ಟವಾದ ವಿದ್ಯೆಯನ್ನು ಎರೆಯುವುದು ಬೋಧನಾಂಗದ ಕರ್ತವ್ಯವಾದರೆ, ಈ ಬೋಧನೆಗೆ ಬೆನ್ನೆಲುಬಾಗಿರುವ ಸಂಶೋಧನಾಂಗದ ಕರ್ತವ್ಯವಾದರೆ, ಈ ಬೋಧನೆಗೆ ಬೆನ್ನೆಲುಬಾಗಿರುವ ಸಂಶೋಧನಾಂಗದ ಆದ್ಯಕರ್ತವ್ಯವೆಂದರೆ, ಅತೀತವಾದ ಜ್ಞಾನಲೋಕಗಳನ್ನು ನಮ್ಮ ಲೋಕಕ್ಕೆ ಇಳಿಸುವುದು; ಜ್ಞಾನದಿಗಂತಗಳನ್ನು ವಿಸ್ತರಿಸುವುದು. ಗಂಗೋತ್ರಿಯಂತೆ ಈ ಸಂಶೋಧನಾಂಗ. ಅಂದರೆ, ಎಲ್ಲಿಗೆ ದೇವಗಂಗೆ ಆ ಅತೀತಜೆ ಮತ್ತು ಅತೀತಗೆ ಅಪಗೆಯಾಗಿ ಇಳಿದುಬರುತ್ತಾಳೊ ಆ ಶಿಖರಸ್ಥಾನ ಎಂದು. ಆದ್ದರಿಂದಲೆ ಈ ಸಂಶೋಧನ ಕ್ಷೇತ್ರಕ್ಕೆ 'ಮಾನಸ ಗಂಗೋತ್ರಿ' ಎಂದು ಹೆಸರಿಟ್ಟದ್ದು. ಇದು ಬರಿಯ ಹೆಸರಲ್ಲ: 'ಇಟ್ಟ ಹೆಸರೆ ಕೊಟ್ಟ ಮಂತ್ರ'. ಇಂಥ ಮಾನಸಗಂಗೋತ್ರಿಯಲ್ಲಿ ವ್ಯಕ್ತಿ ವ್ಯಕ್ತಿಗಳ ಮೂಲಕ ಅವತರಿಸಿ ಬರುವ ಜ್ಞಾನಗಂಗೆಯನ್ನು ಬೋಧನ ಪಾತ್ರಗಳಲ್ಲಿ, ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ವಿಶ್ವವಿದ್ಯಾನಿಲಯಗಳಿಗೆ ಬರಲಾರದ ನಾಡಿನ ಎಲ್ಲ ಜನತೆಗೂ ಪ್ರಸಾರಾಂಗದ ಮೂಲಕ ಹರಿಸುವುದೇ ಉದ್ದೇಶ.

ಆದರೆ, ವಿಶ್ವವಿದ್ಯಾನಿಲಯಗಳು ಮಾತ್ರವೆ ಜ್ಞಾನಂಗಂಗೋತ್ರಿಗಳಾಗಿವೆ ಎಂದರೆ ತಪ್ಪಾಗುತ್ತದೆ. ವಿಶ್ವವಿದ್ಯಾನಿಲಯಗಳ ಹೊರಗೆ ಇದ್ದು ನಾನಾ ಪ್ರಮಾಣದಲ್ಲಿ ಶಕ್ತಿ ಪಾತ್ರಗಳಾಗಿ ಪ್ರವಹಿಸುತ್ತಿರುವ ಚೇತನಗಳುಂಟು. ಪೂರ್ಣಪ್ರವಾಹದಂತೆ ಅಲ್ಲದಿದ್ದರು ಹೊಳೆಯಂತೆ, ನಾಲೆಗಳಂತೆ, ಕಿರುಕಾಲುವೆಗಳಂತೆ ಇರುವವರೂ ಉಂಟು. ವಿಶ್ವವಿದ್ಯಾನಿಲಯಗಳೂ ಮಾಡದ ಮಹತ್‌ಕಾರ್ಯವನ್ನು ಮಾಡುತ್ತಿರುವ ಸಂಘಸಂಸ್ಥೆಗಳುಂಟು. ಕಾರಂತರಂಥ ಪ್ರವಾಹೋಪಮ ವ್ಯಕ್ತಿಗಳನ್ನೆ ನೆನೆಯಬಹುದು: ನಾಗೇಗೌಡರು, ಚೆನ್ನಬಸಪ್ಪನವರು ಇತ್ಯಾದಿ ಮಹನೀಯರೂ ಇದ್ದಾರೆ. ಇಂಥವರೆನ್ನಲ್ಲ ವಿಶ್ವವಿದ್ಯಾನಿಲಯ ತನ್ನ ನಿಧಿಯನ್ನಾಗಿ ಮಾಡಿಕೊಳ್ಳಬೇಕು; ತನ್ನ ಪರಿಧಿಯಲ್ಲಿ ಸೇರಿಸಿಕೊಳ್ಳಬೇಕು. ಹಾಗೆ ಮಾಡದೆ ಮಡಿವಂತಿಕೆಯನ್ನು ತೋರಿದರೆ ಮಹಾ ನಷ್ಟವಾಗುವುದು ಖಂಡಿತ. ಹಾಗಾಗದಿರಲಿ; ಹಾಗಾಗದೆಂಬುದಕ್ಕೆ ಈ ಲೇಖಕ ಸಮ್ಮೇಳನವೆ ಸಾಕ್ಷಿ.

ನಾಡಿನ ಎಲ್ಲ ಲೇಖಕರೂ ಇಲ್ಲಿ ನೆರೆದಿಲ್ಲ. ಕನ್ನಡ ನಾಡಿನಲ್ಲಿ ಎಷ್ಟು ಲೇಖಕರಿಲ್ಲ! ನಾಲ್ಕರಲ್ಲೊಂದು ಪಾಲೊ, ಹತ್ತರಲ್ಲೊಂದು ಪಾಲೊ ಲೇಖಕರು ಇಲ್ಲಿ ನೆರೆದಿದ್ದೀರಿ. ಇಷ್ಟಾದರೂ ಪ್ರಮಾಣದಲ್ಲಿ ಮಾನಸಗಂಗೋತ್ರಿಯಲ್ಲಿ ಇಷ್ಟು ಬೇಗ ನಾಡಿನ ಲೇಖಕರು ಕೂಡುವುದು ಸಾಧ್ಯವಾಯಿತಲ್ಲ ಎಂದಷ್ಟೆ ತೃಪ್ತಿ. ಮಾನಸಗಂಗೊತ್ರಿಯ ಪ್ರಾರಂಭೋತ್ಸವ ಭಾಷಣಮಾಡುತ್ತಿದ್ದಾಗ, ಆಗ - ಐದಾರು ವರ್ಷದ ಹಿಂದೆ - ನೆರೆದಿದ್ದ ಸಭಾಸದರು ಇಲ್ಲಿ ಸೇರಿರುವ ಸಭಿಕರಲ್ಲಿ ಹತ್ತರಲೊಂದು ಪಾಲು. ಆ ದಿನ ನಾವು ಇಂಥ ದಿನವನ್ನು ಇಷ್ಟುಬೇಗ ಕಾಣಬಲ್ಲವೇ ಎಂದೆ ಆಶ್ಚರ್ಯವಾಗುತ್ತಿತ್ತು. ಮಾನಸಗಂಗೋತ್ರಿಯ ಈ ಕ್ಷೇತ್ರದಲ್ಲಿ ಕತೆಗಾರ. ಕಾದಂಬರಿಕಾರ, ನಾಟಕಕಾರಾದಿ ಕವಿ ಲೇಖಕರು ಹೀಗೆ ಕಲೆಯುತ್ತಾರೆಂದು ಕನಸು ಕಂಡು ಹಾರೈಸಿದ್ದೆ. ಈಗ ನಿಮ್ಮನ್ನೆಲ್ಲ ಕಂಡು ಕನಸು ನನಸಾಗಿ ನನಗೆ ಅತ್ಯಂತ ಸಂತೋಷವಾಗಿದೆ.

ಈ ರೀತಿಯ ಲೇಖಕ ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯ ಮಾತ್ರವೇ ಅಲ್ಲ ರಾಷ್ಟ್ರದ ಎಲ್ಲ ವಿಶ್ವವಿದ್ಯಾನಿಲಯಗಳೂ - ಅವುಗಳಲ್ಲಿ ಪ್ರಮುಖವಾದುವಾದರೂ - ನಡೆಸುವ ಯೋಗ್ಯ ಸಂಪ್ರದಾಯವನ್ನು ಆರಂಭಿಸಬೇಕು. ಮೈಸೂರು ವಿಶ್ವವಿದ್ಯಾನಿಲಯ - ಈ ಪ್ರಮಾಣದಲ್ಲಿ ಅಲ್ಲದಿದ್ದರೂ - ಇಂತಹ ಸಮ್ಮೇಳನಗಳನ್ನು ಮುಂದೆಯೂ ನಡೆಸುತ್ತದೆಂದು ಆಶಿಸುತ್ತೇನೆ.

ಲೇಖಕರು ಈ ಸಮ್ಮೇಳನದ ಅಂಗವಾಗಿ ನಡೆಯುವ ಕವಿಕೋಷ್ಠಿಯ ಅಧ್ಯಕ್ಷತೆವಹಿಸಬೇಕೆಂದು ನನ್ನನ್ನಿಲ್ಲಿಗೆ ಆಹ್ವಾನಿಸಿದರು. ಏನು ಮಾತನಾಡುವುದು ಕವಿಗೊಷ್ಠಿಯನ್ನು ಕುರಿತು? ಸಾಂಪ್ರದಾಯಿಕವಾದ ಮಾತುಗಳೀಗ ಅಗತ್ಯ ಎನಿಸುವುದಿಲ್ಲ. ನಮ್ಮ ಸುತ್ತಲೂ ಉರಿದೇಳುತ್ತಿರುವ ಸಮಸ್ಯೆಗಳತ್ತ ನಿಮ್ಮ ಗಮನ ಹರಿಸುವಂತಷ್ಟೆ ಮಾಡುವ ಉದ್ದೇಶ ನನ್ನದು. ಲೇಖಕರು ಜನತೆಗೆ ಈ ಎಲ್ಲ ಸಮಸ್ಯೆಯನ್ನೂ ವೈಜ್ಞಾನಿಕ ದೃಷ್ಟಿಯಿಂದ ಪರಿಭಾವಿಸಿ ಪ್ರಸಾರ ಮಾಡಬೇಕು. ಮೊನ್ನೆಯ ದಿವಸ ಆದ ಒಂದು ಚರ್ಚಾಸ್ಪರ್ಧೆಗೆ (ಶ್ರೀ ತಿ.ನಂ.ಶ್ರೀ. ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾಸ್ಪರ್ಧೆಗೆ) ನಾನು ಈ ದೃಷ್ಟಿಯಿಂದಲೆ ಇಂಥದೊಂದು ವಿಷಯವನ್ನು ಕೊಟ್ಟಿದ್ದೆ: “ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಇವನ್ನಾಶ್ರಯಿಸಿ, ವರ್ಣಾಶ್ರಮಧರ್ಮ ಮತ್ತು ಜಾತಿ ಪದ್ಧತಿಯಂತಹ ಸಮಾಜ ವಿಚ್ಛಿದ್ರಕಾರಕವಾದ

ನೀಚಭಾವನೆಗಳನ್ನು ತಿರಸ್ಕರಿಸಿ ವೇದಾಮತದರ್ಶನದ ವಿಶಾಲತತ್ವಗಳ ತಳಹದಿಯಮೇಲೆ ನಿಲ್ಲದಿದ್ದರೆ ಹಿಂದೂ ಧರ್ಮವು ಕ್ರಮೇಣವಾಗಿಯಾದರೂ ಸಂಪೂರ್ಣವಾಗಿ ವಿನಾಶಹೊಂದುತ್ತದೆ."

ಇದು ಚರ್ಚೆಯ ವಿಷಯ ಮಾತ್ರವೆ ಅಲ್ಲ, ಸತ್ಯವೂ ಅಹುದು. ನಮ್ಮ ದೇಶವನ್ನು 'ಸೆಕ್ಯುಲರ್' ರಾಜ್ಯಾಂಗದ ಮೇಲೆ ಕಟ್ಟಿರುವ ನಾವು ಅವೈಜ್ಞಾನಿಕ ಮತ್ತು ಅವೈಚಾರಿಕವಾದ ಮೌಢ್ಯಗಳಿಗೆ ಹೇಗೆ ಈಡಾಗುತ್ತಿದ್ದೇವೆ ನೋಡಿದರೆ ವಿಷಾದವಾಗುತ್ತದೆ. ಈಗ ರಾಷ್ಟ್ರದಲ್ಲಿ ದಳ್ಳುರಿಯಾಗಿ ಭುಗಿಲೆದ್ದಿರುವ ಗೋಹತ್ಯಾ ಸಮಸ್ಯೆಯನ್ನೇ ತೆಗೆದುಕೊಳ್ಳಬಹುದು. ಗೋವುಗಳನ್ನು ಕೊಲ್ಲಬಾರದು; ಸರಿ. ಚೆನ್ನಾಗಿ ಸಾಕಲುಬಾರದೆ? ಜನಸಂಖ್ಯೆಯನ್ನು ಬಿಟ್ಟರೆ ನಮ್ಮಲ್ಲಿ ಗೋ ಸಂಖ್ಯೆಯೇ ಅಧಿಕ. ಆದರೆ ಫಲ? ಜನಗಳಂತೆಯೇ ದನಗಳೂ ಬಡಕಲು. ಸಾಕಲಾರದೆ ಬೀದಿಗಟ್ಟುತ್ತೇವೆ. ಬಡಕಲು ದನ ನರಳಿ ಸಾಯುತ್ತಿದ್ದರೂ ಗೋಹತ್ಯಾ ನಿಷೇಧಕ್ಕೆ ಚಳವಳಿ ಮಾಡುತ್ತೇವೆ. ಎಷ್ಟೋ ಅಂಥ ಮೂಳೆ ಚಕ್ಕಳದ ದಿಕ್ಕೆಟ್ಟ ದನಗಳಿಗೆ ಸಾವೇ ಮುಕ್ತಿಯಾಗಿರುತ್ತದೆ. ಮಹಾತ್ಮಾಗಾಂಧಿಯವರು ಅಹಿಂಸಾತತ್ವದ ಪ್ರವರ್ತಕರಾಗಿದ್ದರೂ, ಒಮ್ಮೆ ಒಂದು ಕರು ಮರಣಯಾತನೆ ಅನುಭವಿಸುತ್ತಿದ್ದುದನ್ನು ನೋಡಲಾರದೆ ಅದರ ಹಿತಕ್ಕಾಗಿ, ಬೇಗ ಸಾವುಂಟುಮಾಡುವ ಇಂಜೆಕ್ಷನ್ ಕೊಡಿಸುತ್ತಾರೆ ಅದಕ್ಕೆ. ಮೃತ್ಯು ಆಸನ್ನವಾಗಿ ಉಳಿಗತಿಯಿಲ್ಲದೆ ಸಂಕಟಪಡುತ್ತಿರುವ ಬಹುತೇಕ ನಮ್ಮ ಗೋವೃಂದಕ್ಕೆ ಗತಿಯೇನು? ಕಟುಕನ ಕತ್ತಿಯ ಕ್ರೌರ್ಯವೆ ಜಗದ್ಗುರುಗಳ ಕನಿಕರಕ್ಕಿಂತಲೂ ಅವುಗಳಿಗೆ ದಯಾಮಯವಾಗುತ್ತದೆ ಅಲ್ಲವೇ? ಹಾಲು ಕರೆದು ಬರಡಾಗಿ ಮುದಿಯಾದಮೇಲೆ ಹಣೆಗೆ ಕುಂಕುಮ ಹಚ್ಚಿಸಿಕೊಂಡು, ಹೊಟ್ಟೆಗಿಲ್ಲದೆ ಹೊಲದಲ್ಲಿ ಕಾಲುಗೆಟ್ಟು ಕಂಗಾಲಾಗಿಬಿದ್ದು, ಜೀವವಿರುವಾಗಲೆ ಕಾಗೆ ಹದ್ದುಗಳಿಂದ ಕೊಕ್ಕಿಸಿಕೊಳ್ಳುತ್ತಿರುವ ಗೋಮಾತೆಯರನ್ನು ಕೇಳಿ!

ಗೋಮಾಂಸ ಭಕ್ಷಣೆ ಮಾಡುವ ರಾಷ್ಟ್ರಗಳಲ್ಲಿ ಗೋವುಗಳನ್ನು ಹೇಗೆ ಸಾಕುತ್ತಾರೆ ಎಂಬುದನ್ನು ಚಿತ್ರದಲ್ಲಿ ನೋಡಿದ್ದೇನೆ: ಎಷ್ಟು ಪುಷ್ಟ, ಎಷ್ಟು ಹೃಷ್ಟವಾಗಿರುತ್ತವೆ ಅವು! ಹಸುಗಳನ್ನು ಪೂಜಿಸುವ ನಾವು ಹಾಲು ಕರೆದುಕೊಂಡ ಮೇಲೆ ಹಗ್ಗಕಳಚಿ ಬೀದಿಗೆ ಬಿಡುತ್ತೇವೆ. ಯಾವ ಕಾಂಪೌಂಡಿನ ಬಳಿಯೊ ಮತ್ತಾವ ಬೇಲಿಯ ಬಳಿಯೊ ಕತ್ತುಚಾಚಿ ಆ ಬಡಹಸು ತನ್ನ ಹೊಟ್ಟೆ ತುಂಬಬೇಕು. ಕಂಡವರು ಅದರ ಮುಖಕ್ಕೆ ಬಡಿದಟ್ಟುತ್ತಾರೆ. ಹಣೆಯ ಮೇಲೆ ಮಾತ್ರ ಕುಂಕುಮವಿರುತ್ತೆ. ಹೊಟ್ಟೆ ಬರಿದಾಗಿದ್ದರೂ! ಅದು ತೂರಾಡುತ್ತ ತಾರಾಡುತ್ತ ಬೀದಿ ಬಿಕಾರಿಯಾಗಿ ಅಲೆಯುತ್ತಿದ್ದರೂ!

ಪಟ್ಟಣಗಳಲ್ಲಿ ಹಸು ಎಮ್ಮೆ ಸಾಕಿರುವವರು ಹೇಗೆ ಅವುಗಳನ್ನು ಬೆಳಸಿರುತ್ತಾರೆಂಬುದನ್ನು ನೋಡಬೇಕು. ಆ ಎಮ್ಮೆ ಕರು ಹಾಕಿರುತ್ತೆ; ಮೂರು ಪಾವು ಹಾಲು ಕೊಡುವುದಾಗಿ ಗೌಳಿಗ 'ವರ್ತನೆ' ಮಾಡಿಕೊಂಡಿರುತ್ತಾನೆ; ಅದು ಕೊಡುವುದು ಎರಡೇ ಪಾವು. ಹಾಗೆಂದು ಗೊತ್ತಾದ ಮನೆಗೆ ಹಾಲು ಒಪ್ಪಿಸುವುದೆ? ಹೇಗಾದರೂ ಕೊಡದೆ ಇದ್ದರೆ ಹೇಗೆ! ಆತನೂ ಅಂತೂ ಹೇಗೊ, ಪಾಪ, ಅನುಸರಿಸುತ್ತಾನೆ. ಆದರೆ, ಆಗತಾನೆ ಹುಟ್ಟಿದ ಕರುವಿಗೆ ಹಾಲು? ಮೊದಲೆರಡು ದಿನ ಅದು ಚಂಗಚಂಗನೆ ಹಾರಾಡಿಕೊಂಡು ಬರುತ್ತದೆ; ಕೆಚ್ಚಲು ಉಣ್ಣಲು ಹೋದರೆ ಅದನ್ನು ಸಾಕಿದಾತ ಬಾಯಿ ಹಿಡಿದೆಳೆಯುತ್ತಾನೆ. ನಾಲ್ಕಾರು ದಿನದಲ್ಲೆ ಅದರ ನಡೆ ನಿಂತುಬಿಡುತ್ತದೆ. ಮನೆಯಲ್ಲೆ ಅದನ್ನು ಬಿಟ್ಟು ಬಂದರೆ ಎಮ್ಮೆ ಹಾಲು ಕೊಡುವಿದಿಲ್ಲ. ಮನೆಯಹಾಲಿಗೆ (ಅಂದರೆ, ಕೈಹಾಲಿಗೆ) ವರ್ತನೆ ಮನೆಯವರು ಒಪ್ಪುವುದಿಲ್ಲ. ಸರಿ. ಹೀಗಾಗಿ ಕರುವನ್ನು ಹೊತ್ತು ತರುತ್ತಾನೆ ಗೌಳಿಗ, ಕಡೆಗೆ ಅದೂ ಸಾಯುತ್ತದೆ. ಆದರೆ ಅದರ ಚರ್ಮ ಉಪಯೋಗಕ್ಕೆ ಬರುತ್ತದೆ.

ಆ ಚಕ್ಕಳವನ್ನೆ ಸುಲಿಸಿ ಒಳಕ್ಕೆ ಹುಲ್ಲು ತುರುಕಿಸಿ ಒಂದಂಥದೆ ಕರುವಿನ ನೆನಪುಂಟುಮಾಡುವ ಆಕಾರ ಮಾಡಿಸಿ ಅದನ್ನೆ ಎಮ್ಮೆಯ ಮುಂದೆ ಹೊತ್ತು ತರುತ್ತಾನೆ. ಅದನ್ನು ನೋಡಿ ಎಮ್ಮೆಗೆ ಕರುವಿನ ನೆನಪೊ ಭ್ರಾಂತಿಯೊ ಉಂಟಾಗುತ್ತದೆ ಎಂಬಂತೆ ಕಾಣುತ್ತೆ. ಅದರಿಂದ ಒಂದಷ್ಟು ಹಾಲು ಇಳಿಸುತ್ತದೆ; ಗೌಳಿಗ ಹಿಂಡಿ ಕೊಳ್ಳುತ್ತಾನೆ. ತನ್ನ ಮುಂದಿನ ತೋರ್ಕೆಕರುವಿನ ಮೈನೆಕ್ಕುತ್ತಲೆ ಇರುವ ಎಮ್ಮೆಗೆ ಒಮ್ಮೆಲೆ ಕಾಣಿಸುತ್ತದೆ, ಆ ಕರುವಿನ ಮೈಯಿಂದೆಲ್ಲೊ ಹುಲ್ಲುತುಣುಕು ಇಣುಕುತ್ತಿರುವುದು! ಅದನ್ನೆ ನಾಲಗೆ ಚಾಚಿ ಎಟುಕಿಸಿ ತಿನ್ನುತ್ತದೆ ಎಮ್ಮೆ! ಅದಕ್ಕಾಶ್ಚರ್ಯವಿರಬೇಕು, ಇದೇನು ನನ್ನ ಕರುವಿನ ಹೊಟ್ಟೆಯಿಂದ ಹುಲ್ಲು ಹಿಂಡುತ್ತಿದೆಯಲ್ಲ; ಇದ್ದರೂ ಇರಬಹುದೆ, ಎಂದು. ಎಂಥ ದಾರುಣದೃಶ್ಯ ಅದು! ಹಣೆಗೆ ಕುಂಕುಮವಿಟ್ಟು ಹಸುವಿನ ಪೂಜೆ ಮಾಡುತ್ತೇವೆ, ಆಮೇಲೆ ಹಗ್ಗ ಕಳಚಿ ಬೀದಿಗೆ ಬಿಟ್ಟು ಬಿಡುತ್ತೇವೆ, ಎಂದು ಆಗಲೆ ಹೇಳಿದೆ. ನಿಃತ್ರಾಣವಾದ, ಮುದಿಯಾದ, ರೋಗಕಾರಣದಿಂದಲೊ ಹೊಟ್ಟೆಗಿಲ್ಲದೆಯೊ ದುರ್ಬಲವಾದ ಹಸು ಕಡೆಗೆ ಯಾವುದೊ ಹೊಲದಲ್ಲಿ ಅನಾಥವಾಗಿ ಸಾಯುತ್ತದೆ. ಅದೂ ಒಂದೇ ಬಾರಿಗಲ್ಲ. ಶಕ್ತಿಯುಡುಗಿ ಕಾಲು ಮುದುರಿ ಬಿದ್ದುಕೊಂಡಿತು ಹಸು ಎಂದೊಡನೆಯೆ ಆಕಾಶದಲ್ಲಿ ಹದ್ದು ರಣಹದ್ದು ಕಾಗೆಗಳು ಎಲ್ಲ ಗಸ್ತು ಸುತ್ತುವುದಕ್ಕಾರಂಭಿಸುತ್ತವೆ. ಹದ್ದುಗಳೊಂದಷ್ಟು ವಾಸಿ, ಹಸುವಿಗೆ ಪ್ರಾಣವಿರುವ ತನಕವೂ ಅವು ಅದನ್ನು ಮುಟ್ಟದೆ ಮೇಲೇ ಹಾರುತ್ತಿರುತ್ತವೆ. ಆದರೆ ಆ ಕಾಗೆಗಳಿಗೆ ಆ ದಡ್ಡತನವಿಲ್ಲವೇ ಇಲ್ಲ! ದಾಕ್ಷಿಣ್ಯವೂ ಇಲ್ಲ! ಕಾಲಬಳಿ ಬಾಲದ ಬುಡದಲ್ಲಿ, ಮುಖದ ಸಂದಿನಲ್ಲಿ, ಕೆಚ್ಚಲ ಹತ್ತಿರ ಕುಳಿತು ಕುಕ್ಕುವುದಕ್ಕೆ ಆಗಲೇ ಆರಂಭಿಸಿಬಿಡುತ್ತವೆ. ಆ ನಿರ್ಗತಿಕ ನಿಶ್ಯಕ್ತ ಪ್ರಾಣಿ, ಅಲುಗಲೂ ಆಗದಿರುತ್ತದೆ; ಕಿವಿಯನ್ನಷ್ಟೆ ಹಾಗೆ ಹೀಗೆ ಒಂದಷ್ಟು ಬೀಸುತ್ತದೆ. ಅದಷ್ಟರಿಂದಲೇ ಏನು ತಾನೆ ಅಂಜಿಯಾವು, ಆ ಮಾಂಸ ಕಾತರ ಖಗೇಂದ್ರರು! ಕಡೆಗೆ, ಸರಿ, ಹದ್ದುಗಳೂ ಎರಗುತ್ತವೆ. ಇದು ನಮ್ಮ ಗೋಭಕ್ತಿಯ ಪರ್ಯವಾಸನ!

ಗೋಹತ್ಯೆಯನ್ನು ಉಗ್ರವಾಗಿ ಮತೀಯವಾಗಿ ಪ್ರತಿಪಾದಿಸುತ್ತಿರುವವರು ತಿಳಿಯರು, ವೇದದ ಕಾಲ್ಲದಲ್ಲಿ ಗೋಹತ್ಯೆ ಮಂತ್ರಪೂತವಾಗಿಯೇ ನಡೆದಿತ್ತು ಎಂಬುದನ್ನು, ಮಂತ್ರವತ್ತಾಗಿಯೇ ನಡೆದಿತ್ತು ಎಂಬುದನ್ನು. ಅತಿಥಿಗೆ ಸಂಸ್ಕೃತದಲ್ಲಿ ಗೋಘ್ನ ಎಂದು ಹೇಳುತ್ತಿದ್ದರು. ಅಂದರೆ, ಅತಿಥಿಗೆ ಗೋವನ್ನುಣಬಡಿಸುವುದು ಇತ್ತೆಂದಾಯಿತು. ವಸಿಷ್ಠರಂಥ ಋಷಿಗಳೂ ಗೋಮಾಂಸ ತಿನ್ನುತ್ತಿದ್ದರೆಂಬುದನ್ನು ಒಂದು ಸಂಸ್ಕೃತ ನಾಟಕದಲ್ಲಿ ('ಉತ್ತಮರಾಮ ಚರಿತ'ದಲ್ಲಿ) ಸೂಚಿಸಿದೆ. ಆಶ್ರಮದಲ್ಲಿ ಇಬ್ಬರು ವಟುಗಳು ಮಾತನಾಡುತ್ತಿರುವಾಗ ದೂರದಲ್ಲಿ ವೃದ್ದ ವಸಿಷ್ಠರು ಬರುತ್ತಿರುತ್ತಾರೆ. ಅದನ್ನು ಕಂಡೊಬ್ಬ ವಟು ಹೇಳುತ್ತಾನೆ, 'ಹುಲಿ ಬರುತ್ತಿದೆ' ಎಂದು. ಮತ್ತೊಬ್ಬ ವಟು ವಸಿಷ್ಠರನ್ನು ಕುರಿತು ಹಾಗೆಲ್ಲ ಹೇಳಬೇಡ ಎನ್ನುತ್ತಾನೆ. ಆದರೆ ವಸಿಷ್ಠರು ಹಾಗೇಕೆ ಆ ವಟುವಿಗೆ ಕಾಣಿಸಿಕೊಂಡರು ಎಂದರೆ, ಅವರು ಅತಿಥಿ, ಆಶ್ರಮಕ್ಕೆ ಬಂದಮೇಲೆ ಗೋಮಾಂಸ ಉಣಬಡಿಸಬೇಕು; ವೃದ್ಧರಾದ್ದರಿಂದ ಬೆಳದ ಗೂಳಿಯ ಮಾಂಸ ಹಲ್ಲಿಗೆ ಹರಿಯದಾಗಿ ಕರುವಿನ ಮಾಂಸವೇ ಮೃದು ಮತ್ತು ಸ್ವಾದುವಾಗಿರುತ್ತದೆ. ಹೀಗೆಂದರೆ ತಾವು ಸಾಕಿದ ಕರುವಿನ ಹತ್ಯೆ ಆಗುತ್ತದೆ - ಅಂತಲೆ, ಅಂತ ಅತಿಥಿ ಋಷಿಯಾದರೂ ಬ್ರಹ್ಮರ್ಷಿಯಾದರೂ ಹುಲಿಯಾಗಿ ಕಾಣುತ್ತಾನೆ ತರುಣ ವಟುವಿಗೆ. ಆದ್ದರಿಂದಲೇ ಅತಿಥಿ ಗೋಘ್ನ. ಯಜ್ಞಗಳಲ್ಲಿ ಗೋವನ್ನು ಮಂತ್ರವತ್ತಾಗಿ ಕೊಂದರು. ಕತ್ತರಿಸುವುದಕ್ಕೂ ಮಂತ್ರ. ಕೊಚ್ಚುವುದಕ್ಕೂ ಮಂತ್ರ. ಹೆಚ್ಚುವುದಕ್ಕೂ ಮಂತ್ರ. ಅಂತೂ ಗೋವಧೆ ಮಂತ್ರಮಯವಾಗಿ ಹೋಗಿತ್ತು.

ಗೊಪೂಜೆಮಾಡುವಾಗ ಭಾವಿಸುವುದುಂಟು, ಅದರ ಒಂದೊಂದು ಅಂಗದಲ್ಲೂ ಒಂದೊಂದು ವರ್ಗದ ದೇವತೆಗಳಿದ್ದಾರೆ ಎಂದು. ಹೊಲದಲ್ಲಿ ಬಿದ್ದು ಸಾಯುವ ಹಸುವಿನ ಮೈಯ ಯಾವ ಭಾಗದಲ್ಲೂ ಯಾವ ದೇವತೆಯೂ ಇಲ್ಲ ಎಂಬುದು

ಕುಕ್ಕಿತಿನ್ನುವ ಆ ಕಾಗೆಗಳಿಗೆ ಗೊತ್ತು - ನಮ್ಮ ಅವೈಜ್ಞಾನಿಕ ಮೌಢ್ಯಕ್ಕೆ ಏನೆನ್ನಬೇಕು? ಹಸುವನ್ನು ಚೆನ್ನಾಗಿ ಸಾಕಲಾಗದಿದ್ದರೂ ಪೂಜೆ ಮಾತ್ರ ಮಾಡುತ್ತೇವೆ. ಕಾರಣ, ಅದೊಂದನ್ನೆ ಪೂಜಿಸುವುದರಿಂದಲೇ ಅದರ ಮೈಯೊಳಗಿರುವ ಮೂವತ್ತುಮೂರುಕೋಟಿ ದೇವತೆಗಳನ್ನೆಲ್ಲ ಪೂಜಿಸಿದಂತಾಗುತ್ತದೆ, ಎಂಬ ಸುಲಭ ಸಿದ್ಧಿಯ ಬಯಕೆ. ಸಮಾರಾಧನೆ ಮಾಡಿಸಲು ವೆಚ್ಚವಾಗುತ್ತದೆ. ಆದ್ದರಿಂದ ಒಂದುಹಿಡಿ ಅಕ್ಕಿಹಿಟ್ಟನ್ನು ಇರುವೆ ಗೂಡಿನ ಬಳಿ ಚೆಲ್ಲಿ ನೂರಾರು ಜೀವಿಗಳಿಗೆ ಒಮ್ಮೆಲೆ ಅನ್ನಸಂತರ್ಪಣೆ ಮಾಡಿಸಿದಂತಾಯಿತೆಂದು ತೃಪ್ತಿಪಟ್ಟುಕೊಳ್ಳುವ ರೀತಿ ಇದು.

ಈ ಗೋರಕ್ಷಾದೀಕ್ಷೆ ಇದ್ದಕಿಂದ್ದಂತೆಯೆ ಚುನಾವಣೆಗಳ ಕಾಲದಲ್ಲಿ ಉದ್ಭವಿಸುತ್ತದೆ! ಶ್ರೀಮತಿ ಇಂದಿರಾಗಾಂಧಿ ಹೇಳಿದ್ದು ಸರಿ: 'ನಮ್ಮ ಜನಕ್ಕೆ ಐದು ವರ್ಷಕ್ಕೊಮ್ಮೆ ಈ ಗೋರಕ್ಷಾ ಬುದ್ಧಿ ಪ್ರಬಲವಾಗುತ್ತದೆ.' ಮತವಳರ ಕೈಯಲ್ಲಿ ಗೋವು ಎಂಥ ಭಯಂಕರ ಅಸ್ತ್ರವಾಗುತ್ತಿದೆ?

ಇದೇ ಬಗೆಯ ಅವೈಜ್ಞಾನಿಕ ದೃಷ್ಟಿ ಕುಟುಂಬಯೋಜನೆಯ ವಿಚಾರದಲ್ಲೂ ಬೆಳೆದಿದೆ. ವಂಕಿಯನ್ನೊ ಅಪರೇಷನ್ನನ್ನೊ ಯಾರು ಯಾರು ಕೈಗೊಳ್ಳಬೇಕು? ಉತ್ತಮ ವರ್ಗದವರೇ? ಮಧ್ಯಮ ವರ್ಗದವರೇ? ಬಡ ಜನತೆಯೇ? ಶ್ರೀಮಂತರೇ? ಉತ್ತಮ ವರ್ಗದವರಿಗೆ ಅನಿಸುತ್ತದೆ, ತಾವಷ್ಟೇ ಜನನ ನಿಯಂತ್ರಣ ಮಾಡುವುದರಿಂದ ಹಾಗೂ ಉಳಿದವರೆಲ್ಲ ಹಾಗೆಯೇ ಅನಿಯಂತ್ರಿತವಾಗುಳಿಯುವುದರಿಂದ ಕಷ್ಟ ಪರಂಪರೆಯೇ ಉಂಟಾಗುತ್ತದಲ್ಲ ಎಂದು. ಮಧ್ಯಮವರ್ಗದವರಿಗೆ ಈ ನಿಯಂತ್ರಣದಿಂದ ತಮ್ಮ ವರ್ಗದ ಸಂತಾನವೆಲ್ಲ ಕ್ಷೀಣಿಸಿ ಉಳಿದ ಅಧಮವರ್ಗದ ಸಂತಾನವೇ ಯಥೇಚ್ಛವಾಗುತ್ತದಲ್ಲ ಎಂಬ ಭಯ; ರಾಷ್ಟ್ರವನ್ನೆಲ್ಲಾ ಅಂತಾಗಿ ಸಂಸ್ಕಾರಹೀನ ಕ್ಷೀಣ ಸಂತಾನವೇ ತುಂಬಿಕೊಳ್ಳುತ್ತದಲ್ಲ ಎಂಬ ಆತಂಕ; ರಾಷ್ಟ್ರೀಯ ಚಿಂತೆ: ಅವರಿಗೆ ತಾವೇ ರಾಷ್ಟ್ರದ ಸಂಸ್ಕೃತಿಯ ಜನಕರೆಂಬ ಭಾವನೆ. ದಲಿತರಿಗಾದರೂ ಮಕ್ಕಳೂ ಕೊಡುವವನೂ ದೇವರೆ! ಆದ್ದರಿಂದ ಈ ಕೃತಕ ನಿಯಂತ್ರಣದ ಯೋಚನೆಯಿಂದೇನೂ ಫಲವಿಲ್ಲ! ಶ್ರೀಮಂತರೆನ್ನುತ್ತಾರೆ, ತಮಗೇನೂ ನಿಯಂತ್ರಣದ ಅಗತ್ಯವೇ ಇಲ್ಲ ಎಂದು. ಮತ್ತೆ ಕೆಲವರೆನ್ನುತ್ತಾರೆ - ಇತರ ಮತೀಯರಾದ ಮಹಮದೀಯರು, ಕ್ಯಾಥೊಲಿಕ ಕ್ರಿಶ್ಚಿಯನ್ನರು ಈ ಜನನ ನಿಯಂತ್ರಣಕ್ಕೆ ಮತೀಯ ಕಾರಣದಿಂದ ಒಪ್ಪದಿರುವುದರಿಂದ, ಇನ್ನು ಕೆಲವೇ ವರ್ಷಗಳಲ್ಲೆ ಅವರ ಸಂಖ್ಯೆಯೇ ಬೆಳೆದು ನಾವೆ ಅಲ್ಪಸಂಖ್ಯಾತರಾಗಬೇಕಾಗುತ್ತದೆಂದು. ಅಂತೂ ಇದಕ್ಕೂ ರಾಜಕೀಯ, ಮತೀಯಬಣ್ಣ: ಎಂಥ ಅವೈಜ್ಞಾನಿಕ ಮೌಢ್ಯ ಆವರಿಸಿಕೊಂಡಿದೆ ನಮ್ಮನ್ನಿಂದು!

ಆದ್ದರಿಂದ ಸಾಹಿತಿಗಳ ಕರ್ತವ್ಯ ಈಗ ಇದು: ಇನ್ನು ಐವತ್ತು ವರ್ಷವಾದರೂ ನಾವು ಈ ಜನತೆಯನ್ನು ಅವೈಜ್ಞಾನಿಕತೆಯಿಂದ ಅವಿಚಾರಬುದ್ಧಿಯಿಂದ ಪಾರುಮಾಡಲು ಶ್ರಮಿಸುವುದು. ನಾವು ನಾಸ್ತಿಕರಾದರೂ ಚಿಂತೆಯಿಲ್ಲ, ಮತ ಭ್ರಾಂತಿಯ ಮತಮೌಢ್ಯಗಳ ವಿಷದಂಷ್ಟ್ರದಿಂದ ಪಾರಾಗಲೇಬೇಕು. ನಾವು ಬರೆಯುವುದು ಎಲ್ಲವೂ ಯಾವಾಗಲೂ ತ್ರಿಕಾಲಸಾಹಿತ್ಯವೇ ಆಗಬೇಕಿಲ್ಲ. ಮಾಡಬೇಕಾದ ಈ ಕಾರ್ಯವೇನೂ ಅಲ್ಪವಲ್ಲ, ಪ್ರಚಾರ ಸಾಹಿತ್ಯ ವಿಚಾರಸಾಹಿತ್ಯ ಇದ್ದಂತೆ ಇದೊಂದು 'ಸಕಾಲ ಸಾಹಿತ್ಯ'. ಅಂದರೆ ಈ ಕಾಲಕ್ಕೆ ಅಗತ್ಯವಾದ ಸಾಹಿತ್ಯ ಈಗ ಬೇಕಾಗಿದೆ. ಬರಹಗಾರರು ಇತ್ತಕಡೆ ಗಮನಹರಿಸಬೇಕು.

ಕವಿಸಮ್ಮೇಲನದ ಅಧ್ಯಕ್ಷನಾಗಿರುವುದರಿಂದ ನಾನು ಒಂದು ಪದ್ಯ ಓದಬೇಕೆಂದು ವ್ಯವಸ್ಥಾಪಕರು ತಿಳಿಸಿದ್ದರು. 'ತ್ರಿಕಾಲಸಾಹಿತ್ಯ'ಕ್ಕೆ ಸೇರಿದ ಕವಿತೆಯಲ್ಲದಿದ್ದರೂ 'ಸಕಾಲ ಸಾಹಿತ್ಯ'ಕ್ಕೆ ಸೇರಬಹುದಾದ ಕವಿತೆಯೊಂದನ್ನು - 'ಪ್ರೇತ - ಕ್ಯೂ' ಎಂದು ಅದರ ಹೆಸರು - ಓದುತ್ತೇನೆ. ಅದು ಕುಟುಂಬಯೋಜನೆಯ ಪ್ರಸಂಗಕ್ಕೆ ಸಂಬಂಧಿಸಿದ್ದು. ಜನನ ನಿಯಂತ್ರಣಕ್ಕೆ ನಾನಾ ವಿಧಾನಗಳನ್ನು ಕಂಡುಹಿಡಿಯುತ್ತಿದ್ದಾರೆ. ಜೀವಾಗಮನ ದ್ವಾರಗಳನ್ನೆಲ್ಲ ಹೇಗೆಲ್ಲಾ ಮುಚ್ಚಬಹುದೊ ಅದನ್ನೆಲ್ಲ ಯೋಚಿಸುತ್ತಿದ್ದಾರೆ. ಕವಿಯಾದರೂ ಏನುಮಾಡಬಲ್ಲ? ಈ ಲೋಕದವರು ಅಡಚಣೆಗಳನ್ನು ಒಡ್ಡುತ್ತಲೆ ಇರುತ್ತಾರೆ. ಆದ್ದರಿಂದ, ಆ ಲೋಕದವರಿಗೇ ಅಪಿಲುಮಾಡುತ್ತನೆ, ಇವರ ತಂಟೆಯೆ ಬೇಡ ಎಂದು: ಜನ್ಮಧಾರಣಕಾತರರಾಗಿ ಕ್ಯೂ ನಿಂತಿರುವ ಆ ಜೀವಿಗಳನ್ನೆ ಕೇಳಿಕೊಳ್ಳುತ್ತಾನೆ:

ಯಾಕಿಂತು
ಕ್ಯೂ ನಿಂತು
ನುಗ್ಗುತಿರುವಿರಿ ಜನ್ಮಧಾರಣೆಗೆ,
ಓ ನತದೃಷ್ಟ ಜೀವಿಗಳಿರಾ?

ನಿಮಗೆ ಕಾಣುವುದಿಲ್ಲ?
ಭೂಮಿ ತುಂಬೆಲ್ಲ
ಜನಸಂಖ್ಯೆ ಏರಿ ಕಿಕ್ಕಿರಿದು ಮೀರಿ,
ಕಂಕಾಲ ಪಂಕ್ತಿ ಹೊಟ್ಟೆಗಿಲ್ಲ:

ಏನು ಅವಸರ ನಿಮಗೆ?
ಯಾವ ಗರ್ಭವೊ ಏನೊ?
ಯಾರ ಯೋನಿಯೊ ಏನೊ?
ಅಂತು ಹುಟ್ಟಿದರಾಯ್ತು ಭೂಮಿಯಲ್ಲಿ!
ಉಸಿರು ಕಟ್ಟಿಹುದೇನು ನಿಮಗೆ ಅಲ್ಲಿ?
ಗುಂಗುರು ಕ್ರಿಮಿಕೀಟ ಕುಲವ ಹೆರುವ ಅತ್ತಿಹಣ್ಣೆ
ನಾಚಿ ಸೋಲುವಂತೆ
ಕೋಟಿ ಕೋಟಿ ಕೋಟಿ ಕೋಟಿ
ನಿಮಿಷ ನಿಮಿಷಕೆ ಹುಟ್ಟಿ ಮುಲಗುಡುವ ಶಿಶುಸಂಖ್ಯೆಯಲ್ಲಿ,
ನಮಗೇ ಇಲ್ಲಿ
ಹೊಟ್ಟೆಗಿಲ್ಲದೆ, ವಿವಿಧ ಬಟ್ಟೆಗಳಲ್ಲಿ,
ಕೆರೆ ಕಟ್ಟೆ ಬಾವಿ ಇಲಿಪಾಷಾಣ ಫಾಲಿಡಾಲು
ತಿಗಣೆಔಷಧಿ ನೇಣುರುಳು ದಾರಿಗಳಲಿ ದಿನಾಲು

ನುಗ್ಗುತಿಹೆವಲ್ಲಾ ನಿಮ್ಮತ್ತ ಕಡೆಗೇ!?
ನೀವಿತ್ತ ಬರದಂತೆ ತಡೆಗಟ್ಟಲೆಂದು
ನೀವು ಐತರುವ ಕಂಡಿಗಳನೆಲ್ಲ ಅಡಕಲೆಂದು
ರಸಾಯನಿಕ ರಬ್ಬರುಂಗರ ಕಾಂಡಮಿತ್ಯಾದಿ
ಕೃತಕ ನಾನಾ ಉಪಾಯ ಸಾಧನಗಳಿಂದೆ,
ಸಂನ್ಯಾಸ ಬ್ರಹ್ಮಚರ್ಯ ಮೋಕ್ಷಾದಿ
ಆದರ್ಶದಾಕರ್ಷಣೆಯ ಬೋಧನೆಗಳಿಂದೆ
ಮಾನವರು ಕಟ್ಟುತಿಹ ಕಟ್ಟೆಗಳನೆಲ್ಲ
ಬಿರದೊಡೆದು ಕೊಚ್ಚಿ ಹೊನಲುಕ್ಕಿ
ನುಗ್ಗುತಿಹಿರಲ್ಲಾ ಇತ್ತ ಕಡೆಗೇ?!
ಅಯ್ಯಯ್ಯೊ
ಏನು ಬಂದಿದೆ ನಿಮಗೆ ಅಲ್ಲಿ ಆತಂಕ?
ಕಾದಿರದೆ ನಿಮಗಿಲ್ಲ ಘೋರತರ ನರಕ?

ಯಾಕಿಂತು
ಕ್ಯೂ ನಿಂತು
ನುಗ್ಗುತಿರುವಿರಿ ಜನ್ಮಧಾರಣೆಗೆ,
ಓ ನತದೃಷ್ಟ ಪ್ರೇತಗಳಿರಾ?

* * *

* ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವ ಸಮಾರಂಭಗಳ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷಸ್ಥಾನದಿಂದ ಮಾಡಿದ ಮುಕ್ತಾಯ ಭಾಷಣ ಮೈಸೂರುಃ ಡಿಸೆಂಬರ್ ೧೦, ೧೯೬೬.

# ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ*

ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ

ಸರ್ವವಿದ್ಯಾಧಿದೇವಿ ಯಾ ತಸ್ಮೈ ವಾಣ್ಯೈ ನಮೋ ನಮಃ
ಯಯಾ ವಿನಾ ಜಗತ್ ಸರ್ವಂ ಶಶ್ವಜ್ಜೀವನ್ಮೃತಂ ಭವೇತ್
ಜ್ಞಾನಾಧಿದೇವೀ ಯಾ ತಸ್ಮೈ ಸರಸ್ವತ್ಯೈ ನಮೋ ನಮಃ
ಯಾಯಾ ವಿನಾ ಜಗತ್ ಸರ್ವಂ ಮೂಕಮುನ್ಮತ್ತವತ್ ಸದಾ
ಯಾ ದೇವೀ ವಾಗಧಿಷ್ಠಾತ್ರಿ ತಸ್ಯೈ ವಾಣ್ಯೈ ನಮೋ ನಮಃ

ಮಾತರ್ ಮಾತರ್ ನಮಸ್ತೇ
ದಹ ದಹ ಜಡತಾಂ
ದೇಹಿ ಬುದ್ಧಿಂ ಪ್ರಶಾಂತಾಂ!

ವಾಗ್ದೇವಿಗೆ ನಮಸ್ಕಾರ, ಸಹೃದಯ ಬಂಧು ಭಗಿನಿಯರಿಗೆ ನಮಸ್ಕಾರ, ಸೋದರ ಸಾಹಿತಿಗಳಿಗೆ ನಮಸ್ಕಾರ:

ಕಣಾಟಕದ ಪರವಾಗಿ, ಕನ್ನಡಿಗರ ಪರವಾಗಿ, ಸರ್ವಭಾಷಾಮಯೀ ಕನ್ನಡ ಸರಸ್ವತಿಯ ಪರವಾಗಿ ಭಾರತ ಭಾರತಿಯ ಮತ್ತು ವಿಶ್ವಭಾರತಿಯ ಶ್ರೀ ಚರಣಗಳಿಗೆ ವಂದಿಸುತ್ತೇನೆ.

ಯಾರ ಘನ ಔದಾರ್ಯದಿಂದ ಮತ್ತು ಸುದೂರದರ್ಶಿತ್ವದಿಂದ ವಾಙ್ಮಯ ಲೋಕ ಕಲ್ಯಾಣಕಾರಿಯಾಗಿರುವ 'ಭಾರತೀಯ ಜ್ಞಾನಪೀಠ' ಸಂಸ್ಥಾಪನೆಯಾಯಿತೋ ಆ ಪುಣ್ಯಚೇತನಗಳಿಗೆ ವಂದನಾರ್ಪಣೆ ಮಾಡಿ, ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು ನನ್ನ ಮೊದಲ ಕರ್ತವ್ಯ. ಏಕೆಂದರೆ ಸ್ವಾತಂತ್ರ್ಯಾನಂತರ ಭರತ ಖಂಡದ ಭೌಗೋಲಿಕ ಸಮಗ್ರತೆಯನ್ನೂ ಐಕ್ಯತೆಯನ್ನೂ ನಮ್ಮ ರಾಜ್ಯಾಂಗ ಸಂವಿಧಾನವು ತನ್ನ ರಾಜಕೀಯ ಶಕ್ತಿಬಾಹುಗಳಿಂದ ಬಂಧಿಸಿರುವಂತೆ, ಈ ಭಾರತೀಯ ಜ್ಞಾನಪೀಠ ಸಂಸ್ಥೆಯು ದೇಶಭಾಷಾ ರೂಪಿಯಾದ ತನ್ನ ಚತುರ್ದಶ ಪ್ರೇಮ ಬಾಹುಗಳಿಂದ, ಸಾಂಸ್ಕೃತಿಕವಾಗಿ, ಸಮಗ್ರ ಭರತಖಂಡವನ್ನೂ ಒಂದುಗೂಡಿಸಲು ತಪಸ್ವಿಯಾಗಿ ನಿಂತಿದೆ. ಅಖಿಲ ಭಾರತೀಯವಾದ ಈ ಸಮಗ್ರತೆ ಐಕ್ಯತೆಗಳು ರಾಜಕೀಯವಾಗಿ ಅರ್ವಾಚೀನವಾದುವಾದರೂ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಪ್ರಾಚೀನವಾದುವುಗಳಾಗಿವೆ. ವೇದೋಪನಿಷತ್ತು ದರ್ಶನಾದಿಗಳಿಂದ ಪರಿಪುಷ್ಟಿಗೊಂಡ ಆ ಐಕ್ಯತೆ, ಅತ್ಯಂತಭಿದ್ರವಿಚ್ಛಿದ್ರಕವಾದ ರಾಜಕೀಯ ಪರಿಸ್ಥಿತಿಯಲ್ಲಿಯೂ, ಒಂದಿನಿತೂ ಚ್ಯುತಿಗೊಳ್ಳದ ರೀತಿಯಲ್ಲಿ ರಕ್ಷಿತವಾಗಿತ್ತು. ವಾಲ್ಮೀಕಿ ವ್ಯಾಸಾದಿ ಋಷಿ ಕವಿಗಳಿಂದ, ರಾಮಾಯಣ ಮಹಾಭಾರತಾದಿ ದಿವ್ಯ ಕಾವ್ಯ ಕೃತಿಗಳ ಶಿಲ್ಪ ಮಹಿಮೆಯಿಂದ. ಆ ದೃಷ್ಟಿಯಿಂದ ನೋಡಿದರೆ ಅಖಿಲ ಭಾರತದ ಸಮಗ್ರತೆ ಐಕ್ಯತೆಗಳನ್ನು ಅನಂತಕಾಲವೂ ಸಂರಕ್ಷಿಸುವ ನಿತ್ಯಶಕ್ತಿ ಎಂದರೆ ಸಾಹಿತ್ಯ ಶಕ್ತಿಯಾಗಿದೆ. ಆವಿರ್ಭವಿಸಿರುವ ಅಂತಹ ಸಾಹಿತ್ಯ ಶಕ್ತಿದೇವತೆಗೆ

ಅವಿಚ್ಛಿನ್ನವಾಗಿ ಆರಾಧನೆ ನಡೆದು ಆಕೆಯನ್ನು ನಿರಂತರವೂ ಚಾಗ್ರತವಾಗಿರಿಸುವ ಅಗ್ನಿವೇದಿಕೆಯಾಗಿದೆ ಈ ಜ್ಞಾನಪೀಠ!

ಆದ್ದರಿಂದಲೆ ಈ ಜ್ಞಾನಪೀಠ ಸಂಸ್ಥಾಪನೆಗೆ ಕಾರಣರಾದ ಉದಾತ್ತ ಮಹನೀಯರನ್ನು ನನ್ನ ಆದ್ಯಕರ್ತವ್ಯವಾಗಿ ವಂದಿಸಿದ್ದು, ಮತ್ತು ಅಭಿನಂದಿಸಿದ್ದು. ಈ ಸಂದರ್ಭದಲ್ಲಿ ನನಗೆ, ಅನೇಕ ವರ್ಷಗಳ ಹಿಂದೆ, ವಿಶ್ವವಿದ್ಯಾನಿಲಯವೊಂದರ ಪ್ರತಿಷ್ಠಾಪನೆಗಾಗಿ ವಿಪುಲ ಧನಾರ್ಪಣೆ ಮಾಡಿದ ಮಹಾದಾತೃವೊಬ್ಬರ ನೆನಪಿಗಾಗಿ ರಚಿಸಿದ್ದ ಅಷ್ಟಷಟ್ಪದಿ ಒಂದರ ನೆನಪಾಗುತ್ತಿದೆ. ಅದು ಈ ಸಂದರ್ಭಕ್ಕೆ ಇನ್ನೂ ಹೆಚ್ಚು ಔಚಿತ್ಯಪೂರ್ಣವಾಗಿ ಅನ್ವಯವಾಗುವುದರಿಂದ ಅದನ್ನಿಲ್ಲಿ ತಮಗೆ ನಿವೇದಿಸಿದರೆ ತಾಳ್ಮೆಯಿಂದ ಆಲಿಸುವಿರೆಂದ ನಂಬಿತ್ತೇನೆ:

ಸರಸತಿಯ ಬೀಣೆಗೊದಗಿಸೆ ತಂತಿಯಂ, ಧನ್ಯ<br>
ದಲ್ ಲಕ್ಷ್ಮಿ! ಲೌಹನಿನದಮ ವೈರಣವಮಾಗಿ<br>
ಪೊರೆವುದು ಚಿರಂತನದ ಸುರಗಾನದಿಂ, ತ್ಯಾಗಿ,<br>
ನಿನ್ನ ಜಸಮಂ ವಿಸ್ಮೃತಿಯ ಮೃತ್ಯುವಿಂ. ಮುನ್ನೆ<br>
ವಿಕ್ರಮಾರ್ಜುನವಿಜಯಮಂ ಬರೆದು ಪಂಪಕವಿ<br>
ಕೊರೆದನರಿಕೇಸರಿಯ ಪೆಸರಂ, ಚಿರಂ ಬಾಳ್ವ<br>
ಕೃತಿಶಿಲಾಶಾಸನದಿ: ಕಾವ್ಯವೋದುವ ಕೇಳ್ವ<br>
ಕನ್ನಡಿಗೆರಲ್ಲರ ಕೃತಜ್ಞತೆಗೆ, ಚಂದ್ರ ರವಿ<br>
ಪೊಳೆವನ್ನೆಗಂ, ಪಾತ್ರನಾಗಿರ್ಪನಾ ನೃಪತಿ,<br>
ತನ್ನುಳಿದ ಕಜ್ಜಗಳ್ ತನ್ನ ರಾಜ್ಯಂಗೂಡಿ<br>
ಪೇಳೆ ಪೆಸರಿಲ್ಲದಾಗಿರ್ಪೊಡಂ. ದಿವ್ಯಕೃತಿ,<br>
ಹೇ ಧನಿಯೆ, ನಿನ್ನ ದಾನಮನಮೃತಮಂ ಮಾಡಿ<br>
ನಿನ್ನಾತ್ಮಕಮೃತ ತೃಪ್ತಿಯನೀವುದಾವಗಮ್:<br>
ನಿನಗಕ್ಕೆ ಆ ಸೈಪಿನಾ ಶಾಂತಿಯಾ ಸೊಗಮ್!

ಕೊಳಲಿಗೆ ಅನೇಕ ಕಣ್ಣುಗಳಿರುವಂತೆ ಭಾರತಿಗೆ ಬಹು ಜಿಹ್ವೆಗಳಿವೆ. ಪೀಪಿ ಊದುವ ಹುಡುಗನಿಗೆ ಕೊಳಲಿಗೆ ಅನೇಕ ರಂಧ್ರಗಳಿರುವುದು ತೊಂದರೆಯ ವಿಷಯವಾಗುತ್ತದೆ; ಆದರೆ ವೇಣುವಾದನ ನಿಪುಣನಿಗೆ ಆ ರಂಧ್ರಗಳ ಅನೇಕತೆಯೆ ಸಂಗೀತದ ಸ್ವರಮೇಲ ಮಾಧುರ್ಯಕ್ಕೆ ಅವಶ್ಯ ಸಾಧನವಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷಾನುಗಣ ರಾಜ್ಯಗಳ ರಚನೆಯಾಗಿರುವುದು ಕೆಲವು ಅರೊಚಿ - ಭೀರುಗಳಿಗೆ ರುಚಿಸುತ್ತಿಲ್ಲ; ಕೆಲವರಂತೂ ದಿಗಿಲುಗೊಂಡಿದ್ದಾರೆ. ಹೋರಾಡಿ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಸ್ವಭಾಷಾಪ್ರೇಮದ ಅತಿರೇಕದಿಂದ ಉಂಟಾಗಬಹುದಾದ ಅನೈಕ್ಯತೆ ಎಲ್ಲಿ ಧಕ್ಕೆ ತರುತ್ತದೆಯೊ ಎಂದು ಅವರು ಹೆದರಿದ್ದಾರೆ. ಅಂತಹರಿಗಿರುವ ಭಯವನ್ನು ಸಂಪೂರ್ಣ ಹೋಗಲಾಡಿಸುತ್ತದೆ ಜ್ಞಾನಪೀಠದ ಇಂದಿನ ಸಮಾರಂಭ.

ಜ್ಞಾನಪೀಠದ ಈ ವಿಶಾಲ ವೇದಿಕೆಯಲ್ಲಿ ಭಾರತೀಯ ಭಾಷೆಗಳೆಲ್ಲ ತಮ್ಮ ತಮ್ಮ ಸ್ನೇಹಹಸ್ತಗಳನ್ನು ಚಾಚಿ, ಕೌಟುಂಬಿಕ ಸ್ವರೂಪದ ಪರಸ್ಪರ ಭಿನ್ನತೆ ವಿವಾದಗಳನ್ನೆಲ್ಲ ಹಿಂದಿಕ್ಕಿ, ಐಕ್ಯತೆಯ ಆರತಿಯನ್ನೆತ್ತಿ ಭರತಮಾತೆಗೆ ಪೂಜೆ ಸಲ್ಲಿಸುತ್ತಿವೆ. ಆಚೆಯ ವರುಷ ಕೇರಳದೇವಿಗೂ, ಹೋದವರುಷ ವಂಗದೇವಿಗೂ ಸಲ್ಲಿಸಿದ ಗೌರವವನ್ನು ಈ ವರ್ಷ ಕರ್ಣಾಟಕ ಸೌರಾಷ್ಟ್ರದೇವಿಯರಿಗೆ ಒಟ್ಟಿಗೆ ಸಲ್ಲಿಸುತ್ತಿವೆ. ಹಾಗೆಯೆ, ಮುಂಬರುವ ಸಂವತ್ಸರಗಳಲ್ಲಿ ಒಂದಾದಮೇಲೊಂದರಂತೆ ಉಳಿದ ಇತರ ಭಾಷಾದೇವಿಯರಿಗೂ ಈ ಗೌರವ ಸಲ್ಲುವುದರಲ್ಲಿ ಸಂದೇಹವಿಲ್ಲ.

ನಾನು ರಾಜ್ಯದೃಷ್ಟಿಯಿಂದ ಕರ್ಣಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ಣಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ. ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಕೊಳ್ಳುತ್ತದೆ. ಭಾರತಿ ತಾಯಿ; ಕರ್ಣಾಟಕ ಮಗಳು. ಭಾರತಕ್ಕೆ ಧಕ್ಕೆ ಒದಗಿದರೆ ಕರ್ಣಾಟಕ ಉಳಿಯುವುದಿಲ್ಲ; ಮಗಳು ಕರ್ಣಾಟಕಕ್ಕೆ ಕೇಡಾದರೆ ತಾಯಿ ಸಹಿಸುವುದಿಲ್ಲ. ಪರಸ್ಪರ ಕ್ಷೇಮರಕ್ಷಣೆಯಿಂದಲೆ ಸರ್ವರ ಕ್ಷೇಮವೂ ರಕ್ಷಿತವಾಗುತ್ತದೆ.

ಆದ್ದರಿಂದಲೆ ಕರ್ಣಾಟಕದ ಕವಿ 'ಜಯ ಹೇ ಕರ್ಣಾಟಕ ಮಾತೆ!' ಎಂದು ಹಾಡಿದಾಗ ಆ ಜಯಗಾಥೆಯನ್ನು 'ಜಯ ಭಾರತ ಜನನಿಯ ತನುಜಾತೆ!' ಎಂದೇ ಪ್ರಾರಂಭಿಸುತ್ತಾನೆ. ಮೊದಲು ಭಾರತದ ಜನನಿಗೆ ಜಯಕಾರ. ತನ್ನ ಗಾಥೆಯ ಒಂದೊಂದು ಪದ್ಯದ ಕೊನೆಯ ಚರಣವನ್ನೂ ಭಾರತದ ಏಕತ್ವ ರಕ್ಷಣೆಯ ಮಂತ್ರವನ್ನಾಗಿ ಘೋಷಿಸಿದ್ದಾನೆ: 'ರಾಘವ ಮಧುಸೂದನರವತರಿಸಿದ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ಕಪಿಲ ಪತಂಜಲ ಗೌತಮ ಜಿನ ನುತ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ನಾನಕ ರಾಮಾನಂದ ಕಬೀರರ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ಚೈತನ್ಯ ಪರಮಹಂಸ ವಿವೇಕರ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' ಇಲ್ಲಿ ಕರ್ಣಾಟಕ ಮಾತೆಗೆ ತನ್ನದೇ ಆಗಿರುವ ಪ್ರತ್ಯೇಕ ಅಸ್ತಿತ್ವ ಇಲ್ಲ; ಸರ್ವದಾ ತಾಯಿ ಭಾರತಿಯ ಮಗಳಾಗಿಯೇ ಇರುವುದರಿಂದ ಮಾತ್ರ ಆಕೆ ಅಸ್ತಿತ್ವಕ್ಕೆ ರಕ್ಷೆಯೊದಗುತ್ತದೆ; ಅದರ ಪೋಷಣೆಗೆ ಅಮೃತಸಹಾಯ ಲಭಿಸುತ್ತದೆ. ಆದ್ದರಿಂದ ಭಾಷಾನುಗುಣ ರಾಜ್ಯರಚನೆಯಿಂದ ಭಾರತರಾಷ್ಟ್ರದ ಸಮಗ್ರತೆಗೆ ಭಂಗ ಬರುತ್ತದೆ ಎಂಬುದು ಭ್ರಾಂತಿಯ ಮಾತಾಗುತ್ತದೆ; ರಚಿತವಾಗಿರುವ ಭಾಷಾ ರಾಜ್ಯಗಳನ್ನು ಮತ್ತೆ ಅಳಿಸಿ, ಭಾವೈಕ್ಯತೆಯನ್ನು ಸಾಧಿಸುತ್ತೇವೆ ಎನ್ನುವವರು ರಾಷ್ಟ್ರ ಕ್ಷೇಮವನ್ನು ಹಾನಿಗೀಡುಮಾಡುವ ದೇಶದ್ರೋಹಿಗಳಾಗುವುದರಲ್ಲಿ ಸಂದೇಹವಿಲ್ಲ.

ಕರ್ಣಾಟಕವನ್ನು 'ಭಾರತ ಜನನಿಯ ತನುಜಾತೆ' ಎಂದು ಹಾಡಿದ ಕವಿಯೇ 'ಭರತ ಭೂಮಿ ನನ್ನ ತಾಯಿ' ಎಂದೂ ಹಾಡಿದ್ದಾನೆ. 'ಮತದ ಬಿರುಕುಗಳನು ತೊರೆವೆ; ನುಡಿಗಳೊಡಕುಗಳನು ಮರೆವೆ; ತೊತ್ತ ತೊಡಕುಗಳನು ಬಿರಿವೆ; ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು!' ಎಂದೂ ಹಾಡುತ್ತಾನೆ. ಕನ್ನಡದ ಕವಿಯಂತೆಯೆ ಇತರ ಎಲ್ಲ ಭಾರತೀಯ ಭಾಷೆಯ ಕವಿಗಳೂ ಹಾಡಿದ್ದಾರೆ ಎಂಬುದರಲ್ಲಿ ನನಗಿನಿತೂ ಶಂಕೆಯಿಲ್ಲ.

ಯಾವುದಾದರೂ ಭಾಷೆಯ ಯಾವನಾದರೂ ಒಬ್ಬ ಸಾಹಿತಿ ಸೌಹಾರ್ದಕ್ಕೆ ಭಂಗತರುವ ರೀತಿಯಲ್ಲಿ ಅಪಸ್ವರವೆತ್ತಿ ಹಾಡಿದ್ದರೆ, ಅದು ಖಂಡನೀಯ; ಅದು ಆಸುರೀ ಸಾಹಿತ್ಯವಾಗುತ್ತದೆ. ನಿಜವಾದ ಸಾಹಿತ್ಯ ಐಕ್ಯಕಾರಿ. ಸಾಮರಸ್ಯ, ಸಮನ್ವಯ, ಸಹಾನುಭೂತಿ, ಸರ್ವೋದಯಭಾವನೆ ಇವುಗಳನ್ನು ಪ್ರಚೋದಿಸುವುದು ದೈವೀ ಸಾಹಿತ್ಯದ ಲಕ್ಷಣ. ಅಸೂಯೆ, ದ್ವೇಷ, ಸ್ವಾರ್ಥತೆ, ನಿಷ್ಕರುಣೆ ಅನುಕಂಪನರಾಹಿತ್ಯ ಇತ್ಯಾದಿಗಳನ್ನು ಕೆರಳಿಸುವ ಬರೆಹ ಅಸುರೀಸಾಹಿತ್ಯವಾಗುವುದರಿಂದ ಅದು ದಮನಯೋಗ್ಯವಾಗುತ್ತದೆ.

ಈ ವರ್ಷದ ಜ್ಞಾನಪೀಠ ಪ್ರಶಸ್ತಿ ನನ್ನ ಮತ್ತು ನನ್ನ ಮಿತ್ರರ ಹೆಸರಿಗೆ ವೈಯಕ್ತಿಕವಾಗಿ ಲಭಿಸಿದಂತೆ ಪ್ರಕಟವಾಗಿದ್ದರೂ, ವಾಸ್ತವವಾಗಿ, ಅದು ಕನ್ನಡದ ಮತ್ತು ಗುಜರಾತಿಯ ಎಲ್ಲ ಕವಿ, ಎಲ್ಲ ಸಾಹಿತಿ, ಎಲ್ಲ ಲೇಖಕರ ಸಮಷ್ಟಿ ಸತ್ತ್ವಕ್ಕೂ ಇಟ್ಟ ಕಿರೀಟವಾಗಿದೆ. ನಾನು ಮತ್ತು ಶ್ರೀ ಉಮಾಶಂಕರ ಜೋಷಿಯವರು ಕನ್ನಡ ಮತ್ತು ಗುಜರಾತಿಗಳ ವಿನಮ್ರ ಪ್ರತಿನಿಧಿಗಳಾಗಿ ಮಾತ್ರವೇ ಅದನ್ನು ಹೆಮ್ಮೆಯಿಂದ, ನಮ್ಮ ನಮ್ಮ ನುಡಿಗಳಿಗೆ ದೊರೆತ ಗೌರವಕ್ಕಾಗಿ ಹೆಮ್ಮೆಪಡುತ್ತಾ, ಶಿರವೆತ್ತಿ ನಿಲ್ಲಲು, ಶಿರಬಾಗಿ ಸ್ವೀಕರಿಸುತ್ತಿದ್ದೇವೆ. ಯಾವುದಾದರೂ ಒಂದು ಕಾಲಾವಧಿಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳಲ್ಲಿ ಸರ್ವಶ್ರೇಷ್ಠವೆಂದು ಪರಿಗಣಿತವಾದುದಕ್ಕೆ ಪ್ರಶಸ್ತಿ ಸಲ್ಲುತ್ತದೆ ಎಂಬುದು ವ್ಯಾವಹಾರಿಕವಾಗಿ ಅನಿವಾರ್ಯವಾಗಿ ಅನುಸರಿಸಬೇಕಾಗಿರುವ ಒಂದು ವಿಧಾನವೆ ಹೊರತು, ಕೇವಲವೆನ್ನಬಹುದಾದ ನಿರಪೇಕ್ಷಸತ್ಯವಾಗಲಾರದು. ಆರಿಸಿಕೊಂಡ ಹಲವಾರು ಉತ್ತಮ ಗ್ರಂಥಗಳಲ್ಲಿ ಯಾವುದಾದರೊಂದನ್ನೆ ಸರ್ವೋತ್ತಮ ಎಂದು ನಿರ್ಣಯಿಸುವುದು ಎಷ್ಟು ಕಷ್ಟದ ಮತ್ತು ಚರ್ಚಾಸ್ಪದ ವಿಷಯವಾಗುತ್ತದೆ, ಎಂಬುದು ಎಲ್ಲ ಶ್ರೇಷ್ಠ ವಿಮರ್ಶಕರಿಗೂ ತಿಳಿದ ವಿಷಯವೆ ಆಗಿರುತ್ತದೆ. ಒಂದೊಂದು ದೃಷ್ಟಿಯಿಂದ ಪರಿಶೀಲಿಸಿದಾಗ ಒಂದೊಂದು ಸರ್ವಶ್ರೇಷ್ಠವಾಗಿ ತೋರಬಹುದು. ಪ್ರಶಸ್ತಿಪ್ರದಾನದ ಅವಶ್ಯ ನಿಯಮಕ್ಕೆ ಅನುಗುಣವಾಗಿ, ಎಲ್ಲವೂ ಶ್ರೇಷ್ಠವಾಗಿರಬಹುದಾದ ಆ ಉತ್ತಮ ಕೃತಿಗಳಲ್ಲಿ ಯಾವುದಾರೊಣದನ್ನು 'ಸರ್ವೋತ್ತಮ' ಎಂದು ನಿರ್ಣಯಿಸಲೇಬೇಕಾಗುತ್ತದೆ. ಅಂದ ಮಾತ್ರಕ್ಕೆ ಉಳಿದವುಗಳ ಶ್ರೇಷ್ಠತ್ವಕ್ಕೆ ಚ್ಯುತಿ ಬಂದಂತಾಗುವುದಿಲ್ಲ; ಅವುಗಳ ಹಿರಿಮೆಗಳನ್ನು ಅಲ್ಲಗೆಳೆದಂತಾಯಿತೆಂದು ತಿಳಿದವರಾರೂ ತಿಳಿಯುವುದಿಲ್ಲ.

ಕನ್ನಡ ಸಾಹಿತ್ಯ ಚರಿತ್ರೆ ಹತ್ತು ಹನ್ನೊಂದು ಶತಮಾನಗಳ ಪೂರ್ವದ ಕಾಲದಿಗಂತದಲ್ಲಿ ಕಣ್ಮರೆಯಾಗುತ್ತದೆ. ಹತ್ತನೆಯ ಶತಮಾನದಲ್ಲಿಯೆ, ಜಗತ್ತಿನ ಯಾವ ಮಹಾಕಾವ್ಯಗಳಿಗೂ ಹೆಗಲೆಣೆಯಾಗಿ ನಿಲ್ಲುವಂತಹ ಮಹಾಕಾವ್ಯ ಕೃತಿಗಳು ಕನ್ನಡದಲ್ಲಿ ಸೃಷ್ಟಿಯಾಗಿರುವ ವೈಭವದ ದೃಶ್ಯ ವಿಸ್ಮಿತ ನೇತ್ರಗಳಿಗೆ ಗೋಚರವಾಗುತ್ತದೆ. ಷೇಕ್ಸ್‌ಸ್ಪಿಯರ್ ಮಹಾಕವಿ ಹುಟ್ಟುವುದಕ್ಕೆ ಆರುನೂರು ವರ್ಷಗಳ ಮುನ್ನವೆ ಮಹಾಕವಿ ಪಂಪ ಜನಿಸಿದ್ದನೆಂಬುದನ್ನು ನೆನೆದರೆ ನಿಮಗೆ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆಗಳ ಸ್ವರೂಪ ಇನಿತಾದರೂ ಮನೋಗೋಚರವಾಗಬಹುದು. ಪಂಪನ ಮಹಾಕಾವ್ಯ ಕ್ರಿ.ಶ. ೯೪೧ ರಲ್ಲಿ ಹುಟ್ಟಿದ್ದರೆ, ಷೇಕ್ಸ್‌ಸ್ಪಿಯರನ ಮೊದಲ ಕೃತಿ ಹುಟ್ಟಿದ್ದು ಕ್ರಿ.ಶ. ೧೫೯೩ರಲ್ಲಿ. 'ಗದಾಯುದ್ಧ' ಕಾವ್ಯದ ಅದ್ಭುತ ಕವಿ ರನ್ನನ ಕಾಲ (ಕ್ರಿ.ಶ. ೯೯೩) ಹತ್ತನೆ ಶತಮಾನದ ಕೊನೆಯ ಭಾಗವಾದರೆ, 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯದ ಕರ್ತೃ ಮಿಲ್ಟನ್ ಕವಿಯ ಕಾಲ (ಕ್ರಿ.ಶ. ೧೬೦೮) ಹದಿನೇಳನೆಯ ಶತಮಾನದ ಆದಿಭಾಗವಾಗುತ್ತದೆ. ಕನ್ನಡದಂತೆಯೆ ನಮ್ಮ ಇತರ ಅನೇಕ ಪ್ರದೇಶ ಭಾಷೆಗಳೂ ಪ್ರಾಚೀನತೆಯಲ್ಲಿ, ಶ್ರೀಮಂತತೆಯಲ್ಲಿ, ಶಕ್ತಿಸಾಮರ್ಥ್ಯಗಳಲ್ಲಿ ಮೇಲುಮಟ್ಟದಲ್ಲಿವೆ ಎಂದು ನಾನು ನಂಬುತ್ತೇನೆ. ನನ್ನ ನಂಬುಗೆ ಬರಿಯ ಭಾವೋಲ್ಲಾಸ ವಿಷಯವಲ್ಲ, ವಾಸ್ತವಾದದ್ದು;

ಎಂಬುದಕ್ಕೆ ಈ ಜ್ಞಾನಪೀಠವೆ ಸಾಕ್ಷಿ ಒದಗಿಸುತ್ತಿದೆ, ತನ್ನ ಪ್ರಾಚೀನ ಗ್ರಂಥಗಳ ಸಂಪಾದನೆ ಮತ್ತು ಪ್ರಕಾಶನಗಳಿಂದ. ಅದು ಪ್ರಕಟಿಸುತ್ತಿರುವ ಮತ್ತು ಪ್ರಕಟಿಸಲು ಕಾರ್ಯಕ್ರಮ ಹಾಕಿಕೊಂಡಿರುವ ಗ್ರಂಥಪಟ್ಟಿ ಎಂತಹವರನ್ನೂ ವಿಸ್ಮಯಗೊಳಿಸುವಂತಹುದಾಗಿದೆ.

ಇಷ್ಟು ಪೂರ್ವಿಕತೆ ಮತ್ತು ಸಾಹಿತ್ಯಸಮೃದ್ಧಿ ಇರುವ ದೇಶಭಾಷೆಗಳು ರಾಜಕೀಯ ಕಾರಣಗಳಿಂದಲೂ ಜನಜೀವನದ ಅವನತಿಯಿಂದಲು ಕ್ರಮೇಣ ಅಪಗತಿಗಿಳಿದು, ಬ್ರಿಟಿಷರು ಭರತಖಂಡವನ್ನು ಆಕ್ರಮಿಸಿ ಆಳತೊಡಗಿದ ಮೇಲೆ, ಜ್ಞಾನ ವಿಜ್ಞಾನ ಸಂಪನ್ನವೂ ನವಜೀವನ ಸತ್ವಪೂರ್ಣವೂ ಆಗಿದ್ದು ಅಧಿಕೃತ ಭಾಷಾಪಟ್ಟಕ್ಕೂ ಏರಿದ ಇಂಗ್ಲಿಷಿನ ಮುಂದೆ ಕಾತಿಹೀನವಾಗಿ, ಬಡವಾಗಿ, ದಾಸಸ್ಥಾನಕ್ಕೆ ಬಿದ್ದು, ತನ್ನವರಿಂದಲೆ ಅವಹೇಳನಕ್ಕೂ ತಿರಸ್ಕಾರಕ್ಕೂ ಪಕ್ಕಾಗಿ ಮೂಲೆ ಸೇರಿದವು. ಆ ದುರಂತಕಥೆ ಸಾಹಿತ್ಯ ಪ್ರೇಮಿಗಳೆಲ್ಲರಿಗೂ ತಿಳಿದ ವಿಷಯವೆ ಆಗಿದೆ. ಆ ಕತ್ತಲೆಯಲ್ಲಿಯೂ ದೈವೀಕೃಪೆಯಂತೆ ಹೊಳೆಯುತ್ತಿದ್ದ ಒಂದು ಆಶಾಕಿರಣವಿದ್ದುದು ನಮ್ಮ ಭಾಗ್ಯ; ಅದೆಂದರೆ, ರಾಜಕಾರಣಕ್ಕಲ್ಲದೆ ಮತಪ್ರಚಾರಕ್ಕಾಗಿ ಬಂದಿದ್ದ ಆ ವಿದೇಶಿಯರಲ್ಲಿ ಕೆಲವು ಮಹನೀಯರು ನಮ್ಮ ದೇಶಭಾಷೆಗಳ ಪ್ರಾಚೀನತೆಯನ್ನೂ ಅವುಗಳ ಮಹತ್ತನ್ನೂ ಗ್ರಹಿಸಿ, ತಮ್ಮ ತಪಸ್ಯಾಸದೃಶವಾದ ಅನ್ವೇಷಕ ಶ್ರಮದಿಂದ, ನಶಿಸಿ ಹೋಗುತ್ತಿದ್ದ ಹಳೆಯ ಓಲೆಯ ಗ್ರಂಥಗಳನ್ನು ಉದ್ಧರಿಸಿ, ಪ್ರಕಟಿಸಿ, ವ್ಯಾಕರಣಾದಿಗಳನ್ನು ಬರೆದು, ನಿಘಂಟುಗಳನ್ನು ರಚಿಸಿ, ಅವುಗಳು ಸಂಪೂರ್ಣವಾಗಿ ಖಿಲವಾಗದಂತೆ ನೋಡಿಕೊಂಡದ್ದು.

ಸ್ವಾತಂತ್ರ್ಯಪೂರ್ವದಲ್ಲಿಯೆ ಪೂಜ್ಯ ಗಾಧೀಜಿಯೆ ಮೊದಲಾಗಿ ಅನೇಕ ದೇಶೀಯ ಮತ್ತು ವಿದೇಶೀಯ ವಿದ್ಯಾತಜ್ಞರು ನಮ್ಮ ದೇಶಭಾಷೆಗಳಿಗೆ ಶಿಕ್ಷಣ ಮಾಧ್ಯಮದಿಂದ ಹಿಡಿದು ಆಡಳಿತ ಭಾಷೆಯವರೆಗೆ ಬದುಕಿನ ಎಲ್ಲ ರಂಗಗಳಲ್ಲಿಯೂ ಪ್ರಥಮಸ್ಥಾನ ಕೊಡಬೇಕೆಂದು ವಾದಿಸಿದ್ದರು. ಇಂಗ್ಲಷಿಗೆ ಇತರ ವಿದೇಶೀ ಭಾಷೆಗಳೊಂದಿಗೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಐಚ್ಛಿಕಸ್ಥಾನ ಕೊಡಬೇಕೆಂಬುದೂ ಅವರ ಮತವಾಗಿತ್ತು.

ಆದರೆ ಸ್ವಾತಂತ್ರ್ಯಾನಂತರ ಸ್ವಾತಂತ್ರ್ಯಶಿಲ್ಪಿ ಬಾಪೂಜಿಯ ಎದೆಗೆ ಹೊಕ್ಕ ಗುಂಡು ಸ್ವಾತಂತ್ರ್ಯಪೂರ್ವದಲ್ಲಿದ್ದ ನಮ್ಮ ಅನೇಕ ಆದರ್ಶ, ಆಶಯ ಮತ್ತು ಧ್ಯೇಯಗಳ ಗುಂಡಿಗೆಗೂ ತಗುಲಿದೆಂತಿದೆ!

ಇಂಗ್ಲಿಷನ್ನು ಶಿಕ್ಷಣಮಾಧ್ಯಮ ಸ್ಥಾನದಿಂದ ತೆಗೆದುಹಾಕಿ ಪ್ರಾದೇಶಿಕ ಭಾಷೆಗಳಿಗೆ ಆ ಸ್ಥಾನ ನೀಡುವ ಮಾತಂತಿರಲಿ, ಇಂಗ್ಲಿಷನ್ನು ಈಗ ಅದಕ್ಕಿರುವ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ಇಳಿಸಲೂ ಒಪ್ಪದೆ, ಅದಕ್ಕಿರುವ ಬಲತ್ಕಾರದ ಸ್ಥಾನವನ್ನೆ ಸರ್ವಕಾಲಕ್ಕೂ ಶಾಶ್ವತಗೊಳಿಸುವ, ನಾಡಿನ ಏಳಿಗೆಗೆ ಅತ್ಯಂತ ಹಾನಿಕರವಾದ ನಿರ್ಣಯವನ್ನೂ ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಕೈಕೊಳ್ಳುವ ಸಂಭವ ತೋರುತ್ತಿದೆ. ಅಂತಹ ಚಿರಂತನ ಅಪಾಯದಿಂದ ನಮ್ಮ ರಾಷ್ಟ್ರವನ್ನು ಪಾರುಮಾಡಿ ರಕ್ಷಿಸಲಿ ಎಂದು ಈ ಭಾರತೀಯ ಜ್ಞಾನಪೀಠದ ಪವಿತ್ರವೇದಿಕೆಯಿಂದ ಶ್ರೀ ವಾಗ್ದೇವಿಗೆ ನಾನು ಪ್ರಾರ್ಥಿಸಿ ಮೊರೆಯಿಡುತ್ತೇನೆ.

ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ, ಇಂಗ್ಲಿಷ್ ಭಾಷಾ ಸಾಹಿತ್ಯದ ಪ್ರೇರಣೆಯಿಂದಲೆ, ನಮ್ಮ ದೇಶಭಾಷೆಗಳು ತಮ್ಮ ಗತಪೂರ್ವದ ಸಂಸ್ಕೃತಿಯ ಪುನರುಜ್ಜೀವನದೊಂದಿಗೆ ನವೀನ ಪ್ರಪಂಚದ ಜ್ಞಾನ ವಿಜ್ಞಾನ ಸಂಸ್ಕೃತಿಗಳಿಂದ ಉತ್ತೇಜಿತವಾಗಿ, ಸಶಕ್ತವಾಗಿ ಊರ್ಜಿತಗೊಂಡಿವೆ; ದಿನದಿನವೂ ಮೇಲಮೇಲಕ್ಕೇರುತ್ತಿವೆ. ಕೆಲವು ಭಾಷೆಗಳಲ್ಲಿ, ಅದರಲ್ಲಿಯೂ ಸಾಹಿತ್ಯಕ್ಷೇತ್ರದಲ್ಲಿ, ಅಲ್ಪಸ್ ಪರ್ವತ ಶಿಖರಗಳನ್ನು ನಾಚಿಸುವ ಹಿಮಾಲಯ ಪರ್ವತ ಶಿಖರಗಳಂತೆ, ಯಾವ ಪಾಶ್ಚಾತ್ಯ ಸಾಹಿತ್ಯ ಕೃತಿಯೂ ಇದುವರೆಗೂ ಏರಲಾರದಂತಹ ಮಹೋನ್ನತಿಗೆ ಕೆಲವಾದರೂ ಸಾಹಿತ್ಯ ಕೃತಿಗಳು ಏರಿನಿಂತಿವೆ. ಅತಿಶಯ ಎಂದು ಕೆಲವರಿಗೆ ತೋರಬಹುದಾದ ಈ ಉಕ್ತಿಯ ಸತ್ಯ ಗೊತ್ತಾಗಬೇಕಾದರೆ, ನಮ್ಮ ಪ್ರದೇಶ ಭಾಷಾ ಸಾಹಿತ್ಯಗಳ ಪರಿಚಯ ಪರಸ್ಪರರಿಗೆ ಅರಿವಾಗುವಂತೆ ಅನುವಾದ ಕಾರ್ಯ ನಡೆಯಬೇಕಾಗಿದೆ. ಈ ಕಾರ್ಯ ಈಗಾಗಲೆ ಅಲ್ಪಸ್ವಲ್ಪವಾಗಿ ನಾನಾ ಸಂಸ್ಥೆಗಳ ಮುಖಾಂತರ ಪ್ರಾರಂಭವಾಗಿದೆ. ಸಾಹಿತ್ಯ ಅಕಾಡೆಮಿಯಂತೆ ಭಾರತೀಯ ಜ್ಞಾನಪೀಠವೂ ಆ ಗುರಿಯತ್ತ ಭರದಿಂದ ಸಾಗುತ್ತಿದೆ.

ನನಗೆ ತಿಳಿದಿರುವ ಮಟ್ಟಿಗೆ, ನಮ್ಮ ಪ್ರದೇಶ ಭಾಷೆಗಳು, ರಾಷ್ಟ್ರವು ತಮ್ಮ ಮೇಲೆ ಹೊರಿಸಬಹುದಾದ ಎಲ್ಲ ಹೊರೆ ಹೊಣೆಗಳನ್ನೂ

ಭರಿಸಲು ಸಮರ್ಥವಾಗಿವೆ. ಅಭ್ಯಾಸಕ್ಕೂ ಪ್ರಯೋಗಕ್ಕೂ ಅವಕಾಶ ಕೊಟ್ಟರೆ ಅತ್ಯಲ್ಪ ಕಾಲದಲ್ಲಿಯೆ ಅವು ವಿಶ್ವವಿದ್ಯಾನಿಲಯಗಳ ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗದ ಎಲ್ಲ ಕಾರ್ಯಗಳನ್ನೂ, ಇನ್ನೂ ಸಂಪೂರ್ಣತರ ಸಾಮರ್ಥ್ಯದಿಂದ ನಿರ್ವಹಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅಂತಹ ಅಭ್ಯಾಸ ಮತ್ತು ಪ್ರಯೋಗಗಳನ್ನು ನಿರ್ವಹಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅಂತಹ ಅಭ್ಯಾಸ ಮತ್ತು ಪ್ರಯೋಗಗಳನ್ನು ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದಲೂ ನಡೆಸಿ ಜಯಪ್ರದವಾಗಿ ಮುನ್ನಡೆಯುತ್ತಿರುವ ಒಂದು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಪ್ರಾಧ್ಯಾಪಕನಾಗಿ, ಪ್ರಿನ್ಸಿಪಾಲ್ ಆಗಿ, ಉಪಕುಲಪತಿಯಾಗಿ ಸಕ್ರಿಯ ಭಾಗವಹಿಸುವ ಸುಯೋಗ ನನ್ನದಾಗಿದ್ದುದರಿಂದ ಇದನ್ನು ಅಧಿಕಾರವಾಣಿಯಿಂದ ಘೋಷಿಸಿದರೆ ಕ್ಷಮಿಸುವಿರೆಂದು ನಂಬುತ್ತೇನೆ.

'ಜ್ಞಾನಂ ವಿಜ್ಞಾನಸಹಿತಂ ಯತ್ ಜ್ಞಾತ್ವಾ ಮೋಕ್ಷ್ಯಸೇಽಶುಭಾತ್' ಎಂದು ಸಾರುತ್ತದೆ ಗೀತೆ. ಒಂದುಕಾಲದಲ್ಲಿ, ಪಾಶ್ಚಾತ್ಯ ದೇಶಗಳಿನ್ನೂ ಅರ್ಧ ಬರ್ಬರ ಸ್ಥಿತಿಯಲ್ಲಿದ್ದ ಸಮಯದಲ್ಲಿ, ನಮ್ಮ ದೇಶ ಜ್ಞಾನ ವಿಜ್ಞಾನಗಳಲ್ಲಿ ಮುಂದಾಳಾಗಿ ಮುಂದುವರಿಯುತ್ತಿತ್ತು. ತರುವಾಯ, ಮಧ್ಯಂತರ ಯುಗದಲ್ಲಿ, ರಾಜಕೀಯ ರೂಪದ ಅನೈಕ್ಯತೆ ಅಂತಃಕಲಹಗಳಿಂದಲೊ, ಮತೀಯ ಸ್ವರೂಪದ ಅಂಧಶ್ರದ್ಧೆಯಿಂದ ಒದಗಿದ ಮೂಢಾಚಾರ ಮೌಢ್ಯಗಳಿಂದಲೊ ನಡೆಗೆಟ್ಟು ಹಿಂದೆಬಿದ್ದಿತು. ಜನತೆ ಧರ್ಮದ ಹೆಸರಿನಲ್ಲಿ ತಮಸ್ಸಿಗೆ ಪಟ್ಟಕಟ್ಟಿತು; ವೈರಾಗ್ಯದ ವೇಷತೊಟ್ಟು, ತಪಸ್ಸಿನ ಹೆಸರಿಟ್ಟು, ಜೀವನ ಸ್ರೋತವು ಚಲನಹೀನವಾಗಿ, ಮಡುಗಟ್ಟಿ ನಾರುವಂತಾಯಿತು. ಬ್ರಿಟಿಷರ ಆಗಮನದ ಅನಂತರ ಪಾಶ್ಚಾತ್ಯ ನಾಗರಿಕತೆಯ ಪ್ರಭಾವದ ಪರಿಣಾಮವಾಗಿ ನಮ್ಮಲ್ಲಿ ಒಂದು ಪುನರುತ್ಥಾನ ಮತ್ತು ನವೋದಯ ಪ್ರಾರಂಭವಾಗಿ, ರಾಜಕೀಯ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮವಾಗಿಯೂ ಧಾರ್ಮಿಕ ಕ್ಷೇತ್ರದಲ್ಲಿ ಆಧ್ಯಾತ್ಮಿಕ ಆಂದೋಲನ ವಾಗಿಯೂ ಜನತೆಯನ್ನು ಎಚ್ಚರಗೊಳಿಸಿ, ಹುರಿದುಂಬಿಸಿ, ನವಚೇತನ ದೀಪ್ತರನ್ನಾಗಿ ಮಾಡಿ, ಹೊಸ ಸಾಹಸಗಳತ್ತ ಮೂನ್ನೂಕಿತು.

ಆಶ್ಚರ್ಯದ ಸಂಗತಿ ಎಂದರೆ, ಭರತಖಂಡದ ಇತ್ತೀಚಿನ ಇತಿಹಾಸದಲ್ಲಿ ಸ್ವಾತಂತ್ರ್ಯ ಪೂರ್ವದ ಸುಮಾರು ಒಂದು ಶತಮಾನದಲ್ಲಿ, ಯಾವ ಕಾಲಮಾನವನ್ನು ನಾವು ರಾಜಕೀಯದಲ್ಲಿ ದಾಸ್ಯ, ಆರ್ಥಿಕದಲ್ಲಿ ದಾರಿದ್ರ್ಯ, ಸಾಮಾಜಿಕದಲ್ಲಿ ಛಿದ್ರ, ಧಾರ್ಮಿಕದಲ್ಲಿ, ಕ್ಷುದ್ರ ಎಂದು ವರ್ಣಿಸುತ್ತೇವೆಯೊ ಆ ಕಾಲಮಾನದಲ್ಲಿ, ನಮ್ಮ ದೇಶದಲ್ಲಿ ಗೋಚರವಾದ ಆತ್ಮಶ್ರೀಗೆ ಸಮಾನ ತೇಜಸ್ಸಿನ ಆತ್ಮಶ್ರೀ ಪ್ರಪಂಚದ ಮತ್ತಾವ ಭಾಗದಲ್ಲಿಯೂ ಆವಿರ್ಭೂತವಾಗಲಿಲ್ಲ ಎಂಬುದು: ರಾಜಾರಾಮಹೋಹನರಾಯ್, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಋಷಿ ದಯಾನಂದ ಸರಸ್ವತಿ, ಕವಿ ರವೀದ್ರನಾಥಠಾಕೂರ್, ಶ್ರೀ ರಮಣ ಮಹರ್ಷಿ, ಶ್ರೀ ಅರವಿಂದರು, ಮಹಾತ್ಮಾ ಗಾಂಧೀಜಿ - ಈ ಒಂದೊಂದೂ ಹೆಸರಿನ ಹಿಂದೆ ಎಂತಹ ವಿಭೂತಿಪ್ರಮಾಣದ ಭವ್ಯ ತೇಜಸ್ಸು ಸ್ಫುರಿಸುತ್ತದೆ ಎಂಬುದನ್ನು ಗ್ರಹಿಸಲು ನಾವು ಸಮರ್ಥರಾದರೆ ಮೇಲೆ ಹೇಳಿದ ಮಾತಿನ ಸತ್ಯಾಂಶ ಸ್ವಸಂವೇದ್ಯವಾಗುತ್ತದೆ.

ಪಾಂಚಜನ್ಯ ಸದೃಶವಾದ ಆ ವಿಭೂತಿಪುರಷರ ಕರೆಗೆ ಓಗೊಟ್ಟು ನಾಡು, ರಾಜಕೀಯಾದಿ ಕ್ಷೇತ್ರಗಳಲ್ಲಿ ಕಾರ್ಯೋನ್ಮುಖಿಯಾದಂತೆಯೆ, ಕಲಾ ಭಾಷಾ ಸಾಹಿತ್ಯಾದಿ ಕ್ಷೇತ್ರಗಳಲ್ಲಿಯೂ ಎಚ್ಚತ್ತು ಎದ್ದು, ಹೊಸ ಹೊಸ ಸಾಹಸಗಳಿಗೆ ಸೊಂಟಕಟ್ಟಿ ಮುನ್ನಡೆಯತೊಡಗಿತು. ಆ ಸಾಹಿತ್ಯಕ ಪ್ರಗತಿ ನಮ್ಮ ಎಲ್ಲ ದೇಶಭಾಷೆಗಳಲ್ಲಿಯೂ ತುಸು ಹೆಚ್ಚು ಕಡಮೆ ಒಂದೇ ರೀತಿಯಲ್ಲಿ ಸಾಗಿದಂತೆ ತೋರುತ್ತದೆ. ಯಾರು ಬಲ್ಲರು? ಬಹುಶಃ ವರ್ಷಕ್ಕೆ ಹದಿನಾಲ್ಕು ಜ್ಞಾನಪೀಠ ಪ್ರಶಸ್ತಿಗಳಿದ್ದ ಪಕ್ಷದಲ್ಲಿ ಪ್ರತಿವರ್ಷವೂ ಹದಿನಾಲ್ಕು ಬಾಷೆಗಳೂ ಆ ಬಹುಮಾನ ಪಡೆಯಲು ಅರ್ಹವಾಗುತ್ತಿದ್ದುವೊ ಏನೊ?

ಸ್ವಾತಂತ್ರ್ಯೋತ್ತರ ಭಾರತಕ್ಕೆ, ರಸಶಸ್ವಾದನವೀಯುವ ಸೃಜನಾತ್ಮಕ ಸಾಹಿತ್ಯದ ಸೃಷ್ಟಿಯಷ್ಟೇ ಅವಶ್ಯಕವಾಗಿ, ಅಥವಾ ಅದಕ್ಕಿಂತಲೂ ಹೆಚ್ಚು ಅವಶ್ಯಕವಾಗಿ, ಜ್ಞಾನವಿಜ್ಞಾನ ಪ್ರಧಾನವಾದ ವಿಚಾರಾತ್ಮಕ ವಾಙ್ಮಯದ ರಚನೆಯಾಗಬೇಕಾಗಿದೆ. ನಮ್ಮ ಮಕ್ಕಳ ಶಿಕ್ಷಣವೆಲ್ಲ ಆಯಾ ಪ್ರದೇಶ ಭಾಷೆಯಲ್ಲಿಯೆ ನಡೆದು, ಅವರು ಜ್ಞಾನ ವಿಜ್ಞಾನ ಬೋಧೆಯನ್ನು ಅನುತ್ತೀರ್ಣರಾಗಿ ತಮಗೂ ರಾಷ್ಟ್ರಕ್ಕೂ ಉಂಟಾಗುತ್ತಿರುವ ಆರ್ಥಿಕ ಮತ್ತು ಮಾನಸಿಕ ರೂಪದ ಮಹಾನಷ್ಟವನ್ನು ತಪ್ಪಿಸಬೇಕಾದರೆ ಲೇಖಕವರ್ಗ ಬೌದ್ಧಿಕ ಸಾಹಿತ್ಯ ಸೃಷ್ಟಿಗೆ ಆದ್ಯಗಮನ ಕೊಡಬೇಕಾಗಿದೆ ಮಹತ್ ಪ್ರತಿಭಾಶಕ್ತಿಯಿಂದ ಹೊಮ್ಮುವ ಸೃಜನಾತ್ಮಕ ಸಾಹಿತ್ಯವು ಅದಮ್ಯ ಸ್ಫೂರ್ತಿಯಿಂದ ಪ್ರೇರಿತವಾಗುವುದರಿಂದ ಅದಕ್ಕೆ ಬಹುಮಾನ ಪ್ರಶಸ್ತಿ ಪ್ರಶಂಸೆ ಕೀರ್ತಿ ಮೆಚ್ಚುಗೆಗಳ ಬೆನ್ನುತಟ್ಟು ಇಲ್ಲದಿದ್ದರೂ ಅದರ ಅಭಿವ್ಯಕ್ತಿ ತಿರೋಹಿತವಾಗುವುದಿಲ್ಲ; ಅದರ ಪ್ರಕಾಶನಕ್ಕೆ ಚ್ಯುತಿ ಬರುವುದಿಲ್ಲ. ಆದರೆ ವೈಜ್ಞಾನಿಕವೂ ಬೌದ್ಧಿಕವೂ ಆದ ವೈಚಾರಿಕ ಸಾಹಿತ್ಯಕ್ಕೆ ಅಧಿಕೃತ ಪ್ರೋತ್ಸಾಹ ಅವಶ್ಯಕ; ಅದು ಫಲಾಪೇಕ್ಷಿಯಾದುದು: ಪ್ರಯೋಜನವನ್ನೂ ನಿರೀಕ್ಷಿಸುತ್ತದೆ. ಪ್ರಯೋಜನವೇ ಅದರ ಪರಮ ಗುರಿ. ಕಾವ್ಯಕ್ಕೆ ರಸವೇ 'ಸಕಲ ಪ್ರಯೋಜನಮೌಲಿಭೂತ'ವಾದದ್ದು ಎಂಬರ್ಥದಲ್ಲಿ. "All Art is Useless" ಎನ್ನುವಂತೆ, "All Science must be useful" ಎಲ್ಲ ವಿಜ್ಞಾನವೂ ಲೌಕಿಕವಾದ ಪ್ರತ್ಯಕ್ಷ ಫಲದಾಯಿಯಾಗಿರಬೇಕು ಎಂಬರ್ಥದಲ್ಲಿ. ಜ್ಞಾನಪೀಠವು ಸೃಜನ ಸಾಹಿತ್ಯಕ್ಕೆ ನೀಡುತ್ತಿರುವ ಪ್ರೋತ್ಸಾಹವನ್ನು ವಿಶ್ವವಿದ್ಯಾನಿಲಯಗಳು ವೈಚಾರಿಕ, ಬೌದ್ಧಿಕ ಮತ್ತು ವೈಜ್ಞಾನಿಕ ಸಾಹಿತ್ಯ ಸೃಷ್ಟಿಗೆ ನೀಡುತ್ತವೆ ಎಂದು ಹಾರೈಸುತ್ತೇನೆ.

ಜ್ಞಾನಪೀಠಪ್ರಶಸ್ತಿ ಮಹತ್ ಕೃತಿಗಳನ್ನು ಸೃಷ್ಟಿಸುವುದಿಲ್ಲವಾದರೂ ಸೃಷ್ಟಿಯಾದ ಮಹತ್ ಕೃತಿಗಳನ್ನು ಮರೆಯಿಂದ ಹೊರಗೆ ಬೆಳಕಿಗೆ ತಂದು, ಬಹುಜನರ ಕಣ್ಣಿಗೆ ಅದು ಬೀಳುವಂತೆ ಮಾಡಿ, ಬೇರೆ ಬೇರೆ ಭಾಷೆಯ ಸಹೃದಯರ ಗಮನವನ್ನು ಅದರತ್ತ ಸೆಳೆಯುವ ಮಹೋಪಕಾರ ಮಾಡುವುದರಲ್ಲಿ ಸಂದೇಹವಿಲ್ಲ. ನಮ್ಮ ಪ್ರಾಚೀನ ಕಾವ್ಯಮೀಮಾಂಸಕರು ಕಾವ್ಯಪ್ರಯೋಜನಗಳನ್ನು ಕುರಿತು ಹೇಳುವಾಗ

ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ |
ಸದ್ಯಃಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ! |

ಎಂದು - ಕೀರ್ತಿ, ಧನ, ಲೋಕವ್ಯವಹಾರ ಜ್ಞಾನ, ಶಿವೇತರ ಕ್ಷತಿ, ಸದ್ಯಃಪರವಾದ ಆನಂದ, ಕಾಂತ ಸಮ್ಮಿತದಂತಹ ಉಪದೇಶ - ಇವುಗಳನ್ನು ಹೆಸರಿಸಿದ್ದಾರೆ. ವೈಯಕ್ತಿಕವಾದ ಪ್ರತಿಷ್ಠೆಯನ್ನು ಅಪೇಕ್ಷಿಸುವ ಮತ್ತು ಸವಿಯುವ ಕವಿ ಕೀರ್ತಿಗೂ ಬೆಲೆ ಕೊಡುತ್ತಾನೆ. ಆದರೆ ಕೀರ್ತಿಯ ವಿಚಾರದಲ್ಲಿ ಅಷ್ಟೇನೂ ಆಸಕ್ತನಲ್ಲದ ಆತ್ಮ ಸುಖಕ್ಕಾಗಿ ಹಾಡುವ ಕವಿಗೆ ಅದು ಉಪಲಕ್ಷ್ಯವೂ ಆಗದಿರಬಹುದು; ಮುಖ್ಯ ಲಕ್ಷ್ಯವಂತೂ ಎಂದಿಗೂ ಆಗುವುದಿಲ್ಲ. ಆದರೂ, ಶ್ರೀ ಅರವಿಂದರು ತಮ್ಮ ಸಂವಾದ ಒಂದರಲ್ಲಿ ಹೇಳುವಂತೆ, ಕೀರ್ತಿಗೆ ಬೇರೊಂದು ಜನೋಪಕಾರಿಯಾದ ಪ್ರಯೋಜನವಿದೆ. ಆ ಪ್ರಯೋಜನ ವ್ಯಕ್ತಿಪ್ರತಿಷ್ಠೆಗೆ ಸಂಬಂಧಿಸಿಲ್ಲ; ಅದು ಲೋಕಕಲ್ಯಾಣಕರ ಸ್ವರೂಪದ್ದು; ಅಧ್ಯಾತ್ಮ ಕ್ಷೇತ್ರದಲ್ಲಿಯೆ ಆಗಲಿ, ಸಾಹಿತ್ಯಾದಿ ಕಲಾಕ್ಷೇತ್ರಗಳಲ್ಲಿಯೆ ಆಗಲಿ, ಎಲೆಮರೆಯ ಹೂವಾಗಿ ಯಾರ ಕಣ್ಣಿಗೂ ಬೀಳದೆ ಹೋಗುತ್ತಿದ್ದ ಮಹಾಪುರಷನನ್ನೂ ಮಹಾಮೇರುಕೃತಿಯನ್ನೂ ಲೋಕಲೋಚನಗಳಿಗೆ ಗೋಚರವಾಗುವಂತೆ ಮಾಡಿ ಜನರನ್ನು ಆ ಎಡೆಗೆ ಆಕರ್ಷಿಸಿ, ಆ ವಿಭೂತಿಪರುಷನಿಂದ ಅಥವಾ ಆ ಮೇರುಕೃತಿಯಿಂದ ಲಭಿಸುವ ಜ್ಞಾನ ಮತ್ತು ಆನಂದಗಳ ಪೀಯೂಷಪಾನದಿಂದ ಅವರು ಧನ್ಯರಾಗುವಂತೆ ಮಾಡುತ್ತದೆ.

ನನಗೆ ದೊರೆತಿರುವ ಈ ಜ್ಞಾನಪೀಠ ಪ್ರಶಸ್ತಿಯಲ್ಲಿ ನಾನು, ಪ್ರಧಾನವಾಗಿ, ಯಶಸ್ಸಿನ ಪ್ರಯೋಜನದ ಈ ಮುಖವನ್ನು ಗುರುತಿಸುತ್ತೇನೆ. ಪ್ರಾಚ್ಯ ಪಾಶ್ಚಾತ್ಯ ಪ್ರಾಚೀನ ಅರ್ವಾಚೀನಗಳ ಸಾರ್ವಕಾಲಿಕ ಮತ್ತು ಸಾರ್ವಧಾರ್ಮಿಕ ಸಮಷ್ಟಿರೂಪದ ಯುಗಪ್ರಜ್ಞೆಯ ಆವಿರ್ಭೂತಿಯಂತಿರುವ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವ್ಯಾವಹಾರಿಕವಾಗಿ 'ಕುವೆಂಪು ಕೃತಿ' ಎಂದು ಕರೆಯಲಾಗಿದ್ದರೂ ಪಾರಮಾರ್ಥಿಕವಾಗಿ ನೋಡಿದರೆ 'ಕುವೆಂಪು'ವನ್ನೆ ಅದು ಸೃಜಿಸಿದೆ. ಅದು ಯುಗಚೈತನ್ಯದ ಸಮಷ್ಟಿಪ್ರಜ್ಞೆಯ ಸೃಷ್ಟಿ. ಅದು ಶ್ರೀ ರಾಮಾಯಣದ ಅತ್ಯಂತ ಆಧುನಿಕ ಅವತಾರ; ಅದು ವೈದಿಕ ಸಂಪ್ರದಾಯದ ವಾಲ್ಮೀಕಿ ರಾಮಾಯಣಕ್ಕೆ ಋಣಿಯಾಗಿರುವಂತೆ ಜೈನ ಸಂಪ್ರದಾಯದ ರಾಮಾಯಣಗಳಿಗೂ ಋಣಿಯಾಗಿದೆ. ವ್ಯಾಸ, ವಾಲ್ಮೀಕಿ, ಪಂಪ, ನಾಗಚಂದ್ರಾದಿ ಗಳಿಗೆಂತೊ ಅಂತೆಯೆ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ನರಿಗೂ ಋಣಿಯಾಗಿದೆ. ಅಲ್ಲಿ ಶ್ರೀ ರಾಮಕೃಷ್ಣ - ವಿವೇಕಾನಂದರ ಸಮನ್ವಯ ದರ್ಶನವನ್ನೆಂತೊ ಅಂತೆಯೆ ಗಾಧೀಜಿ - ವಿನೋಬಾಜಿಯವರಿಂದ ಪ್ರಣೀತವಾದ ಸರ್ವೋದಯ ಭಾವನೆಯನ್ನೂ, ಪಾಶ್ಚಾತ್ಯ ವಿಜ್ಞಾನದ ವಿಕಾಸವಾದವನ್ನೆಂತೂ ಅಂತೆ ಶ್ರೀ ಅರವಿಂದ ಪ್ರಣೀತವಾದ ಪೂರ್ಣಯೋಗ ದರ್ಶನವನ್ನೂ ಸಂದರ್ಶಿಸಬಹುದು. ಸಮನ್ವಯ, ಸರ್ವೋದಯ ಮತ್ತು ಪೂರ್ಣ ದೃಷ್ಟಿ - ಇವುಗಳೆ 'ಶ್ರೀ ರಾಮಯಾಣ ದರ್ಶನ'ದ ತ್ರಿಣೇತ್ರಗಳಾಗಿವೆ.

ಭಾರತೀಯ ಜ್ಞಾನಪೀಠವು ಆ ಮಹಾಕಾವ್ಯಕ್ಕೆ ಈ ವರ್ಷದ ಪ್ರಶಸ್ತಿಯನ್ನು ನೀಡಿ, ಅದು ಸಮಸ್ತ ಭಾರತೀಯರ ಗಮನವನ್ನು ಆಕರ್ಷಿಸುವ ಅವಕಾಶ ಕಲ್ಪಿಸಿದೆ. ಧಾ. ಶ್ರೀಮತಿ ಸರೋಜಿನಿ ಮಹಿಷಿಯವರಂತಹ ಬಹುಭಾಷಾ ವಿದುಷಿಯರು ಅದರ ಆಯ್ದ ಕೆಲವು ಭಾಗಗಳನ್ನು ಹಿಂದಿಗೆ ಭಾಷಾಂತರಿಸಿ, ಇದುವರೆಗೆ ಕರ್ಣಾಟಕ ವ್ಯಾಪ್ತಿಯ ಸ್ಥಳೀಯವಾಗಿದ್ದ ಅದರ ಯಶೋವಲಯವನ್ನು ಅಖಿಲ ಭಾರತೀಯ ವ್ಯಾಪ್ತಿಗೆ ವಿಸ್ತರಿಸಿ, ಸಹೃದಯರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿಗಳ ಅದರ ತ್ರಿವೇಣಿಯಲ್ಲಿ ಮಿಂದು, ಅಲ್ಲಿ ಅಭಿವ್ಯಕ್ತಗೊಂಡಿರುವ ಪ್ರಪ್ರಾಚೀನತಾ ಸಾರಪೂರ್ಣವಾದ ಅದರ ನವೋನವ ಆತ್ಮವಿಜ್ಞಾನ ಪ್ರಜ್ಞೆಯ ಅಗ್ನಿತೀರ್ಥದಲ್ಲಿ ಮುಳುಗಿ ಬೆಂದು ನಾಂದು, ಬುದ್ಧಿಪುಷ್ಟಿ ಮತ್ತು ಭಾವತುಷ್ಟಿಗಳನ್ನು ಪಡೆಯುವ ಭಾರತೀಯರ ಸಮಷ್ಟಿ ಚೇತನವು ತನ್ನ ತಮದಿಂದ ಮುಕ್ತವಾಗಿ 'ದೀಪ್ಯ ದೈವೀಪ್ರಜ್ಞೆಯಮೃತ ಗೋಪುರ'ಕ್ಕೆ ಏರುವಂತಾಗಲಿ ಎಂದು ಕೈಜೋಡಿಸಿ ಪ್ರಾರ್ಥಿಸುತ್ತೇನೆ:

ಮನ್ಮನೋ ಮಂದಿರಕೆ, ಓ,
ಲೋಕ ಗುರಗಳೆಲ್ಲ ಬನ್ನಿ,
ಬನ್ನಿ, ಬನ್ನಿ, ಬನ್ನಿ!

ತುಳಿಯೆ ನಿಮ್ಮ ಪದತಲ
ದಲದಲದಲ ಅರಳ್ಬುದೆನ್ನ
ಶಿರಃಕಮಲ ಕುಟ್ಮಲ:

ತಮೋತಿರಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ:
ಋತದ ಶಿವದ ಆನಂದದ
ಚಿದ್ವಿಭೂತಿ ತೊಳಗಲಿ.

ಮನ್ಮನೋ ಮಂದಿರಕೆ, ಓ,
ಲೋಕ ಗುರಗಳೆಲ್ಲ ಬನ್ನಿ,
ಬನ್ನಿ, ಬನ್ನಿ, ಬನ್ನಿ!

---

* ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ನವದೆಹಲಿ: ಡಿಸೆಂಬರ್ ೨೦. ೧೯೬೮.

# ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೆ ಸಾರ್ವಭೌಮ ಭಾಷೆ*

ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಾನು ಸಲ್ಲಿಸಿರುವ ಸೇವೆಯನ್ನು ತಾವೆಲ್ಲರೂ ಔದಾರ್ಯದಿಂದ ಕಂಡು ಈ ಗೌರವ ಡಾಕ್ಟರೇಟ್ ಪದವಿಯನ್ನು ನೀಡುವ ಕೃಪೆ ಮಾಡಿರುವುದಕ್ಕಾಗಿ ತಮಗೆಲ್ಲರಿಗೂ ಅತ್ಯಂತ ಕೃತಜ್ಞತೆಯ ವಂದನೆಗಳನ್ನರ್ಪಿಸುತ್ತೇನೆ. ಈ ಗೌರವಕ್ಕೆ ಪಾತ್ರನಾದ ನಾನು ನಿಮಿತ್ತ ಮಾತ್ರನೆಂಬುದು ನನಗೆ ಗೊತ್ತಿದೆ. ವಾಸ್ತವವಾಗಿ ಇದು ದೇಶಭಾಷೆಗಳಿಗೆ ಸಲ್ಲುತ್ತಿರುವ ಗೌರವವಾಗಿದೆ. ಇದುವರೆಗೆ ತಮ್ಮತಮ್ಮ ಮನೆಗಳಲ್ಲಿಯೆ ಅತಿಥಿಗಳೆಂದು ಬಂದವರ ದುರಾಕ್ರಮಣಕ್ಕೆ ಸಿಕ್ಕಿ ದಾಸ್ಯದೈನ್ಯಗಳಿಗೆ ಭಾಜನವಾಗಿ ದಿಕ್ಕರಿಸಲ್ಪಟ್ಟಿದ್ದ ದೇಶ ಭಾಷಾ ಮಾತೆಯರೆಲ್ಲ ಮತ್ತೊಮ್ಮೆ ತಮ್ಮ ಯಾಜಮಾನ್ಯದ ಸಿಂಹಾಸನಕ್ಕೆ ಏರುತ್ತಿದ್ದಾರೆ ಎಂಬುದಕ್ಕೆ ಇಂದಿನ ಸಮಾರಂಭ ಒಂದು ಅಭಿಷೇಕ ಸಾಕ್ಷಿಯಾಗಿದೆ.

ಅಚಿರಪೂರ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬೆಂಗಳೂರು ವಿಶ್ವ ವಿದ್ಯಾನಿಲಯವು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ವಿಶೇಷ ಅನುಭವ ಪಡೆದಿರುವ ಸಮರ್ಥರೊಬ್ಬರ ನೇತೃತ್ವಕ್ಕೆ ಅಧೀನವಾಗಿರುವುದು ಅತ್ಯಂತ ಸಮಾಧಾನದ ಮತ್ತು ಸಂತೋಷದ ಸಂಗತಿ. ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೇ ಅಗ್ರಗಣ್ಯ ಮತ್ತು ಅಗ್ರಮಾನ್ಯ; ಆಡಳಿತ ಭಾಷೆಯಿಂದ ಹಿಡಿದು ಶಿಕ್ಷಣ ಮಾಧ್ಯಮದವರೆಗೂ ಸರ್ವಕ್ಷೇತ್ರಗಳಲ್ಲಿಯೂ ಸರ್ವಸ್ತರಗಳಲ್ಲಿಯೂ ಕನ್ನಡ ಭಾಷೆಗೇ ಅಗ್ರಸ್ಥಾನ - ಈ ಧ್ಯೇಯಗಳನ್ನು ದೂರದೃಷ್ಟಿಯಿಂದಲೂ ಮತ್ತು ಧೈರ್ಯದಿಂದಲೂ ಅವರು ಕಾರ್ಯಗತಗೊಳಿಸುತ್ತಾರೆ ಎಂದು ನಾನು ಸಂಪೂರ್ಣವಾಗಿ ಭರವಸೆ ಹೊಂದಿದ್ದೇನೆ.

ಭಾರತದಂತಹ ವೈವಿಧ್ಯಮಯವಾದ ವಿಶಾಲ ರಾಷ್ಟ್ರದ ದೊಡ್ಡ ದೊಡ್ಡ ಔದ್ಯೋಗಿಕ ನಗರಗಳೆಲ್ಲ ವೇಷ ಭೂಷಣ ಭಾಷೆ ಸಂಸ್ಕೃತಿ ಮೊದಲಾದವುಗಳಲ್ಲಿ ಸಂಕ್ಷಿಪ್ತ ಭಾರತಗಳೇ ಆಗಿರಬೇಕಾದುದು ಅನಿವಾರ್ಯ. ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರು ನಗರವೂ ಅಂಥ ಒಂದು ಸಂಕ್ಷಿಪ್ತ ಭಾರತವೇ ಆಗಿದೆ. ಇಲ್ಲಿ ಅನೇಕ ಭಾಷೆಗಳನ್ನು ಮಾತನಾಡುವ ಅಲ್ಪ ಸಂಖ್ಯಾತರಿರುವುದು ಸಹಜ. ಆ ಎಲ್ಲ ಭಾಷೆಗಳಿಗೂ ಸಲ್ಲಬೇಕಾದುದನ್ನು ಸಲ್ಲಿಸಬೇಕಾದುದು ನಮ್ಮ ಕರ್ತವ್ಯವಾದರೂ ಇಲ್ಲಿ ಕನ್ನಡವೇ ಸಾರ್ವಜನಿಕ ಕ್ಷೇತ್ರದ ಸಾರ್ವಭೌಮ ಭಾಷೆಯಾಗಿರಬೇಕಾಗುತ್ತದೆ; ಕನ್ನಡಕ್ಕೆ ಮೊದಲ ಮನ್ನಣೆ ಸಲ್ಲಬೇಕಾದದ್ದು ಅಗತ್ಯವಾಗುತ್ತದೆ.

ಈ ಮಾತು ಕನ್ನಡಿಗರಿಗೆ ಮಾತ್ರ ಅನ್ವಯಿಸುವುದಿಲ್ಲ. ಎಲ್ಲ ರಾಜ್ಯಗಳ, ಎಲ್ಲ ನಗರಗಳ ವಿಚಾರದಲ್ಲಿಯೂ ಇದೇ ಸೂತ್ರ ಆವಶ್ಯಕ. ಆಯಾ ರಾಜ್ಯದಲ್ಲಿ ಅಯಾ ರಾಜ್ಯಭಾಷೆಗಳೇ ಪ್ರಥಮ ಮತ್ತು ಪ್ರಧಾನ. ಬೆಂಗಳೂರಿನಲ್ಲಿ ಅನ್ಯ ಭಾಷೆಗಳನ್ನಾಡುವ ಜನರಿದ್ದಾರೆ ಎಂದರೆ ಅದು ನಮ್ಮ ಅತಿಥ್ಯದ ಔದಾರ್ಯವನ್ನು ಸೂಚಿಸುತ್ತದೆ; ಅದು ನಮಗೆ ಹೆಮ್ಮೆ ಹಾಗೂ ಗೌರವ. ಆದರೆ ಇದೇ ಕಾರಣದಿಂದಾಗಿ ಕನ್ನಡಕ್ಕೆ ನ್ಯಾಯವಾಗಿ ದೊರಕಬೇಕಾದ ಸ್ಥಾನಮಾನಗಳಿಗೆ ಯಾವ ಅಡಚಣೆಯೂ ಉಂಟಾಗಬಾರದು. ಮುಂಬಯಿನಲ್ಲೊ ಮದ್ರಾಸಿನಲ್ಲೊ ಅಥವಾ ಬೇರೆ ಇನ್ನೆಲ್ಲೊ ಕನ್ನಡಿಗರು ಹೋಗಿ ವಾಸಿಸುತ್ತಿದ್ದರೆ ಅವರ ಇರುವಿಕೆ ಆ ಪ್ರದೇಶದ ಭಾಷೆಯ ಪ್ರಗತಿಗೆ ತಡೆಯಾಗಬಾರದು. ಕನ್ನಡಿಗರು ಕನ್ನಡನಾಡಿನ ಹೊರಗಿದ್ದಾಗ ವೈಯಕ್ತಿಕವಾಗಿ ಕನ್ನಡಿಗರು, ಅಷ್ಟೆ. ಪ್ರಾದೇಶಿಕವಾಗಿ ಅವರು ತಾವು ಇರುವ ಪ್ರದೇಶದವರೇ. ಈ

ಮಾತು ಕನ್ನಡ ನಾಡಿನಲ್ಲಿರುವ ಅನ್ಯ ಭಾಷೀಯರಿಗೂ ಅನ್ವಯವಾಗುತ್ತದೆ. ಅವರು ತಮ್ಮ ಮಾತೃಭಾಷೆಯ, ಪ್ರಾದೇಶಿಕ ಸಂಸ್ಕೃತಿಯ ದೃಷ್ಟಿಯಿಂದ ಯಾರೇ ಆಗಿರಲಿ ಇಲ್ಲಿ ಅವರು ಕನ್ನಡನಾಡಿನವರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎಲ್ಲದರ ಪ್ರಗತಿಯಲ್ಲಿಯೂ ಅವರು ಭಾಗಿಗಳಾಗಿರಬೇಕು. ಅವರಿದ್ದಾರೆ ಎನ್ನುವುದು ಕನ್ನಡಕ್ಕೆ ಕಾಲ್ತೊಡಕಾಗಬಾರದು.

ಬೆಂಗಳೂರಿನಮತಹ ಮಹಾನಗರಗಳ ವಿಚಾರದಲ್ಲಿ ನಾವು ಈ ಮಾತನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಈ ಹಿನ್ನಲೆಯಲ್ಲಿ, ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರಿನಲ್ಲಿ, ಅಲ್ಲಿನ ವಿಶ್ವ ವಿದ್ಯಾನಿಲಯದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಯೋಚಿಸುವುದರಲ್ಲಾಗಲಿ ಚರ್ಚಿಸುವುದರಲ್ಲಾಗಲಿ ನನಗೆ ಯಾವ ಅರ್ಥವೂ ಕಾಣಿಸುವುದಿಲ್ಲ. ಕನ್ನಡ ಮಾತೃಭಾಷೆಯಲ್ಲದವರ ಶಿಕ್ಷಣಕ್ಕೆ ಇಲ್ಲಿ ಅವಕಾಶವನ್ನು ಕಲ್ಪಿಸುವುದು ನಮ್ಮ ಹೊಣೆಯಾದರೂ, ಕನ್ನಡವನ್ನು ಭಧ್ರಸ್ಥಾನದಲ್ಲಿರಿಸಬೇಕಾದುದು ಆದ್ಯ ಕರ್ತವ್ಯ. ಆ ಭದ್ರಸ್ಥಾನವು ಸಂಸ್ಥಾಪಿತವಾಗುವುದಕ್ಕೆ ಮುನ್ನ ಅದನ್ನು ಭಂಗಗೊಳಿಸುವ ಯಾವ ಕಾರ್ಯ ವ್ಯೂಹಕ್ಕೂ ಕೈಹಾಕದಿರುವುದು ಲೇಸು.

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರ ವಿಶ್ವವಿದ್ಯಾನಿಲಯವನ್ನಾಗಿ ಪರಿರ್ತಿಸುವ ಯೋಜನೆಯ ಅಂಗವಾಗಿ ಅಲ್ಲಿ, ಸಂಪರ್ಕ ಭಾಷೆಯಾದ ಹಿಂದೀ ಮಾಧ್ಯಮದ ಪ್ರಸ್ತಾಪವೆತ್ತಿರುವುದನ್ನು ನಾನು ಮೊನ್ನೆ ಮೊನ್ನೆ ಪತ್ರಿಕೆಗಳಲ್ಲಿ ಓದಿದ್ದೇನೆ. ಅದೇನಾದರೂ ನಿಜವಾಗಿದ್ದ ಪಕ್ಷದಲ್ಲಿ ಅಚಾತುರ್ಯದ ನೀತಿಯೆಂದೇ ಭಾವಿಸುಬೇಕಾಗುತ್ತದೆ. ಇದು ಈ ಘಟ್ಟದಲ್ಲಿ ತುಂಬ ಅಪಾಯಕಾರಿ ಹಜ್ಜೆ ಎಂಬುದನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ನಾವು ಇನ್ನೂ ಇಂಗ್ಲಿಷಿನ ನೊಗದಿಂದಲೆ ಹೆಗಲು ಕಳಚಿಲ್ಲ; ಆಗಲೇ ಬೇರೊಂದು ನೊಗಕ್ಕೆ ಹೆಗಲು ಕೊಡಲು ಸಿದ್ಧರಾಗಿದ್ದೇವೆ. ಈ ದುರದೃಷ್ಟಕರ ಪರಿಸ್ಥಿತಿ ಕನ್ನಡನಾಡಿನಲ್ಲಲ್ಲದೆ ಬೇರೆ ಯಾವ ಕಡೆಯೂ ಇರಲಾರದು. ಕನ್ನಡಕ್ಕೆ ಎಂದೋ ದೊರೆಯ ಬೇಕಾಗಿದ್ದ ಗೌರವದ ಮನ್ನಣೆಯ ಸ್ಥಾನವನ್ನು ಕೊಡಲು ಇನ್ನೂ ಮೀನ ಮೇಷ ಎಣಿಸುತ್ತಿರುವ ನಾವು ಹಿಂದೀ ಮಾಧ್ಯಮದ ಬಗೆಗೆ ಕಾತರತೆ ತೋರುತ್ತಿರುವುದು ಒಂದು ಬಗೆಯ ವಿಪರ್ಯಾಸವೆ ಸರಿ. ಮುಂದೆ ಎಂದಾದರೂ ಹಿಂದೀ ಮಾಧ್ಯಮದ ತರಗತಿಗಳು ಬರಬಹುದು. ಆದರೆ ಕನ್ನಡ ನಮ್ಮ ಶಿಕ್ಷಣವನ್ನೂ ಸಮಸ್ತ ಜೀವನವನ್ನೂ ಸಂಪೂರ್ಣವಾಗಿ ಆವರಿಸಿಕೊಳ್ಳುವ ಮೊದಲೇ ಇದಕ್ಕೆ ಅವಕಾಶಕೊಡುವುದು ರಾಷ್ಟ್ರಘಾತಕವಾಗುತ್ತದೆ; ಅನ್ಯೈಕ್ಯತೆಗೆ ದಾರಿಮಾಡಿ ಕೊಟ್ಟಂತಾಗುತ್ತದೆ. ಈ ದಿಸೆಯಲ್ಲಿ ಕನ್ನಡಿಗರ ಔದಾರ್ಯ ಸಲ್ಲಕ್ಷಣಗಳು ಅಸಹಾಯಕತೆಯಾಗಬಾರದು; ನಿರ್ವಿಣ್ಣತೆಯಾಗಬಾರದು.

ಕನ್ನಡ ನಾಡಿನ ವಿಶ್ವವಿದ್ಯಾನಿಲಯವಾದ ಈ ಬೆಂಗಳೂರು ವಿಶ್ವವಿದ್ಯಾನಿಲಯವು ಮೊದಲು ಈ ಪ್ರದೇಶದ ಆವಶ್ಯಕತೆಗಳನ್ನು ಗುರುತಿಸಿ ಈಡೇರಿಸಬೇಕು. ಈ ಭಾಗದ ಜನತೆಯ ಋಣ ತೀರಿಸಬೇಕು. ಅದು ಕನ್ನಡದಿಂದ ಮಾತ್ರ ಸಾಧ್ಯ; ಇನ್ನಾವ ಭಾಷೆಯಿಂದಲೂ ಸಾಧ್ಯವಿಲ್ಲ. ಫಲವಾಗಿ ವಿಶ್ವವಿದ್ಯಾನಿಲಯದ ಎಲ್ಲ ತರಗತಿಗಳಲ್ಲೂ ವ್ಯಾಪಕವಾಗಿ ಕನ್ನಡ ಮಾಧ್ಯಮ ಜಾರಿಗೆ ಬರಬೇಕು. ಮಾತೃಭಾಷೆಯ ಮೂಲಕವಾಗಿ ನಡೆಯುವ ಶಿಕ್ಷಣವೇ ಸರ್ವೋತ್ಕೃಷ್ಟವಾದುದೆಂಬುದು ಎಂದೂ ಚರ್ಚೆಯ ವಿಷಯವಲ್ಲ. ಇನ್ನು ಭಾಷೆಯ ವಿಷಯವಾಗಿ ಹೇಳುವುದಾದರೆ,

ನಾನು ಯಾವುದೇ ಭಾಷೆಯನ್ನು ಕಡ್ಡಾಯಮಾಡಿ ಎಂದು ಹೇಳುವುದಿಲ್ಲ. ಯಾವುದಾದರೂ ಎರಡು ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸಮಾಡಲು ಅವಕಾಶವಿರಬೇಕೆಂಗುದಷ್ಟೇ ನನ್ನ ಅಪೇಕ್ಷೆ.

ಕಲಿಕೆಯ ಭಾಷೆಯಾಗಿ ಇಂಗ್ಲಿಷ್ ಬಲಾತ್ಕಾರದ್ದಾಗಿ ಉಳಿಯುವುದು ಬೇಡ. ಬೇಕೆಂದರೆ ನೂರಕ್ಕೆ ನೂರು ಜನರೂ ಅದನ್ನೇ ಆರಿಸಿಕೊಳ್ಳಲಿ; ಬೇಡವಾದರೆ ಒಬ್ಬನಿಗಾದರೂ ಅದನ್ನು ಬಿಡುವ ಅವಕಾಶವಿರಲಿ. ಇಂಗ್ಲಿಷನ್ನು ಬಲಾತ್ಕಾರದ ಸ್ಥಾನದಿಂದ ಐಚ್ಛಿಕಸ್ಥಾನಕ್ಕೆ ಇಳಿಸುವುದಷ್ಟೆ ಈಗ ಆಗಬೇಕಾದ ಕೆಲಸ. ಇಂಗ್ಲಿಷ್ ಬೇಡ ಎನ್ನುವವರ ಗುಂಪಿಗೆ ನಾನು ಸೇರಿದವನಲ್ಲ. ಆದರೆ ಯಾವುದೇ ಭಾಷೆಯನ್ನಾದರೂ ಯಾರಿಗೆ? ಎಷ್ಟು? ಏಕೆ? ಎನ್ನುವ ತತ್ವದ ಒರೆಗಲ್ಲಿಗೆ ಹಚ್ಚದೆ ಮುಂದುವರಿಯುವುದು ಕ್ಷೇಮವಲ್ಲ. ಬಲಾತ್ಕಾರದ ಅಂಶವಂತೂ ಪ್ರಜಾಸತ್ತೆಗೆ ಮಾರಕವಾಗುತ್ತದೆ.

'ಜ್ಞಾನಂ ವಿಜ್ಞಾನಸಹಿತಂ' ಎಂಬುದು ಈ ವಿಶ್ವವಿದ್ಯಾನಿಲಯದ ಧ್ಯೇಯೋಕ್ತಿಯಾಗಿದೆ. ವಿಜ್ಞಾನಕ್ಕೆ ಮೂಲಭೂತವಾದ ಮನೊಧರ್ಮ - ವೈಚಾರಿಕ ಬುದ್ಧಿ. ಅದನ್ನು ಜಾಗ್ರತಗೊಳಿಸಬೇಕಾದುದು ವಿಶ್ವವಿದ್ಯಾನಿಲಯಗಳ ಕರ್ತವ್ಯ. ಕಾರ್ಖಾನೆಗಳು, ವೈಜ್ಞಾನಿಕ ತಾಂತ್ರಿಕ ಸಂಸ್ಥೆಗಳು, ಸಂಶೋಧನಾಲಯಗಳು ಇವುಗಳಷ್ಟರಿಂದಲೇ ವಿಜ್ಞಾನ ಸಿದ್ಧಿಸುವುದಿಲ್ಲ. ಲೌಕಿಕ ಅಭ್ಯುದಯಗಳ ಸಾಧನೆಯಿಂದಲೇ ವೈಜ್ಞಾನಿಕ ದೃಷ್ಟಿ ಬೆಳೆದಂತಾಗುವುದಿಲ್ಲ. ವಿಚಾರ ಮತ್ತು ವಿಜ್ಞಾನಗಳು ಮನೋಬುದ್ಧಿಗಳನ್ನು ಸಂಪೂರ್ಣವಾಗಿ ಪ್ರವೇಶಿಸಿ ಪರಿವರ್ತಿಸಿದಾಗಲೆ ವೈಜ್ಞಾನಿಕ ದೃಷ್ಟಿಗೆ ಅರ್ಥ ಬರುವುದು. ಶತಶತಮಾನಗಳಿಂದ ನಮ್ಮಲ್ಲಿ ಬೆಳೆದು ಬಂದಿರುವ ಜಾತಿ ಮತ ಆಚಾರ ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯಮೂಲವಾದ ಅವೈಜ್ಞಾನಿಕ ಘಟನೆಗಳು ನಮ್ಮ ಪ್ರಗತಿಗೆ ಕಂಟಕಪ್ರಾಯವಾಗಿದೆ. ಆದಷ್ಟು ಬೇಗ ನಾವು ಇವುಗಳಿಂದ ಪಾರಾಗಬೇಕು. ಇದು ವೈಜ್ಞಾನಿಕ ದೃಷ್ಟಿ, ವಿಚಾರಬುದ್ಧಿಗಳಿಂದ ಮಾತ್ರ ಸಾಧ್ಯವೆ ಹೊರತು ಲೌಕಿಕ ಪ್ರಯೋಜನಕಾರಿಯಾದ ವಿಜ್ಞಾನವಿದ್ಯೆ ಮತ್ತು ಯಂತ್ರವಿದ್ಯೆಗಳಷ್ಟರಿಂದಲೆ ನಡೆಯುತ್ತದೆಂದು ಭಾವಿಸವುದು ತಪ್ಪಾಗುತ್ತದೆ. ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಿ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲಿನಿಂದಲೆ ವಿಜ್ಞಾನವಿದ್ಯೆಗೆ ಕೇಂದ್ರವಾಗಿದ್ದ ಬೆಂಗಳೂರು ವಿಶ್ವವಿದ್ಯಾನಿಲಯವು ನವದೃಷ್ಟಿ, ನವವಿಚಾರಗಳ ನೆಲೆಯಾಗಿ ತನ್ನ ಧ್ಯೇಯೋಕ್ತಿಯನ್ನು ಸಾರ್ಥಕಪಡಿಸಿಕೊಳ್ಳಲೆಂದು ನಾನು ಹಾರೈಸುತ್ತೇನೆ.

ಈ ವಿಶ್ವವಿದ್ಯಾನಿಲಯವು ನನ್ನದೇ ಎಂಬ ಅಭಿಮಾನ ನನಗಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಯಾವ ವಿಶ್ವವಿದ್ಯಾನಿಲಯ ನನ್ನ ವಿದ್ಯಾಮಾತೆಯೂ ಕಾರ್ಯರಂಗವೂ ಆಗಿತ್ತೋ ಆ ಮೈಸೂರು ವಿಶ್ವವಿದ್ಯಾನಿಲಯದ ಭಾಗವೇ ಆಗಿತ್ತು ಇದು, ನಿನ್ನೆ ಮೊನ್ನೆಯವರೆಗೆ. ಈ ವಿಶ್ವವಿದ್ಯಾನಿಲಯದ ಎರಡು ಮುಖ್ಯ ಕಾಲೇಜುಗಳಲ್ಲಿ ನಾನು ಕೆಲವು ವರ್ಷ ಅಧ್ಯಾಪಕನಾಗಿಯೂ ಕೆಲಸ ಮಾಡಿದ ನೆನಪು ಇನ್ನೂ ಹಸುರಾಗಿದೆ. ಈಗ ಈ ಗೌರವ ಡಾಕ್ಟರೇಟ್ ಪದವಿಯಿಂದ ನಾನು ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೂ ಆಗಿದ್ದೇನೆ. ಇದಕ್ಕೆಂತ ಹೆಚ್ಚಿನ ಸಂತೋಷ ಗೌರವ ಇನ್ನು ಯಾವುದಿದೆ?

ನನ್ನಲ್ಲಿ ತೋರಿದ ಈ ಗೌರವಕ್ಕಾಗಿ ನಾನು ತಮ್ಮೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನರ್ಪಿಸುತ್ತೇನೆ.

* ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಬೆಂಗಳೂರು: ಜನವರಿ ೮, ೧೯೬೯.

# ಕದನಕ್ಕೆ ಸಜ್ಜು*

ಮಿತ್ರರಲ್ಲಿ ವಿಜ್ಞಾಪನೆ. ಇದುವರೆಗಿನ ಸೈನ್ಯದ ಸಜ್ಜಿನ ವಿಚಾರ ಇವುಗಳನ್ನೆಲ್ಲ ಕುರಿತು ಮಾನಪ್ಪನಾಯಕರು ಮತ್ತು ಲಕ್ಷ್ಮಣರಾಯರು ಮಾತನಾಡಿದ್ದಾರೆ. ಇಲ್ಲಿ ನೀವು ನೆರದಿರುವುದು ಪ್ರಾರಂಭವಾಗಲಿರುವ ಕದನಕ್ಕೆ ಮುಂದೆ ನುಗ್ಗುವ ಸೂಚನೆ ಕೊಡುವ ತೊರ್ಯಧ್ವನಿಗಾಗಿ.

ಸ್ವಾತಂತ್ರ್ಯಾನಂತರ ಎಷ್ಟೋ ಕ್ಷೇತ್ರಗಳಲ್ಲಿ ಅನಾಹುತಗಳನ್ನು ಕೂಡ ಅನುಭವಿಸಿ ಕೊಂಡು ನಮ್ಮ ದೇಶ ಮುಂದೆ ಹೋಗಿತ್ತಾ ಇದೆ. ತಕ್ಕಮಟ್ಟಿಗೆ ಬಹಿಃ ಸ್ವಾತಂತ್ರ್ಯವನ್ನೇನೊ ಸಾಧಿಸಿಕೊಂಡಿದ್ದೇವೆ ಆದರೆ ಅಂತಃಸ್ವಾತಂತ್ರ್ಯದ ವಿಚಾರದಲ್ಲಿ ನಾವು ಸಿದ್ಧಿಸಿಕೊಳ್ಳಬೇಕಾದುದು ಬಹಳ ಇದೆ. ಈ ಭಾಷೆ, ಸಾಹಿತ್ಯ ಅಥವಾ ಶಿಕ್ಷಣಮಾಧ್ಯಮ ಅನ್ನುವುದರ ಅಂತರಾರ್ಥ ಈ ಸ್ವಾತಂತ್ರವನ್ನು ಸಂಪಾದಿಸಿಕೊಳ್ಳುವ ವಿಧಾನ ಮಾತ್ರವಾಗಿದೆ. ಬಹುಕಾಲದಿಂದ ರೂಢಿಯಲ್ಲಿರುವ ಯಾವುದಾದರೂ ಒಂದು ಅಭ್ಯಾಸವನ್ನು ಬಿಟ್ಟುಕೊಡುವುದು ಸಾಮಾನ್ಯಚೇತನಗಳಿಗೆ ಬಹಳ ಕಷ್ಟದ ವಿಷಯ . ನಾವೆಲ್ಲ ನಿಮ್ಮಂತೆಯೆ, ನಿಮ್ಮಲ್ಲಿರುವ ಕೆಲವರಂತೆಯಾದರೂ, ಆಗತಾನೆ ವಿದ್ಯಾರ್ಥಿದಶೆಯಿಂದ ಹೊರಗೆ ಬಂದ ಕಾಲದಿಂದ ಹಿಡಿದು ಇವತ್ತಿನವರೆಗೂ, ಸುಮಾರು ನಲವತ್ತು ವರ್ಷಗಳಿಂದ, ಇದಕ್ಕಾಗಿ ನಾನಾರೀತಿಗಳಲ್ಲಿ, ಸಭ್ಯವಾಗಿಯೊ ಅಸಭ್ಯವಾಗಿಯೊ, ಪ್ರಯತ್ನಗಳನ್ನು ನಡೆಸುತ್ತ ಬಂದಿದ್ದೇವೆ. ನಾನಾ ತರಹದ ಅಸಂತೃಪ್ತಿಗಳೂ ಮಿನಮೇಷಗಳೂ ಎಲ್ಲ ನಡೆದಿವೆ. ಮೊದಮೊದಲು ಈ ಕಾರ್ಯಮಾಡಬೇಕು ಅನ್ನುವವರೆಲ್ಲ ಒಂದು ಅಭಿಮಾನದಿಂದ - ದೇಶಾಭಿಮಾನ, ಭಾಷಾಭಿಮಾನ, ಸಾಹಿತ್ಯಾಭಿಮಾನ , ನಮ್ಮದು, ನಮ್ಮ ಭಾಷೆ, ನಮ್ಮ ನಾಡು ಅನ್ನೋ ಅಭಿಮಾನದಿಂದಲೇ - ಪ್ರಾರಂಭ ಮಾಡುತ್ತಿದ್ದೆವು. ಲಾಭ ಏನೂ ಇರಲಿಲ್ಲ. ಅಷ್ಟೇ ಅಲ್ಲ, ಅದಕ್ಕೆ ತದ್ವಿರುದ್ದವಾಗಿ ನಷ್ಟವೂ ಕೂಡ ಆಗುತ್ತಾ ಇತ್ತು. ಆದರೆ ಸದಾಕಾಲವೂ ಅಭಿಮಾನಕ್ಕೋಸ್ಕರವಾಗಿಯೇ ದುಡಿಯಿರಿ ಎಂದು ಕೇಳಿಕೊಳ್ಳುವುದು ಅಷ್ಟು ಸಭ್ಯತೆಯೂ ಅಲ್ಲ. ಇತ್ತೀಚೆಗೆ ಸ್ವಲ್ಪಮಟ್ಟಿಗೆ ಅಭಿಮಾನಕ್ಕೆ ತಕ್ಕ ಪ್ರತಿಫಲವೂ ದೊರೆಯಲು ಪ್ರಾರಂಭವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಕನ್ನಡ ಮಾದ್ಯಮದ ಮುಖಾಂತರವಾಗಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಆ ಭಾಷಣಗಳನ್ನು ಸಣ್ಣಸಣ್ಣ ಪುಸ್ತಕಗಳ ರೂಪದಲ್ಲಿ ಬರೆಸಿ ಪ್ರಕಟಿಸುತ್ತಿದ್ದಾರೆ. ಸುಮಾರು ೪೫ - ೫೦ ವರ್ಷಗಳಿಂದ ಈ ಕೆಲಸ ನಡೆಯುತ್ತಾ ಇದೆ.ಆದ್ದರಿಂದಲೆ ಭರತಖಂಡದ ಇನ್ನಾವ ವಿಶ್ವವಿದ್ಯಾನಿಲಯದಲ್ಲೂ ನಡೆಯದೆ ಇದ್ದ ಕೆಲಸ ಇಲ್ಲಿ ನಡೆಯಿತು, ನಡೆಯುತ್ತಾ ಇದೆ. ವಿಶ್ವವುದ್ಯಾನಿಲಯಗಳಲ್ಲಿ ಅನೇಕ ಕಡೆಗಳಲ್ಲಿ ಬಹುಶಃ ಬೋಧನಾಂಗವೆ ಪ್ರಧಾನವಾಗಿ ಕೆಲಸ ಮಾಡುತ್ತಾ ಇದೆ. ಸ್ನಾತಕೋತ್ತರ ಸಂಶೋಧನಾಂಗವೂ ಅನೇಕ ಕಡೆಗಳಲ್ಲಿ ಇದೆ. ಆದರೆ ಈ ಪ್ರಸಾರಯೊಜನೆ ಬೇರೆ ಕಡೆಗಳಲ್ಲಿ ಇರಲಿಲ್ಲ. ಪ್ರಿನ್ಸಿಪಾಲ್ ಜೆ.ಸಿ. ರಾಲೊ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ಯಾವುದೊ ಒಂದು ವಿದ್ಯಾಸಮ್ಮೇಳನದಲ್ಲಿ ನಮ್ಮ ಈ ಯೋಜನೆಯನ್ನು ಕುರಿತು ಮಾತನಾಡಿದಾಗ ಅವರು ಕೂಡ ಇಂಥ ಕೆಲಸ ಬಹಳ

ಅಪೂರ್ವವಾದುದು ಎಂದು ಪ್ರಶಂಸಿಸಿದರಂತೆ. ವಿಶ್ವವಿದ್ಯಾನಿಲಯವನ್ನು ಸಾಮಾನ್ಯ ಜನವರ್ಗದ ಬಳಿಗೆ ತೆಗೆದುಕೊಂಡು ಹೋಗತಕ್ಕ ವಿಧಾನ ಎಂದು ಅವರು ಶಿಫಾರಸ್ಸನ್ನು ಕೂಡ ಪಡೆದುಕೊಂಡು ಬಂದಿದ್ದರು. ಆದರೆ ಅಂದು ನಮ್ಮವರೆ ಆದಂತಹ ಪ್ರಚ್ಛನ್ನ ವಿರೋಧಿಗಳು ನಾನಾರೂಪದಲ್ಲಿ ಎದುರುಕೆಲಸ ಮಾಡುತ್ತಾ ಇದ್ದರು. ಅಲ್ಲಿ ಕೆಲವರು ಚಕ್ರ ಮುಂದೆ ಹೋಗೋದಕ್ಕೆ ತಳ್ಳುತ್ತಾ ಇದ್ದರೆ, ಕೈಯೇನೊ ತಳ್ಳುತ್ತಾ ಇದ್ದ ಹಾಗೆ ಕಾಣುತ್ತಿತ್ತು! ಆದರೆ ವಾಸ್ತವವಾಗಿ ಅವರು ಮಾಡುತ್ತಿದ್ದ ಕೆಲಸ ಹಿಂದಕ್ಕೆ ಜಗ್ಗುತ್ತಾ ಇದ್ದದ್ದು. ಅಪಾಯವಾಗದೆ ಇರುವಂತೆ, ಅತೀವೇಗದಲ್ಲಿ ಹೋಗಿ ಮುಗ್ಗರಿಸಿ ಉರುಳದೆ ಇರುವಂತೆ ಮಾಡಲು ಬಿರಿಯೂ ಅಷ್ಟೇ ಆವಶ್ಯಕ. ಆದರೆ ಚಕ್ರದ ಕೆಲಸ ಮಾಡುವವರಿಗಿಂತ ಬಿರಿಯ ಕೆಲಸ ಮಾಡುವವರೆ ಹೆಚ್ಚಾದರೆ ಪ್ರಗತಿಯೆ ಆಗುವುದಿಲ್ಲ. ಈಗ ಆ ಸ್ಥಿತಿ ಇಲ್ಲ. ನಾವೀಗ ವೀರಾವೇಶ ಮಾಡಬೇಕಾದಂತಹ ಸ್ಥಿತಿಯಿಲ್ಲ. ಆದರೂ ಈ ಯುದ್ಧ ನಾಡೆಯುತ್ತದೆ. ಇನ್ನೂ ಎಷ್ಟೋ ವರ್ಷಗಳವರೆಗೆ ನಡೆಯುವಂತೆ ಕಾಣುತ್ತದೆ. ಅದರಲ್ಲಿ ಮುನ್ನುಗ್ಗುವುದಕ್ಕೋಸ್ಕರವಾಗಿ ಈಗ ಕಲಸ ನಡೆಯುತ್ತಾ ಇದೆ. ಈಗ ಜನರ ಮನಸ್ಸಿನಲ್ಲಿ ಈ ವಿಚಾರವಾಗಿ ಒಂದು ನಿರ್ದಿಷ್ಟವಾದ ಇತ್ಯರ್ಥ ಒದಗಿದೆ. ಏನೆಂದರೆ, ಆಯಾ ರಾಜ್ಯಗಳಲ್ಲಿ ರಾಜ್ಯಭಾಷೆಯೆ ಅಧಿಕೃತ ಭಾಷೆ, ಪ್ರಥಮ ಭಾಷೆ, ಶಿಕ್ಷಣದ ಮಾಧ್ಯಮದ ಭಾಷೆ, ಕೋರ್ಟ ಮತ್ತಿತರ ಎಲ್ಲ ವ್ಯವಹಾರಗಳ ಭಾಷೆಯಾಗಬೇಕು ಎಂಬುದು. ಈಗ ಕೇಂದ್ರ ಸರ್ಕಾರವೆ ಒಂದೊಂದು ರಾಜ್ಯಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದೆ. ಮೂರು ಹೊತ್ತೂ ಮೂರುಕಾಸು ಅಂದ್ರೇನೆ ಹೆಚ್ಚು ಅನ್ನುವವರಿಗೆ ಒಂದು ಕೋಟಿ ರೂಪಾಯಿ ಅಂದರೆ ಬಹಳ ದೊಡ್ಡದಾಗಿ ಕಾಣುತ್ತದೆ. ಆದರೆ ಉಳಿದ ದೇಶಗಳಲ್ಲಿ ಅವರು ಇದಕ್ಕೆಲ್ಲ ಖರ್ಚುಮಾಡುತ್ತಾ ಇರುವುದನ್ನು ನೋಡಿದರೆ, ನಮ್ಮ ಒಂದು ಕೋಟಿರೂಪಾಯಿ ವಾಸ್ತವವಾಗಿ ಹೆಚ್ಚಲ್ಲ. ಸೈನ್ಯಕ್ಕೆ, ನಮ್ಮನಮ್ಮ ಅವಿವೇಕದ ಜಗಳಗಳನ್ನು ಬಗೆಹರಿಸುವುದಕ್ಕೆ, ಎಷ್ಟೋ ಕೋಟಿರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ. ಹೀಗೆ ನಿಷೇಧಾತ್ಮಕವಾದ ಕಾರ್ಯಗಳಿಗೆ ಎಷ್ಟೊಂದು ಖರ್ಚು ಆಗುತ್ತಾ ಇದೆ! ಆದರೆ ಈ ಕಾರ್ಯ ನಿಷೇಧಾತ್ಮಕವಾದುದಲ್ಲ. ಇದರಿಂದ ಏನೊ ಒಂದು ರಚನಾತ್ಮಕವಾದದ್ದು ನಡೆಯುತ್ತದೆ. ಈ ಕೆಲಸಕ್ಕೆ ಒಂದು ಕೋಟಿ ಹೆಚ್ಚಲ್ಲ. ಆದರೂ ನಾವು ಹಿಂದೆ ಇದ್ದ ಸ್ಥಿತಿಯನ್ನು ನೋಡಿದರೆ, ನಿಜಕ್ಕೂ ನಾವು ತಕ್ಕಮಟ್ಟಿಗೆ ಶ್ರೀಮಂತರಾಗಿದ್ದೇವೆ ಎಂದುಕೊಳ್ಳಬಹುದು. ಈಗ ಆ ರೀತಿಯ ಕಾರ್ಯಗಳಿಗೆ ಹಣದ ಕೊರತೆಯೇನೂ ಇಲ್ಲ. ಕೆಲಸಕ್ಕೆ ಜನ ಒದಗುವುದು ಸಾಲದಾಗಿದೆ. ಈಚೀಚೆಗೆ ವ್ಯಕ್ತಿಗಳಿಗೆ ಬರಿ ಅಭಿಮಾನ, ಉತ್ಸಾಹ ಅನ್ನುವುದು ಮಾತ್ರವಲ್ಲದೆ, ಅದರಿಂದ ಪ್ರತಿಫಲವೂ ಲಭಿಸುತ್ತಿದೆ. ಪ್ರಸಾರಾಂಗ ದಿಂದಾಗಲಿ ಅಥವಾ ಅಧ್ಯಯನಸಂಸ್ಥೆಯಿಂದಾಗಲಿ ಒಂದು ಪುಸ್ತಕ ಪ್ರಕಟವಾದರೆ ಅದರ ಮುಖಬೆಲೆಯ ಮೇಲೆ ಶೇಕಾಡಾ ಇಂತಿಷ್ಟು ಅಂತಾ ತಕ್ಷಣ ಸಂಭಾವನೆ ದೊರೆಯುತ್ತದೆ. ಇದನ್ನು ನಾವು ಹಿಂದೆ ಕನಸಿನಲ್ಲೂ ಆಲೋಚನೆ ಮಾಡುವುದಕೆ ಆಗುತ್ತಿರಲಿಲ್ಲ. ಎಷ್ಟರಮಟ್ಟಿಗೆ ಎಂದರೆ ೨೦ - ೩೦ ವರ್ಷಗಳಿಗೆ ಹಿಂದೆ ನಮ್ಮ ಬರಹವನ್ನು ಯಾರಾದರೂ ಕಿವಿಗೊಟ್ಟು ಕೇಳುತ್ತಾರೆ ಅಂದರೇ ಸಂತೋಷವಾಗುತ್ತಿತ್ತು; ಯಾರಾದರೂ ಅಚ್ಚು ಹಾಕಿಸುತ್ತಾರೆ ಇನ್ನು ಅದಕ್ಕಿಂತಲೂ ನಮಗೆ 'ವೈಕುಂಠಪ್ರಾಪ್ತಿ' ಮತ್ತೊಂದಿಲ್ಲ ಎಂಬಷ್ಟು ಆನಂದವಾಗುತ್ತಿತ್ತು! ಯಾರಾದರೂ ನಮ್ಮ ಪದ್ಯವನ್ನೊ ಲೇಖನವನ್ನೊ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಗೌರವಧನ ಕೊಡುತ್ತಾರೆ ಅಂದುಬಿಟ್ಟರಂತೂ ನಮಗಂತೂ ಭಯಂಕರವಾದ ಆಶ್ಚರ್ಯವಾಗುತ್ತಿತ್ತು! ಬೆಲೆಯೇ ಇಲ್ಲದ ವಸ್ತು, ಅದಕ್ಕೆ ದುಡ್ಡು ಬೇರೆ ಕೊಡುತ್ತಾರೆಯೇ ಎಂಬಂಥ ಸ್ಥಿತಿ ಇತ್ತು. ಆ ಸ್ಥಿತಿಯಿಲ್ಲ ಈಗ. ಬಹಳ ದೂರ ಬಂದಿದ್ದೇವೆ.

ಗಾತ್ರದಲ್ಲಿ ಅಲ್ಲದೆ ಇದ್ದರೂ ಗುಣದಲ್ಲಿ ನಮ್ಮ ಸಾಹಿತ್ಯದಲ್ಲಿ ೩೦ - ೩೫ ವರ್ಷಗಳಿಂದ ಏನೇನು ಸೃಷ್ಟಿಯಾಗಿದೆ? ಎಷ್ಟೆಷ್ಟು ವೈವಿಧ್ಯ ಇದೆ? ಅನ್ನುವುದರ ವಿವರಣಾತ್ಮಕ ಅಧ್ಯಯನ ಮಾಡಬೇಕಾಗಿದೆ. ವಿವಿಧ ಪ್ರಕಾರದ ವಿವಿಧ ಸಾಹಿತ್ಯವನ್ನು ತೆಗೆದುಕೊಂಡರೆ ನಮ್ಮ ಸಾಹಿತ್ಯ ಯಾವ ಸಾಹಿತ್ಯದ ಮಟ್ಟಕ್ಕೂ ಕಿರಿದಲ್ಲ. ಭಾಷೆಯ ಪ್ರಯೋಗ - ಉಪಯೋಗಗಳ ವಿಚಾರವನ್ನು ತೆಗೆದುಕೊಂದರೆ, ಇಂಗ್ಲಿಷ್ ಸಾಹಿತ್ಯದ ಉತ್ಕೃಷ್ಟ ಕೃತಿಗಳಲ್ಲಿ ಏನೇನು ಹೇಳಲು ಸಾಧ್ಯವಾಗಿದೆಯೋ ಅದನ್ನೆಲ್ಲ ಅದಕ್ಕಿಂತಲೂ ಸಮರ್ಥವಾದ ರೀತಿಯಲ್ಲಿ ಹೇಳುವ ಶಕ್ತಿ ಕನ್ನಡ ಸಾಹಿತ್ಯಕ್ಕಿದೆ ಎನ್ನುವುದನ್ನು ನಮ್ಮ ಲೇಖಕರು ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಆ ಪಾಶ್ಚಾತ್ಯದೇಶಗಳ ಸಾಹಿತ್ಯಗಳಿಗೆ ಎಂದೆಂದೂ ಕನಸಿನಲ್ಲಿಯೂ ಎಟುಕಲಾರದಂಥ ಕೆಲವು ಭಾವಗಳು, ಕೆಲವು ಸತ್ಯಗಳು ಕೆಲವು ಅನುಭಾವಗಳು ಇವುಗಳನ್ನೆಲ್ಲ, ನಾವು ನಮ್ಮ ಹಿರಿಯರಿಂದ ಪಡೆಯುವುದರಿಂದ (ಅವರಿಗಿಂತ ನಾವು ದೊಡ್ಡವರು ಎಂದೇನೂ ಅರ್ಥವಲ್ಲ!) ನಮ್ಮ ಸಾಹಿತ್ಯದ ಶಿಖರಗಳಲ್ಲಿ ನಿಂತಾಗ ಅವರ ಸಾಹಿತ್ಯದ ಶಿಖರಗಳಿಗಿಂತಲೂ ನಾವು ಹೆಚ್ಚಿನ ಮಟ್ಟದಲ್ಲಿ ಹೆಚ್ಚಿನ ಎತ್ತರದಲ್ಲಿ ನಿಂತಿದ್ದೇವೆ ಎನ್ನಿಸುತ್ತದೆ. ಅವರಲ್ಲಿ ಅತ್ಯಂತ ಉನ್ನತವಾದವನು ನಿಂತರೂ ಆಲ್ಪ್ಸ್ ಪರ್ವತದ ಮೇಲೆ ನಿಲ್ಲುತ್ತಾನೆ; ನಮ್ಮಲ್ಲಿ ಅತ್ಯಂತ ಕುಬ್ಜನಾದವನು ನಿಂತರೂ ಹಿಮಾಲಯದ ಶಿಖರದ ಮೇಲೆ ನಿಲ್ಲುತ್ತಾನೆ! ಆದ್ದರಿಂದ ಎಂದಿದ್ದರೂ ನಾವು ಅವರಿಗಿಂತ ಎತ್ತರವಾಗಿಯೆ ಇರುತ್ತೇವೆ. ಅದು ನಮ್ಮ ಪಿತ್ರಾರ್ಜಿವಾದ ವೈಶಿಷ್ಟ್ಯ. ಆದ್ದರಿಂದ ಆ ವಿಚಾರದಲ್ಲಿ ತಿಳಿದವರು ಯಾರೂ ನಮ್ಮ ಭಾಷೆಗೆ ಬಡತನವಿದೆ, ದೌರ್ಬಲ್ಯವಿದೆ ಎಂಬ ಮಾತುಗಳನ್ನು ಆಡಲಾರರು. ಇನ್ನು ನಮ್ಮ ತತ್ತ್ವಶಾಸ್ತ್ರ, ನಮ್ಮ ತರ್ಕಶಾಸ್ತ್ರ, ನಮ್ಮ ಯೋಗಶಾಸ್ತ್ರ ಇವುಗಳು ಮಾಡಿರುವ ಕೆಲಸ, ಇವುಗಳ ಪರಿಭಾಷೆ, ಇವುಗಳ ಮುಂದೆ ಪಾಶ್ಚಾತ್ಯರ ಬಡತನ ಎದ್ದು ಕಾಣುತ್ತದೆ. ಆ ವಿಚಾರದಲ್ಲಿ ನಾವು ಅವರಿಂದ ಪಡೆಯಬೇಕಾದ್ದಿಲ್ಲ; ಕೊಡಬೇಕಾದ್ದು ಬೇಕಾದಷ್ಟು ಇದೆ. ವಿಜ್ಞಾನದ ವಿಚಾರದಲ್ಲಿ ಮಾತ್ರ ನಾವು ಅವರಿಂದ ಪಡೆಯಬೇಕಾದ್ದು, ಅವರಿಂದ ಕಲಿಯಬೇಕಾದ್ದು ಬೇಕಾದಷ್ಟು ಇದೆ. ಇನ್ನೂ ಆ ಮಟ್ಟಕ್ಕೆ ನಾವು ಏರಬೇಕಾದರೆ ಬಹಳಷ್ಟು ವರ್ಷಗಳೆ ಬೇಕಾಗುತ್ತವೆ.

ನಾನು ಕುಲಪತಿಯಾಗಿದ್ದಾಗ ಕನ್ನಡ ಮಾಧ್ಯಮ ಯೋಜನೆಯನ್ನು ಜಾರಿಗೆ ತಂದೆ. ವಿದ್ವಾಂಸರು ಆರು ತಿಂಗಳಲ್ಲಿ ಇಂಟರ್ ಮೀಡಿಯಟ್ ಅಥವಾ ಪಿ.ಯು.ಸಿ. ಮಟ್ಟದ ಪುಸ್ತಕಗಳನ್ನೂ ಬರೆದುಕೊಟ್ಟರು. ವಿಜ್ಞಾನವನ್ನು ಸರಳ ಶೈಲಿಯಲ್ಲಿ ಹೇಳುವ ಮೂಲಭೂತ ಕಾರ್ಯ ನಮ್ಮ ಪ್ರಚಾರೋಪನ್ಯಾಸಮಾಲೆಯಲ್ಲಿ ಆಗಲೇ ಅಗಿದ್ದುದರಿಂದ ಈ ಕಾರ್ಯ ಶೀಘ್ರವಾಗಿ ಸಾಧ್ಯವಾಯಿತು. ಈಗಂತೂ ವಾಸ್ತವವಾಗಿ ನಾವು ಒಂದು ಕದನವನ್ನೆ ಪ್ರಾರಂಭ ಮಾಡುತ್ತಾ ಇದ್ದೇವೆ. ಪರಿಭಾಷೆಯ ವಿಚಾರವನ್ನು ತೆಗೆದುಕೊಂಡು ಇದನ್ನು ಹೇಗೆ ಹೇಳುತ್ತೀರಿ? ಅದನ್ನು ಹೇಗೆ ಹೇಳುತ್ತೀರಿ? ಎನ್ನುತ್ತಿದ್ದರು. ನಾನು ಅಂದು ಹೇಳುತ್ತಾ ಇದ್ದದ್ದನ್ನೇ ಇಂದೂ ಹೇಳುತ್ತೇನೆ. ಒಂದು ರೀತಿಯಲ್ಲಿ ಪರಿಭಾಷಿಕ ಶಬ್ದಗಳು ಅಂಕಿತನಾಮಗಳಿದ್ದಂತೆ. ಏನೋ ಒಂದು ಕೆಲಸ, ಅದನ್ನೆಲ್ಲಾ ವಿವರಿಸುವುದಕ್ಕೆ ಬದಲಾಗಿ ಒಂದು ಹೆಸರು. ಆ ಹೆಸರನ್ನು ಅಂಕಿತನಾಮದಂತೆ ಹಾಗೆಯೇ ಉಪಯೋಗಿಸಬಹುದು. ಅದನ್ನು ನಾನು ತಮಾಷೆಯಾಗಿ ಹೇಳುತ್ತಿದ್ದುದುಂಟು: ನೀವು 'ವಾಟರ್' ತೆಗೆದುಕೊಂಡು 'ಟೆಸ್ಟ್ ಟ್ಯೂಬ್'ಗೆ 'ಪೋರ್' ಮಾಡಿ ಅಂತ ಹೇಳಿದರೂ ಸಂತೋಷ. ನನಗೇನೂ ಅಭ್ಯಂತರ ಇಲ್ಲ. ಯಾಕೆ ಅಂದರೆ ಹುಡುಗರಿಗೆ ವಿಜ್ಞಾನದ ವಿಷಯ ತಿಳಿಯಬೇಕು ಅನ್ನುವುದು ನಮ್ಮ ಉದ್ದೇಶವೆ ಹೊರತು, ಆಂಡಯ್ಯ 'ಕಬ್ಬಿಗರ ಕಾವ' ಬರೆದ ಹಾಗೆ ಎಲ್ಲವನ್ನೂ ಕನ್ನಡದಲ್ಲಿ ಬರೆಯುತ್ತೇವೆ,

ಎಲ್ಲವನ್ನೂ ಕನ್ನಡದಲ್ಲಿ ಮಾಡುತ್ತೇವೆ ಎಂಬ ಛಲವಲ್ಲ. ಅವನಿಗೆ ಸೌಲಭ್ಯವನ್ನು ಒದಗಿಸಿಕೊಡುವುದು ಮುಖ್ಯ. ಬೇರೆ ಮಾತನ್ನು ಉಪಯೊಗಿಸಲು ಸಾಧ್ಯವಿಲ್ಲದೆ ಇದ್ದರೆ ಆ ಶಬ್ದಗಳನ್ನು ಹಾಗೆಯೇ ಬಳಸಿ. ಹೇಗೆ ಸೂರ್ಯ, ಚಂದ್ರ ಅನ್ನೋ ಪದಗಳು ಕನ್ನಡ ಆಗಿ ಬಿಟ್ಟಿವೆಯೇ ಹಾಗೆ ಸ್ವಿಚ್ಚು, ಬಲ್ಬು, ಬೋರ್ಡು, ಇವೆಲ್ಲ ಕನ್ನಡ ಪದಗಳೆ! ಅವನ್ನು ಯಾರೂ ಇಂಗ್ಲಿಷ್ ಅನ್ನುವುದಿಲ್ಲ. ಹಾಗೆಯೆ ಈ ಪಾರಿಭಾಷಿಕ ಪದಗಳೂ ಸಂಪೂರ್ಣವಾಗಿ ಕನ್ನಡವೇ ಆಗುತ್ತವೆ. ಆದ್ದರಿಂದ ಆದಷ್ಟುಮಟ್ಟಿಗೂ ಅಂತರರಾಷ್ಟ್ರೀಯ ಪರಿಭಾಷೆಯನ್ನೂ, ಸಂಕೇತಗಳನ್ನೂ, ಪ್ಲಸ್, ಮೈನಸ್ ಸ್ಕ್ವೇರ್ ರೂಟ್ ಇವನ್ನೆಲ್ಲಾ - ಹಾಗೆ ಹಾಗೆ ಉಪಯೋಗಿಸುವುದರಿಂದ ಏನೂ ತೊಂದರೆಯಿಲ್ಲ. ಮೊದಮೊದಲು ವಿನೂತನವಾಗಿ ಕಾಣಬಹುದು. ಮುಂದಿನ ತಲೆಮಾರಿನ ಹೊತ್ತಿಗೆ ಅವೆಲ್ಲ ನಮ್ಮವೇ ಆಗಿರುತ್ತವೆ.

ಮೊನ್ನೆ ಈ 'ವಿಜ್ಞಾನ ಕರ್ಣಾಟಕ'ದಲ್ಲಿ ಅರ್. ಎಲ್. ನರಸಿಂಹಯ್ಯನವರ ಬಗ್ಗೆ ಒಳ್ಳೊಳ್ಳೆ ಲೇಖನಗಳನ್ನೆಲ್ಲ ನೋಡುತ್ತಾ ಇದ್ದೆ. ಅದರಲ್ಲಿ ಎ.ಎನ್. ಮೂರ್ತಿರಾಯರು ಬರೆದ ಒಂದು ಲೇಖನ ಇದೆ. ಆರ್. ಎಲ್. ನರಸಿಂಹಯ್ಯನವರು ಒಂದುಕೋಶವನ್ನು ಮಾಡುತ್ತಾ ಇದ್ದರು ಎಂದು ಹೇಳಿದ್ದಾರೆ. ಅಲ್ಲಿ ಅವರು Electro – encephalograph ಎಂಬುದನ್ನು 'ವಿದ್ಯುನ್ ಮಸ್ತಿಷ್ಕ ರೇಖಾ' ಎಂದುಮಾಡಿದ್ದರಂತೆ. ಮೂರ್ತಿರಾಯರು 'ಇದಕ್ಕಿಂತಲೂ ಅದೇ ಹೆಸರಿಟ್ಟುಕೊಳ್ಳೋಣ' ಎಂದು ಹೇಳಿದರಂತೆ. ಇವರು 'ಇಲ್ಲ, ನಾನೇನೋ ಇದನ್ನೇ ಉಪಯೋಗಿಸಿತ್ತೀನಿ. ಆಮೇಲೆ ಬೇಕಾದರೆ ಏನಬೇಕಾದರೂ ಮಾಡಿಕೊಳ್ಳಿ' ಅಂದರಂತೆ. ಎಲ್ಲಿ ಪರಿಭಾಷೆ ಅರ್ಥನಿಷ್ಠವಾಗಿರುತ್ತದೆಯೊ ಅಲ್ಲಿ ನಮ್ಮ ಭಾಷೆಯನ್ನು ಉಪಯೋಗಿಸಿಕೊಳ್ಳುವುದು ವಾಸಿ ಅಂತ ಕಾಣಿಸುತ್ತದೆ. ಏಕೆಂದರೆ 'Electro – encephalograph' ಅಂತ ಹೇಳಿದಾಗ ಅರ್ಥವಾಗದಿದ್ದ ವಿಷಯ 'ವಿದ್ಯುನ್ ಮಸ್ತಿಷ್ಕ ರೇಖಾ' ಎಂದು ಹೇಳಿದಾಗ ವಿವರಿಸಿದಂತಾಗಿ ಏನೋ ಒಂದು ಸ್ವಲ್ಪ ಅರ್ಥವಾಗುತ್ತದೆ. ಮೊನ್ನೆ ಒಂಬತ್ತೂಕಾಲು ಘಂಟೆಯಿಂದ ಒಂಬತ್ತೂವರೆಯ ವರೆಗೆ ಮೂರು ಜನ ಜೆಟ್ ವಿಮಾನದ ವಿಚಾರದಲ್ಲಿ - ನೀವು ಕೇಳಿದಿರೋ ಬಿಟ್ಟಿರೋ ಗೊತ್ತಿಲ್ಲ - ಅತ್ಯಂತ ಕ್ಲಿಷ್ಟ, ಗಹನ ಸೂಕ್ಷ್ಮ ವಿಚಾರಗಳನ್ನೆಲ್ಲ ಕುರುತು ಸಂವಾದ ಮಾಡಿದರು. ನನಗೆ ಎಲ್ಲಕ್ಕೂ ಆಶ್ಚರ್ಯವಾದದ್ದು, ಆ ಮೂರು ಜನ ಮಾತನಾಡುತ್ತಿದ್ದುದನ್ನು ನೋಡಿದರೆ ಬಹುಕಾಲದಿಂದ ಕನ್ನಡ ಪ್ರಾಧ್ಯಾಪಕರಾಗಿದ್ದರೂ ಆ ರೀತಿಯಲ್ಲಿ ಅಷ್ಟೊಂದು ಸುಲಭವಾಗಿ ಸ್ಪಷ್ಟವಾಗಿ ಮಾತನಾಡುತ್ತಿದ್ದರೋ ಇಲ್ಲವೋ ಅನ್ನೋ ಹಾಗೆ ಮಾತನಾಡುತ್ತಾ ಇದ್ದರು. ಈಗ ಅತ್ಯಂತ ಗಹನವಾದ ವಿಜ್ಞಾನದ ವಿಚಾರಗಳನ್ನೂ ಕನ್ನಡದಲ್ಲಿ ಹೇಳಬಹುದು. ಹುಡುಗರು, ಇಂಗ್ಲಿಷ್‌ನಲ್ಲಿ ಹೇಳುತ್ತಾ ಇರೋವಾಗ ಸುಮ್ಮನೆ ತಟಸ್ಥರಾಗಿ ಸಮಾಧಿಸ್ಥಿಯಲ್ಲಿ ಎಂಬಂತೆ ಕುಳಿತಿರುತ್ತಾರೆ, ಅನೇಸ್ತೀಯಾ ಕೊಟ್ಟಂತೆ, ಏನಾದರೂ ಹೇಳಿಕೊಳ್ಳಲಿ ಅನ್ನುವಂತೆ. ಅದನ್ನೇ ನೀವು ಕನ್ನಡದಲ್ಲಿ ಹೇಳಲು ಶುರುಮಾಡಿದಾಗ ಕಣ್ಣಿನಲಿ ಹೊಳಪು ಬರುತ್ತದೆ. ಮುಖದಲ್ಲಿ ನಗೆ ಮೂಡುತ್ತದೆ; ಒಂದು ತಿಳುವಳಿಕೆ ಉಂಟಾಗುತ್ತದೆ. ಅವನು ಎದ್ದು ಪ್ರಶ್ನೆ ಕೇಳುತ್ತಾನೆ. ಇಂಗ್ಲಿಷಿನಲ್ಲೇ ಮಾತನಾಡುತ್ತಾ ಇದ್ದರೆ, ಅವನು ಪ್ರಶ್ನೆಯನ್ನೂ ಕೇಳುವ ಗೋಜಿಗೇ ಹೋಗುವುದಿಲ್ಲ. ಎಲ್ಲವನ್ನೂ ತಿಳಿದುಕೊಂಡವನ ಹಾಗೆ ಸುಮ್ಮನಿದ್ದುಬಿಡುತ್ತಾನೆ. ಅಪ್ಪಿ ತಪ್ಪಿ ಪ್ರಶ್ನೆ ಕೇಳಿದರೆ, ಕೇಳುವಾಗ ಪ್ರಶ್ನೆಯಲ್ಲಿಯೇ ಎಲ್ಲಿ ತಪ್ಪಾಗಿ ಎಲ್ಲರೂ ನಕ್ಕುಬಿಡುತ್ತಾರೋ ಎಂಬ ಭಯದಿಂದ ಅದರ ತಂಟೆಗೇ ಹೋಗುವುದಿಲ್ಲ. ಇಂಗ್ಲಿಷ್‌ನಲ್ಲಿ ನೀವು ಪಾಠ ಹೇಳುತ್ತಾ ಇದ್ದರೆ, ಹುಡುಗರಿಗೆ ಅನೇಸ್ತೀಸಿಯಾ ಕೊಟ್ಟಹಾಗೆ ಇರುತ್ತೆ. ಏನು ಆಪರೇಷನ್ ಬೇಕಾದರೂ ಮಾಡಿ! ಎಲ್ಲ ಮಕ್ಕಳೂ ಒಂದುಘಂಟೆ ಆದಮೇಲೆ ಎಚ್ಚರಗೊಳ್ಳುತ್ತಾರೆ. ಆಮೇಲೆ ಕಣ್ಣುಬಿಟ್ಟುಕೊಂಡು ಹೊರಗೆ ಬರುತ್ತಾರೆ. ಮುಂದೆ ಏನು

ಮಾಡಬೇಕು? ಯಾರಾದರೂ ಒಬ್ಬರ ಹತ್ತಿರ ಹೋಗಿ ಒಂದಷ್ಟು ದುಡ್ಡುಕೊಟ್ಟು, ದಮ್ಮಯ್ಯ ಗುಡ್ಡೆಹಾಕಿ ಒಂದು ಪ್ರಬಂಧ ಬರೆಸಿಕೊಂಡು ಬಾಯಿಪಾಠ ಮಾಡಿ ಪರೀಕ್ಷೆಯಲ್ಲಿ ಒಪ್ಪಿಸ್ತಾರೆ.

ಈ ಪರಿಭಾಷೆಯ ವಿಚಾರದಲ್ಲಿ ಮತ್ತೊಂದು ಮಾತು ಹೇಳಬೇಕು. ಈ ಮೂರು ವಿಶ್ವವಿದ್ಯಾನಿಲಯದವರು ಪಠ್ಯಪುಸ್ತಕಗಳನ್ನು ಬರೆಯುವವರು - ಒಬ್ಬೊಬ್ಬರು ಒಂದೊಂದು ಪರಿಭಾಷೆಯನ್ನು ಉಪಯೋಗಿಸುವುದು ಖಂಡಿತಾ ಕೂಡದು . ಅದು ಮಾತ್ರ ನಿಶ್ಚಯ. ಎಲ್ಲರಿಗೂ ಕಡೆಗೆ ಕನ್ನಡದಲ್ಲಾದರೂ, ಒಂದೇ ಒಂದು ಪರಿಭಾಷೆ ಇರಬೇಕು. ಇದನ್ನು ನಾವು ಸಾಧಿಸಲೇಬೇಕು. ಕರ್ಣಾಟಕ ವಿಶ್ವವಿದ್ಯಾನಿಲಯದವರು 'ಪ್ರಾಣವಾಯು' ಅನ್ನುವುದು, ಮೈಸೂರು ವಿಶ್ವವಿದ್ಯಾನಿಲಯದವರು 'ಆಮ್ಲಜನಕ' ಅನ್ನುವುದು ಇದು ಅಗಬಾರದು. ಆಕ್ಸಿಜನ್, ಹೈಡ್ರೋಜನ್, ಕ್ಲೋರಿನ್ ಇಂಥ ಮಾತುಗಳನ್ನು ಹಾಗೆ ಹಾಗೆ ಉಪಯೋಗಿಸಿದರೆ ವಾಸಿ. ಅದು ಅಂತರರಾಷ್ಟ್ರೀಯವಾಯಿತು, ಅಖಿಲ ಭಾರತೀಯವಾಯಿತು. ನಮಗೂ ರಗಳೆ ತಪ್ಪಿತು. ಇನ್ನು ಸಂಕೇತಗಳು ಸಿಂಬಲ್ಸ್, ABC ಅಥವಾ ಪ್ಲಸ್, ಮೈನಸ್ ಇತ್ಯಾದಿ. ಅವನ್ನು ಮಾತ್ರ ಅಂತರರಾಷ್ಟ್ರೀಯವಾದದ್ದನು ಹಾಗೆ ಹಾಗೆಯೇ ಇಟ್ಟುಕೊಳ್ಳಬೇಕು. ನಾನು ಹಿಂದೆ ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಧಾರವಾಡಕ್ಕೆ ಹೋದಾಗ ಅಲ್ಲೊಂದು ಪುಸ್ತಕ ಪ್ರದರ್ಶನ ನಡೆಯಿತು. ನಾನೊಂದು 'ಆಲ್ಜೀಬ್ರಾ' ಪುಸ್ತಕವನ್ನು ತೆಗೆದು ನೋಡಿದೆ. ಅ,ಬ,ಕ, ಎಂದಿತ್ತು a, b,c, ಎನ್ನುವುದಕ್ಕೆ! ನಾನು ಅಂದೇ ಹೇಳಿದೆ: "ನೋಡಿ ಇದು ಕನ್ನಡ ಮಾಧ್ಯಮ ಆದರೆ, ನಾನು ಇದಕ್ಕೆ ಸಂಪೂರ್ಣ ವಿರೋಧಿ. ಇಂಗ್ಲಿಷ್ ಮಾಧ್ಯಮವೆ ಇರಲಿ ಅಂತ ಹೇಳ್ತೀನೆ. ಖಂಡಿತಾ ಬೇಡ ಇದು." ಈ ಅಕ್ಷರಗಳು, ಎಬಿಸಿ, ಸಿಂಬಲ್ಸ್, ಇವೆಲ್ಲ ಹಾಗೆ ಹಾಗೆ ಇರಬೇಕು.

ನನ್ನದು ಇನ್ನೊಂದು ಸೂಚನೆ ಇದೆ. ವರ್ಣಮಾಲೆಯಲ್ಲಿ ನಮ್ಮ ಮಕ್ಕಳಿಗೆ ನಾವು ಅ ಆ ಇ ಈ ಕಲಿಸುತ್ತೇವೆ. ಇನ್ನು ಒಂದು, ಎರಡು, ಮೂರು, ನಾಲ್ಕು ಅಂತ ಕಲಿಸುತ್ತೇವೆ. ಕನ್ನಡ ಅಂಕಿಗಳನ್ನೂ ಕಲಿಸುತ್ತೇವೆ. ರೋಮನ್ ಮತ್ತು ಅರಾಬಿಕ್ ಅಂಕಿಗಳನ್ನೂ ಕಲಿಸುತ್ತೇವೆ. ಅದೇನೂ ಕಷ್ಟ ಇಲ್ಲ. ಹಾಗೆಯೆ ಎಬಿಸಿ ಯಿಂದ ಜಡ್ ವರೆಗೆ ಇಪ್ಪತ್ತಾರು ಅಕ್ಷರಗಳನ್ನು ಕಲಿಸುವುದು, ಕಲಿತುಕೊಳ್ಳುವುದೂ ಏನೂ ಕಷ್ಟವಲ್ಲ. ಆದ್ದರಿಂದ ನಮ್ಮ ವರ್ಣಮಾಲೆಯಲ್ಲಿ ಕನ್ನಡದ ವರ್ಣಮಾಲೆಯ ಜೊತೆಗೆ ಇಂಗ್ಲಿಷ್ ವರ್ಣಮಾಲೆಯನ್ನೂ ಸೇರಿಸಿ ಹೇಳಿಕೊಡಿ. ಎಬಿಸಿ ಮುಂತಾದವನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಬಳಸಬೇಕಾಗುತ್ತದೆ. ಆದ್ದರಿಂದ ಕನ್ನಡದ ವರ್ಣಮಾಲೆಯಲ್ಲಿ ೨೬ ಇಂಗ್ಲಿಷ್ ಅಕ್ಷರಗಳನ್ನು ಸೇರಿಸಿ ಹೇಳಿಕೊಟ್ಟುಬಿಟ್ಟರಾಯಿತು. ಇಂಗ್ಲಿಷ್ ಭಾಷೆ ತನ್ನ ಅಂತಃಸತ್ವದಿಂದ ಅಂತರ್ ಮೌಲ್ಯದಿಂದಲೇ ಒಂದು ರೀತಿಯಲ್ಲಿ ವಿಶಿಷ್ಟ ಭಾಷೆಯಾಗಿಬಿಟ್ಟಿದೆ. ಅದರ ಸ್ಥಾನ ಎಂದಿಗೂ ಚ್ಯುತವಾಗುವುದಿಲ್ಲ. ನಿಶ್ಚಯ ಅದು. ಆ ಧೈರ್ಯ ಇಂಗ್ಲಿಷ್ ಮಾಧ್ಯಮವಾದಿಗಳಿಗಿಲ್ಲ, ನಮಗಿದೆ ಅದು. ಆದ್ದರಿಂದ ಅದನ್ನು ನಾನು ಹೇಳಿದೆ ಅಷ್ಟೆ. ಕನ್ನಡ ಮಾಧ್ಯಮ ಜಾರಿಗೆ ಬಂದಾಗ ಮೊದಲು ತರ್ಕಶಾಸ್ತ್ರವನ್ನು ಕನ್ನಡದಲ್ಲಿ ಬೋಧಿಸುವುದಕ್ಕೆ ಶುರು ಮಾಡಿದೆವು. ದಿವಂಗತ ಯಾಮುನಾಚಾರ್ಯರು ಪುಸ್ತಕ ಬರೆದುಕೊಟ್ಟರು. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ೭೦ - ೮೦ರ ಮೇಲೆ ಅಂಕಗಳನ್ನು ತೆಗೆದುಕೊಂಡಿದ್ದರು. ಆಮೇಲೆ ಇದು ಹೇಗೆ ಸಾಧ್ಯವಾಯಿತು ಎಂದು ಆ ಹುಡುಗರನ್ನು ನಾನು ಕೇಳಿದೆ. ತರ್ಕಶಾಸ್ತ್ರ ಇಂಗ್ಲಿಷ್ ಮಾಧ್ಯಮದವರಿಗೆ ಕಷ್ಟ; ನಮಗೇನು ನೀರು ಕುಡಿದ ಹಾಗೆ. ಇಂಗ್ಲಿಷ್ ಭಾಷೆಯಲ್ಲಿ ಆ ಲ್ಯಾಟಿನ್ ಟರ್ಮ್ಸ್ ನಲ್ಲಿ ಬಾಯಿಪಾಠ ಮಾಡಿಕೊಂಡು ಅದನ್ನು ಹಾಗೆ ಹಾಗೆ ನೆನಪಿಟ್ಟುಕೊಂಡು ಬರೆಯಬೇಕು. ಅಂಥ ಕ್ಲೇಶ ಕನ್ನಡ ಮಾಧ್ಯಮದಲ್ಲಿ ಇಲ್ಲ ಎಂದರು. ಪಾಶ್ಚಾತ್ಯರಲ್ಲಿ ಅನೇಕರು, ವಿಶ್ವವಿದ್ಯಾನಿಯಗಳ ಮೆಟ್ಟಿಲನ್ನು ಕೂಡ

ಹತ್ತದೇ ಇರುವವರು, ಎಷ್ಟೋಜನ ವಿಜ್ಞಾನದಲ್ಲಿ ದೊಡ್ಡ ಆವಿಷ್ಕಾರಗಳನ್ನು ಮಾಡಿದ್ದಾರೆ. ಕಾರಣ ಏನೆಂದರೆ ಅವರವರ ಭಾಷೆಗಳಲ್ಲಿ ಅವರು ಚಿಂತನ ನಡೆಸಿದ್ದಾರೆ. ಪುಸ್ತಕಗಳು ಕನ್ನಡದಲ್ಲಿ ಎಲ್ಲಕಡೆಯೂ ಇದ್ದರೆ ಪ್ರತಿಭೆ ಇರುವವನು ತಾನೇ ಓದಿಕೊಳ್ಳುತ್ತಾನೆ, ತಾನೇ ಕೆಲಸ ಮಾಡುತ್ತಾನೆ. ಈಗ ವಿಜ್ಞಾನದ ಜ್ಞಾನ ಸಾರ್ವತ್ರಿಕವಾದದ್ದು. ಜನಗಳಲ್ಲಿ ಹಬ್ಬುವಂತದ್ದು . ನಮ್ಮ ಜನ ಜೀವನದಲ್ಲಿಯೂ ಇದರ ಆವಶ್ಯಕತೆ ಎಷ್ಟಿದೆ? ಕಡೆಗೆ ಒಬ್ಬ ರೈತ, ಕೃಷಿಕ ಅವನೂ ಈಗ ಒಂದು 'ಟಿಲ್ಲರ್' ಉಪಯೋಗುಸುತ್ತಾನೆ. ಅದೇನಾದರೂ ಸ್ವಲ್ಪ ಕೆಟ್ಟು ಹೋದರೆ, ನಿಮ್ಮ ಕನ್ನಡ ವಿಜ್ಞಾನ ಪುಸ್ತಕ ಓದಿ ಸರಿಮಾಡಿಕೊಳ್ಳುತ್ತಾನೆ. ಈಗ ಏನಾಗಿದೆ ಅಂದರೆ ಅವನೆಗೆ ಅದು ಗೊತ್ತೂ ಇಲ್ಲ. ಅವನು ಯಾರನ್ನಾದರೂ ಕರೆದುಕೊಂಡು ಬರಬೇಕಾದರೆ, ಎಲ್ಲೋ ಬೆಂಗಳೂರಿಗೋ ಮೈಸೂರಿಗೋ ಬಂದು ಮಹರ್ಷಿಗಳನ್ನು ಕರೆದುಕೊಂಡು ಹೋಗುತ್ತಿದ್ದಂತೆ ಮೆಕ್ಯಾನಿಕ್ ಮಹಾರಾಜನನ್ನು ಕರೆದುಕೊಂಡು ಹೋಗಬೇಕು. ಒಂದು ನಿಮಿಷದಲ್ಲೊ ಎರಡು ನಿಮಿಷದಲ್ಲೊ ಮಾಡುವ ಕಲಸವನ್ನು ಈ ಮೆಕ್ಯಾನಿಕ್ ಮಹಾರಾಜ ಎರಡು ದಿವಸಾನೋ ಮೂರು ದಿವಸಾನೋ ಆರು ದಿವಸಾನೋ ಮಾಡ್ತಾನೆ. ಹೀಗಾಗಿ ಎಷ್ಟೋ ಟ್ರಾಕ್ಟರುಗಳು - ೧೦ ಸಾವಿರ ಇಪ್ಪತ್ತು ಸಾವಿರ ಕೊಟ್ಟು ತೆಗೆದುಕೊಂಡು ಬಂದ ಟ್ರಾಕ್ಟರುಗಳು - ಗದ್ದೆ ಒಳ್ಗೆ ನಿಂತುಬಿಟ್ಟಿರುತ್ತವೆ. ನಾಲ್ಕುವರ್ಷ ಆಗುತ್ತಿದ್ದ ಹಾಗೆ ಅವು ಯಾತಕ್ಕೂ ಬರದ ಹಾಗೆ ಆಗುತ್ತವೆ. ಯೋಚನೆಮಾಡಿ. ಎಷ್ಟೊಂದು ನಷ್ಟ ಆಗುತ್ತಾ ಇದೆ. ಆದ್ದರಿಂದ ಈ ವಿಜ್ಞಾನದಿಂದ ಸಮಸ್ತ ಜನರಿಗೂ ಸಾಕಷ್ಟು ಸಹಾಯವಾಗುತ್ತದೆ. ಬರೀ ವಿದ್ಯಾರ್ಥಿಗಳಿಗೆ ಮಾತ್ರ ಅಲ್ಲ ಇದು. ನಮ್ಮ ದೇಶದಲ್ಲಿ ಮತಮೌಢ್ಯದಿಂದ ರೂಢಿ ಸಂಪ್ರದಾಯಗಳಿಂದ ಅವಿವೇಕದ ಪರಂಪರೆಗಳನ್ನೂ ನಾವು ಏಷ್ಟೋ ನಂಬಿಕೆಯಿಂದ ನಡೆಸಿಕೊಂಡು ಹೋಗುತ್ತಾ ಇದ್ದೇವೆ. ಸಾಮನ್ಯ ಜನರಲ್ಲಂತೂ ಇಷ್ಟೊಂದು ಕಲಹ, ಹೊಡೆದಾಟ ನಮ್ಮ ದೇಶದಲ್ಲಿ ಆಗುತ್ತ ಇರುವುದಕ್ಕೆ ವೈಜ್ಞಾನಿಕ ಮನೋಧರ್ಮ ವೈಜ್ಞಾನಿಕ ಶಿಕ್ಷಣ ಇಲ್ಲದಿರುವುದೇ ಕಾರಣ. ಈ ವೈಜ್ಞಾನಿಕದೃಷ್ಟಿ ಬಂದುಬಿಟ್ಟರೆ ಆ ತೊಂದರೆಗಳೆಲ್ಲಾ ಪರಿಹಾರವಾಗಿಬಿಡುತ್ತವೆ. ವೈಜ್ಞಾನಿಕದೃಷ್ಟಿ ಮತ್ತು ವಿಚಾರಬುದ್ಧಿ ಇವು ವಿಜ್ಞಾನದಿಂದಲೇ ಸಾಧ್ಯ. ಈ ವಿಜ್ಞಾನದ ಮನೋಧರ್ಮ, ವೈಜ್ಞಾನಿಕದೃಷ್ಟಿ, ವಿಚಾರಬುದ್ಧಿಯುಳ್ಳವರು ನಮ್ಮಲ್ಲಿ ಇಲ್ಲ ಎಂದಲ್ಲ; ವೇದಾಂತಗಳಲ್ಲಿ ಪರಮವಿಚಾರ ಬುದ್ಧಿಯನ್ನು ಪಡೆದಂಥವರು ಸಾವಿರಾರು ಜನ ದೊಡ್ಡ ದೊಡ್ಡವರೆಲ್ಲ ಆಗಿಹೋಗಿದ್ದಾರೆ. ಆದರೆ ಆ 'ವಿಚಾರಬುದ್ಧಿ' ಸಾಮಾನ್ಯ ಜನತೆಗೂ ಬರಬೇಕಷ್ಟೆ. ಇದು ಅತ್ಯಂತ ಆವಶ್ಯಕ.

ಇಂಗ್ಲೆಂಡಿನಲ್ಲಿ ಲ್ಯಾಟಿನ್ ಭಾಷೆಯೇ ಪ್ರಧಾನವಾಗಿದ್ದ ಕಾಲದಲ್ಲಿ, ಲ್ಯಾಟಿನ್, ಗ್ರೀಕ್ ತೆಗೆದುಕೊಳ್ಳುವವರೆಲ್ಲ ಮೇಲ್ಮಟ್ಟದ ವಿದ್ಯಾರ್ಥಿಗಳು; ಇಂಗ್ಲಿಷ್ ಅನ್ನು ತೆಗೆದುಕೊಳ್ಳುವವರು ದಡ್ಡರು, ಇವನು ದಡ್ಡ ಎಂದು ಇವನನ್ನು ಇಂಗ್ಲಿಷ್‌ಗೆ ಹಾಕಿದ್ದರಂತೆ! ಬಹಳ ಮೇಲ್ಮಟ್ಟದವರಿಗೆ ಲ್ಯಾಟಿನ್ ಗ್ರೀಕ್ ಕೊಡುತ್ತಾ ಇದ್ದರು ಎಂದು ಚರ್ಚ್‌ಹಿಲ್ ತನ್ನ ಆತ್ಮಕಥೆಯಲ್ಲಿ ಬರೆಯುತ್ತಾನೆ, ಅಂದು ಅಲ್ಲಿ ಇಂಥ ಸ್ಥಿತಿ ಇತ್ತು. ಅವರು ಆಗ ಇದ್ದ ಸ್ಥಿತಿಯಲ್ಲಿ ನಾವು ಈಗ ಇದ್ದೇವೆ. ಬಹುಶಃ ಇನ್ನೂರು ವರ್ಷ ಹಿಂದೆಯೂ ಇದ್ದೇವೆ. ಮುಂದೆ ನಮ್ಮ ದೇಶವೂ ಅಂಥ ಸ್ಥಿತಿಗೆ ಬಂದಾಗ ನಮಗೇ ಆಶ್ಚರ್ಯವಾಗುತ್ತದೆ. ಸ್ವಲ್ಪ ನಗುವೂ ಬರುತ್ತದೆ! ಆದರೆ ಈಗ ಐವತ್ತು ವರ್ಷದಿಂದ ತಕ್ಕಮಟ್ಟಿಗೆ ಕೆಲಸ ನಡೆದುಕೊಂಡು ಹೋಗುತ್ತಾ ಇದೆ. ಸದ್ಯಕ್ಕೆ ಪರವಾ ಇಲ್ಲ. ದೇಶ, ಜನ, ಸರ್ಕಾರ, ವಿಶ್ವವಿದ್ಯಾನಿಲಯಗಳು ಎಲ್ಲರೂ - ಇಷ್ಟವಿರಲಿ ಇಲ್ಲದೆ ಇರಲಿ - ಒಪ್ಪಿಕೊಂಡುಬಿಟ್ಟಿದ್ದಾರೆ. ಈಗ ಯಾರೂ ಅದನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಕೆಲವರಂತೂ ಚಕ್ರವನ್ನ ಮುಂದಕ್ಕೆ ನೂಕುವ ನೆವದಲ್ಲಿ ಅದನ್ನು ಹಿಡಿದುಕೊಂಡು ಜಗ್ಗುತ್ತಾ ಇದ್ದಾರೆ! ಅಂದರೆ, ಸಾಕಷ್ಟು ಪುಸ್ತಕಗಳು ಬರಲಿ,

ಆಮೇಲೆ ಪ್ರಾರಂಭ ಮಾಡೋಣ; ಸಾಕಷ್ಟು ವಿದ್ಯಾರ್ಥಿಗಳು ಬರಲಿ, ಆಮೇಲೆ ಪ್ರಾರಂಭ ಮಾಡೋಣ; ಎಂದೆಲ್ಲಾ ಹೇಳುತ್ತಾ ಬಿರಿಯಿಕ್ಕಲು ಯತ್ನಿಸುತ್ತಾ ಇದ್ದಾರೆ. ಅವರ ಉದ್ದೇಶವೇ ಬೇರೆ. ಆದರೆ ನೀವು ಪುಸ್ತಕ ಬರೆಯಬೇಕು, ಪಾಠ ಹೇಳಬೇಕು, ಪ್ರಚಾರ ಮಾಡಬೇಕು. ಈ ಕಲಸ ಇನ್ನೂ ಒಂದು ನೂರುವರ್ಷದವರೆಗೆ ಒಂದೇ ಸಮನೆ ನಡೆಯಬೇಕು. ನೂರು ವರ್ಷ ಆಗಲಾರದು ಅಂತ ಕಾಣುತ್ತೆ. ನಾಳೆ ನೀವು ಶಾಲೆಯಲ್ಲಿಯೊ ಕಾಲೇಜಿನಲ್ಲಿಯೊ ಕನ್ನಡ ಮಾಧ್ಯಮದ ತರಗತಿಗಳನ್ನು ತೆಗೆಸುವ ಕಲಸ ಮಾಡಬೇಕು. ಅಧ್ಯಾಪಕರ ಉತ್ಸಾಹ, ಶ್ರದ್ಧೆಯಮೇಲೆ ಇವುಗಳ ಯಶಸ್ಸು ನಿಂತಿರುತ್ತದೆ. ಕನ್ನಡ ಮಾಧ್ಯಮದಲ್ಲಿ ಚೆನ್ನಾಗಿ ಪಾಠ ಹೇಳುತ್ತಾರೆ ಅಂದರೆ ಎಲ್ಲ ವಿದ್ಯಾರ್ಥಿಗಳೂ ಅಲ್ಲಿಗೆ ಹೋಗುತ್ತಾರೆ. ಉಪಾಧ್ಯಾಯರಾಗಿರುವವರು ಈ ವಿಚಾರದಲ್ಲಿ ಒಂದೊಂದು ಕಾಲೇಜಿನಲ್ಲೂ ಸಂಘದ ಮುಖಾಂತರವಾಗಿಯೋ, ಬೇರೆ ಯಾವುದಾದರೂ ವ್ಯವಸ್ಥೆಯ ಮೂಲಕವೋ ಎಚ್ಚರದಿಂದಿದ್ದು ಕಾರ್ಯ ನಿರ್ವಹಿಸಬೇಕು ಏಕೆಂದರೆ ಕರಣಿಕರಿಂದಾದಿಯಾಗಿ ಉಪದೇಶ ಹೇಳುತ್ತಾರೆ, ಹೊಸದಾಗಿ ಬರುವ ಹುಡುಗರಿಗೆ: “ಯಾಕೆ ಕನ್ನಡ ತೆಗೆದುಕೊಳ್ಳುತ್ತಿರೊ? ಮುಂದೆ ಇಲ್ಲದ ಕಷ್ಟಕ್ಕೆ ಸಿಕ್ಕುವುದು ಯಾಕೆ? ಅದರ ಬದಲು ಇಂಗ್ಲಿಷ್ ತೆಗೆದುಕೊಳ್ಳಿ?” ಪಾಪ, ಹುಡುಗ ಹೊಸದಾಗಿ ಬಂದಿರುತ್ತಾನೆ. ಕರಣಿಕ ಮಹಾಶಯನ್ನೇ ಮಾರ್ಗದರ್ಶಿ ಎಂದು ಭಾವಿಸಿ ಮೋಸ ಹೋಗುತ್ತಾನೆ.

ಭಾಷೆಗಳನ್ನು ಕಲಿಯುವ ವಿಚಾರವೇ ಬೇರೆ. ನೀವು ಬೇರೆ ಬೇರೆ ಭಾಷೆಗಳನ್ನು ಕಲಿಯಿರಿ, ಯಾರು ಬೇಡ ಅಂತಾರೆ. ಇಂಗ್ಲಿಷ್ ಅನ್ನೂ ಕಲಿಯಿರಿ, ಅದಕ್ಕಾಗಿಯೆ ನಮ್ಮ ವಿಶ್ವ ವಿದ್ಯಾನಿಲಯದಲ್ಲಿ ಈಗ ಸದ್ಯಕ್ಕೆ ಯಾವುದಾದರೂ ಎರಡು ಭಾಷೆಗಳನ್ನು ಆರಿಕೊಳ್ಳಬಹುದು ಎಂದು ಮಾಡಿದ್ದಾರೆ. ಕೇಂದ್ರಸರ್ಕಾರದ್ದು ತ್ರಿಭಾಷಾ ಸೂತ್ರ ತ್ರಿಭಾಷಾ ಸೂತ್ರ ಅಂದರೆ ತ್ರಿಶೂಲ ಇದ್ದಹಾಗೆ ಎಂದು ನಾನು ಭಾವಿಸಿದ್ದೇನೆ. ಇಂಗ್ಲಿಷ್ ಒಂದರಿಂದಲೇ ಕಷ್ಟ ಆಗಿದೆ. ಅಂಥದ್ದರಲ್ಲಿ ಮತ್ತೊಂದನ್ನ ಕಲಿಯಿರಿ ಅಂದರೆ ಹೇಗೆ? ಕಾರಣ, ತ್ರಿಭಾಷಾ ಸೂತ್ರದಲ್ಲಿ ಕಡೆಗೆ ಕಷ್ಟಕ್ಕೆ ಒಳಗಾಗುವುದನ್ನು ನಮ್ಮ ಕನ್ನಡವೇ ಹೊರತು ಇಂಗ್ಲಿಷ್ ಅಲ್ಲ, ಹಿಂದೀನೂ ಅಲ್ಲ. ಇಂಗ್ಲಿಷ್, ಹಿಂದಿ ಕಡ್ಡಾಯಮಾಡಿ ಬಿಡೂತ್ತಾರೆ. ಹುಡುಗರೆಲ್ಲ ಅದನ್ನು ತೆಗೆದುಕೊಳ್ಳುತ್ತಾರೆ. ಕನ್ನಡವನ್ನೆ ಬಿಟ್ಟು ಬೇರೆ ಏನು ಬೇಕಾದರೂ ತೆಗೆದುಕೊಳ್ಳಬಹುದಲ್ಲ, ಕನ್ನಡದ ಆಭಿಮಾನ ಇಲ್ಲದ ಹುಡುಗರು.

ಅದೂ ಅಲ್ಲದೆ ಇಂಗ್ಲಿಷ್ ಅನ್ನು ಎಲ್ಲರೂ ಕಲಿಯಬೇಕು; ಹಿಂದಿಯನ್ನು ಎಲ್ಲರೂ ಕಲಿಯಬೇಕು ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಯಾಕೆ ಹೇಳುವುದಕ್ಕೆ ಬಂದೆ ಅಂದರೆ, ಇಂಗ್ಲಿಷ್ ಅನ್ನು ಶೇಕಡಾ ಒಂದರಷ್ಟು ಕಲಿತಿದ್ದರೋ ಇಲ್ಲವೋ ಅಥವಾ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿತವರ ಸಂಖ್ಯೆ ಶೇಕಡಾ ೦.೦೫ ಇರಬಹುದು. ಅಷ್ಟೆ. ಇಷ್ಟು ಕಡಿಮೆ ಇಂಗ್ಲಿಷ್ ಕಲಿತವರನ್ನು ಇಟ್ಟುಕೊಂಡು ಇನ್ನೂರು ವರ್ಷ ಸಮರ್ಥವಾಗಿ ರಾಜ್ಯಭಾರ ಮಾಡಿದ್ದಾರೆ ಇಂಗ್ಲಿಷ್ ನವರು. ಶೇಕಡಾ ೦.೦೫ರಷ್ಟು ಮಂದಿ ಇತರ ಭಾಷೆಗಳನ್ನು ಕಲಿತರೆ ಸಾಕು. ಹಿಂದಿಯನ್ನಾಗಲಿ, ಇಂಗ್ಲಿಷ್ ನ್ನಾಗಲಿ ಎಲ್ಲರೂ ಕಲಿಯಬೇಕು ಅನ್ನುವಂಥ ಅವಿವೇಕ ಮತ್ತೊಂದಿಲ್ಲ. ಆದ್ದರಿಂದ ಈ ಸ್ವಾತಂತ್ರ್ಯವನ್ನು ಮಕ್ಕಳಿಗೆ ಮತ್ತು ಅವರ ತಂದೆ ತಾಯಿಗಳಿಗೆ ಬಿಟ್ಟುಬಿಡಿ. ಯಾವುದಾದರೂ ಎರಡು ಭಾಷೆ ಆರಿಸಿಕೊಳ್ಳಲಿ. ಮೂರುಭಾಷೆ ಅಂತ ಬಲಾತ್ಕಾರ ಮಾಡಬೇಡಿ, ಅಂದರೆ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎನ್ನುವುದು ನನ್ನ ಸೂತ್ರ. ಆಗ ಒಬ್ಬ ಹುಡುಗ ಕನ್ನಡ ರಷ್ಯನ್ ತೆಗೆದುಕೊಳ್ಳಬಹುದು. ನಾಳೆ ದಿವಸ ಅವನು ರಷ್ಯಕ್ಕೆ ಹೋಗಿ ಏನಾದರೂ ಮಾಡಬೇಕು ಎಂಬ ಮನಸ್ಸು ಇದ್ದರೆ ಕನ್ನಡ, ರಷ್ಯನ್ ಕಲಿಯಲಿ; ಕನ್ನಡ ಜರ್ಮನ್ ಕಲಿಯಲಿ, ಕನ್ನಡ ಜಪಾನೀಸ್ ಕಲಿಯಲಿ. ಹೀಗೆ 'ಬಹುಭಾಷೆಗಳಲ್ಲಿ

ದ್ವಿಭಾಷಾ ಸೂತ್ರ'ಕ್ಕನುಗುಣವಾಗಿ ಬೇಕಾದವರು ಬೇಕಾದ ಎರಡು ಭಾಷೆಗಳನ್ನು ತೆಗೆದುಕೊಳ್ಳಲಿ. ಕನ್ನಡದವರು ಕನ್ನಡವನ್ನೇ ಬಿಟ್ಟು ಬಿಡಬಹುದಲ್ಲ ಅನ್ನಿಸಬಹುದು. ಅಂಥವರು ಕನ್ನಡವನ್ನು ಬಿಡುವುದರಿಂದ ಏನೂ ಅಪಾಯ ಆಗುವುದಿಲ್ಲ. ಕನ್ನಡದವನೇ ಆಗಿ ಕನ್ನಡವನ್ನೇ ಬಿಟ್ಟ ಅಂದುಕೊಳ್ಳಿ, ಹಿಂದೀನೋ ಜರ್ಮನ್ನೋ ತೆಗೆದುಕೊಂದ ಅಂತ ಇಟ್ಟುಕೊಳ್ಳಿ, ಕನ್ನಡ ಅಧಿಕೃತ ಭಾಷೆಯಾಗಿ ಘೋಷಿತವಾದಾಗ, ಇಲ್ಲಿ ವ್ಯವಹಾರವೆಲ್ಲ ಕನ್ನಡದ ಮೂಲಕ ನಡೆಯುವಂತಾದಾಗ, ಕನ್ನಡವನ್ನು ಬಿಡುವವನು ತಾನು ಈ ದೇಶದವನಲ್ಲ, ಬೇರೆ ಕಡೆಗೆ ಹೋಗುತ್ತೇನೆ ಎಂತಲೇ ಕನ್ನಡವನ್ನು ಬಿಡುತ್ತಾನೆ. ಆದ್ದರಿಂದ ಅವನ ವಿಚಾರದಲ್ಲಿ ನಿಮಗೆ ಯಾವ ಭಯವೂ ಬೇಡ. 'ಬಹು ಭಾಷೆಗಳಲ್ಲಿ ದ್ವಿಭಾಷೆ' ಅನ್ನುವ ಸೂತ್ರವನ್ನು ಬಲವಾಗಿ ಹಿಡಿಯಬೇಕು.

ಈ ಸೂತ್ರ ರಾಜಕೀಯವಾಗಿಯೂ ಪರಿಹಾರ ಒದಗಿಸುತ್ತದೆ. ಉದಾಹರಣೆಗೆ ತಮಿಳುನಾಡಿನ ಉದಾಹರಣೆಯನ್ನು ತೆಗೆದುಕೊಳ್ಳಿ. ಅವರು ಹಿಂದಿ ಬೇಡವೇಬೇಡ ಅನ್ನುತ್ತಾರೆ. ಅವರಲ್ಲಿ ತ್ರಿಭಾಷೆಗೆ ಹೇಗೆ ಮಾಡುತ್ತೀರಿ? 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎಂದಾಗ ಅವರು ಮಾತನಾಡುವ ಹಾಗೆ ಇಲ್ಲ. ನಾವು ಇಂಗ್ಲಿಷ್ ನ್ನೂ ಹೇರುತ್ತಾ ಇಲ್ಲ; ಹಿಂದಿಯನ್ನು ಹೇರುತ್ತಾ ಇಲ್ಲ; ಯಾವುದೇ ಭಾಷೆಯನ್ನೂ ಹೇರುತ್ತಾ ಇಲ್ಲ ಎಂದಾಗುತ್ತದೆ. ತಮಿಳುನಾಡಿನವನು ಹಿಂದಿ ಬೇಡ ಅಂದರೆ ಆಗ ಸಮಸ್ಯೆ ಆಗುವುದಿಲ್ಲ. ಅದರೆ ಮದರಾಸಿನಲ್ಲಿ 'ಬಹುಭಾಷೆಗಳಲ್ಲಿ ದ್ವಿಭಾಷೆ' ಅಂದಾಗ ನಾಲ್ಕು ಜನ ಹಿಂದಿಯನ್ನು ಕಲಿಯುತ್ತೇವೆ ಎಂದರೆ ಬೇಡ ಅನ್ನುವ ಹಾಗಿರುವುದಿಲ್ಲ. ಆದ್ದರಿಂದ ರಾಜಕೀಯವಾಗಿಯೂ ಇದೊಂದು ಸಮಸ್ಯೆಯನ್ನು ಬಗೆಹರಿಸುತ್ತದೆ. ಈ ವಿಷಯಕ್ಕೆ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎನ್ನುವ ಸೂತ್ರಕ್ಕೆ ನಮ್ಮ ಪತ್ರಿಕೆಯವರು ದಪ್ಪ ದಪ್ಪ ಅಕ್ಷರಗಳಲ್ಲಿ ಎಷ್ಟು ಪ್ರಕಾರ ಕೊಡುತ್ತಾರೋ ಅಷ್ಟೂ ಒಳ್ಳೆಯದು. ತ್ರಿಭಾಷಾ ಸೂತ್ರ ಬಹು ಭಯಂಕರವಾಗುತ್ತೆ. ನಾನು 'ಸಾಕು ಈ ಬಲತ್ಕಾರ' ಎನ್ನುವ ಕವನದಲ್ಲಿ ಈ ಬಲಾತ್ಕಾರ ಬೇಡ ಎನ್ನುವ ಅಂಶವನ್ನೆ ಒತ್ತಿ ಹೇಳಿದ್ದೇನೆ. ನಾವು ಇಂಗ್ಲಿಷ್ ದ್ವೇಷಿಗಳೂ ಅಲ್ಲ, ಹಿಂದಿ ದ್ವೇಷಿಗಳೂ ಅಲ್ಲ. ಎಲ್ಲರೂ ಎಲ್ಲವನ್ನೂ ಕಲಿಯಬೇಕು ಅನ್ನುವ ಬಲವಂತ ಬೇಡ. - ಆದ್ದರಿಂದ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಅನ್ನುವ ಸೂತ್ರವನ್ನು ಇಟ್ಟುಕೊಳ್ಳಿ ಅಂತ ಹೇಳಿದರೆ ಅದು ಎಲ್ಲ ರೀತಿಯ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತದೆ. ಯಾರ ಆಭಿಮಾನವನ್ನೂ ಕೆರಳಿಸುವುದಿಲ್ಲ. ಯಾರ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳವುದಿಲ್ಲ.

ಇನ್ನೂ ಒಂದು ಕೆಲಸ ನಡೆಯುತ್ತಾ ಇದೆ. ಅದನ್ನೂ ಹೇಳಿ ಬಿಡುತ್ತೇನೆ. ಏಕೆಂದರೆ ನೀವು ಉಪಾಧ್ಯಾಯ ವರ್ಗದವರಾಗಿರುವುದರಿಂದ ಏನೇನು ನಡೆಯುತ್ತಾ ಇದೆ ಅನ್ನುವುದನ್ನು ತಿಳಿದುಕೊಂಡಿರಬೇಕು. ಒಂದು ಹೈಸ್ಕೂಲಿನಲ್ಲಿ ಮೊದಲು ಕನ್ನಡದ ಮಾಧ್ಯಮ ಮಾತ್ರವೇ ಇತ್ತು. ಆಮೇಲೆ ಇದ್ದಕ್ಕಿದ್ದ ಹಾಗೆ ಕೆಲವರಿಗೋಸ್ಕರವಾದರೂ ಇಂಗ್ಲಿಷ್ ಮಾಧ್ಯಮ ಇರಲಿ ಎಂದು ಒಂದು ವಿಭಾಗ ತೆರೆದರು. ಇಂಗ್ಲಿಷ್ ಮಾಧ್ಯಮ ತೆರೆಯುತ್ತಾರೆ ಎಂದು ಕೇಳಿದ ತಕ್ಷಣ ಕೆಲವರೆಲ್ಲ ಹಳ್ಳಿಯವರೂ ಸೇರಿದಂತೆ ಬಂದುಬಿಟ್ಟರು - ನಮ್ಮ ಹುಡುಗನಿಗೆ ಇಂಗ್ಲಿಷ್ ಮಾಧ್ಯಮ ಕೊಡಿ ಎಂದು! ಆಗ ಏನಾಯ್ತು ಅಂದರೆ, ಒಂದು ಇಂಗ್ಲಿಷ್ ಟೆಸ್ಟ್ ಮಾಡುತ್ತೇವೆ ಎಂದರು. ಇಂಗ್ಲಿಷ್ ನಲ್ಲಿ ಯಾರ್ಯರು ಪಾಸಾಗ್ತಾರೋ ಅವರಿಗೆಲ್ಲ ಇಂಗ್ಲಿಷ್ ಮಾಧ್ಯಮ ಎಂದೂ ಉಳಿದವರಿಗೆಲ್ಲ ಕನ್ನಡ ಮಾಧ್ಯಮ ಎಂದೂ ಗೊತ್ತು ಮಾಡಿದರು. ಅಂದರೆ ಇದ್ದವರಲ್ಲಿ ಸ್ವಲ್ಪ ಉತ್ತಮ ಬುದ್ಧಿಶಕ್ತಿ ಇರುವ ವಿದ್ಯಾರ್ಥಿಗಳನ್ನೆಲ್ಲ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿಬಿಟ್ಟರು. ಇನ್ನು ಉಳಿದವರು ಹಿಂದುಳಿದ ಪಂಗಡದವರು, ಅಂದರೆ ಜಾತಿಯ ದೃಷ್ಟಿಯಿಂದಲ್ಲ, ಯಾವುದೋ ಒಂದು ಸೆಕ್ಷನ್ 'ಸಿ'ನೋ

‘ಡಿ’ನೋ ಆದರು. ಪರೀಕ್ಷೆಯಲ್ಲಿ ಏನು? ‘ಡಿ’ ಸೆಕ್ಷನ್ ನಲ್ಲಿ ಎಲ್ಲರೂ ಫೇಲು? ಏಕೆ? ಕನ್ನಡ ಮಾಧ್ಯಮ ತೆಗೆದುಕೊಂಡಿದ್ದಕ್ಕೆ! ನೋಡಿ ಅಪಖ್ಯಾತಿ! ಡಿ ಸೆಕ್ಷನ್ನಿನಲ್ಲಿದ್ದವರೆಲ್ಲರೂ ಕನ್ನಡ ಮಾಧ್ಯಮ ತೆಗೆದುಕೊಂಡಿದ್ದರು. ವಾಸ್ತವವಾಗಿ ಆಗಿದ್ದೇನು ಅಂದರೆ ಉತ್ತಮರನ್ನೆಲ್ಲ ಆರಸಿ, ಆರಸಿ, ಬೇರೆ ಸೆಕ್ಷನ್ನಿನಲ್ಲಿ ಇಂಗ್ಲಿಷ್ ಕೊಟ್ಟರು. ಅಷ್ಟು ಮಾತ್ರ ಅಲ್ಲ, ಹಳೆ ಮೇಷ್ಟ್ರುಗಳನ್ನೆಲ್ಲಾ, ಚೆನ್ನಾಗಿ ಪಾಠ ಹೇಳುವವರನ್ನೆಲ್ಲಾ ಇಂಗ್ಲಿಷ್ ಪಾಠ ಹೇಳುವುದಕ್ಕೆ ಸಮರ್ಥರೇ ಬೇಕು ಎಂದುಕೊಂಡು ಇಂಗ್ಲಿಷ್ ಮಾಧ್ಯಮದ ತರಗತಿಗೇ ಹಾಕಿದರು. ಹೊಸದಾಗಿ ಸೇರಿದವರು ಮತ್ತು ಮೇಷ್ಟುಗಳಲ್ಲಿಯೂ ‘ಹಿಂದುಳಿದ ಪಂಗಡದವರು’ ಇರುತ್ತಾರಲ್ಲಾ ಅವರನ್ನು ಈ ‘ಡಿ’ ಸೆಕ್ಷನ್ನಿಗೆ ಕಳುಹಿಸಿದರು! ಹೀಗೆ ಕನ್ನಡಕ್ಕೆ ಕೆಟ್ಟ ಹೆಸರು ತರುವುದಕ್ಕೆ ಏನೇನು ಮಾಡಬೇಕೋ ಅದನ್ನೇಲ್ಲ ಮಾಡುತ್ತಾ ಇದ್ದಾರೆ. ಆದ್ದರಿಂದ ‘ಕುಕಾರ್ಯ ಮಾಡಬೇಡಿ; ಕನ್ನಡಕ್ಕೆ ಸರಿಯಾಗಿ ಕೆಲಸಮಾಡಿ’ ಎಂದು ಮತ್ತೆ ಮತ್ತೆ ಹೇಳಬೇಕಾಗುತ್ತದೆ.

ನನಗೆ ಈ ‘ಬಹುಭಾಷೆಗಳಲ್ಲಿ ದ್ವಿಭಾಷೆ’ ಸೂತ್ರದ ಪ್ರತಿಪಾದನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳು . ನಿಮಗೆ ಯುದ್ಧದಲ್ಲಿ ಖಂಡಿತ ಜಯ ಲಭಿಸಿಯೇ ಲಭಿಸುತ್ತದೆ. ಪ್ರತಿಯೊಬ್ಬರೂ ಅದಕ್ಕಾಗಿ ಮುಂದೆ ನುಗ್ಗುವ ಯೋಧರಾಗಿ . ಜಯಲಕ್ಷ್ಮಿ ತನ್ನ ಸಾವಿರಾರು ಕರಗಳಿಂದ ನಿಮಗೆ ಜಯಮಾಲೆ ಹಾಕಲಿ ಎಂದು ಹಾರೈಸುತ್ತೇನೆ!

---

* ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ವ್ಯವಸ್ಥೆಗೊಳಿಸಿದ್ದ ವಿಜ್ಞಾನಲೇಖಕರ ಮೊದಲ ಕಾರ್ಯಶಿಬಿರವನ್ನು ಉದ್ಘಾಟಿಸಿ ಮಾಡಿದ ಭಾಷಣ, ಮೈಸೂರು: ಜೂನ್ ೧, ೧೯೭೦.

## ಆ ಅಮೃತ ಕ್ಷಣ*

ಬೇಸಿಗೆಯ ರಜವನ್ನು ಸಹ್ಯಾದ್ರಿಯ ಗುಡ್ಡಬೆಟ್ಟಕಾಡುಗಳಲ್ಲಿ - ಹತ್ತಿ ಇಳಿದು ಅಲೆದು ಬೇಟೆಯಾಡಿ ತಿರುಗಾಡಿ ಕಾಯಿಲೆ ಬಿದ್ದು ಮತ್ತೆ ಹುಷಾರಾಗಿ - ಕಳೆದು, ಆಗತಾನೆ ಮೈಸೂರಿಗೆ ಬಂದಿದ್ದೆ. ಸ್ವಾಮಿ ಸಿದ್ಧೇಶ್ವರಾನಂದರ ಪವಿತ್ರ ಸ್ನೇಹಮಯ ಸಾನ್ನಿಧ್ಯದ ಶ್ರಿ ರಾಮಕೃಷ್ಣಾಶ್ರಮದಲ್ಲಿ - ಆಗ ಅದು ಮರಿಮಲ್ಲಪ್ಪ ಹೈಸ್ಕೂಲಿನ ಎಡಪಕ್ಕದ ಬೀದಿಯಲ್ಲಿತ್ತು, ಕಾಲೇಜಿಗೆ ತುಂಬ ಹತ್ತಿರವಾಗಿ - ನನ್ನ ವಾಸ. ನಾನು ಬಿ.ಎ. ತರಗತಿಯಲ್ಲಿ ಉತ್ತಮವಾಗಿಯೆ (ಅಂದರೆ ಎರಡು ಭಾಗಗಳಲ್ಲಿಯೂ ದ್ವಿತೀಯ ಶ್ರೇಣಿಯಲ್ಲಿ!) ತೇರ್ಗಡೆಯಾಗಿದ್ದೆ. (ದ್ವಿತೀಯಶ್ರೇಣಿಯಲ್ಲಿ ತೇರ್ಗಡೆಯಾಗುವುದನ್ನು ‘ಉತ್ತಮ’ ಎಂದು ವರ್ಣಿಸಿದುದಕ್ಕೆ ಈಗ ಯಾರಾದರೂ ನಗಬಹುದು. ಆದರೆ ನನ್ನ ಅಧ್ಯಯನದ ರೀತಿಯಲ್ಲಿ, ವಸ್ತುವಿನಲ್ಲಿ ಮತ್ತು ಉದ್ದೇಶದಲ್ಲಿ ಪರೀಕ್ಷೆಯ ಫಲಿತಾಂಶ ಎಂದೂ ‘ಗಮ್ಯ’ ವಾಗಿರಲಿಲ್ಲ ಎಂಬುದನ್ನು ಭಾವಿಸಿದರೆ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಿದ್ದುದನ್ನು ಉತ್ತಮ ಎಂದೇ ಭಾವಿಸಬೇಕು.) ‘ಉತ್ತಮ’ವಾಗಿಯೆ ತೇರ್ಗಡೆಯಾದುದರಿಂದ ಎಂ.ಎ.ಗೆ ಸೀಟು ಸಿಗುವುದರಲ್ಲಿ ಅಷ್ಟೇನೂ ಕಷ್ಟವಾಗುವುದಿಲ್ಲ ಎಂಬ ಧೈರ್ಯವಿತ್ತು. ಯಾವ ಎಂ.ಎ.ಗೆ ಸೇರಿಕೊಳ್ಳುವುದು ಎಂಬ

ವಿಚಾರದಲ್ಲಿಯೂ ನನ್ನಲ್ಲಿ ಹೆಚ್ಚು ಜಿಜ್ಞಾಸೆಗೆ ಅವಕಾಶವಿರಲಿಲ್ಲ. ನನ್ನ ಆಸಕ್ತಿಯೆಲ್ಲ ತತ್ತ್ವ, ಆಧ್ಯಾತ್ಮ, ಆಶ್ರಮ, ಶ್ರೀರಾಮಕೃಷ್ಣ - ವಿವೇಕಾನಂದ ಇತ್ಯಾದಿ 'ಅಲೋಕ' ವಿಷಯವಲಯಗಳಲ್ಲಿ ಕೇಂದ್ರೀಕೃತ ವಾಗಿತ್ತಾದ್ದರಿಂದಲೂ, ನನ್ನ ಚೇತನದ ಅಭೀಪ್ಸೆ ಯೋಗಾಭಿಮುಖವಾಗಿದ್ದುದರಿಂದಲೂ, ನಾನು ಮೂರನೆಯ ವರ್ಷದ ಬಿ.ಎ. ಗೆ ತೆಗೆದುಕೊಂಡಿದ್ದು ಐಚ್ಛಿಕ ವಿಷಯಗಳಲ್ಲಿ - ಫಿಲಸಫಿ, ಪೊಲಿಟಿಕ್ಸ್, ಸಾಮಾನ್ಯ ಸೈಕಾಲಜಿ - ತತ್ವಶಾಸ್ತ್ರವೆ (ಆಗ ಮನಶ್ಶಾಸ್ತ್ರ ಪ್ರತ್ಯೇಕವಾಗಿರದೆ ತತ್ತ್ವಶಾಸ್ತ್ರದ ಒಂದು ಉಪಾಂಗವಾಗಿತ್ತು! ಸಮಾಜಶಾಸ್ತ್ರವಂತೂ ಭ್ರೂಣಾವಸ್ಥೆಗೂ ಅತೀತವಾಗಿ ಅಂತರ್ಗತವಾಗಿತ್ತು!) ನನ್ನ ಅಭಿರುಚಿಯ ಮುಖ್ಯವಸ್ತು ವಾಗಿತ್ತು. ಸ್ವಾಮಿಜಿಯ ಅನುಮೋದನೆಯೂ ಪ್ರೋತ್ಸಾಹವಿತ್ತಿತ್ತು.

ಜೊತೆಗೆ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಪ್ರೋಫೆಸರ್ ಎ.ಆರ್. ವಾಡಿಯಾ ಅವರು ಆಶ್ರಮಕ್ಕೆ ಬಂದು ಹೋಗಿ ಮಾಡುತ್ತಿದ್ದು, ಶ್ರೀರಾಮಕೃಷ್ಣ ಮಿಶನ್ನಿನ ಸ್ವಾಮಿಗಳೊಡನೆ ಸಸ್ನೇಹ ಸಂಪರ್ಕ ಹೊಂದಿದ್ದು, ನನ್ನನ್ನು ಆಶ್ರಮದ ವಿದ್ಯಾರ್ಥಿ ಎಂದು ಸುವಿಶೇಷ ವಿಶ್ವಾಸದಿಂದ ಕಾಣುತ್ತಿದ್ದುದೂ ಒಂದು ಸುಸೂಕ್ಷ್ಮ ಲೌಕಿಕ ಪ್ರಯೋಜನದ ಕಾರಣವಾಗಿತ್ತು ಎನ್ನಬಹುದು. ಪ್ರೊ. ವಾಡಿಯಾರವರ ವಿದ್ಯಾರ್ಥಿಗಳಾಗಿದ್ದ ನಮಗೆ ಅವರಲ್ಲಿ ವಿಶೇಷ ಗೌರವವಿತ್ತು. ಅವರ ವರ್ಣ, ಆಕಾರ, ವೇಷ ಭೂಷಣ, ನಡೆ ನುಡಿ, ಭಾಷಣದ ವೈಖರಿ, ಮೀಸೆ, ಕ್ರಾಪು, ಅವರದೇ ಆಗಿರುತ್ತಿದ್ದ ಒಂದು ಆತ್ಮವಿಶ್ವಾಸದ ಭಂಗಿ, ಮತ್ತು ವಿಶ್ವವಿದ್ಯಾನಿಲಯದ ಮಹೋನ್ನತ ಪ್ರಾಧ್ಯಾಪಕರಾಗಿ, ಪಾರ್ಸಿಗಳಾಗಿ ಅಹಿಂದುಗಳಾಗಿದ್ದರೂ ಆಗ ನಡೆಯುತ್ತಿದ್ದ ಬ್ರಾಹ್ಮಣ ಬ್ರಾಹ್ಮಣೇತರ ಚಳವಳಿಯಲ್ಲಿ ಹಿಂದುಳಿದ ಪಂಗಡಗಳ ಪರವಾಗಿ ಅವರು ತೋರುತ್ತಿದ್ದ ವೀರಾಭಿಮಾನ ಇವುಗಳಿಗೆ ಮಾತ್ರವಾಗಿ ಅಲ್ಲದೆ ಅವರ ವೈಯಕ್ತಿಕ ಜೀವನದ 'ಶುಭ್ರತೆ, ಸ್ವಚ್ಛತೆ, ನೀತಿ ನಿಷ್ಠೆ'ಗಳಾಗಿಯೂ ಅವರಲ್ಲಿ ನಮಗೆ ವಿಶೇಷವಾದ ಆಕರ್ಷಣೆ ಇತ್ತು. ಸರಿ; ಫಿಲಾಸಫಿಯನ್ನೆ ಎಂ.ಎ.ಗೆ ಆರಿಸುವುದೆಂದು ನಿರ್ಧರಿಸಿ ದಾರಿಯಲ್ಲಿ ಕೂಡಿಕೊಂಡ ಅನೇಕ ಮಿತ್ರಸಂಗಿಗಳೊಡನೆ ವಾದಿಸುತ್ತಾ ಹರಟುತ್ತಾ ಉಲ್ಲಾಸ ಉತ್ಸಾಹ ತಾರುಣ್ಯಗಳ ತ್ರಿವೇಣೀ ಸ್ರೋತದಲ್ಲಿ ತೇಲಿ ಕಾಲೇಜಿಗೆ ಹೋದೆ.

ಕನ್ನಡಮ್ಮ ಅಗೋಚರೆಯಾಗಿ ಮಂದಸ್ಮಿತೆಯಾಗಿ ತನ್ನ ಕಂದನ ಮಸ್ತಕದ ಮೇಲೆ ಆಶೀರ್ವಾದದ ಮುದ್ರೆಯ ತನ್ನ ಕಾವ್ಯಕೋಮಲ ಮಾತೃಹಸ್ತವನ್ನಿಟ್ಟು ಹಿಂಬಾಲಿಸಿ ಬಂದಳೆಂದು ತೋರುತ್ತದೆ ಮಹಾರಾಜಾ ಕಾಲೇಜಿಗೆ!

ಕಾಲೇಜು ತುಮುಲ ಶಬ್ದಮಯವಾಗಿತ್ತು; ಎಂಟ್ರೆನ್ಸ ಪಾಸು ಮಾಡಿ ಹೊಸದಾಗಿ ಕಾಲೇಜು ಮೆಟ್ಟಲು ಹತ್ತುತಿದ್ದ ಕೊಲಿಜಿಯೇಟ್ ಹೈಸ್ಕೂಲುಗಳ ಹುಡುಗರು, ಎರಡನೆಯ ವರ್ಷಕ್ಕೆ ಮತ್ತು ಮೂರನೆಯ ವರ್ಷಕ್ಕೆ ಸೇರಲು ಬಂದಿದ್ದ 'ಹಳೆಯರು'. ಮತ್ತು ಎಂ.ಎ. ತರಗತಿಗಳಿಗೆ ಅರ್ಜಿಹಾಕಲು ನೆರೆದಿದ್ದ ಸ್ನಾತಕೋತ್ತರ ವಿದ್ಯಾರ್ಥಿಗಳು ..... ವರಾಂಡಗಳಲ್ಲಿ ಕಾರಿಡಾರುಗಳಲ್ಲಿ ಉಪ್ಪರಿಗೆಯಲ್ಲಿ, ಕೆಳಗೆ ಮೇಲೆ ಅಲ್ಲಿ ಇಲ್ಲಿ ನೆರಿದಿದ್ದರು. ಇಬ್ಬಿಬ್ಬರು, ಮೂವರು ನಾಲ್ವರು, ಸಣ್ಣ ಸಣ್ಣ ಗುಂಪುಗಳು ನಾನಾರೀತಿಯ ಸಂಭಾಷಣೆಗಳಲ್ಲಿ ತೊಡಗಿದ್ದರೂ ಹೊಸ ಮುಖಗಳನ್ನು ಕುತೂಹಲದಿಂದ ನೋಡುವುದನ್ನಾಗಲಿ, ಹಳೆಯುವುಗಳನ್ನು ಗುರುತಿಸಿ ನಗೆಮೊಗರಾಗಿ ಸ್ವಾಗತಿಸುವುದ್ದನ್ನಾಗಲಿ ಮರೆಯುತ್ತಿರಲಿಲ್ಲ. "ನಿನಗೆ ಕಾಯಿಲೆಯಾಗಿತ್ತಂತೆ? ಈಗ ಹೇಗಿದ್ದೀಯಾ?" "ನೀನು ಯಾವ ಸಬ್ಜೆಕ್ಟ್ ಆರಿಸಿಕೊಳ್ತೀಯಪ್ಪಾ?" "ಥ್ಚು! ಅದು ಬೇಡಪ್ಪಾ. ಆ ಪ್ರೊಫೆಸರ .... " "ಅವರು ತುಂಬಾ ಚೆನ್ನಾಗಿ ಲೆಕ್ಚರ್ ಕೊಡ್ತಾರೆ..."

“ನೋಡಲ್ಲಿ ಹೋಗ್ತಿದಾನೆ ಫಸ್ಟ್‌ಕ್ಲಾಸ್ ಬಂದುಬಿಟ್ಟಿದೆ ಅಂತ ಏನು ಜಂಭ ಅಂತೀಯಾ?” ಇಂತಹ ಸಂಭಾಷಣೆಯ ತುಣುಕುಗಳು ಗದ್ದಲದ ಹೊಳೆಯಿಂದೇಳುವ ಬುದ್ಬುದಗಳಂತೆ ಕೇಳಿಬರುತ್ತಿದ್ದವು.

ನಡುನಡುವೆ, ಈ ಹುಡುಗ ಹಿಂಡಿನ ಮಧ್ಯೆ, ಆಗಾಗ ಅಧ್ಯಾಪಕರು ಕಾಣಿಸಿಕೊಂಡಾಗ ನಮಸ್ಕಾರಾದಿಗಳು ಸಾಗುತ್ತಿದ್ದುವು. ಪ್ರಾಧ್ಯಾಪಕರು ತಮ್ಮ ತಮ್ಮ ಮೀಸಲು ಕೊಠಡಿಗಳಿಗೆ ಠೀವಿಯಿಂದ ಹೋಗುತ್ತಿದ್ದರೆ, ಉಪಪ್ರಾಧ್ಯಾಪಕರು ಮತ್ತು ಲೆಕ್ಚರರು ತಮ್ಮೆಲ್ಲರಿಗಾಗಿ ಒಟ್ಟಿಗೆ ಮೀಸಲಾಗಿದ್ದ ದೊಡ್ಡ ದೊಡ್ಡಿ ಕೊಠಡಿಯೊಂದಕ್ಕೆ ಹೋಗುತ್ತಿದ್ದರು. ಅಧ್ಯಾಪಕ ಮಾತ್ರರಾಗಿದ್ದ ಶ್ರೀಯುತ ಎ.ರ್.ಕೃಷ್ಣಶಾಸ್ತ್ರಿಗಳು ಹೋಗುತ್ತಿದ್ದುದನ್ನು ಕಂಡು ನಾನಿದ್ದ ನಮ್ಮ ಗುಂಪು ಒಟ್ಟಿಗೆ ಸಶಬ್ದವಾಗಿ ನಮಸ್ಕಾರ ಮಾಡಿತು. ಅವರ ಬೆಳ್ಳನೆಯ ಕಚ್ಚೆಪಂಚೆ, ಉತ್ತರೀಯ ಕರಿಯ ಕ್ಲೋಸ್‌ಕಾಲರ್ ಕೋಟು, ನೀಟಾಗಿ ಕಟ್ಟಿದ ಜರಿಯ ಪೇಟ - ಅವರನ್ನು ಯಾವ ಗುಂಪಿನಲ್ಲಿಯೂ ಎದ್ದು ಕಾಣುವಂತೆ ಮಾಡುತ್ತಿದ್ದುವು.

ತುಸು ಹೊತ್ತಾಗುವುದರೊಳಗೆ ಮಿತ್ರರೊಬ್ಬರು ಬಂದು “ಕೃಷ್ಣ ಶಾಸ್ತ್ರಿಗಳು ನಿಮ್ಮನ್ನು ಕರೆಯುತ್ತಿದ್ದಾರೆ” ಎಂದರು.

“ಯಾಕೆ?”

“ಯಾಕೊ ಗೊತ್ತಿಲ್ಲ. ಲೇಖನಗೀಕನ ಪದ್ಯಗಿದ್ಯದ ಮಿಚಾರಕ್ಕಾಗಿರಬಹುದು.”

ಟೀಚರ್ಸ ರೂಮಿಗೆ ಹೋದೆ, ಸಕಾತರ ಕುತೂಹಲದಿಂದಲೆ.

ತಮ್ಮ ಮೇಜಿನ ಹಿಂದೆ ಕುರ್ಚಿಯ ಮೇಲೆ ಕುಳಿತಿದ್ದವರು ನಗುಮೊಗರಾಗಿ ವಿಶ್ವಾಸದಿಂದ ಸ್ವಾಗತಿಸಿದರು. “ಈಗ ಹೇಗಿದ್ದೀರಿ, ಪುಟ್ಟಪ್ಪಾ? ಮೈ ಸರಿಯಾಗಿರಲಿಲ್ಲವೆಂದು ಕೇಳಿದೆ.”

“ಹೌದು, ಸಾರ್. ಊರಿಗೆ ಹೋದಾಗ ಡಬ್ಬಲ್ ನ್ಯೂಮೋನಿಯಾ ಆಗಿ ಸ್ವಲ್ಪ ಕಷ್ಟವಾಗಿತ್ತು.”

“ಎಂ.ಎ.ಗೆ ಅಪ್ಲಿಕೇಷನ್ ಹಾಕಿದಿರಾ?”

“ಹೌದು ಹಾಕಿದ್ದೇನೆ”

“ಯಾವುದಕ್ಕೆ?”

“ಫಿಲಾಸಫಿಗೆ”

“ಈ ವರ್ಷದಿಂದ ಕನ್ನಡ ಎಂ.ಎ. ತೆರೆಯುತ್ತಿದೆ ಯೂನಿವರ್ಸಿಟಿ. ಸಾಕಷ್ಟು ವಿದ್ಯಾರ್ಥಿಗಳು ಬೇಕು ಅದಕ್ಕೆ. ನೀವು ಯಾಕೆ ಕನ್ನಡ ಎಂ.ಎ.ಗೆ ಬರಬಾರದು?”

“ಫಿಲಾಸಫಿಗೆ ಹಾಕಿದ್ದೇನೆ. ನಮ್ಮ ಪ್ರೊಫೆಸರ್ ಸೀಟು ಕೊಟ್ಟೂ ಆಗಿದೆಯಂತೆ. . . .”

“ಫಿಲಾಸಫಿ ಏನಪ್ಪ? ನೀವೇ ಓದಿಕೊಳ್ಳುವ ಸಾಮರ್ಥ್ಯ ಪಡೆದಿದ್ದೀರಿ. ಹೇಗಿದ್ದರೂ ಆಶ್ರಮದಲ್ಲಿದ್ದೀರಿ. ಅಲ್ಲೇನು ಮೂರು ಹೊತ್ತೂ ಅದರ ಅಧ್ಯಯನ ತಾನೆ? ನೀವು ಎಂತಿದ್ದರೂ ಕವಿಗಳು. ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಸೇವೆ ಸಲ್ಲಿಸಬಹುದು, ಫಿಲಾಸಫಿಗಿಂತಲೂ ಕನ್ನಡಕ್ಕೆ ನಿಮ್ಮ ಅವಶ್ಯಕತೆ ಹೆಚ್ಚು.”

ಸ್ವಲ್ಪ ಹಿಂದು ಮುಂದು ನೋಡಿ ಹೇಳಿದೆ “ಆಲೋಚಿಸಿ ಆಮೇಲೆ ಹೇಳ್ತೀನಿ, ಸಾರ್.”

“ನೋಡಿಯಪ್ಪಾ, ತುಂಬ ಪ್ರಯತ್ನದ ಪರಿಣಾಮವಾಗಿ ಕನ್ನಡ ಎಂ.ಎ. ಪ್ರಾರಂಭಿಸುತ್ತಿದ್ದೇವೆ. ನಮಗೀಗ ನಿಮ್ಮಂಥ ವಿದ್ಯಾರ್ಥಿಗಳೇ ಬೇಕಾಗಿದ್ದಾರೆ.”

ಆಕರ್ಷಣೀಯ ಆಹ್ವಾನದಂತಿದ್ದ ಅವರ ಮುಗುಳುನಗೆಯ ದಾಕ್ಷಿಣ್ಯಕ್ಕೆ ವಶವಾಗುತ್ತಿದ್ದ ನಾನು ನಮಸ್ಕಾರ ಹೇಳಿ ಹೊರಗೆ ಬಂದೆ.

ವಿಷಯ ಏನು ಎಂಬುದನ್ನು ಕೇಳಿ ತಿಳಿದ ಮಿತ್ರರು ನಕ್ಕುಬಿಟ್ಟರು: ಫಿಲಾಸಫಿಯಂತಹ ಅಖಿಲಭಾರತೀಯವೂ ಅಂತರರಾಷ್ಟ್ರೀಯವೂ ಆಗಿರುವ ಸಬ್ಜೆಕ್ಟನ್ನು ಬಿಟ್ಟು, ಪ್ರೊ. ವಾಡಿಯಾ ಅವರಂತಹ ಸುಪ್ರಸಿದ್ಧ ಪ್ರಾಧ್ಯಾಪಕರ ಕೈಕೆಳಗೆ ಅಧ್ಯಯನ ಮಾಡುವ ಗೌರವಕರವಾದ ಸುಯೋಗವನ್ನು ತ್ಯಜಿಸಿ, ಆಪ್ಷನಲ್ ಸಬ್ಜಕ್ಟಿನ ಮಟ್ಟಕ್ಕೂ ಏರದೆ ಬರಿಯ ಸೆಕೆಂಡ್ ಲ್ಯಾಂಗ್ವೇಜ್ ಆಗಿರುವ ಕನ್ನಡದ - ಅದರಲ್ಲಿಯೂ ಹೊಸದಾಗಿ ಪ್ರಾರಂಭಿಸಲಿರುವ - ಎಂ.ಎ.ಗೆ ಸೇರುವುದೆ? ನಿನ್ನಂಥ ಪ್ರತಿಭಾಶಾಲಿ? ಇಂಗ್ಲೀಷಿನಲ್ಲಿ ಆಗಲೆ ಕವನಗಳನ್ನು ಅಚ್ಚು ಹಾಕಿಸಿರುವ, ಮುಂದೆ ಜಗತ್‌ಪ್ರಸಿದ್ಧನಾಗಲಿರುವ ಕವಿ?

[ಆಗಿನ್ನೂ ವಿದ್ಯಾರ್ಥಿಗಳಿಗೆ ಸೈನ್ಸ್, ಮೆಡಿಸನ್, ಎಂಜಿನೀರಿಂಗ್ ವಿಷಯಗಳು ಅಷ್ಟು ಗೌರವ ಭಾಜನವಾಗಿರಲಿಲ್ಲ!] ಮಿತ್ರರ ಮೂದಲಿಕೆ ನನ್ನ ಹೃದಯಕ್ಕೂ ಚುಚ್ಚಿತು. ಆದರೆ ಶ್ರೀ ಕೃಷ್ಣಶಾಸ್ತ್ರಿಗಳು ಅದಾವ ಅಮೃತ ಕ್ಷಣದಲ್ಲಿ ನನಗೆ ಶ್ರೇಯಸ್ಕರ ಸೂಚನೆ ನೀಡುವಂತೆ ಮಾಡಿತ್ತೋ ಏನೋ ವಿಧಿ? ಈ ವರ್ಷ ಕನ್ನಡದ ಎಂ.ಎ.ಗೆ ಸೇರಿ, ಮುಂದಿನ ವರ್ಷ ಫಿಲಾಸಫಿ ಎಂ.ಎ.ಗೆ ಸೇರಿ, ಒಟ್ಟು ಮೂರು ವರ್ಷಗಳಲ್ಲಿ (ಆಗ ಅವಕಾಶವಿತ್ತು.) ಎರಡೂ ಎಂ.ಎ.ಗಳನ್ನು ಪಾಸುಮಾಡಲು ನಿರ್ಧರಿಸಿದೆ!

ಎರಡೂ ಮೂರು ದಶಕಗಳ ತರುವಾಯ, ಮೊನ್ನೆ, ಮೊನ್ನೆ, ಅವರು ದಿವಂಗತರಾಗು ಪೂರ್ವದಲ್ಲಿ ಈ ಸಂಗತಿಯನ್ನು ಅವರಿಗೆ ತಿಳಿಸಿ, “ಜೆ.ಎಚ್.ಕಸಿನ್ಸ್‌ರವರು ನಾನು ಇಂಗ್ಲಿಷಿನಲ್ಲಿ ಬರಿಯುವುದನ್ನು ಬಿಟ್ಟು ಕನ್ನಡದಲ್ಲಿ ಬರೆಯುವುದಕ್ಕೆ ಹೇಗೆ ನಿಮಿತ್ತರಾದರೂ, ತಾವೂ ಹಾಗೆಯೆ ನಾನು ಕನ್ನಡ ಎಂ.ಎ. ತೆಗೆದುಕೊಳ್ಳುವುದಕ್ಕೆ ನಿಮಿತ್ತರಾದಿರಿ” ಎಂದು ತಿಳಿಸಿದಾಗ, ಶಾಸ್ತ್ರಿಗಳು ಆಶ್ಚರ್ಯಪಟ್ಟು “ಹೌದೆ? ನನಗೆ ನೆನಪೇ ಬರುವುದಿಲ್ಲವಲ್ಲಾ!” ಎಂದರು. ಶ್ರೀ ಕೃಷ್ಣಶಾಸ್ತ್ರಿಗಳು ನನ್ನಂತಹ ಎಷ್ಟು ವಿದ್ಯಾರ್ಥಿಗಳಿಗೆ ಯಾವಯಾವ ರೀತಿಯಲ್ಲಿ ನೆರವಾಗಿ ಕನ್ನಡ ನವೋದಯದ ಹೊಂಬೆಳಗಳನ್ನು ಹೊತ್ತಿಸಿ ಉಜ್ವಲಗಳೊಳಿಸಿದರೋ ಅದನ್ನು ಅವರಾದರೂ ಲೆಕ್ಕವಿಟ್ಟುಕೊಳ್ಳಲಾಗಲಿ ನೆನಪಿಟ್ಟುಕೊಳ್ಳಲಾಗಲಿ ಸಾಧ್ಯವೆ?

ಅವರು ಅದನ್ನೆಲ್ಲ ಒಂದು ವಿಶೇಷಕಾರ್ಯ ಎಂಬಂತೆ ಎಸಗಿರಲಿಲ್ಲ; ಉಸಿರಾಡುವಂತೆ, ಒಂದು ಅಪ್ರಯತ್ನಪೂರ್ವಕವಾದ ಸಹಜತೆಯಿಂದ ಮಾಡಿದ್ದರು.

ನಾನು ಕನ್ನಡ ಎಂ.ಎ. ತೆಗೆದುಕೊಳ್ಳುವಂತೆ ಮಾಡಿದ್ದು ಅವರಿಗೆ ನೆನಪಿಟ್ಟುಕೊಳ್ಳಲಾರದಂತಹ ಒಂದು ಅತ್ಯಂತ ಸಾಧಾರಣ ವಿಷಯವಾಗಿದ್ದರೂ ನನಗೆ ಅದು ಒಂದು ದೈವೀಸಂಕಲ್ಪವಾಗಿಯೆ ಭಾಸವಾಗುತ್ತಿದೆ. ಏಕೆಂದರೆ, ನಾನು ಕನ್ನಡವನ್ನು ಸ್ನಾತಕೋತ್ತರ ವಿಷಯವಾಗಿ ಆಳವಾಗಿ ಅಭ್ಯಾಸ ಮಾಡದಿದ್ದರೆ, ಪಂಪ ರನ್ನ ಜನ್ನ ನಾಗವರ್ಮ ರಾಘವಾಂಕ ಕುಮಾರವ್ಯಾಸ ಲಕ್ಷ್ಮೀಶಾದಿ ಮಹಾಕವಿ ವರಕವಿಗಳ ಕೃತಿಗಳನ್ನು ಅಧ್ಯಯನ ಮಾಡದಿದ್ದರೆ, ಕೊನೆಗೆ ಕನ್ನಡ ಅಧ್ಯಾಪಕನಾಗಿ ಪಾಠ ಹೇಳದೆ ಇದ್ದಿದ್ದರೂ, ವಿಷಯ ವಸ್ತು ಭಾವಾದಿ ಸಂಪತ್ತಿಯಲ್ಲಿ ಕೊರತೆಯಿರದಿರುವ ಉತ್ತುಂಗ ಪ್ರಜ್ಞಾಸ್ಥಿತಿಗೆ ಏರಬಹುದಾಗಿದ್ದರೂ, 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಂತಹ ಮೇರುಕೃತಿಗೆ ಬೇಕಾಗುವ ಪದಸಂಪತ್ತಿಯನ್ನೂ ಮಹಾಶೈಲಿಯನ್ನೂ ಖಂಡಿತವಾಗಿಯೂ ಪಡೆಯಲಾಗುತ್ತಿರಲಿಲ್ಲ. ಬಹುಶಃ ನನ್ನ ಕಾವ್ಯಕನ್ನಿಕೆ ಬಡಕಲು ಕನ್ನಡದ ಪಂಗುಶೈಲಿಯಲ್ಲಿ ಇಂಗ್ಲಿಷಿನ ಎರವಲು ಸರಕನ್ನು ತಲೆಹೊರೆಯಲ್ಲಿ ಹೊತ್ತು ಮಾರುವ ಬೀದಿಯ ಬೇಹಾರಿಯಾಗುತ್ತಿತ್ತೊ ಏನೋ? ಪತ್ರಿಕಾಲೋಕ ಪ್ರಸಿದ್ಧವಾಗಿ!

---

* ಪ್ರಬುದ್ಧ ಕರ್ಣಾಟಕ' ಎ. ಆರ್. ಕೃ. ನೆನಪಿನ ಸಂಚಿಕೆಗೆ ಬರೆದ ಲೇಖನ. ಮೈಸೂರು, ೧೯೬೮.

## ಆಹೇತುಕ ಆತ್ಮೀಯತೆ*

೧೯೨೭ - ೧೯೨೮ನೆಯ ವರ್ಷವಿರಬೇಕು. ಆಗ ಮರಿಮಲ್ಲಪ್ಪ ಹೈಸ್ಕೂಲಿನ ಪಕ್ಕದ ಬಾಡಿಗೆಮನೆಯಲ್ಲಿತ್ತು ಶ್ರೀ ರಾಮಕೃಷ್ಣಾಶ್ರಮ. ಸ್ವಾಮಿ ಸಿದ್ಧೇಶ್ವರಾನಂದರ ಕೃಪೆಯಿಂದ ನಾನು ಆಶ್ರಮವಾಸಿಯಾಗಿ ಎರಡು ವರ್ಷದ ಮೇಲಾಗಿತ್ತು. ಒಂದು ದಿನ ಬೆಳಗ್ಗೆ ಸಮಾರು ೯ ಗಂಟೆಯ ಸಮಯದಲ್ಲಿ ಸ್ವಾಮಿ ಸಿದ್ಧೇಶ್ವರಾನಂದರು ನಾನಿದ್ದ ಕೊಠಡಿಗೆ ಬಂದು 'ವೆಕಣ್ಣಯ್ಯ - ಕೃಷ್ಣಶಾಸ್ತ್ರಿ ಬಂದಿದ್ದಾರೆ. ನಿನ್ನನ್ನು ಕಾಣಬೇಕಂತೆ' ಎಂದರು. ಆಗತಾನೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾಗಿದ್ದ ಕನ್ನಡ ಎಂ.ಎ. ಮೊದಲನೆಯ ತರಗತಿಗೆ ಸೇರಿದ್ದು ವಿದ್ಯಾರ್ಥಿಯಾಗಿದ್ದ ನನಗೆ ಸಂಭ್ರಮ ಮತ್ತು ವಿಸ್ಮಯ! ಮಹಾರಾಜಾ ಕಾಲೇಜಿನಲ್ಲಿ ನನಗೆ ಅಧ್ಯಾಪಕರಾಗಿದ್ದ ಕೃಷ್ಣಶಾಸ್ತ್ರಿಗಳು ಬೆಂಗಳೂರು ಸೆಂಟ್ರಲ್ ಕಾಲೇಜಿನ ಅಧ್ಯಾಪಕರೂ ಮತ್ತು ಅಲ್ಲಿಯ ಕರ್ಣಾಟಕ ಸಂಘದ ಅಧ್ಯಕ್ಷರೆಂದು ಕೀರ್ತಿವೆತ್ತಿದ್ದವರೂ ಆಗಿದ್ದ ಪ್ರೊಫೆಸರ್ ವೆಂಕಣ್ಣಯ್ಯನವರೊಡನೆ ನನ್ನನ್ನು ನೋಡಲು ಬಂದಿದ್ದಾರೆಯೆ? ಏಕೆ? ನನಗೆ ಭಾವಾವೇಗ, ಸಂಭ್ರಮ, ವಿಸ್ಮಯ!.

‘ವೆಂಕಣ್ಣಯ್ಯ - ಕೃಷ್ಣಶಾಸ್ತ್ರಿ’ ಈ ಎರಡು ಹೆಸರು ಆವೊತ್ತಿಗಾಗಲೆ ಜೋಡಿಗೊಂಡು ಕೇಳಿ ಬರುತ್ತಿದ್ದುವು. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಆ ಜೋಡಿಗೊಳಿಕೆಗೆ ಕಾರಣ, ಅವರಿಬ್ಬರೂ ಕನ್ನಡಕ್ಕಾಗಿ ಒಟ್ಟಿಗೆ ದುಡಿಯುತ್ತಿದ್ದು, ಕನ್ನಡ ನವೋದಯದ ಪ್ರೇರಕಶಕ್ತಿಗಳಾಗಿ, ಯಮಳತಾರೆಗಳಂತೆ ಮೂಡಿದ್ದರು ಎಂಬುದಕ್ಕೆ ಸೀಮಿತವಾಗಿರಲಿಲ್ಲ. ನನಗೆ ಮುಖ್ಯವಾಗಿ ಆ ಎರಡು ಹೆಸರುಗಳು ಒಟ್ಟುಗೂಡಿದ್ದುದು ಕನ್ನಡದಲ್ಲಿ ಮೊತ್ತಮೊದಲನೆಯ ಕಿರುಹೊತ್ತಿಗೆ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಬರಿದುದಕ್ಕಾಗಿ. ಅದನ್ನು ಓದಿದ್ದ ನನಗೆ ಅವರಿಬ್ಬರೂ ಬರಿಯ ಪ್ರಾಧ್ಯಾಪಕರಾಗಿ ಗೌರವಾನ್ವಿತರಷ್ಟೆ ಆಗಿರದೆ ಆಧಾತ್ಮಿಕವಾದ ಪೂಜ್ಯಭಾವನೆಗೂ ಭಾಜನರಾಗಿದ್ದರು.

ಕೃಷ್ಣಶಾಸ್ತ್ರಿಗಳೇನೊ ನನಗೆ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಪರಿಚಿತರಾಗಿದ್ದರು. ಆದರೆ ವೆಂಕಣ್ಣಯ್ಯನವರು ಹೆಸರಿನಿಂದ ಮಾತ್ರ ಪರಿಚಿತರಾಗಿದ್ದರು. ಅದುವರೆಗೂ ನಾನು ಅವರನ್ನು ನೋಡಿರಲಿಲ್ಲ. ಕನ್ನಡ ಎಂ.ಎ. ತರಗತಿ ಆಗತಾನೆ ಪ್ರಾರಂಭವಾಗಿದ್ದು, ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳ ವರ್ಗಾವರ್ಗಿ ಇನ್ನೂ ನಡೆದಿರಲಿಲ್ಲ.

ಸ್ವಾಮಿ ಸಿದ್ಧೇಶ್ವರಾನಂದರು ಕರೆದೊಡನೆ ನಾನು ಆಶ್ರಮದ ಮುಂಭಾಗದ ಜಗುಲಿಗೆ ಹೋದೆ. ಆಗ ಆಶ್ರಮ ‘ಬಡತನ’ದಲ್ಲಿತ್ತು. ಕುರ್ಚಿ ಮೇಜು ಮೊದಲಾದ ಪೀಠೋಪಕರಣಗಳಾವುವೂ ಇರಲಿಲ್ಲ. ಬಂದವರಿಗೆ ಕೂರಲು ಎರಡು ಹಳೆಯ ಬೆಂಚುಗಳನ್ನಷ್ಟೆ ಎರವಲುತಂದು ಹಾಕಿದ್ದರು. ಅಂತಹ ಒಂದು ಬೆಂಚಿನ ಮೇಲೆ ಇಬ್ಬರೂ ಕುಳಿತಿದ್ದರು. ನಾನು ನಮಸ್ಕರಿಸಿದೊಡನೆ ಕೃಷ್ಣಶಾಸ್ತ್ರಿಗಳು ಔಪಚಾರಿಕ ಪರಿಚಯವನ್ನೇನೂ ಮಾಡಿಕೊಡುವ ಗೋಜಿಗೆ ಹೋಗದೆ, ವೆಂಕಣ್ಣಯ್ಯನವರು ಆಶ್ರಮಕ್ಕೆ ಆಗಮಿಸಿದ್ದೇಕೆ ಎಂಬುದನ್ನು ಎರಡು ಮಾತುಗಳಲ್ಲಿ ಹೇಳಿದರು.

“ಏನು ಪುಟ್ಟಪ್ಪ. ನೀವು ಮುದ್ದಣ ಸ್ವರ್ಣಪದಕ ತೆಗೆದು ಕೊಳ್ಳಲು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವಕ್ಕೆ ಹೋಗಲೆ ಇಲ್ಲವಂತೆ!” ಎಂದು ಮೊದಲು ಮಾಡಿ. “ವೆಕಣ್ಣಯ್ಯನವರು ಆ ಸ್ವರ್ಣಪದಕವನ್ನು ನಿಮಗೆ ಕೊಡಲು ಬಂದಿದ್ದಾರೆ.” ಎಂದು ತಿಳಿಸಿದರು.

ಸಿದ್ಧೇಶ್ವರಾನಂದಜಿಯರೊಡನೆ ನಾನು ಎದುರುಗಡೆಯ ಬೆಂಚಿನಲ್ಲಿ ಕೂತುಕೊಂಡು ಅದುವರೆಗೂ ಮಾತಾಡದೆ ಮುಗುಳುನಗುತ್ತಲೆ ಇದ್ದ ಪ್ರಶಾಂತಮೂರ್ತಿ ವೆಂಕಣ್ಣಯ್ಯನವರನ್ನು ಈಕ್ಷಿಸುತ್ತಾ ಕುಳಿತಿದ್ದೆ.

ಸಣ್ಣ ಜರಿಯಿದ್ದ ಬಿಳಿಯ ಪೇಟ ಕಟ್ಟಿ, ಮುಚ್ಚಿದ ಕಾಲರಿನ ಕರಿಯ ಕೋಟು ಹಾಕಿಕೊಂಡು ಕೆಂಪು ಅಂಚಿನ ಕಚ್ಚೆಪಂಚೆ ಉಟ್ಟು, ಮುಂಗಡಗೆ ನೀಳ್ದ ಉತ್ತರೀಯ ಇಳಿಯಬಿಟ್ಟು, ಕಾಲು ಮೇಲೆ ಕಾಲು ಹಾಕಿ, ಕತ್ತು ನಸುಬಾಗಿ ಕುಳಿತಿದ್ದರು ವೆಂಕಣಯ್ಯನವರು, ವಿನಯತಾ ಪ್ರತಿಮೆಯಂತೆ. ಅವರ ಔನ್ನತ್ಯದ ದೆಸೆಯಿಂದಲೆ ಅವರು ತುಸು ಬಾಗಿದ್ದುದು ಮತ್ತು ಕಾಲುಮೇಲೆ ಕಾಲುಹಾಕಿದ್ದುದು! ತುಂಬ ಎತ್ತರವಾಗಿದ್ದ ಅವರು ಗಿಡ್ಡ ಬೆಂಚಿನಮೇಲೆ ಬೇರೆಯ ರೀತಿಯಲ್ಲಿ ಕೂರಲು ಸಾಧ್ಯವೆ ಇರಲಿಲ್ಲ ಎಂಬುದು ಯಾರಿಗಾದರೂ ಭೌತವಾಗಿಯೆ ಸ್ಪಷ್ಟವಾಗುವಂತಿತ್ತು ಅವರ ಬಂಗಿ!

ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘ ಏರ್ಪಡಿಸಿದ್ದ ಸಣ್ಣಕಥೆಗಳ ಸ್ಪರ್ಧೆಗೆ ನಾನು ಬರೆದಿದ್ದ ‘ಲಿಂಗ ಅಥವಾ ಯಾರೂ ಅರಿಯದ ವೀರ’ ಎಂಬ ಕಥೆಯನ್ನು ಮಿತ್ರರ ಒತ್ತಾಯಕ್ಕಾಗಿ ಕಳಿಸಲಾಗಿತ್ತು. ಅದಕ್ಕೆ ಪ್ರಥಮ ಬಹುಮಾನ ಬಂದಿತ್ತು.

ಪಾರಿತೋಷಕ ವಿತರಣ ಸಮಾರಂಭಕ್ಕೆ ನನಗೂ ಆಹ್ವಾನಪತ್ರಿಕೆ ಬಂದಿತ್ತು. ಆದರೆ ಸ್ಥಾವರ ಪ್ರಕೃತಿಯ ನಾನು ಬೆಂಗಳೂರಿಗೆ ಹೋಗಿ ಅದನ್ನು ಸ್ವೀಕರಿಸುವ ತೊಂದರೆ ತೆಗೆದುಕೊಳ್ಳದಿರುವಷ್ಟು ಉದಾಸೀನನೋ ಅಥವಾ ಸೋಮಾರಿಯೋ ಆಗಿದ್ದೆ. ಅದಕ್ಕಾಗಿ ಖುದ್ದು ಕರ್ಣಾಟಕ ಸಂಘದ ಅಧ್ಯಕ್ಷರೇ ಬರಬೇಕೇ ಅದನ್ನು ಕೊಡವುದಕ್ಕೆ? ಕೃಷ್ಣಶಾಸ್ತ್ರಿಗಳ ಮುಖಾಂತರ ನನಗೆ ತಲುಪಿಸಬಹುದಿತ್ತು. ಆದರೆ……?!.

ನಾನು ಶ್ರೀ ರಾಮಕೃಷ್ಣ ಪರಮಹಂಸರ ಪ್ರಪ್ರಥಮ ಜೀವನ ಚರಿತ್ರೆಯನ್ನು ಕನ್ನಡಿಗರಿಗೆ ಕೊಟ್ಟ ಪೂಜ್ಯ ವೆಂಕಣ್ಣಯ್ಯನವರನ್ನು ಕಂಡಿದ್ದು ಅದೇ ಮೊದಲು, ಆಶ್ರಮದ ಪವಿತ್ರ ಪ್ರಶಾಂತ ವಾತಾವರಣದಲ್ಲಿ! ಆಕಸ್ಮಿಕದಂತೆ ತೋರುವ ಆ ಘಟನೆ ಶಕುನಪೂರ್ಣವಾಗಿದೆ, ಧ್ವನಿಪೂರ್ಣವಾಗಿದೆ. ಏಕೆಂದರೆ ತರುವಾಯ ಬದುಕಿನ ನನ್ನ ಅವರ ಸಂಬಂಧ ಮುಖ್ಯವಾಗಿ ಆಧ್ಯಾತ್ಮಿಕ ಸ್ತರದಲ್ಲಿಯೆ ಸಾಗಿತ್ತು. ಉಳಿದ ಇತರ ರೀತಿಯ ಸಂಬಂಧಗಳೆಲ್ಲ - ವಿದ್ಯಾರ್ಥಿ ಅಧ್ಯಾಪಕ ಸಂಬಂಧದಂತೆ - ಆಧ್ಯಾತ್ಮಿಕ ಸಂಬಂಧದಷ್ಟೇನೊ ಆಂತರಿಕವಾಗಿರಲಿಲ್ಲ!

೧

ಕನ್ನಡದ ಮೊತ್ತಮೊದಲನೆಯ ಪ್ರೊಫೆಸರ್ ಆಗಿ ವೆಂಕಣ್ಣಯ್ಯ ನವರು ಮೈಸೂರಿಗೆ ಬಂದರುಃ ಕೃಷ್ಣಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನಲ್ಲಿದ್ದ ಕನ್ನಡ ಉಪಪ್ರಾಧ್ಯಾಪಕರ ಸ್ಥಾನಕ್ಕೆ ವರ್ಗವಾದರು. ಆಗತಾನೆ ಪ್ರರಂಭವಾಗಿದ್ದ ಮೊದಲನೆಯ ವರ್ಷದ ಎಂ.ಎ. ತರಗತಿಯಲ್ಲಿ ಮುಂದೆ ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ಗಣ್ಯನಾಮರಾದ ಅನೇಕರು ನನ್ನ ಸಹಾಧ್ಯಾಯಿಗಳಾಗಿದ್ದರು. ವೆಂಕಣ್ಣಯ್ಯನವರ ಅಧ್ಯಾಪನದಲ್ಲಿ ನಾವೆಲ್ಲ ಕನ್ನಡ ಪ್ರಾಚೀನ ಸಾಹಿತ್ಯದ ಸಾರಸತ್ತ್ವವನ್ನು ಹೀರಿಕೊಳ್ಳುವ ಮತ್ತು ಆಗತಾನೆ ಕಣ್ದೆರೆಯುತ್ತಿದ್ದ ಆಧುನಿಕ ಸಾಹಿತ್ಯ ನವೋದಯದ ಉಷಃಕಾಂತಿಯಲ್ಲಿ ಬುದ್ಧಿಗೆ ಸಾಣೆಯನ್ನೂ ಹೃದಯಕ್ಕೆ ವಿಕಾಸವನ್ನೂ ಪಡೆದುಕೊಳ್ಳುವ ಸಾಧನೆಯಲ್ಲಿ ದೀಕ್ಷಿತರಾದೆವು.

ವೆಂಕಣ್ಣಯ್ಯನವರ ವ್ಯಕ್ತಿತ್ವ ಪ್ರಖರವಾದುದಲ್ಲ, ಸೌಮ್ಯವಾದುದು. ಸೂರ್ಯಕಾಂತಿಯಂತೆ ಕಣ್ಣು ಕೋರೈಸುತ್ತಿರಲಿಲ್ಲ, ಚಂದ್ರಕಾಂತಿಯಂತೆ ಸಂಮೋಹಕವಾಗಿತ್ತು. ಇತರ ಯಾವ ಪ್ರಧ್ಯಾಪಕರೂ ವೆಂಕಣ್ಣಯ್ಯನವರಂತೆ ನನ್ನಲ್ಲಿ ಆತ್ಮೀಯತಾಭಾವವ ನ್ನುಂಟುಮಾಡಲಿಲ್ಲ. ನನ್ನ ಪ್ರಶಂಸೆಗೂ ಗೌರವಕ್ಕೂ ಪಾತ್ರಾರಾಗಿದ್ದ ಪ್ರಾಧ್ಯಾಪಕರಲ್ಲಿಯೂ ನಾನು ವೆಂಕಣ್ಣಯ್ಯನವರಲ್ಲಿ ಅನುಭವಿಸಿದಂತೆ 'ಆತ್ಮೀಯತೆ' ಯನ್ನು ಅನುಭವಿಸಲು ಸಮರ್ಥನಾಗಲಿಲ್ಲ. ಇತರ ಯಾರಲ್ಲಿಯೂ 'ನಿಕಟತ್ವ' ಉಂಟಾಗಲಿಲ್ಲ. ವೆಂಕಣ್ಣಯ್ಯನವರಿಗೂ ನನಗೂ ಉಂಟಾದ ಸಂಬಂಧದಲ್ಲಿ 'ಅಕ್ಕರೆ'ಯ ಸ್ವರೂಪವಿತ್ತು. ಅವರೊಡನೆ ತುಂಬ 'ಸಲಿಗೆ'ಯಿಂದ ಇರುತ್ತಿದ್ದೆ. ಆದರೆ ಆ 'ಸಲಿಗೆ'ಯಲ್ಲಿ ಎಂದೂ 'ಲಘುತ್ವ'ವಾಗಲಿ 'ಅಗೌರವ'ಭಾವವಾಗಲಿ ಇಣುಕಿಯೂ ಇರಲಿಲ್ಲ. ನನಗೆ ಅವರಲ್ಲಿ ಯಾವಾಗಲೂ ಒಂದು ವಿಶ್ವಾಸಪೂರ್ವಕವಾದ 'ಪೂಜ್ಯ' ಭಾವನೆಯೆ ಇರುತ್ತಿತ್ತು. ನಾನು ಗೌರವಿಸುತ್ತಿದ್ದ ಅಥವಾ ಪ್ರಶಂಸಿಸುತ್ತಿದ್ದ ಇತರ ಇಬ್ಬರೊ ಮೂವರೊ ಪ್ರಾಧ್ಯಾಪಕರಲ್ಲಿ ಆ ಗೌರವಕ್ಕೆ ಅಥವಾ ಪ್ರಶಂಸೆಗೆ ಏನಾದರೂ ಒಂದು 'ಕಾರಣ' ವಿರುತ್ತಿತ್ತು. ಒಬ್ಬರನ್ನು ಅವರ ಬದುಕಿನ ಶುಚಿತ್ವಕ್ಕಾಗಿಯೂ ಠಾಕುಠೀಕಾದ ವೇಷಭೂಷಣಗಳಿಂದ ಕೂಡಿದ ಪ್ರಭಾವಶಾಲಿಯಾದ ವ್ಯಕ್ತಿತ್ವಕ್ಕಾಗಿಯೂ ಪ್ರಶಂಸಿಸಿದರೆ ಮತ್ತೊಬ್ಬರನ್ನು ನಾನು ಮೆಚ್ಚಿದ ಆದರ್ಶಗಳನ್ನೆ ಅವರೂ ಮೆಚ್ಚಿದ್ದಾರೆಂಬ ಕಾರಣಕ್ಕಾಗಿ ಗೌರವಿಸುತ್ತಿದ್ದೆ.

ಮಗುದೊಬ್ಬರನ್ನು ಅವರ ವಿದ್ವತ್ತಿಗಾಗಿಯೊ ವಾಗ್ಮಿತೆಗಾಗಿಯೊ ಶ್ಲಾಘಿಸುತ್ತಿದ್ದೆ. ಇನ್ನೊಬ್ಬರನ್ನು ಬಹುಶಃ ಕನ್ನಡದ ಏಳಿಗೆಗಾಗಿ ದುಡಿಯುತ್ತಿದ್ದಾರೆ ಎಂಬ ಕಾರಣಕ್ಕಾಗಿಯೊ ಅಥವಾ ದೇಶಭಕ್ತಿಯ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಚಳವಳಿಯಲ್ಲಿ ಸಹಾನುಭೂತಿ ತೋರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿಯೊ ಮೆಚ್ಚುತ್ತಿದ್ದೆ. ಆದರೆ ವೆಂಕಣ್ಣಯ್ಯನವರಲ್ಲಿ ನನಗಿದ್ದ 'ಆತ್ಮೀಯತೆ'ಗೆ ಯಾವ ಒಂದು ಕಾರಣವನ್ನೂ ನಾನು ಒಡ್ಡಲಾರೆ. ಅದು 'ನಿಷ್ಕಾರಣ'ವಾಗಿತ್ತು. ಅಥವಾ 'ಅಕಾರಣ'ವಾಗಿತ್ತು, ಅಥವಾ 'ಅಹೇತುಕ'ವಾಗಿ ದೈವಿಕವಾಗಿತ್ತು!

ಅಂತಹ ಅಹೇತುಕ ಸ್ವರೂಪದ ವಿಶ್ವಾಸದಿಂದಲೆ ನನ್ನ ಮೇಲೆ ಪ್ರಭಾವ ಬೀರಿದವರಲ್ಲಿ ಪ್ರೊ. ವೆಂಕಣ್ಣಯ್ಯನವರು ಪೂಜ್ಯ ಸಿದ್ದೇಶ್ವರಾನಂದರಿಗೆ ದ್ವಿತೀಯ ಮಾತ್ರರಾಗಿದ್ದರು.

ವೆಂಕಣ್ಣಯ್ಯನವರು ತರಗತಿಗೆ ಬರುವಾಗಲೆಲ್ಲ ಅವರ ಪ್ರವೇಶಭಂಗಿಯೆ ಒಂದು ಸಂತೋಷಾಗಮನದಂತಿರುತ್ತಿತ್ತು. ನಮ್ಮ ಕ್ಲಾಸು ದೊಡ್ಡದಾಗಿರಲಿಲ್ಲ, ಹತ್ತು ಹನ್ನೆರಡು ವಿದ್ಯಾರ್ಥಿಗಳಿದ್ದೆವು. ಅಷ್ಟೇನೂ ದೊಡ್ಡದಲ್ಲದೆ ಸಾಧಾರಣ ಕೊಠಡಿಯಲ್ಲಿ ನಡೆಯುತ್ತಿತ್ತು, ಮಹಾರಾಜಾ ಕಾಲೇಜಿನ ಮೇಲಂತಸ್ತಿನ ಮೂಲೆಯಲ್ಲಿ. ಉದ್ದವಾಗಿ ತೋರುತ್ತಿದ್ದ ಅವರು ತಮ್ಮ ಎತ್ತರವನ್ನು ತೋರಗೊಡಬಾರದೆಂಬ ವಿನಯದ ದಾಕ್ಷಿಣ್ಯ ಭಾರಕ್ಕೆಂಬಂತೆ ತುಸುಬಾಗಿ ನಡೆದುಬಂದು ಕುರ್ಚಿಯಲ್ಲಿ ಕುಳಿತೊಡನೆ ಒಂದು ವಿಶ್ವಾಸಪೂರ್ವಕ ಗೌರವಾನುಭವದ ಭಾವೋಲ್ಲಾಸ ವಿದ್ಯಾರ್ಥಿಗಳ ಹೃದಯಸರೋವರದಲ್ಲಿ ತರಂಗಿತವಾಗಿ ಸ್ಪಂದಿಸುತ್ತಿತ್ತು. ಅವರು ಇತರ ಅನೇಕ ಪ್ರಾಧ್ಯಾಪಕರಂತೆ ಗೌನು ತೊಟ್ಟು ನಿಂತು ಠೀವಿಯಿಂದ ಉಪನ್ಯಾಸ ಮಾಡುತ್ತಿರಲಿಲ್ಲ. ಕುರ್ಚಿಯ ಮೇಲೆ ಕುಳಿತೇ ಮಾತನಾಡುತ್ತಿದ್ದರು. ಅದರಲ್ಲಿ ಉಪನ್ಯಾಸದ ಪ್ರತಿಷ್ಠೆಯಾಗಲಿ ಭಾಷಣದ ವಾಗ್ಮಿತದೋರಣೆಯಾಗಲಿ ಇರದೆ ವಿದ್ಯಾರ್ಥಿಯ ಮನಸ್ಸಿಗೆ ಹೋಗುವ ಸಂವಾದ ಸಹಜ ನಿಷ್ಠೆ ಇರುತ್ತಿತ್ತು. ಅವರು ಎಲ್ಲ ವಿದ್ಯಾರ್ಥಿಗಳನ್ನೂ ಕುರಿತು ಸಮೂಹಿಕವಾಗಿ ಮಾತಾಡುತ್ತಿದ್ದರೂ ಪ್ರತಿಯೊಬ್ಬನಿಗೂ ತನ್ನನ್ನೆ ಗಮನಿಸಿ ಗುರಿಮಾಡಿ ಸಂಭಾಷಿಸುತ್ತಿದ್ದಾರೆ ಎಂಬ ವೈಯಕ್ತಿಕ ಭಾವನೆ ಮೂಡುತ್ತಿತ್ತು. ಅದುವರೆಗೆ ಇಂಗ್ಲಿಷ್ ತರಗತಿಗಳಲ್ಲಿ ಮಾತ್ರವೆ ನಾವು ಕೇಳುತ್ತಿದ್ದ ಪಠ್ಯವಿಷಯ ಪ್ರತಿಪಾದನಾ ವಿಧಾನವನ್ನೂ ಮತ್ತು ಕಾವ್ಯ ಮೀಮಾಂಸಾತ್ಮಕವಾದ ಸಾಹಿತ್ಯ ವಿಮರ್ಶನ ರೀತಿಯನ್ನೂ ಕನ್ನಡದ ತರಗತಿಗಳಲ್ಲಿಯೂ ಕೇಳುವಂತಾಗಿ ನಮ್ಮ ಭಾಷಾಭಿಮಾನಕ್ಕೆ ಕೋಡು ಮೂಡಿದಂತಾಯಿತು; ನಮ್ಮ ಕವಿಗಳೂ ಕಾವ್ಯಾಗಳು ಇಂಗ್ಲಿಷ್ ಕವಿಗಳಿಗೂ ಕಾವ್ಯಗಳಿಗೂ ಬಿಟ್ಟುಕೊಡುವುದಿಲ್ಲ ಎಂಬ ಹೆಮ್ಮೆಯಿಂದ ಹೃದಯ ಹಿಗ್ಗುವಂತಾಯಿತು. ವೆಂಕಣ್ಣಯ್ಯನವರು ರವೀಂದ್ರನಾಥ ಠಾಕೂರರ ಸಾಹಿತ್ಯ ವಿಮರ್ಶೆಯ ಬಂಗಾಳಿ ಪ್ರಂಬಂಧಗಳನ್ನು 'ಪ್ರಾಚೀನ ಸಾಹಿತ್ಯ' ಎಂಬ ಹೆಸರಿಂದ ಕನ್ನಡಕ್ಕೆ ಭಾಷಾಂತರಿಸಿ 'ಪ್ರಬುದ್ಧಕರ್ಣಾಟಕ'ದಲ್ಲಿ ಪ್ರಕಟಿಸಿದ್ದರು. ಅವುಗಳನ್ನಾಗಲೆ ಪ್ರೊ. ಕೃಷ್ಣಶಾಸ್ತ್ರಿಗಳು ಮೂರನೆಯ ವರ್ಷದ ಬಿ.ಎ. ತರಗತಿಯಲ್ಲಿ ನಮಗೆ ಪರಿಚಯ ಮಾಡಿಕೊಟ್ಟಿದ್ದರು. ಆ ಪ್ರಬಂಧಗಳ ಭಾಷೆ, ಶೈಲಿ, ದೃಷ್ಟಿ, ಧ್ವನಿ ಮತ್ತು ಅವುಗಳಲ್ಲಿ ಮೈದೋರಿದ್ದ 'ದರ್ಶನ' ಇವುಗಳಿಗೆ ನಾನು ಮಾರುಹೋಗಿದ್ದೆ. ನಮ್ಮ ಸಾಹಿತ್ಯದ ಉತ್ತಮ ಭಾಗಗಳನ್ನು ಕುರಿತು ವಿಮರ್ಶಿಸುವಾಗ ವೆಂಕಣ್ಣಯ್ಯನವರು ಆ ರೀತಿಯದೇ ಆದ ಮಾರ್ಗವನ್ನು ಅನುಸರಿಸಿ ನಮ್ಮನ್ನು ರಸವಶರನ್ನಾಗಿ ಮಾಡುತ್ತಿದ್ದರು.

ಆದರೆ ಎಚ್ಚರಿಕೆ! ವೆಂಕಣ್ಣಯ್ಯನವರು ನಮ್ಮ ಕವಿಕಾವ್ಯಗಳನ್ನು ಹೊಸ ಬೆಳಕಿನಲ್ಲಿಟ್ಟು ಉಜ್ವಲಗೊಳಿಸುತ್ತಿದ್ದರೆಂದ ಮಾತ್ರಕ್ಕೆ ಅವರು 'ಸತೃಣಾಭ್ಯವಹಾರಿ'ಗಳಾಗಿದ್ದರೆಂದು ಯಾರೂ ಭಾವಿಸದಿರಲಿ. ಅವರು ಚಾಮರ ಬೀಸುತ್ತಿದ್ದಂತೆಯೆ ಪೊರಕೆಯನ್ನೂ ಹಿಡಿದು ಗುಡಿಸುತ್ತಿದ್ದರು. ಕುಕವಿ ಕುಕಾವ್ಯಗಳನ್ನೂ ಪಾಂಡಿತ್ಯ ಪ್ರದರ್ಶನದ ಕಸರತ್ತನ್ನೂ ಮತಭ್ರಾಂತಿಯ ಕ್ಷುದ್ರಕಾವ್ಯಟೋಪಗಳನ್ನು ರಸವಿಹೀನ ಕೃತಕತೆಯನ್ನೂ ಸಂಧಿಸಿದಾಗ ಅವರ ಕೈಗೆ ಅಗ್ನಿಖಡ್ಗ ಬರುತ್ತಿತ್ತು. ನಾಲಗೆ ಮೂದಲಿಕೆಯ ಕರವಾಳವಾಗಿ ಜಳಪಿಸುತ್ತಿತ್ತು! ದ್ವಿತೀಯ ವರ್ಗದ ಕವಿಕಾವ್ಯಗಳಂತಿರಲಿ, ಪ್ರಥಮವರ್ಗದ ಮಹಾಕವಿಗಳೂ ಅವರ ರಸಾವೇಶವಿಹೀನವಾದ ಆಲಸ್ಯಸಮಯದ ಸೃಜನಭಾಗಗಳಲ್ಲಿ ತಕ್ಕ 'ಶಾಸ್ತಿ'ಗೆ ಒಳಗಾಗುತ್ತಿದ್ದರು. ಪೊನ್ನ, ಚಾಮರಸ, ಷಡಕ್ಷರದೇವನಂತಹರೂ ಅವರ ಉಗ್ರ ಟೀಕೆಯ ಗಾಣಕ್ಕೆ ತಲೆಯೊಡ್ಡಿ ಜರ್ಜರಿತರಾಗುತ್ತಿದ್ದರೆಂದಮೇಲೆ ಮತ್ತೆ ಉಳಿದವರ ಪಾಡೇನು.?

ನಿದರ್ಶನವಾಗಿ ಒಂದು ಸಂಗತಿ ನೆನಪಿಗೆ ಬರುತ್ತಿದೆ: ಒಮ್ಮೆ ನನ್ನ 'ಚಿತ್ರಾಂಗದಾ' ಕಾವ್ಯವನ್ನು ಹಸ್ತಪ್ರತಿಯಲ್ಲಿಯೆ ಓದಿಸಿ ಕೇಳಿ "ಇಂಥಹದನ್ನೆಲ್ಲ ಬರೆಯುವ ನೀವು 'ಹರಿಶ್ಚಂದ್ರಕಾವ್ಯ'ವನ್ನು ಆ ಪಾಟಿ ಹೇಗೆ ಹೊಗಳುತ್ತೀರಪ್ಪಾ?" ಎಂದು ಮೆಲ್ಲನೆ ಉಸುರಿದರು ಆಗ ನಾನು ರಾಘವಾಂಕನ 'ಮಹಾ' ಅಲ್ಲದಿದ್ದರೂ ಕನ್ನಡದ ಅತ್ಯುತ್ತಮ ಕಾವ್ಯಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ, 'ಹರಿಶ್ಚಂದ್ರಕಾವ್ಯ'ದ ಮೇಲೆ ಪ್ರಶಂಸಾಪೂರ್ವಕವಾದ ವಿಮರ್ಶೆ ಬರೆದು ಪ್ರಕಟಿಸಿದ್ದೆ. 'ಪ್ರಬುದ್ಧ ಕರ್ನಾಟಕ'ದಲ್ಲಿ. ನಾನು ಅಚ್ಚರಿಗೊಂಡು, ಅವರ ಆ ಉಕ್ತಿಗೆ ನನ್ನ ಪರವಾದ ಒಲವರವೆ ಕಾಣವಾಗಿರಬೇಕು ಎಂದುಕೊಂಡಿದ್ದೆ! ಅದರೆ ಬರಿಯ ಒಲವರಕ್ಕೆ ಶರಣಾಗುತ್ತಿದ್ದ ಚೇತನ ಅವರದಾಗಿರಲಿಲ್ಲ. ಅವರ ಮೇಧಾಶಕ್ತಿ ಮತ್ತು ವಿಚಾರ ತೀಕ್ಷ್ಣತೆ ಯಾವ ಮೋಹಕ್ಕೂ ಸಿಕ್ಕಿ ತಮ್ಮ ನಿಶಿತತ್ವವನ್ನು ಮೊಂಡುಗೊಳಿಸಿಕೊಳ್ಳುತ್ತಿರಲಿಲ್ಲ. ಮೇಲೆ ಹೇಳಿದ ಘಟನೆ ನಡೆಯುವುದಕ್ಕೆ ಕೆಲವು ವರ್ಷಗಳ ಹಿಂದೆ, ನನ್ನ ಮಿತ್ರರಲ್ಲಿ ಒಬ್ಬರಾಗಿದ್ದು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದ ಭೂಪಾಳಂ ಚಂದ್ರಶೇಖರಯ್ಯನವರು ನಾನು ೧೯೨೪ರಲ್ಲಿ ಗೋವಿನಕಥೆಯ ಮಟ್ಟಿನಲ್ಲಿ ಬರೆದಿದ್ದ 'ಅಮಲನ ಕಥೆ' ಎಂಬ ಒಂದು ಬಾಲಕ ಪ್ರಯತ್ನವನ್ನು ತುಂಬಾ ಮೆಚ್ಚಿಕೊಂಡು ತಮ್ಮ ಗುರುಗಳಿಗೆ ಕೊಟ್ಟು ಅವರ ಅಭಿಪ್ರಾಯ ಕೇಳಿದರಂತೆ. ವೆಂಕಣ್ಣಯ್ಯನವರು ಅದನ್ನು ಅಮೂಲಾಗ್ರವಾಗಿ ಓದಿ, ಮೂದಲಿಸುವಂತೆ ನಕ್ಕು, 'ಅಯ್ಯೋ ಬಿಡಪ್ಪಾ, ಎಲ್ಲಾರೂ ಪದ್ಯ ಬರೆಯುವವರ!" ಎಂದು ಬಿಟ್ಟರಂತೆ. ಆಮೇಲೆ ಕೆಲವು ವರ್ಷಗಳ ತರುವಾಯ ನನ್ನ ಕವನಗಳೂ ನಾಟಕಗಳೂ ಲೇಖನಗಳೂ 'ಪ್ರಬುದ್ಧ ಕರ್ನಾಟಕ' ಮುಂತಾದ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿ ಸಾಹಿತ್ಯ ಪ್ರೇಮಿಗಳ ಗಮನ ಸೆಳೆದ ಸಮಯದಲ್ಲಿ ಅದೇ ವೆಂಕಣ್ಣಯ್ಯನವರೆ ಭೂಪಾಳಂ ಚಂದ್ರಶೇಖರಯ್ಯನವರನ್ನು ಒಂದು ಸಾಹಿತ್ಯಕ ಸಂದರ್ಭದಲ್ಲಿ ಶಿವಮೊಗ್ಗೆಯಲ್ಲಿ ಸಂಧಿಸಿದಾಗ - ನನಗೂ ಚಂದ್ರಶೇಖರಯ್ಯನವರಿಗೂ ಇದ್ದ ನಿಕಟಸ್ನೇಹದ ವಿಚಾರ ಅವರಿಗಿನ್ನೂ ಗೊತ್ತಾಗಿರಲಿಲ್ಲ - ನನ್ನನ್ನು ಬಹುವಾಗಿ ಪ್ರಶಂಸಿಸಿ, ಯಾವ ಇಂಗ್ಲಿಷ್ ಕವಿಗೂ ಬಿಟ್ಟುಕೊಡುವುದಿಲ್ಲ ಎಂದು ಹೆಮ್ಮೆಯಿಂದ ಹೇಳಿದರಂತೆ. ವೆಂಕಣ್ಣಯ್ಯನವರು ಮುಖ ನೋಡಿ ಮಣೆ ಹಾಕುವವರ ಜಾತಿಗೆ ಸೇರಿರಲಿಲ್ಲ!

೩

ನಿಜವಾದ ಪ್ರತಿಭೆಯನ್ನು, - ಅದು ಎಲ್ಲಿಯೆ ಇರಲಿ, ಯಾರಲ್ಲಿಯೆ ಇರಲಿ - ಕಾಣುವ ವಿಶಾಲ ಬುದ್ಧಿಯೂ ಗುರುತಿಸುವ ಉದಾರ ಹೃದಯವೂ ವೆಂಕಣ್ಣಯ್ಯನವರಿಗೆ ದೈವದತ್ತವಾಗಿದ್ದುವು; ಸಣ್ಣ ಮನಸ್ಸು ಮತ್ತು ಸಂಕುಚಿತಭಾವ ಅವರ ಬಳಿ

ಸುಳಿಯುತ್ತಿರಲಿಲ್ಲ. ಚೇತನಗಳಿಗೆ ಪ್ರೋತ್ಸಾಹದ ಗೊಬ್ಬರ ಹಾಕಿ, ಪ್ರಶಂಸೆಯ ನೀರೆರೆದು ನಿರ್ಮತ್ಸರವಾಗಿ ಪೋಷಿಸುತ್ತಿದ್ದರು. ಆದರೆ ಕಸಿಮಾಡುವ ಕತ್ತರಿಯನ್ನೂ ಹಿಡಿದಿರುತಿದ್ದರು, ರೋಗಿಷ್ಠ ರಂಬೆಗಳನ್ನು ನಿಷ್ಠುರವಾಗಿ ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಿ ಗಿಡ ಆರೋಗ್ಯವಾಗಿ ಸುದೃಢವಾಗಿ ಅಭಿವರ್ಧಿಸುವಂತೆ ಮಾಡಲು. ಅವರ ಆ ಮಾತೃಲಕ್ಷಣದ ಹೊಂಬಿಸಲಲ್ಲಿ ಚಳಿ ಕಾಯಿಸಿಕೊಂಡು ಬದಿಕಿ ಬಾಳಿದ ಅನೇಕ ಚೇತನಗಳಲ್ಲಿ ನಾನೂ ಒಬ್ಬನು.

ಸ್ವಭಾವತಃ ಹಿಂಜರಿದು ಮರೆಸೇರುವ ಪ್ರವೃತ್ತಿಯವನಾಗಿದ್ದ ನನ್ನನ್ನು ಬಯಲಿನ ಕಣಕ್ಕೆ ಎಳೆದು ನೂಕಿದ ಹಿರಿಯರಲ್ಲಿ ಸ್ವಾಮಿ ಸಿದ್ಧೇಶ್ವರಾನಂದಜಿ, ನಾ. ಕಸ್ತೂರಿ ಅವರನ್ನು ಬಿಟ್ಟರೆ ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳಿಗೆ ಪ್ರಧಾನಸ್ಥಾನ ಮೀಸಲಾಗುತ್ತದೆ. ಕೃಷ್ಣಶಾಸ್ತ್ರಿಗಳದ್ದು ಕೂಗಿ ಕರೆವ ರೀತಿಯಾದರೆ ವೆಂಕಣ್ಣಯ್ಯನವರದ್ದು ಕಿವಿಯಲ್ಲಿ ಪಿಸುಗುಟ್ಟಿ ಪ್ರೇರಿಸುವ ರೀತಿಯದು. ಅವರು ಬಲಾತ್ಕರಿಸುತ್ತಿದ್ದಾರೆ ಎಂಬುದರ ಅರಿವೇ ಇಲ್ಲದೆ ಅವರ ಬಲಾತ್ಕಾರಕ್ಕೆ ಅವಶವಾದಂತೆ ವಶನಾಗುತ್ತಿದ್ದೆ. ಶ್ರೀಯುತ ಕೃಷ್ಣಶಾಸ್ತ್ರಿಗಳು ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹೋದ ಮೇಲೆ ಅವರು ಕರ್ಣಾಟಕ ಸಂಘದ ಆಶ್ರಯದಲ್ಲಿ ಒಂದು ವಿದ್ಯಾರ್ಥಿಕವಿ ಸಮ್ಮೇಳನ ಏರ್ಪಡಿಸಿ ಆದರ ಅಧ್ಯಕ್ಷತೆ ವಹಿಸಬೇಕೆಂದು ಮೊದಲನೆಯ ವರ್ಷದ ಎಂ.ಎ. ತರಗತಿಯ ವಿದ್ಯಾರ್ಥಿಯಾಗಿದ್ದ ನನಗೆ ಕಾಗದ ಬರೆದರು. ನನಗೆ ದಿಗಿಲಾಯ್ತು. ನಾನು ಅದುವರೆಗೆ ಅಂತಹ ಯಾವ ಸಾರ್ವಜನಿಕ ಸಭೆಯಲ್ಲಿಯೂ ವೇದಿಕೆಯ ಮೇಲೆ ನಿಂತು ಭಾಷಣ ಮಾಡಿರಲಿಲ್ಲ. ಪೂಜ್ಯ ಸಿದ್ಧೇಶ್ವರಾನಂದರ ಮತ್ತು ಅಂದು ಶ್ರೀರಾಮಕೃಷ್ಣಾಶ್ರಮದ ಚಟುವಟಿಕೆಗಳಲ್ಲಿ ಅಗ್ರೇಸರಸ್ಥಾನ ವಹಿಸುತ್ತಿದ್ದ ನಾ. ಕಸ್ತೂರಿಯವರ ಹಿರಿದುಂಬಿಸುವಿಕೆಯಿಂದ ಆಶ್ರಮದ ಉತ್ಸವದ ಸಭೆಗಳಲ್ಲಿ ನಾನು ರಚಿಸಿದ್ದ ಶ್ರೀ ರಾಮಕೃಷ್ಣ - ವಿವೇಕಾನಂದ ವಿಷಯಕವಾದ ಕವನಗಳನ್ನು ವಾಚಿಸಿದ್ದೆನೆಷ್ಟೋ ಅಷ್ಟೇ. ಜಯಪ್ರದವಾಗುವಂತೆ ಅಧ್ಯಕ್ಷತೆ ವಹಿಸುವ ವಿಚಾರದಲ್ಲಿ ನನಗೆ ನಂಬಿಕೆಯಿರಲಿಲ್ಲ; ಅದಕ್ಕಾಗಿ ಪ್ರಯಾಣ ಕೈಕೊಳ್ಳುವ ಮೊದಲಾದ 'ತೊಂದರೆ' ಗಳಿಗೊಳಗಾಗಲೂ ನನಗೆ ಇಷ್ಟವಿರಲಿಲ್ಲ. ಆದರೆ ನನ್ನ ಸ್ವಭಾವದ ಲಕ್ಷಣ ವನ್ನು ಅರಿತಿದ್ದ ಕೃಷ್ಣಶಾಸ್ತ್ರಿಗಳು ವೆಂಕಣ್ಣಯ್ಯನವರಿಗೆ ಕಾಗದ ಬರೆದು, ಹೇಗಾದರೂ ಮಾಡಿ ನನ್ನನ್ನು ಒಪ್ಪಿಸುವಂತೆ ಕೇಳಿಕೊಂಡರು. ಸರಿ, ಶಾಸ್ತ್ರಿಗಳು ತಮಗೆ ಬರೆದಿದ್ದ ಕಾಗದದ ವಿಚಾರವನ್ನು ಒಂದಿನಿತೂ ಬಯಲು ಮಾಡದೆ, ಅವರು ನನಗೆ ಬರೆದಿದ್ದ ಕಾಗದವನ್ನು ನಾನು ತೋರಿಸಲು, ಆ ವಿಚಾರದಲ್ಲಿ ಸಂಪೂರ್ಣ ಅನಾಸಕ್ತರಾದಂತೆ ತೋರಿಸಿಕೊಂಡು, ನಿಷ್ಪಕ್ಷಪಾತವಾಗಿ ಸಲಹೆ ಕೊಡುವವರಂತೆ ವರ್ತಿಸಿದರು. ಭಾವ ಲವಲೇಶವಿಲ್ಲದ ಪ್ರಶಾಂತ ಧ್ವನಿಯಿಂದ, ನಾನು ಕವಿ ಸಮ್ಮೇಲನದ ಅಧ್ಯಕ್ಷತೆ ವಹಿಸುವುದು ಅನೇಕ ದೃಷ್ಟಿಗಳಿಂದ ಒಳಿತು ಎಂದು, ಮಂತ್ರದೀಕ್ಷೆ ಕೊಡುವಂತೆ, ಮನಸ್ಸಿನ ಆಳಕ್ಕೆ ಹೋಗುವಂತೆ ಮೆಲ್ಲನೆ ಸೂಚಿಸಿದರು. ಅವರು ಸೂಚಿಸಿದ ರೀತಿಯಲ್ಲಿ ಹೋಗುವ ಅಥವಾ ಹೋಗದಿರುವ ವಾದವಿವಾದಕ್ಕೆ ಅವಕಾಶವೆ ಇಲ್ಲವಾಗಿತ್ತು! ನೇರವಾಗಿ 'ಅಧ್ಯಕ್ಷಭಾಷಣ ಬರೆದು ತಾ. ನಾನು ನೋಡುತ್ತೇನೆ' ಎಂದೂ ಬಿಟ್ಟರು. ವೆಂಕಣ್ಣಯ್ಯನವರ ಮನಸ್ಸಿಗೆ ಸಂತೋಷವಾಗುತ್ತದೆ ಎಂದರೆ ನಾನು ಏನನ್ನೂ ಮಾಡಲು ಹೇಸುತ್ತಿರಲಿಲ್ಲವೆಂದು ತೋರುತ್ತದೆ. ಭಾಷಣ ಬರೆದು ತೋರಿಸಿದೆ. ನನ್ನ ತಲೆ ತಿರುಗುವಂತೆ ಅದನು ಹೊಗಳಿಬಿಟ್ಟರು. ಮಂಗನಿಗೆ ಭಂಗಿ ಕುಡಿಸಿದಂತಾಯಿತು. ಬೆಂಗಳೂರಿಗೆ ಹೋದೆ. ೧೯೨೮ನೆಯ ಇಸವಿ ಡಿಸೆಂಬರ್ ೧೫ರಂದು ನಡೆದ ಕವಿ ಸಮ್ಮೇಲನದ ಅಧ್ಯಕ್ಷತೆ ವಹಿಸಿದೆ. ಅದು ತುಂಬ ಯಶಸ್ವಿಯಾಗಿಯೆ ಜರುಗಿತ್ತು, ವೆಂಕಣ್ಣಯ್ಯನವರ ಹೆಮ್ಮೆ ಮುಗಿಲು ಮುಟ್ಟುವಂತೆ!

ಆವೊತ್ತಿನಿಂದ ಅಧ್ಯಕ್ಷನಾಗಿಯೊ ಮುಖ್ಯ ಆತಿಥಿಯಾಗಿಯೊ ಅನೇಕ ಕನ್ನಡ ನವೋದಯದ ಸಮಾರಂಭಗಳಲ್ಲಿ ನಾನು ಭಾಗವಹಿಸುವಂತೆ ಪ್ರೋತ್ಸಾಹವಿತ್ತವರು ವೆಂಕಣ್ಣಯ್ಯನವರ. ಬಿ.ಎಂ.ಶ್ರೀಯವರು ಅಧ್ಯಕತೆ ವಹಿಸಿದ್ದ ಗುಲ್ಬರ್ಗದ ಸಾಹಿತ್ಯ ಸಮ್ಮೇಲನದಲ್ಲಿ ನನ್ನ 'ಯಮನ ಸೂಲು' ನಾಟಕದಲ್ಲಿ ನಾನೆ ಸತ್ಯವಾನನ ಪಾತ್ರ ವಹಿಸುವಂತೆ ಮಾಡಿದ್ದೂ ವೆಂಕಣ್ಣಯ್ಯನವರೆ, ಬೇಸಿಗೆ ರಜಾಕ್ಕೆ ಊರಿಗೆ ಹೋಗಿ ಮಲೆನಾಡಿನ ಕಾಡುಮಲೆಗಳಲ್ಲಿ ಹುದುಗಿ ಅಲೆಯುತ್ತಿದ್ದವನನ್ನು ಟೆಲಿಗ್ರಾಂ ಕೊಟ್ಟು ಕರೆಯಿಸಿಕೊಂಡು! ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಲನದಲ್ಲಿ ಕವಿ ಸಮ್ಮೇಲನದ ಅಧ್ಯಕ್ಷತೆ ವಹಿಸಿ 'ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ' ಎಂಬ ನನ್ನ ಭಾಷಣ ಸರ್ವತೋಮುಖ ಪ್ರಶಂಸೆಗೆ ಭಾಜನವಾಗುವಂತೆ ಮಾಡಿದವರೂ ಅವರೆ. ಆಗ ಶಿವಮೊಗ್ಗದಿಂದ ನನ್ನನ್ನು ಬಸ್ಸಿನಲ್ಲಿ ಹರಿಹರಕ್ಕೆ ಕರೆದೊಯ್ದು, ಅಲ್ಲಿಂದ ರೈಲಿನಲ್ಲಿ ಹುಬ್ಬಳ್ಳಿಗೆ ತಡವಾಗಿ ಹೋಗಿ, ಸಮಿತಿಯವರು ಏರ್ಪಡಿಸಿದ್ದ ಆನೆಯ ಮೇಲೇರುವ ಮೆರವಣಿಗೆಯಿಂದ ನಾನು ಪಾರಾಗುವಂತೆ ಕೃಪೆ ಮಾಡಿದ್ದು ವೆಂಕಣ್ಣಯ್ಯನವರೆ! ಬಹುಶಃ ವೆಂಕಣ್ಣಯ್ಯನವರು ಹೋಗದಿದ್ದ ಯಾವ ಸಾಹಿತ್ಯ ಸಮ್ಮೇಲನಕ್ಕೂ ನಾನು ಹೋಗಿಲ್ಲವೆಂದು ಕಾಣುತ್ತದೆ, ಅವರು ಬದುಕಿದ್ದಷ್ಟು ಕಾಲವೂ!

ಪೂಜ್ಯ ವೆಂಕಣ್ಣಯ್ಯನವರ ವಿಚಾರವಾಗಿ ಅನೇಕ ಔದಾರ್ಯದ ಕಥೆಗಳನ್ನು ಕೇಳಿದ್ದೇನೆ. ಬಲಗೈ ಕೊಟ್ಟದ್ದನ್ನು ಎಡಗೈ ಅರಿಯಬಾರದು ಎಂಬುದಕ್ಕೆ ಅವರು ಜೀವಂತ ಸಾಕ್ಷಿಯಾಗಿದ್ದರು. ಎಷ್ಟು ಜನ ವಿದ್ಯಾರ್ಥಿಗಳು, ಮತ್ತೆಷ್ಟು ಆರ್ತರು ಯಾರೂ ಅರಿಯದ ರೀತಿಯಲ್ಲಿ ಅವರಿಂದ ಉಪಕೃತರಾಗಿದ್ದಾರೆಯೋ ಭಗವಂತನೊಬ್ಬನಿಗೇ ಗೊತ್ತು. ತಮಗೆ ಬರುತ್ತಿದ್ದ ಮಿತ ಆದಾಯದ ದೃಷ್ಟಿಯಿಂದ ನೋಡಿದರೆ, ಅವರು ಮಾಡುತ್ತಿದ್ದ ದಾನ ಅಮಿತವಾಗಿತ್ತೆಂದೇ ಹೇಳಬೇಕಾಗುತ್ತದೆ. ಗಂಭೀರ ಸಂದರ್ಭಗಳ ಮತ್ತು ದೊಡ್ಡ ದೊಡ್ಡ ಕೊಡುಗೆಗಳ ಮಾತಂತಿರಲಿ, ಅತ್ಯಂತ ಅಲ್ಪವೆಂದು ತೋರುವ ಈ ಒಂದು ಲಘು ನಿದರ್ಶನದಲ್ಲಿಯೂ ಅವರ ಔದಾರ್ಯದ ಸ್ವರೂಪ ಎಂತಹ ಅಲಘು ಪ್ರಮಾಣದಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ಗ್ರಹಿಸಬಹುದು, ಘಟನಾಧ್ವನಿ ಗ್ರಹಣ ಸಾಮರ್ಥ್ಯವುಳ್ಳ ಸಹೃದಯ ಚೇತನ.

ಗುಲ್ಬರ್ಗ ಸಾಹಿತ್ಯ ಸಮ್ಮೇಲನದಲ್ಲಿ ಮಹಾರಾಜ ಕಾಲೇಜಿನ ಕರ್ಣಾಟಕ ಸಂಘದವರು ನನ್ನ 'ಯಮನ ಸೋಲು' ನಾಟಕವನ್ನು ಆಡುವುದೆಂದು ಗೊತ್ತಾಗಿತ್ತು. ಆಗ ಬೇಸಗೆಯ ರಜದ ಕಾಲವಾದ್ದರಿಂದ ವಿದ್ಯಾರ್ಥಿಗಳು ಅವರವರ ಊರಿಗೆ ಹೋಗಿದ್ದರು; ಆದ್ದರಿಂದ ನಾಟಕದಲ್ಲಿ ಪಾತ್ರವಹಿಸುವವರು ಈ ಸಮ್ಮೇಲನಕ್ಕೆ ಮೊದಲೆ ಗುಲ್ಬರ್ಗಕ್ಕೆ ತಾವುತಾವೆ ಬಿಡಬಿಡಿಯಾಗಿ ಹೊಗುವುದೆಂದು ಗೊತ್ತಾಗಿತ್ತು. ಆದರೆ ಸತ್ಯವಾನ ಪಾತ್ರಧಾರಿ ಕಾಯಿಲೆ ಬಿದ್ದುದರಿಂದ ತಾನು ಬರುವ ಸ್ಥಿತಿಯಲ್ಲಿಲ್ಲ ಎಂದು ಕೊನೆಯ ಗಳಿಗೆಯಲ್ಲಿ ತಿಳಿಸಿಬಿಟ್ಟನಂತೆ. ಮತ್ತೊಬ್ಬನನ್ನು ಆ ಪಾತ್ರ ವಹಿಸುವಂತೆ ಮಾಡಿ, ಅವನಿಗೆ ಅಭ್ಯಾಸ ಕೊಡುವಷ್ಟು ಸಮಯವೂ ಇರಲಿಲ್ಲ. ಆದ್ದರಿಂದ ವೆಂಕಣ್ಣಯ್ಯನವರು ತಂತಿ ಕೊಟ್ಟರು, ಕುಪ್ಪಳಿಯ ಮಲೆಗಳಲ್ಲಿ ಅಲೆಯುತ್ತಿದ್ದ ನನಗೆ. ಪರಿಸ್ಥಿತಿಯ ಮಿಷಮತೆಯನ್ನರಿತು ನಾನೂ, ಶಿವಮೊಗ್ಗದ ಇಬ್ಬರು ಮಿತ್ರರೊಡನೆ, ಗುಲ್ಬರ್ಗಕ್ಕೆ ಧಾವಿಸಿದೆ. ವೆಂಕಣ್ಣಯ್ಯನವರಿಗೆ ಮಹಾದಾನಂದ!

ಬಿ.ಎಂ.ಶ್ರೀಯವರ ಅಧ್ಯಕ್ಷತೆಯ ಭಾಷಣ ಮತ್ತು 'ಗದಾಯುದ್ಧ' 'ಯಮನಸೋಲು' ನಾಟಕಗಳ ಪ್ರದರ್ಶನದ ರೋಮಾಂಚಕ ಸ್ವಾರಸ್ಯದ ಕಥೆ ಇಲ್ಲಿ ಬೇಡ.

ಗುಲ್ಬರ್ಗವನ್ನು ಕಲ್ಬುರ್ಗಿ ಎಂದು ಕರೆಯುತ್ತಾರೆ. ಎಲ್ಲಿ ನೋಡಿದರು ಕಲ್ಲು, ಕಡಪಾ ಕಲ್ಲು! ನೆಲಕ್ಕೆ ಕಲ್ಲು, ಕಿಟಕಿಗೆ ಕಲ್ಲು, ಬಾಗಿಲಿಗೆ ಕಲ್ಲು, ಮೇಲೆ ತಾರಸಿಗೂ ಕಲ್ಲು! ಎಲ್ಲೆಲ್ಲೂ ಕಲ್ಲು, ಕಲ್ಲು! ಜೊತೆಗೆ ಕಡುಬೇಸಗೆ! ಸುಡುಬಿಸಿಲು! ಉರಿ, ಉರಿ, ಉರಿ! ನಲ್ಲಿ ತಿರುಗಿಸಿದರೆ, ನಡುಹಗಲಿರಲಿ. ಪ್ರಾತಃಕಾಲದಲ್ಲಿಯೂ ಕೊತ ಕೊತ ಕೊತ ಕುದಿಯುತ್ತಿದ್ದ ನೀರು! ಅದಕ್ಕೆ ಬೆರಸಿಕೊಳ್ಳಲು ತಣ್ಣೀರು ತರುವುದೆಲ್ಲಿಂದ? ನಮಗೆ ಒಂದು ಸ್ಕೂಲಿನ ಕಟ್ಟಡ ಬಿಟ್ಟುಕೊಟ್ಟಿದ್ದರು ಇಳಿದುಕೊಳ್ಳುವುದಕ್ಕೆ. ಹಗಲಲ್ಲಿ ಅದರೊಳಗೆ ಉರಿಬಿಸಿಲಿನಿಂದ ತಪ್ಪಿಸಿಕೊಳ್ಳಲು ಅನಿವಾರ್ಯವಾಗಿ ಇರಲೇಬೇಕಾಗಿತ್ತು. ಆದರೆ ಇರಳು ಇಣಿಕಿದೊಡನೆಯೆ ಹೊರ ವರಾಂಡರೂಪದ ಮುಂಗಡೆಯ ಅಂಗಳಕ್ಕೆ ಹಾಸಗೆ ಸಮೇತ ಓಡಿಬಿಡುತ್ತಿದ್ದೆವು, ರಾತ್ರಿಯೆಲ್ಲಾ ತುಸುವೂ ಹೊದಿಕೆಯಿಲ್ಲದೆ ಮಾನ ಹೊರತಾಗಿ ಬತ್ತಲೆ ಮಲಗಲು, ಸಾಕಷ್ಟು ತಂಪಿನಲ್ಲಿ; ಅಥವಾ ಹಗಲಿನ ಉರಿಬಿಸಿಲಿಗೆ ಹೋಲಿಸದರೆ ತಂಪು ಎಂಬ ವಿಶೇಷಣಕ್ಕೆ ಆಲಂಕಾರಿಕವಾಗಿ ಮಾತ್ರ ಪಕ್ಕಾಗಬಹುದಾಗಿ ಬೀಸುತ್ತಿದ್ದ ಬಿಸಿಗಾಳಿಯಲ್ಲಿ!

ಅಲ್ಲಿ ಮಿದ್ಯುದ್ದೀಪಗಳಿರಲಿಲ್ಲ. ಲಾಟೀನು ಲ್ಯಾಂಪು ಲಾಂದ್ರಗಳನ್ನು ಕೊಟ್ಟಿದ್ದರು. ಒಂದು ಲಾಟೀನಿನ ಮಂದ ಬೆಳಕಿನ ಸುತ್ತ ನಮ್ಮ ನಮ್ಮ ಹಾಸಗೆ ಹಾಕಿಕೊಂಡು ನಾವು ಕೆಲವರು - ನಾರಾಯಣಶಾಸ್ತ್ರಿ, ಕೃಷ್ಣಮೂರ್ತಿ, ಪುಟ್ಟನಂಜಪ್ಪ ಇತ್ಯಾದಿ - ಕುಳಿತು ಹರಟುತ್ತಿದ್ದೆವು. ಸ್ವಲ್ಪ ದೂರದಲ್ಲಿ ಮತ್ತೊಂದು ಬೆಳಕಿನ ಪಕ್ಕದಲ್ಲಿ ವೆಂಕಣ್ಣಯ್ಯನವರೂ ಕೃಷ್ಣಶಾಸ್ತ್ರಿಗಳೂ ತಮ್ಮ ಹಾಸಗೆಗಳಿಗೆ ಒರಗಿ ಏನನ್ನೊ ಮಾತಾಡಿಕೊಳ್ಳುತ್ತಿದ್ದರು.

ಇದ್ದಕ್ಕಿದ್ದಹಾಗೆ ನನಗೆ ದಿಕ್ಕು ತೋಚದಂತಾಯ್ತು! ಗಾಬರಿಯಾಯ್ತು! ಮುಂದೇನು ಮಾಡುವುದು? ನನ್ನ ನಶ್ಯದ ಡಬ್ಬಿ ಖಾಲಿಯಗಿದೆ! ಕೆರಸಿದರೂ ಒಂದೂ ಚೂರೂ ನಶ್ಯ ಬರುತ್ತಿಲ್ಲ! ಏನು ಮಾಡುವುದು? ಜೊತೆಯಲ್ಲಿದ್ದ ಯಾರನ್ನೂ ಕೇಳಿದರೂ ಯಾರೂ ನಶ್ಯ ಹಾಕುವವರಿರಲಿಲ್ಲ! ಬೇರೆ ದುಶ್ಚಟಗಳಲ್ಲಿ ನಿಷ್ಣಾತರಾದವರಿದ್ದರೂ ಇದೊಂದನ್ನು ಮಾತ್ರ ತ್ಯಾಗ ಮಾಡಿರಬೇಕೇ ಅವರು? ಒಟ್ಟು ನನ್ನ ದುರದೃಷ್ಟ! ನನಗಂತೂ ಬದುಕೇ ಶೂನ್ಯವಾದಂತಾಗುತ್ತಿತ್ತು, ನಶ್ಯ ಇಲ್ಲದ್ದರಿಂದ ಅದರಲ್ಲಿಯೂ ಡಬ್ಬಿಯಲ್ಲಿ ನಶ್ಯ ಇದ್ದಾಗ, ಬೇಕೆಂದರೆ ಸ್ವಲ್ಪ ಸಂಯಮ ತೋರಿಸಲು ಸಾಧ್ಯವಾಗುತ್ತಿತ್ತು. ದೊಡ್ಡವರ ಸಮ್ಮುಖದಲ್ಲಿ ಹೇಗೆ ಸೇದುವುದು ಎಂದು ಒಂದು ಹತ್ತೋ ಇಪ್ಪತ್ತೋ ನಿಮಿಷ ತಡೆದರೂ ತಡೆಯಬಹುದಾಗಿತ್ತು. ಆದರೆ ಈಗ? ಡಬ್ಬಿಯಲ್ಲಿ ನಶ್ಯ ಏನೂ ಇಲ್ಲ ಎಂದು ತಿಳಿದೊಡನೆ, ನಶ್ಯಹಾಕುವ ಚಟ ನೆತ್ತಿಗೇರಿಬಿಟ್ಟಿತ್ತು. ನಶ್ಯವಿಲ್ಲದಿದ್ದರೆ ಯಾವುದಾದರೂ ಒಳಗಿದ ಎಲೆಯನ್ನೆ ಕಡೆಗೆ ಮಣ್ಣಾದರೆ ಮಣ್ಣನ್ನೆ, ಪುಡಿಮಾಡಿ ಹಾಕಿಕೊಳ್ಳಲೇ ಎಂಬಂತಾಗುತ್ತಿತ್ತು.

ಅಷ್ಟರಲ್ಲಿ ಕಂಡಿತು, ಸ್ವರ್ಗದ್ವಾರ ಬಾಗಿಲು ತೆರೆದದ್ದು! ಅವರ ಲಾಟೀನಿನ ಮಂದಕಾಂತಿಯ ಪರಿವೇಷದಲ್ಲಿ 'ಷಿಲೊಟ್ಟೆ'ಯಾಗಿ ಕಾಣಿಸಿತು, ನಶ್ಯದ ಚಿಟಿಗೆ ಹಿಡಿದು, ವರದ ಹಸ್ತವೆಂಬಂತೆ, ಮೂಗಿನೆಡಗೇರುತ್ತಿದ್ದ ವೆಂಕಣ್ಣಯ್ಯನವರ ಕೈ!

ಅವರು ನಮ್ಮೊಡನೆ ಎಷ್ಟು ಸಲಿಗೆಯಿಂದ ನಡೆದುಕೊಳ್ಳುತ್ತಿದ್ದರೂ ಪ್ರೊಫೆಸರ್ ಆದವರಿಂದ ನಶ್ಯ ಕೇಳುವ ಮಟ್ಟಕ್ಕೆ ಏರಿರಲಿಲ್ಲ ನಮ್ಮ ವಿದ್ಯಾರ್ಥಿತ್ವ, ಆಗಿನ ಕಾಲದಲ್ಲಿ. ವಿದ್ಯಾರ್ಥಿಯಾದವನಿಗೆ ನಶ್ಯಹಾಕುವ ದುರಭ್ಯಾಸವೂ ನಿಷಿದ್ಧ

ಧರ್ಮ ಎಂಬ ಭಾವನೆ ನನಗೆ. ನಾನು ನಶ್ಯಹಾಕುತ್ತಿದ್ದುದು ವೆಂಕಣ್ಣಯ್ಯನವರಿಗೆ ಏನೇನೂ ತಿಳಿಯದೆಂದೂ ಭಾವಿಸದ್ದೆ! ಅವರ ಕಣ್ಣಿಗೆ ಅಷ್ಟು ಶುಚಿಭೂರ್ತನಾಗಿದ್ದ ನಾನು, ನನ್ನನ್ನು ಅಷ್ಟೊಂದು ಮೆಚ್ಚಿಕೊಂಡಿದ್ದ ಅವರಿಗೆ, ಅವರು ಎಂದೆಂದೂ ನಿರೀಕ್ಷಿಸದೆ ಇದ್ದ ನನ್ನ ಆ ವರ್ತನೆಯಿಂದ ಮಾನಸಾಘಾತ ಉಂಟುಮಾಡಿಬಿಡುತ್ತೇನೆಯೊ ಎಂಬ ಅಳುಕು. ಆದರೂ ನಶ್ಯದ ಚಟದ ನಿಷ್ಪೀಡನೆಗೆ ಸಿಕ್ಕಿದ್ದು ಲಿವಿಲಿವಿ ಇದ್ದಾಡಿಕೊಳ್ಳುತ್ತಿದ್ದ ನನ್ನಾತ್ಮ ತನ್ನ ಮನಸ್ಸು ಗಟ್ಟಿಮಾಡಿಕೊಂಡು ಮಿತ್ರರ ಧೈರ್ಯಪ್ರಚೋದನೆಯ ಮುಚ್ಚುನಗೆಯನ್ನೆ ನಿಜವೆಂದು ನಂಬಿ, ನೆಮ್ಮಿ, ಎದ್ದು ಬಳಿಸಾರಿದೆ. ಬಳಿಗೆ ಬಂದು ನಿಂತ ನನ್ನನ್ನು ನೋಡಿ "ಏನು ಪುಟ್ಟಪ್ಪ!" ಎಂದು ಕತ್ತೆತ್ತಿ ನೋಡಿದರು. "ಸ್ವಲ್ಪ ಶೀತ ಆಗಿದೆ ಸಾರ್ ಒಂದು ಚುಟಿಕೆ ನಶ್ಯ ಬೇಕಿತ್ತು!" ಎಂದು ಹಲ್ಲುಬಿಟ್ಟೆ. ಆ ಬೆಟ್ಟ ಬೇಸಗೆಯಲ್ಲಿ ಅದರಲ್ಲಿಯೂ ಗುಲ್ಬರ್ಗದ ಉರಿಯಲ್ಲಿ ಶೀತವಂತೆ! ಅವರಿಗೆ ಎಲ್ಲವೂ ತಿಳಿದುಹೋಗಿತ್ತು!! ನಾನು ಕೇಳಿದ್ದಂತೆ ಅವರೆಲ್ಲಿಯಾದರೂ ಒಂದೇ ಚುಟಿಕೆ ನಶ್ಯ ಕೊಟ್ಟು ಕಳಿಸಿದ್ದರೆ ಏನು ಗತಿ! ನಾನು ತಿಳಿದುಕೊಂಡಿದ್ದೆ, ಅವರು ಎಡಗೈಯಲ್ಲಿ ಹಿಡಿದುಕೊಂಡಿದ್ದ ಅವರ ಸಣ್ಣ ನಶ್ಯದ ಡಬ್ಬಿಯಿಂದಲೆ ಒಂದು ಚುಟಿಕೆ ತೆಗೆದುಕೊಡುತ್ತಾರೆ ಎಂದು. ಅವರು ಹೇಳಿದರು, ಗುಟ್ಟಾವುದನ್ನೂ ಗ್ರಹಿಸಲಿಲ್ಲ ಎಂಬಂತೆ ನಿರ್ಭಾವವಾಗಿ, ನನ್ನ ಮರ್ಯಾದೆಗೆ ಇನಿತೂ ಧಕ್ಕೆಯಾಗದಂತೆ: "ನೋಡಿ, ಅಲ್ಲಿ, ನನ್ನ ಟ್ರಂಕ್ ಇದೆ. ಅದರಿಂದ ತೆಗೆದುಕೊಳ್ಳಿ!" ಎಂದು. ನನಗೋ ಗಣಿಗೇ ಆಹ್ವಾನಕೊಟ್ಟಂತಾಯ್ತು! ನಾನು ಅವರ ಟ್ರಂಕಿನ ಬಾಗಿಲು ಎತ್ತಿನೋಡಿದೆ, ಮೆರೆಯುತ್ತಿತ್ತು ದೊಡ್ಡದೊಂದು ಟಿನ್ ಡಬ್ಬಿ! ಅದರಿಂದೇನೋ ಒಂದು ಚಿಟಿಕೆ, ಬಲವಾದ ಒಂದು ಚಿಟಿಕೆ ನಶ್ಯ ತೆಗೆದುಕೊಂಡೆ, ಆದರೆ ನನ್ನ ಡಬ್ಬಿಗೆ ಗಿತ್ತುಗರ್ದು ಒತ್ತಿ ಒತ್ತಿ ಇನ್ನೊಂದು ಚೂರೂ ತುಂಬಲು ಸಾಧ್ಯವಿಲ್ಲ ಎಂದು ಖಾತ್ರಿ ಮಾಡಿಕೊಂಡು ತರುವಾಯವೆ!!

೪

ವೆಂಕಣ್ಣಯ್ಯನವರಿಗೆ ನನ್ನ ಮೇಲೆ ಅಪಾರ ಆಬಿಮಾನ. ನನ್ನ ಪರೋಕ್ಷದಲ್ಲಿ ಇತರರೊಡನೆ ನನ್ನನ್ನು ನಿರ್ದೇಶಿಸಿ 'ಹಿಂದೆ ಇರಲಿಲ್ಲ, ಮುಂದೆ ಬರುವುದಿಲ್ಲ': 'ನ ಭೂತೋ ನ ಭವಿಷ್ಯತಿ' ಎಂಬಂತೆ ಮೆಚ್ಚುತ್ತಿದ್ದರು ಎಂಬುದನ್ನೂ ಕೇಳಿದ್ದೇನೆ. ಅದು ಎಷ್ಟರಮಟ್ಟಿಗೆ ದಿಟವೋ ಸಟೆಯೋ ನಾನು ಹೇಳಲಾರೆ. ಏಕೆಂದರೆ ಅವರು ತೀರಕೊಳ್ಳುವುದಕ್ಕೆ ಮೊದಲು ನನ್ನ ಕೆಲವು ಉತ್ಕೃಷ್ಟ ಕೃತಿಗಳು ಇನ್ನೂ ಹೊರಬಂದಿರಲಿಲ್ಲ. 'ಕಾನೂರು ಹೆಗ್ಗಡಿತಿ' ಯನ್ನು ಅವರು ಅರ್ಧಮಾತ್ರ ಓದಿದ್ದರು. ಅದು ನಾಲ್ಕೈದು ಪುಸ್ತಕಗಳಲ್ಲಿ ಬೇರೆ ಬೇರೆಯಾಗಿ ಅಚ್ಚಾಗುತ್ತಿತ್ತು. ಮಧ್ಯೆ ಒಮ್ಮೆ ಆಗತಾನೆ ಅಚ್ಚಾದ ಎರಡು ಮೂರನೆಯ ಭಾಗಗಳನ್ನು ಅವರಿಗೆ ಕಳಿಸಿದಾಗ, ಅವನ್ನು ಗುಳುಕ್ಕನೆ ಓದಿ ಪೂರೈಸಿ, ಹೇಳಿದರಂತೆ: "ಅವರಿಗೆ ಹೇಳು, ಇಷ್ಟು ಸ್ವಲ್ಪ ಗ್ರಾಸ ನಮಗೆ ಸಾಲದು ಅಂತಾ."

'ಮಲೆನಾಡಿನ ಚಿತ್ರ'ಗಳಂತೂ ಅವರ ಪ್ರೇರಣೆಯಿಂದ ಅವರಿಗಾಗಿಯೆ ಬರೆದದ್ದು ಎನ್ನಬಹುದು. ಅದನ್ನು ಆ ಪುಸ್ತಕದ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದೇನೆ. ಒಮ್ಮೆ ಅವರು ಚಿಕ್ಕಮಗಳೂರಿನಲ್ಲಿ ಬೇಸಗೆ ಸಮಯದಲ್ಲಿ ನಡೆದ ಪ್ರಚಾರೋಪನ್ಯಾಸ ಸಪ್ತಾಹಕ್ಕೆ ಬಂದಿದ್ದರು. ನಾನು ಕೆಲವು ಮಿತ್ರರೊಡನೆ ಅವರ ಕಾರಿನಲ್ಲಿ ಅಲ್ಲಿಗೆ ಹೋಗಿದ್ದೆ. ಕಾರ್ಯಕ್ರಮದಲ್ಲಿ ನನ್ನದೇನೂ ಅಚ್ಚಾಗಿರಲಿಲ್ಲ. ಆದರೆ ವೆಂಕಣ್ಣಯ್ಯನವರ ಅನುರೋಧದ ಮೇಲೆ ನಾನು ಕಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಕುರಿತು ಮಾತಾಡಿದೆ. ಅದು ಎಲ್ಲರಿಗೂ ತುಂಬ ಮೆಚ್ಚುಗೆಯಾಯಿತು. ನನ್ನ ನೆನಪು

ಸರಿಯಾದರೆ, ಬಹುಶಃ ಆ ಸಭೆಯಲ್ಲಿ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು (ಅವರು ಆ ಜಿಲ್ಲೆಯ ಮುಖ್ಯಾಧಿಕಾರಿಯಾಗಿದ್ದರೆಂದು ತೋರುತ್ತದೆ) ಸರ್ ಕೆ.ಪಿ. ಪುಟ್ಟಣ್ಣಶೆಟ್ಟರೂ ಇದ್ದರೆಂದು ತೋರುತ್ತದೆ. ಆ ಸಪ್ತಾಹ ಮುಗಿದ ಮೇಲೆ ವೆಂಕಣ್ಣಯ್ಯನವರನ್ನು ನಮ್ಮೂರಿಗೆ ಕರೆದೊಯ್ದೆವು. ತೀ.ನಂ. ಶ್ರೀಕಂಠಯ್ಯ, ಜಿ. ಹನುಮಂತರಾಯರು, ನಾ. ಕಸ್ತೂರಿ ಇವರೂ ಜೊತೆ ಬಂದಿದ್ದರು. ಆಗ ಕುಪ್ಪಳಿಯ ಬಳಿ ಕವಿಶೈಲಕ್ಕೂ ಸಂಜೆಗಿರಗೂ ಹೋಗಿ ಅರಣ್ಯಗಿರಿ ಶ್ರೇಣಿಗಳಲ್ಲಿ ಸಂಧ್ಯಾಸೂರ್ಯನ ಇಳಿದು ಮುಳುಗುವ ದೃಶ್ಯವನ್ನು ಅವರು ದರ್ಶಿಸಿ, ನನ್ನ ಕಾವ್ಯದಲ್ಲಿ ಬರು ಪ್ರಕೃತಿ ವೈಭವದ ವರ್ಣನೆಗಳಿಗೆ ಮೂಲ ಆಕರವನ್ನು ಗುರುತಿಸಿದ್ದರು.

ಕುಪ್ಪಳಿಯಿಂದ ಇಂಗ್ಲಾದಿಗೆ ಹೋಗಿ, ರಾತ್ರಿ ದಿವಂಗತ ಡಿ.ಆರ್. ವೆಂಕಟಯ್ಯನವರ ಅತಿಥಿಗಳಾಗಿದ್ದು, ಬೆಳಿಗ್ಗೆ ಮುಂಚೆ ಅಂದರೆ ಸಮಾರು ನಾಲ್ಕು ಗಂಟೆಗೇ ಎದ್ದು, ಎರಡು ಮೈಲಿ ದೂರವಿರುವ 'ನವಿಲುಕಲ್ಲಿ'ನ ನೆತ್ತಿಗೆ ನಡೆದುಕೊಂಡೆ ಹೋಗಿ ಉಷಃಕಾಲಕ್ಕೆ ಮುನ್ನವೆ ಸೇರಿದೆವು: ಉಷೆಯ, ಅರುಣೋದಯದ ಮತ್ತು ಸೂರ್ಯೋದಯದ, ಮಾತೆಂಜಲಾಗಲು ಎಂದಿಗೂ ಸಾಧ್ಯವಲ್ಲದ ದೇವವೈಭವದ ಸೌಂದರ್ಯವನ್ನು, ಗಂಟೆ ಗಟ್ಟಲೆ, ಮಾತು ಸತ್ತು, ಕಣ್ಣೊಂದೆಯಾಗಿ ಕಂಡೆವು. ತುದಿಯಲ್ಲಿ ನಿಟ್ಟುಸಿರು ಬಿಟ್ಟು ಮೌನಭಂಗ ಮಾಡಿದರು ವೆಂಕಣ್ಣಯ್ಯನವರು "ಪುಟ್ಟಪ್ಪ, ಇದನ್ನು ಹಿಡಿದಿಟ್ಟುಕೊ!"

ವೆಂಕಣ್ಣಯ್ಯನವರು ನನ್ನ ಭಾವಗೀತೆಗಳಲ್ಲಿ ಪ್ರಕೃತಿ ಸೌಂದರ್ಯವರ್ಣನೆಗಳನ್ನು ಕೇಳಿದಾಗಲೆಲ್ಲ ಭಾವವಶರಾದಂತೆ ಆಗುತ್ತಿದ್ದರು. ಒಮ್ಮೆ 'ತಾನಾಜಿ'ಯನ್ನು ಅವರಿಗೆ ಓದುತ್ತಿದ್ದಾಗ ಅಲ್ಲಿ ಬರುವ ಕೃಷ್ಣಪಕ್ಷದ ನವಮಿಯ ಚಂದ್ರೋದಯದ ವರ್ಣನೆಯನ್ನು ಕೇಳಿ ಭಾವಸಮಾಧಿಸ್ಥರಾದಂತೆ ಆಗಿದ್ದರು. ಇನ್ನೊಮ್ಮೆ 'ಫಾಲ್ಗುಣ ಸೋರ್ಯೋದಯ'ವನ್ನು ನಾನು ಭಾವಪೂರ್ಣವಾಗಿ ವಾಚಿಸಲು, ಕುರ್ಚಿಯಿಂದ ನೆಗೆದೆದ್ದು, ಮೂಗಿಗೆ ನಶ್ಯ ಏರಿಸುತ್ತಾ, ನಾನೆ ಅವರ ಎದುರಾಳಿ ಎಂಬಂತೆ "ಹೇಳ್ರಿ! ಹೇಳ್ರಿ! ಎಲ್ಲಿದೆ ಇಂತಹ ಕಾವ್ಯ, ಹಿಂದಿನವರಲ್ಲಾಗಲಿ, ಇಂದಿನವರಲ್ಲಾಗಲಿ?" ಎಂದು ನನಗೇನೆ ಮುಡಿಗೆ ಎಸೆದಿದ್ದರು!

ವೆಂಕಣ್ಣಯ್ಯನವರೂ ನಾನು ಇಬ್ಬರೆ ಸೇರಿದ್ದಾಗ ನಾವು ಯಾವಾಗಲೂ ಆಧ್ಯಾತ್ಮಿಕ ಮತ್ತು ಸಾಹಿತ್ಯಕ ವಿಚಾರಗಳನ್ನಲ್ಲದೆ ಬೇರೆ ಕಾಡುಹರಟೆಯ ಹವ್ಯಾಸಕ್ಕೆ ಹೋಗುತ್ತಲೆ ಇರಲಿಲ್ಲ. ಸ್ಥಾನ, ಮಾನ, ವೃತ್ತಿ, ದರ್ಜೆ, ಸಂಬಳ, ಬಡ್ತಿ, ಪ್ರಮೋಷನ್ ಗಿಮೋಷನ್ ಇವೊಂದೂ ಅಲ್ಲಿ ಸುಳಿಯುತ್ತಿರಲಿಲ್ಲ.

ಒಮ್ಮೆ ಶ್ರೀರಂಗಪಟ್ಟಣದಲ್ಲಿ ಯುವಜನ ಸಮ್ಮೇಲನದ ಸಂದರ್ಭದಲ್ಲಿ ಬಿ.ಎಂ. ಶ್ರೀಯವರ ಅಧ್ಯಕ್ಷತೆಯಲ್ಲಿ ನಾನು 'ಯುವಕರು ನಿರಂಕುಶಮತಿಗಳಾಗಬೇಕು!' ಎಂಬ ಭಾಷಣ ಮಾಡಿದೆ. ಪತ್ರಿಕೆಗಳಲ್ಲಿ ಕ್ರೋಧಯುಕ್ತವಾದ ಅನೇಕ ಟೀಕೆಗಳು ಬಂದು ಕೋಲಾಹಲವೆದ್ದಿತು. ದೂರು ವಿಶ್ವವಿದ್ಯಾನಿಲಕ್ಕೂ ಹೋಯಿತು. ವಿಶ್ವವಿದ್ಯಾನಿಲಯ ತನಿಖೆ ನಡೆಸಲು ಇಲಾಖೆಯ ಮುಖ್ಯಸ್ಥರೂ ಪ್ರೊಫೆಸರೂ ಆಗಿದ್ದ ವೆಂಕಣ್ಣಯ್ಯನವರನ್ನು ನೇಮಿಸಿತು. ಅವರು ಆ ಭಾಷಣದ ಪ್ರತಿ ತರಿಸಿಕೊಂಡು ಓದಿ ವಿಶ್ವವಿದ್ಯಾನಿಲಕ್ಕೆ ಬರೆದರಂತೆ. "ನನ್ನ ಮಗನಿಗೆ ನಾನು ಬುದ್ಧಿ ಹೇಳಬೇಕಾದರೆ ಇದಕ್ಕಿಂತಲೂ ಉತ್ತಮವಾಗಿ ಮತ್ತು ಸಮರ್ಥವಾಗಿ ನಾನು ಏನನ್ನೂ ಹೇಳಲಾರೆ." ಎಂದು.

ಕನ್ನಡ ಸಾಹಿತ್ಯದ ನವೋದಯದ ಅಂದಿನ ಉತ್ಸಾಹದ ಮತ್ತು ಉಲ್ಲಾಸದ ದಿನಗಳಲ್ಲಿ ನಾನು ಸಾವಿರಾರು ಜನರು ನೆರೆದ ಅನೇಕ ಸಭೆಗಳಲ್ಲಿ ಗಂಟೆಗಟ್ಟಲೆ ನನ್ನ ಕವನಗಳನ್ನೂ ನಾಟಕಗಳನ್ನೂ ವಾಚಿಸುತ್ತಿದ್ದುದುಂಟು. ಅಂತಹ ಅನೇಕ ಸಂದರ್ಭಗಳಲ್ಲಿ ಶ್ರೀ ವೆಂಕಣ್ಣಯ್ಯನವರು ಅಧ್ಯಕ್ಷರಾಗಿಯಾಗಲಿ ಅಥವಾ ಸನ್ಮಾನ್ಯ ಪ್ರೇಕ್ಷಕರಾಗಿಯಾಗಲಿ ಹಾಜರಿರುತ್ತಿದ್ದದೂ ಉಂಟು. ಯಾವ ಸಭೆಗಾಗಲಿ ವೆಂಕಣ್ಣಯ್ಯನವರ ನಸುವೆ ಬಾಗಿದ ಉನ್ನತ ದೇಹಶ್ರೀ ಪ್ರವೇಶಿಸಿತು ಎಂದರೆ ಅದರ ಗಾಂಭೀರ್ಯ ಅಧಿಕಗೊಳ್ಳುತ್ತಿತ್ತು: ಅದಕ್ಕೊಂದು ತೂಕ ಒದಗುತ್ತಿತ್ತು. ಅದರ ಗರುತ್ವ ಹೃದಯಗಗನ ಸ್ಪರ್ಶಿಯಾಗುತ್ತಿತ್ತು. ನನಗಂತೂ ಅವರೊಬ್ಬರ ಸಾನ್ನಿಧ್ಯವೆ ಉಳಿದ ಸಾವರಾರು ಮಂದಿಯ ಇರುವಿಕೆಯನ್ನೂ ನುಂಗಿ ನಿಂತಂತಾಗುತ್ತಿತ್ತು. ಅವರೊಬ್ಬರಿಗಾಗಿಯೆ ಗಂಟೆಗಟ್ಟಲೆ ಬೇಕಾದರೂ ಕವನ ವಾಚನ ಮಾಡುವ ಹುಮ್ಮಸ್ಸು ಉಂಟಾಗುತ್ತಿತ್ತು. ಅಂತಹ ಸಹೃದಯ ವರೇಣ್ಯರಾಗಿದ್ದರವರು: ಕುಶಾಗ್ರಮತಿಯ ವಸ್ತುಪ್ರವೇಶನಶಕ್ತಿಯೂ ಭಾವಯಿತ್ರಿಕಲ್ಪನಾ ಪ್ರತಿಭೆಯ ದರ್ಶನಧ್ವನಿ ಗ್ರಹಣಕಾರಿಯಾದ ರಸಾನುಭವಸಾಮರ್ಥ್ಯವೂ ಅವರದಾಗಿತ್ತು. ಅವರ 'ಶ್ಲಾಘನೆ' ಲಭಿಸಿತೆಂದರೆ ಜಗತ್ತಿನ ಒಬ್ಬ ಮಹೋನ್ನತ ಮೇಧಾವೀ ವಿಮರ್ಶಕನ ಸರ್ಟಿಫಿಕೇಟು ದೊರೆತಂತೆಯೆ ಆಗುತ್ತಿತ್ತು. ಏಕೆಂದರೆ ಅವರೇನು ಬಡಪಟ್ಟಿಗೆ ಮೆಚ್ಚುವ ಅಸಾಮಿ ಆಗಿರಲಿಲ್ಲ! ತಮ್ಮ ಸ್ವಂತ ಬರವಣಿಗೆಯೆ ಆಗಲಿ ಅನ್ಯರದ್ದೆ ಆಗಲಿ ಅವರ ಹೃದಯದ ಮತ್ತು ಬುದ್ಧಿಯ ಕಠೋರ ಒರೆಗಲ್ಲಿನಲ್ಲಿ ಮೋರೆ ತಿಕ್ಕಿಸಿಕೊಳ್ಳುವ ಉಗ್ರಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಅವಕ್ಕೆ ಕಸದಬುಟ್ಟಿಯೆ ಪರಂಧಾಮವಾಗ ಬೇಕಾಗುತ್ತಿತ್ತು.

ಅವರು ಪರಂಧಾಮವನ್ನೈದುವ ಕಾಲಕ್ಕೆ ಸ್ವಲ್ಪ ಮುನ್ನವೆ ನನ್ನ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ರಚನೆ ಪ್ರಾರಂಭವಾಗಿತ್ತು. ಅದರ ವಿಚಾರವಾಗಿ ಒಮ್ಮೊಮ್ಮೆ ಅವರಿಗೆ ಹೇಳುತ್ತಲೂ ಇದ್ದೆ. ಒಂದು ದಿನ ಕಾಲೇಜಿನಲ್ಲಿ ನನ್ನ ಪಾಠ ಪೂರೈಸಲು ಮನೆಗೆ ಹೊರಡುವ ಮುನ್ನ ಪ್ರಾಧ್ಯಾಪಕರಿಗೆ ಮೀಸಲಾಗಿದ್ದ ಅವರ ಕೊಠಡಿಗೆ ಹೋದೆ. ಅವರು ವಿರಾಮವಾಗಿ ಕೂತಿದ್ದರು. ಎಂದಿನಂತೆ ಹಸನ್ಮುಖಿಗಳಾಗಿ ಸ್ವಾಗತಿಸಿದರು. ಅದೂ ಇದೂ ಮಾತಾಡುತ್ತಾ ನನ್ನ ಮಹಾಕಾವ್ಯ ಎಲ್ಲಿಗೆಬಂತು ಎಂದು ಕೇಳಿದರು. ನಾನು ಅಹಲ್ಯಾ ಶಾಪವಿಮೋಚನೆಯವರೆಗೆ ಬಂದಿದೆ ಎಂದು ಹೇಳಿ, ಅದರ ರೀತಿಯನ್ನು ಕುರಿತು ಎರಡು ಮಾತಾಡಿದೆ. ಆಗತಾನೆ ಬರೆದಿದ್ದುದರಿಂದ ನೆನಪಿಗೆ ಬಂದ ಕೆಲವು ಪಂಕ್ತಿಗಳನ್ನೂ ಹೇಳಿದೆ. ಆ ಘಟನೆಯಲ್ಲಿ ಹುದುಗಿರುವ ಪ್ರತಿಮಾದೃಷ್ಟಿಯನ್ನೂ ದರ್ಶನಧ್ವನಿಯನ್ನೂ ಸಾರಾಂಶವಾಗಿ ತಿಳಿಸಿದೆ. ಅವರ ಮೊದಮೊದಲ ಉದಾಸೀನತೆ ಬರುಬರುತ್ತಾ ಆಸಕ್ತಿಯಾಗಿ, ಕಡೆಕಡೆಗೆ ಅತ್ಯಂತ ರಸಾವೇಶದ ಕುತೂಹಲವಾಯಿತು. "ನಮಿಸಿದನು ರಘುಜನುಂ ಗೌತಮಸತಿಯ ಪದಕೆ ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ!" ಎಂಬ ಕೊನೆಯ ಪಂಕ್ತಿಗಳನ್ನು ಹೇಳಿ ಮುಗಿಸಿದ್ದೆನೊ ಇಲ್ಲವೊ ಕಣ್ಮುಚ್ಚಿ ಧ್ಯಾನಸ್ಥರಾದಂತೆ ಕುಳಿತರು. ತಾವು ಕೇಳಿದುದರ ಮಹತ್ತನ್ನು ಅನುಭಾವಿಸುವಂತೆ!.... ಆಮೇಲೆ ಅವರು ಏನು ಹೇಳಿದರು ಎಂಬುದನ್ನು ನಾನಿಲ್ಲಿ ಬರೆಯಲೊಲ್ಲೆ.

"ಒಂದು ದಿನ ನಿಮ್ಮ ಮನೆಗೆ ಬರುತ್ತೇನೆ. ನೀನು ಬರೆದಷ್ಟನ್ನೂ ಓದಬೇಕು" ಎಂದರು ಅತ್ಯಂತ ಹೆಮ್ಮೆಯ ಹಿಗ್ಗಿನಿಂದ 'ಆಗಲಿ ಸಾರ್!' ಎಂದೆ.

"ನಿಮ್ಮ ಮನೆಗೆ ಬರೋದು ಅಂದರೇ ಒಂದು ಯಾತ್ರೆ ಮಾಡಿದ ಹಾಗಾಗುತ್ತದೆ. ಎಲ್ಲೊ ಮೈಸೂರಿನಾಚೆ ಒಂಟಿಕೊಪ್ಪಲಿನಲ್ಲಿ ಮನೆಮಾಡಿಬಿಟ್ಟಿದೀಯ!" ಎಂದರು.

"ಯಾವಾಗ ಬರ್ತೀರಿ ಹೇಳಿ?" ಎಂದು ಕೇಳಿದೆ.

"ಮುಂದಿನ ಭಾನುವಾರ ಆಗಬಹುದೇ?"

"ಆಗಬಹುದು. ಬೆಳಿಗ್ಗೆ ಮುಂಚೆ ಬಂದುಬಿಡಿ. ಅಲ್ಲೇ ಕಾಫಿ ತಿಂಡಿ ಪೂರೈಸಬಹುದು."

ಗೊತ್ತಾದ ದಿನ ಬಂದರು. ಆದರೆ ಬೆಳಿಗ್ಗೆ ಮುಂಚೆ ಬರಲಿಲ್ಲ. ಸ್ನಾನಗೀನ ಮುಗಿಸಿ ಕಾಫಿ ತಿಂಡಿ ಮಾಡಿ, ಸಮಾರು ಒಂಬತ್ತುಗಂಟೆ ಹೊತ್ತಿಗೆ ಬಂದರು. ನನ್ನ ಅಧ್ಯಯನ ಕಕ್ಷೆಯಲ್ಲಿಯೆ ಅವರು ಆರಾಮ ಕುರ್ಚಿಯಮೇಲೆ ಒರಗಿ ಕುಳಿತರು. ನಾನು ಎದುರಿಗೆ ಒಂದು ಬೆತ್ತದ ಕುರ್ಚಿಯಲ್ಲಿ ಕುಳಿತೆ. 'ಶ್ರೀರಾಮಾಯಣ ಧರ್ಶನ'ದ ಹಸ್ತಪ್ರತಿಯನ್ನು ತೆಗೆದುಕೊಳ್ಳುತ್ತಿದ್ದಾಗ ಹೇಳಿದರು: "ನೀನು ಹೊಸದಾಗಿ ಬರೆದಿರುವ ಭಾವಗೀತೆಗಳನ್ನು ಮೊದಲು ಓದಿಬಿಡು. ಆಮೇಲೆ ರಾಮಾಯಣ ಓದುವಿಯಂತೆ." ಹಾಗೆಯೆ ಆಗಲಿ ಅಂದು ನೋಟುಪುಸ್ತಕದಲ್ಲಿದ್ದ ಭಾವಗೀತೆಗಳನ್ನು ಓದತೊಡಗಿದೆ. ಆ ಸಂದರ್ಭದಲ್ಲಿಯೆ ಅವರು 'ಬಾ ಫಾಲ್ಗುಣ ರವಿದರ್ಶನಕೆ' ಎಂಬ ಭಾವಗೀತೆಯನ್ನು ಕೇಳಿ, ಕುರ್ಚಿಯಿಂದ ಎದ್ದು, ಕುರ್ಚಿಯ ಹಿಂದೆ ತಗುಲಿಹಾಕಿದ್ದ ಅವರ ಕೋಟಿನಿಂದ ನಶ್ಯದ ಡಬ್ಬಿಯನ್ನು ತೆಗೆದು ಮೂಗಿಗೆ ಏರಿಸುತ್ತಾ, ನಾನೇ ಎದುರಾಳಿ ಎಂಬಂತೆ ಪ್ರಶ್ನೆಯ ಖಡ್ಗವನ್ನು ಜಳಪಿಸಿದ್ದು!.

ಮಧ್ಯಾಹ್ನವಾಗಿ ಸಮಾರು ಒಂದೂವರೆ ಗಂಟೆಯಾದರೂ ಅವರು ಭಾವಗಿತೆಗಳನ್ನೆ ಓದುವಂತೆ ಹೇಳಿ ಆಲಿಸುತ್ತಾ ಕುಳಿತುಬಿಟ್ಟರು. ಅಷ್ಟರಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ಸಮೀಪದಲ್ಲಿಯೆ ಮನೆ ಮಾಡಿದ್ದ ನರಸಿಂಹಶಾಸ್ತ್ರಿಗಳ ಮನೆಯಿಂದ ಕರೆ ಬಂತು ಅವರು, ವೆಂಕಣ್ಣಯ್ಯನವರು ಒಂಟಿಕೊಪ್ಪಲಿಗೆ ಬರುವುದನ್ನು ತಿಳಿದು, ಊಟಕ್ಕೆ ಆಹ್ವಾನಿಸದ್ದರಂತೆ.

ಊಟ ಮಾಡಿಕೊಂಡು ಹಿಂದಿರುಗಿದವರು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರು. ವಿಶ್ರಾಂತಿಯ ತರುವಾಯ ನಾನೂ ಅವರೂ ಒಟ್ಟಿಗೆ ಮಧ್ಯಾಹ್ನದ ಕಾಫಿ ತಿಂಡಿ ತೆಗೆದುಕೊಂಡೆವು. ಆಗಲೂ ಅವರು ಮತ್ತೊಂದು ನೋಟು ಬುಕ್ಕಿನಲ್ಲಿದ್ದ ನನ್ನ ಕವನಗಳ ಮೇಲೆ ಕಣ್ಣಾಡಿಸಿ ಅವನ್ನೆ ಓದುವಂತೆ ಹೇಳಿ ಬಿಟ್ಟರು. ಸಾಯಂಕಾಲ ಕತ್ತಲಾಗುವವರೆಗೂ ಭಾವಗೀತೆಗಳ ವಾಚನವೆ ನಡೆಯಿತು. ದೂರದ ಕೃಷ್ಣಮೂರ್ತಿಪುರಕ್ಕೆ ಹಿಂತಿರುಗಲು ಹೊತ್ತಾಯಿತೆಂದು ತಿಳಿದುಮೇಲೆ (ಆಗ ಒಂಟಿಕೊಪ್ಪಲಿನಲ್ಲಿ ದೀಪ ರಸ್ತೆ ಟಾಂಗ ಏನೂ ಇರಲಿಲ್ಲ.) "ಇನ್ನೊಮ್ಮೆ ಬರುತ್ತೇನಪ್ಪಾ. ಆಗ ನೀನು ಬರೆದಷ್ಟು ರಾಮಾಯಣವನ್ನೂ ಕೇಳಿಬಿಡುತ್ತೇನೆ" ಎಂದು ಬೀಳ್ಕೊಂಡು ಮನೆಗೆ ಹೋದರು. ಹೋದವರು ಬರಲಿಲ್ಲ.

ಅವರು ತೀರಿಕೊಳ್ಳುವ ಹಿಂದಿನ ದಿನವೊ ಅಥವಾ ಅದರ ಹಿಂದಿನ ದಿನವೊ ಅವರನ್ನು ನೋಡಲು ಹೋಗಿದ್ದೆ. ನಿಂತರೆ ಎತ್ತರವಾಗಿ ಮಲಗಿದ್ದರೆ ಉದ್ದವಾಗಿ ಕಾಣುತ್ತಿದ್ದ ವೆಂಕಣ್ಣಯ್ಯನವರು ಒಣಗಿ ಮುದುಗಿ ಮಲಗಿದ್ದ ಮಂಚದರ್ಧವನ್ನೂ ತುಂಬರೆಂಬಂತೆ ಕಾಣಿಸಿದರು. ಆದರೆ ಮುಖದಲ್ಲಿ ಕಿರುನಗೆಯ ಸುಪ್ರಸನ್ನತೆ ನನ್ನನ್ನು ಕಣ್ಣಿನಿಂದಲೆ ಬಾಚಿ ತಬ್ಬುವಂತೆ ಸ್ವಾಗತಿಸಿತ್ತು. ನಾನು ಮಂಚಕ್ಕೆ ಮುಟ್ಟುವಂತೆ ಕುರ್ಚಿ ಎಳೆದುಕೊಂಡು ಕುಳಿತೆ. ಅವರು ಕೃಶವೋ ಕೃಶವಾಗಿ ಕಾಣುತ್ತಿದ್ದ ತಮ್ಮ ಕೈಯನ್ನು ಮೆಲ್ಲಗೆ ನೀಡಿ ನನ್ನ ಕರತಲವನ್ನಪ್ಪಿ ಹಿಡಿದುಕೊಂಡರು. ಒಬ್ಬರನ್ನೊಬ್ಬರು ನೋಡುತ್ತ

ಕಣ್ಣಿಂದಲೆ ಮಾತಾಡುತ್ತಾ ಇದ್ದೆವು. ತುಸು ಹೊತ್ತಿನಲ್ಲಿಯೆ, ಅವರ ಹಿಂದೆ ಗೋಡೆಗೆ ತಗುಲಿ ಹಾಕಿದ್ದ 'ಮಹಾಮಾತೆ'ಯ ಭಾವಚಿತ್ರ ನನ್ನ ಕಣ್ಣಿಗೆ ಬಿದ್ದು ಅದನ್ನೇ ನೋಡತೊಡಗಿದೆ. ನನ್ನ ದೃಷ್ಟಿಯ ಪ್ರಾರ್ಥನಾ ಭಂಗಿಯನ್ನು ಗಮನಿಸಿ ಅವರು ಸ್ವಲ್ಪ ಪ್ರಯಾಸದಿಂದಲೆ ಕತ್ತು ತಿರುಗಿಸಿ 'ಮಹಾಮಾತೆ'ಯತ್ತ ತುಸು ಹೊತ್ತು ನೋಡಿ, ತನ್ನ ಕಡೆಗೆ ತಿರುಗಿದರು. ಬಹಳ ಹೊತ್ತಾದಮೇಲೆ ನನ್ನನ್ನು ಹಿಡಿದಿದ್ದ ಕೈ ಸಡಿಲಿಸಿ ಹಿಂದಕ್ಕೆಳೆದುಕೊಂಡರು. ಹೋಗಿ ಬರುತ್ತೇನೆ ಎಂದು ಬೀಳ್ಕೊಂಡು ಬಂದೆ.

ಅವರು ದೇಹತ್ಯಾಗ ಮಾಡಿದರು. ಆಗ 'ಶ್ರೀ ರಾಮಾಯಣದರ್ಶನಂ' ಇನ್ನೂ ಕಾಲುಪಾಲೂ ಮುಗಿದಿರಲಿಲ್ಲ. ಆದರೂ ಅವರಿಗೆ ಅದನ್ನು ಅರ್ಪಿಸಿ "ಇದೊ ಮುಗಿಸಿ ತಂದಿಹೆನ್ ಈ ಬೃಹದ್ ಗಾನಮಂ ನಿಮ್ಮ ಸಿರಿಯಡಿಗೊಪ್ಪಿಸಲ್ಕೆ, ಓ ಪ್ರಿಯಗುರುವೆ" ಎಂದು ಪ್ರಾರಂಭಿಸಿದೆ. ಅದನ್ನವರು 'ತಥಾಸ್ತು' 'ವಿಶ್ವವಾಣಿಗೆ ಮುಡಿಯ ಮಣಿ' ಯಾಗು ಎಂದು ಹರಿಸಿದರು. ಅವರ ಆಶೀರ್ವಾದಮಹಿಮೆ ಲೋಕವರಿಯುವಂತೆ ಹೇಗೆ ಕೈಗೂಡಿತೆಂಬದಕ್ಕೆ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವೆ ಮೇರು ಸಾಕ್ಷಿಯಾಗಿ ನಿಂತಿದೆ!.

ವೆಂಕಣ್ಣಯ್ಯನವರು ತೀರಿಕೊಂಡಾಗ, ನಗರ ಪಟ್ಟಣಗಳಲ್ಲಿರಲಿ, ಮೂಲೆ ಮೂಲೆಯ ಕೊಂಪೆಗಳಲ್ಲಿಯೂ ಸಂತಾಪಸೂಚಕ ಸಭೆಗಳು ನಡೆಯುತ್ತಿದ್ದುದರ ವರದಿಗಳು ಪತ್ರಿಕೆಗಳಲ್ಲಿ ಮೂರು ನಾಲ್ಕು ತಿಂಗಳುಗಳವರೆಗೂ ದಿನದಿನವೂ ಬರುತ್ತಿದ್ದುವು ಎಂಬುದನ್ನು ಗಮನಿಸಿದರೆ ಅವರು ಎಷ್ಟು ಜನಪ್ರಿಯರಾಗಿದ್ದರು, ಅವರ ವ್ಯಕ್ತಿತ್ವ ಕನ್ನಡಿಗರ ಮೇಲೆ ಎಂತಹ ಪ್ರಭಾವ ಬೀರಿತ್ತು ಎಂದು ಗೊತ್ತಾಗುತ್ತದೆ. ಅದಕ್ಕೆ ಕಾರಣ, ಅವರು ಉದ್ದಾಮ ರಸಸಾಹಿತ್ಯ ಸೃಷ್ಟಿಕರ್ತರಾಗಿದ್ದರು ಎಂದಲ್ಲ, ಕನ್ನಡ ನವೋದಯದ ಕಾಲದಲ್ಲಿ ಅವರೂ ಕೃಷ್ಣಶಾಸ್ತ್ರಿಗಳೂ ಬಿ.ಎಂ.ಶ್ರೀಯವರೊಡನೆ ಸಹಕರಿಸಿ, ನಾಡಿನಲ್ಲೆಲ್ಲ ಸಂಚರಿಸಿ, ಭಾಷಣಗಳ ಮೂಲಕವೂ ಉಪನ್ಯಾಸಗಳ ಮೂಲಕವೂ 'ಪ್ರಬುದ್ಧ ಕರ್ಣಾಟಕ'ದ ಮೂಲಕವೂ, ಸೆಂಟ್ರಲ್ ಮತ್ತು ಮಹಾರಾಜಾ ಕಾಲೇಜುಗಳಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ತರುಣರಲ್ಲಿ ಕನ್ನಡದ ಪ್ರೇಮಾಭಿಮಾನಗಳು ವೃದ್ಧಿಗೊಳ್ಳುವಂತೆ ಬೋಧಿಸುತ್ತಿದ್ದ ಪಾಠ ಪ್ರವಚನಾದಿಗಳ ಮೂಲಕವೂ, ಕನ್ನಡ ನಾಡಿನ ಮೇಲೆಲ್ಲ ತಮ್ಮ ವ್ಯಕ್ತಿತ್ವದ ಪರಿವೇಷವೊಂದು ವ್ಯಾಪಿಸುವಂತೆ ಪ್ರಭಾವ ಬೀರಿದ್ದುದು ಮುಖ್ಯ ಕಾರಣವಾಗಿತ್ತು.

ಅವರ ಸಾಹಿತ್ಯಸೃಷ್ಟಿ ವಿಫುಲ ಪ್ರಮಾಣದ್ದಲ್ಲ. ಅದು ಸಂಶೋಧನೆಯ, ಪ್ರಾಚೀನ ಗ್ರಂಥಸಂಪಾದನೆಯ ಮತ್ತು ಸ್ವಲ್ಪಮಟ್ಟಿಗೆ ಸಾಹಿತ್ಯವಿಮರ್ಶೆಯ ಪರಿಮಿತವಲಯದಲ್ಲಿಯೆ ಆಬದ್ಧವಾಗಿತ್ತು. ಅವರ ಸಾಹಿತ್ಯಸೇವೆಯಲ್ಲಿ ಗಾತ್ರಕ್ಕಿಂತಲೂ ಗುಣಕ್ಕೇ ಪ್ರಾಧಾನ್ಯ. ಅವರ ಬರವಣಿಗೆ ತುಂಬ ಎಚ್ಚರಿಕೆಯಿಂದ ಸಾವಧಾನವಾಗಿ ಸಾಗುತ್ತಿತ್ತು. ಅದು ಕೀರ್ತಿಶನಿಯ ಪ್ರೇರಣೆಗೂ ಧನಪಿಶಾಚಿಯ ಅವಸರಕ್ಕೂ ದೂರವಾಗಿತ್ತು. ಅವರು ಬರೆದುದೆಲ್ಲ ಗದ್ಯವೆ ಆಗಿದ್ದರೂ ವಾಕ್ಯವಾಕ್ಯವನ್ನೂ ಬರೆದೂ ಹೊಡೆದೂ ಅಳೆದೂ ತೂಗಿ ರಚಿಸುತ್ತಿದ್ದರೂ. 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ'ಗೂ ಅವರ ಲೇಖನಿಗೂ ಎಣ್ಣೆಸೀಗೆಯ ಸಂಬಂಧವಿತ್ತು.

ಅವರು ಸ್ವತಃ ಅಷ್ಟು ಹೆಚ್ಚಾಗಿ ಸಾಹಿತ್ಯ ಕೃತಿಗಳನ್ನು ಸೃಷ್ಟಿಸದೆ ಹೋಗಿರಬಹುದು. ಅದರೆ ನನ್ನಂತಹ ಅನೇಕ ಸಾಹಿತ್ಯಸಷ್ಟಿಕರ್ತರನ್ನೆ ಸೃಷ್ಟಿಮಾಡಿ ಹೋಗಿದ್ದಾರೆ. ಎಂಬುದನ್ನು ಮರೆಯಬಾರದು.

ಅವರು ದಿವಂಗತರಾಗುವ ಅಚಿರಪೂರ್ವದಲ್ಲಿ ಬಹುಶಃ ಅವರ ದೇಹಸ್ಥಿತಿ ಅವನತವಾಗುತ್ತಿರುವುದನ್ನು ಗಮನಿಸಿ, ಯಾರೋ ಒಬ್ಬರು ಸೂಚಿಸಿದರಂತೆ: "ನೀವು ಹೋಗುವ ಮುನ್ನ ಏನಾದರೊಂದು ನಿಮ್ಮ ಹೆಸರನ್ನು ಶಾಶ್ವತಗೊಳಿಸುವ ಗ್ರಂಥರಚನಕಾವ್ಯ ಮಾಡಬೇಕು" ಎಂದು. ಅದಕ್ಕೆ ಅವರು ಎಳೆಮಕ್ಕಳ ದಡ್ಡ ಮಾತಿಗೆ ದೊಡ್ಡವರು ನಗುವಂತೆ ನಕ್ಕು "ಹೆಸರಿನ ಶಾಶ್ವತತೆಗಿಂತಲೂ ಹಿರಿದಾದುದೂ ಇದೆಯಯ್ಯಾ ಬದುಕು ಸಾಧಿಸುವುದಕ್ಕೆ!" ಎಂದರಂತೆ. ಅಂತರಂಗದಲ್ಲಿ ಅವರೊಬ್ಬ ಸಾಧಕರಾಗಿದ್ದರು.

ಅವರು ತೀರಿಹೋಗಿ ಸುಮಾರು ಮೂವತ್ತು ವರ್ಷಗಳ ಮೇಲೆ ಅವರು ಅಂದು ತಿರಸ್ಕರಿಸಿದ ಆ ಹೆಸರಿನ ಶಾಶ್ವತೆಯನ್ನು ಇಂದು ಮತ್ತೆ ಶಾಶ್ವತೆಗೊಳಿಸಲು ನಾವು ಪುನಃಶಾಶ್ವತೀಕರಣ ಪ್ರಯತ್ನವೆನ್ನಬಹುದಾದ ಈ ಸ್ಮಾರಕ ಗ್ರಂಥ ಪ್ರಕಟಣೆಯನ್ನು ಕೈಗೊಂಡಿದ್ದೇವೆ. ಆ ಲೋಕದಲ್ಲಿರುವ ಅವರು ಅಂದು ನಕ್ಕಂತೆಯೆ ಇಂದು ನಗುತ್ತಿರಬಹುದೊ ಏನೊ!.

ಆದರೆ, ನಾವು ನೆರವೇರಿಸುತ್ತಿರುವ ಈ ಶ್ರದ್ಧೆಯ ಕಾರ್ಯ ಕೀರ್ತಿಶನಿಯ ಪೂಜಾಸ್ವರೂಪದ್ದಲ್ಲ. ಯಶೋಲಕ್ಷ್ಮಿಯ ಆರ್ಶೀವಾದದ ಅವತರಣಕ್ಕೆ ಶಿಷ್ಯಸ್ತೋಮದ ಗುರುಭಕ್ತಿ ಸಾರ್ಚುತ್ತಿರುವ ಸಾರಸ್ವತ ಸೇತು ಎಂದು ಭಾವಿಸಿ, ಅವರ ಕ್ಷಮೆಬೇಡಿ, ಪೂಜ್ಯರ ಪುಣ್ಯಸ್ಮೃತಿಗೆ ಈ ಕೃತಿಯನ್ನು ಸಮರ್ಪಿಸುತ್ತೇವೆ.

---

* "ಸವಿನೆನಪು" ದಿವಂಗತ ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯನವರ ನೆನಪಿನ ಗ್ರಂಥಕ್ಕೆ ಬರೆದ ಮುನ್ನುಡಿ. ಮೈಸೂರು. ೧೯೭೦.

* * *